ಹೀಗೆ ಈ ಶ್ರುತಿಯಲ್ಲಿ ಸಾಧಕನಿಗೆ ಮನೋನೈರ್ಮಲ್ಯವನ್ನು ದೊರಕಿಸುವ ಮೂಲಕ ಹೃದಯದಲ್ಲಿರುವ ಈಶ್ವರನನ್ನು ತಿಳಿಸಿ ಅವನೊಡನೆ ಸಮರಸವಾಗಿ ಬೆರೆ ಯಲು ಶಿವಯೋಗವನ್ನು ಉಪದೇಶಿಸಲಾಗಿದೆ. ಆದರೂ ಅಲ್ಪಜ್ಞನೂ, ಅಲ್ಪ ಶಕ್ತನೂ, ಅಣುವೂ ಆದ ಜೀವನಿಗೆ ಸರ್ವಜ್ಞನೂ, ಸರ್ವಶಕ್ತನೂ, ವಿಭುವೂ ಆದ ಶಿವನೊಡನೆ ಯೋಗವು ಸಂಭವಿಸಬಹುದೇ ಎಂಬ ವಿಚಾರವನ್ನು ಇಲ್ಲಿ ಆಲೋಚಿಸ ಬೇಕಾಗಿದೆ. ಇಬ್ಬರಿಗೂ ಶಕ್ತಿಯಲ್ಲಿ ಭೇದವಿದೆಯಾದರೂ ಇಬ್ಬರೂ ಚೇತನರೆನಿಸಿ ಒಂದೇ ಕಡೆ ಅಂದರೆ ಹೃದಯದಲ್ಲಿ ನೆಲಸಿರುವುದರಿಂದ ಇಬ್ಬರಿಗೂ ಯೋಗವು ದೊರಕಬಹುದೇ ಎಂಬುದೇ ಈಗಿನ ಪ್ರಶ್ನೆಯಾಗಿದೆ. ಶ್ರುತಿಯಂತೂ ಅವರಿಬ್ಬ ರಿಗೂ ಯೋಗವನ್ನು ಸ್ಪಷ್ಟವಾಗಿ ತಿಳಿಸಿದೆ. ಶ್ರುತಿಯು ಎಲ್ಲರಿಗೂ ಪ್ರಮಾಣವೆನಿಸಿ ದ್ದರಿಂದ ಅದನ್ನು ಎಲ್ಲರೂ ಪುರಸ್ಕರಿಸಲೇಬೇಕು. ಈ ಯೋಗವು ಚಿಜ್ಜಾತಿಗೆ ಸೇರಿದ ಇವರಿಬ್ಬರಿಗೂ ಇಲ್ಲಿಯೇ ನಿರ್ಮಲಹೃದಯದಲ್ಲಿಯೇ ದೊರಕಬೇಕೆಂದು ಶ್ರುತಿಯೇ ತಿಳಿಸಿದೆ; ಆದರೆ ಈ ಯೋಗ ಹೇಗೆ ದೊರಕುತ್ತದೆ. ಎಂಬಲ್ಲಿ ಜೀವನಿಗೆ ಶಿವನ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಜ್ಞಾನವನ್ನೇ ಪ್ರಧಾನಸಾಧನವೆಂದು ಇಲ್ಲಿ ತಿಳಿಸಲಾಗಿದೆ. ಜ್ಞಾನವಿಷ್ಟರಿಂದಲೇ ಈ ಯೋಗವು ಲಭಿಸಲಾರದೆಂದು ಭಾವಿಸಿ ಶ್ರುತಿಯೇ ಆ ಜ್ಞಾನದೊಡನೆ ಮೂರು ಬಗೆಯ ಉಪಾಸನೆಯನ್ನು ವಿಧಿಸಿದೆ. ಶಿವನನ್ನು ಒಳಗೆ ಧ್ಯಾನಿಸಬೇಕೆಂದೂ, ಹೊರಗೆ ಧರಿಸಿ ಅರ್ಚಿಸಬೇಕೆಂದೂ, ಇದರಿಂದ ಶಿವನೊಡವೆರೆಸಿ ವ್ಯವಹರಿಸಬಹುದೆಂದೂ ಮೂರು ಬಗೆಯ ಉಪಾಸನವನ್ನು ಶ್ರುತಿಯೇ ಸ್ಪಷ್ಟಪಡಿಸಿದೆ. ತದಭಿಧ್ಯಾನ, ತದ್ಯೋಜನ, ತದ್ಭಾವ ಈ ಮೂರು ಬಗೆಯ ಉಪಾಸನವನ್ನು ಸಾಧಕರೆಲ್ಲರಿಗೂ ಶ್ರುತಿಯು ಒತ್ತಾಯಪಡಿಸಿದೆ. ಹೀಗೆ ಜ್ಞಾನದೊಡಗೂಡಿದ ಉಪಾಸನದಿಂದ ಇಲ್ಲಿಯೇ ಪ್ರಸಾದಕಾಯದಲ್ಲಿ ಶಿವಯೋಗವನ್ನು ಸಾಧಕನು ಅನುಭವಿಸಬೇಕೆಂಬುದೇ ಶ್ರುತಿಯ ಉಪದೇಶ. ಇದು ಸಂಪೂರ್ಣವಾಗಿ ವಿಶ್ವಾಸದ ವಿಷಯ. ಅಲ್ಲಮಪ್ರಭು ಇದನ್ನು ಸ್ಪಷ್ಟಪಡಿಸಿದ್ದಾನೆ. "ಎತ್ತಣ ಮಾಮರ, ಎತ್ತಣ ಕೋಗಿಲೆ? ಎತ್ತಣಿಂದೆತ್ತ ಸಂಬಂಧವಯ್ಯ! ಬೆಟ್ಟದ ನೆಲ್ಲಿಯಕಾಯಿ ಸಮುದ್ರದೊಳಗಣ ಉಪ್ಪು ಎತ್ತಣಿಂದೆತ್ತವಯ್ಯ ಸಂಬಂಧ! ಗುಹೇಶ್ವರಲಿಂಗಕ್ಕೆಯೂ ಎನಗೆಯೂ ಎತ್ತಣಿಂದೆತ್ತ ಸಂಬಂಧವಯ್ಯ!" ಹೀಗೆ ಭಿನ್ನಜಾತಿಯ ಕೋಗಿಲೆ ಮಾವಿನ ಮರಗಳು ಬೇರೆ ಬೇರೆ ಕಡೆಗಳಲ್ಲಿದ್ದರೂ ಅವಕ್ಕೆ ಹೇಗೋ ಯೋಗವು ಕೊಡುತ್ತದೆ. ಹಾಗೆಯೇ ನೆಲ್ಲಿಯಕಾಯಿ ಬೆಟ್ಟದಲ್ಲಿದ್ದು, ಉಪ್ಪು ಸಮುದ್ರದಲ್ಲಿದ್ದರೂ ಅವೆರಡಕ್ಕೆ ಹೇಗೋ ಸಂಬಂಧವು ಹೊಂದುತ್ತದೆ. ಅದರಂತೆ ಜೀವಪರಮಾತ್ಮರು ಬೇರೆ ಬೇರೆ ಸ್ವಭಾವದವರಾಗಿದ್ದರೂ ಅವರಿಗೂ ಯೋಗವು ಸಂಭವಿಸುತ್ತದೆ. ಇದರಲ್ಲಿ ಅನೌಚಿತ್ಯವೇನೂ ಕಾಣುವುದಿಲ್ಲ. ಶಿವನಿಗಾದರೋ ತನ್ನ ಸಂಬಂಧಿಯಾದ ಜೀವನಲ್ಲಿ ಅವ್ಯಾಜವಾದ ಪ್ರೇಮವಿದ್ದೇ ಇದೆ. ಜೀವನು ತನ್ನ ಬಂಧುವಾದ ಶಿವನನ್ನು ವಿಶ್ವಾಸದಿಂದ ಕರೆದರೆ ಆ ಕರೆಯನ್ನು ಅವನು ಕೇಳದೇ ಇರಲಾರನು. "ನಂಬದೆ ನೆಚ್ಚದೆ ಬರದೆ ಕರೆವರು; ನಂಬಲರಿಯರು ಲೋಕದ ಮನುಜರು. ನಂಬಿ ಕರೆದರೆ ಓ ಎನ್ನನೇ ಶಿವನು, ನಂಬದೆ ನೆಚ್ಚದೆ ಬರಿದೆ ಕರೆವನ ಕೊಂಬ ಮೆಟ್ಟಿಕೂಗೆಂದ ಕೂಡಲಸಂಗಮದೇವ" ಹೀಗೆ ಮಹಾತ್ಮ ಬಸವಣ್ಣನು ಮಾನವನಿಗೆ ತನ್ನ ಹೃದಯದಲ್ಲಿ ಪೂರ್ಣವಿಶ್ವಾಸವಿಟ್ಟು ಅಲ್ಲಿರುವ ಈಶ್ವರನಲ್ಲಿ ರಮಿಸುತ್ತಲೇ ಹೊರಗಿನ ವ್ಯವಹಾರಗಳನ್ನು ಅವನ ಪ್ರೀತಿಗಾಗಿಯೇ ನಡೆಸಬೇಕೆಂದು ತಿಳಿಸಿರುವನು. ಇದರಿಂದ ಮಾನವನ ಮನಸ್ಸು ಪ್ರಸನ್ನವಾಗುವುದು; ಆಗಲೇ ರಾಗದ್ವೇಷಗಳು ದೂರ ಸರಿಯುವುವು. ಹೀಗೆ ನಿಷ್ಕಲ್ಮಷವಾದ ಹೃದಯದಲ್ಲಿ ಗುಹೇಶ್ವರನನ್ನು ಸಾಧಕರು ಅವಶ್ಯಕವಾಗಿ ತಿಳಿಯಲೇಬೇಕೆಂದೂ, ಇದರಿಂದಲೇ ಅವರಿಗೆ ಪಾಶವು ತೊಲಗುವುದೆಂದೂ ಶ್ರುತಿಯು ತಿಳಿಸಿದೆ. ಈ ಬಗೆಯ ಯೋಗವನ್ನು ಮಾನವಕಲ್ಯಾಣಕ್ಕಾಗಿ ಶ್ರುತಿಯು ಉಪದೇಶಿಸಿದೆ.

ಹೀಗೆ ಈ ಶ್ರುತಿಯಲ್ಲಿ ಶಿವಯೋಗರೂಪವಾದ ಸಿದ್ಧಾಂತವನ್ನು ನಿರೂಪಿಸಿದ್ದರೂ ಅದನ್ನು ದೊರಕಿಸುವ ಉಪಾಯವನ್ನು ಇದು ತಿಳಿಸುತ್ತದೆಯೋ ಎಂಬ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಅಂಶವನ್ನು ಈಗ ಪರಿಶೀಲಿಸಲಾಗುವುದು. ಈ ಉಪಾಯವನ್ನು ತಿಳಿಸುವುದೇ ಸಂಪ್ರದಾಯವೆನಿಸುತ್ತದೆ. ಇದಕ್ಕೂ ಸಿದ್ಧಾಂತಕ್ಕೂ ಸಾಮರಸ್ಯವಿದ್ದರೆಯೇ ಒಂದು ಸಿದ್ಧಾಂತವು ವೀರ್ಯವತ್ತರವೆನಿಸುತ್ತದೆ. ಅವೆರಡಕ್ಕೂ ಹೊಂದಿಕೆ ಇಲ್ಲದಿದ್ದರೆ ಆ ಸಿದ್ಧಾಂತವೇ ಯಾರಿಗೂ ರುಚಿಸುವುದಿಲ್ಲ. ಇಂತಹ ನಿರ್ವೀರ್ಯವಾದ ಸಿದ್ಧಾಂತ ವನ್ನು ಅನುಸರಿಸುವವನಿಗೆ ಶಾಂತಿಯೇ ದೊರೆಯಲಾರದು. ವೀರಶೈವದರ್ಶನದಲ್ಲಾದರೋ ಸಿದ್ಧಾಂತಸಂಪ್ರದಾಯಗಳಿಗೆ ಏಕರೂಪತೆಯು ನೆಲಸಿರುವುದೇ ಒಂದು ವೈಶಿಷ್ಟ್ಯವೆನಿಸಿದೆ. ಷಟ್ಸ್ಥಲಾತ್ಮಕನಾದ ಜೀವನು ಷಟ್ಸ್ಥಲಾತ್ಮಕನಾದ ಶಿವನಿಗೆ ಷಡ್ವಿಷಯಗಳನ್ನು ಷಡ್ವಿಧಭಕ್ತಿಯಿಂದ ಸಮರ್ಪಿಸುತ್ತ ಷಡ್ವಿಧಪ್ರಸಾದವನ್ನು ಭೋಗಿಸುತ್ತಲೇ ಶಿವನೊಡನೆ ಸಾಮರಸ್ಯವನ್ನು ಅನುಭವಿಸುವನೆಂಬುದನ್ನೇ "ಷಟ್ಸ್ಥಲೋಪಾಸನ"ವೆಂಬ ಸಂಪ್ರದಾಯವು ಬೋಧಿಸುತ್ತಲಿದೆ. ಆರು ಬಗೆಯಾಗಿರುವ ಜೀವನು ತನ್ನೊಳಗೆ ಆ ಆರು ಇಂದ್ರಿಯಗಳಲ್ಲಿಯೇ ಆರು ಬಗೆಯಾಗಿರುವ ಶಿವನಿಗೆ ಆರು ಬಗೆಯ ಭೋಗ್ಯವಸ್ತುಗಳನ್ನು ಆರು ಬಗೆಯ ಭಕ್ತಿಯಿಂದ ಅರ್ಪಿಸುವುದೇ ಷಟ್ಸ್ಥಲೋಪಾಸನವೆನಿಸುತ್ತದೆ. ಇದನ್ನು ತ್ರಿವಿಧೋಪಾಸನದಲ್ಲಿಯೇ ಶ್ವೇತಾಶ್ವತರೋಪನಿಷತ್ತು ಅಡಗಿಸಿದೆ. ಈ ಮೂರು ಬಗೆಯ ಉಪಾಸನವೇ ಮತ್ತೆ ಒಂದೊಂದು ಎರಡೆರಡಾಗಿ ಆರು ಬಗೆಯಾಗುತ್ತದೆ. "ತಸ್ಯಾಭಿಧ್ಯಾನಾದ್ಯೋಜನಾತ್ತತ್ತ್ವಭಾವಾದ್ಭೂಯಶ್ಚಾಂತೇ ವಿಶ್ವಮಾಯಾನಿವೃತ್ತಿಃ" ಎಂಬ ಮಂತ್ರದಲ್ಲಿ ಮಹರ್ಷಿಯು ತ್ರಿವಿಧೋಪಾಸನವನ್ನು ವಿಧಿಸಿದ್ದಾನೆ. ಜೀವನಿಗೆ ಶಿವನ ನಿರಂತರ ಸಂಪರ್ಕವಿರಬೇಕಾದ್ದರಿಂದ ಹೊರಗೆ ದೇಹದಲ್ಲಿ ಆ ಶಿವನನ್ನು ಧರಿಸುವುದೇ ಯೋಜನವೆನಿಸುತ್ತದೆ. ಇದನ್ನು ವೀರಶೈವ ಸಂಪ್ರದಾಯವು ಇಷ್ಟಲಿಂಗಧಾರಣವೆಂದು ಕರೆದಿದೆ. ಹಾಗೆಯೇ ಹೃದಯದಲ್ಲಿ ಶೋಭಿಸುವ ಆ ಈಶ್ವರನನ್ನೇ ನಿರ್ಮಲಹೃದಯದಿಂದ ಧ್ಯಾನಿಸುವುದೇ ಪ್ರಾಣಲಿಂಗಾರ್ಚನವೆಂದು ವೀರಶೈವಸಂಪ್ರದಾಯವು ತಿಳಿಸಿದೆ. ಇದನ್ನೂ ಸಹ ಶ್ರುತಿಯೇ ಸ್ಪಷ್ಟವಾಗಿ ತಿಳಿಸಿದೆ. ಹೀಗೆ ಜೀವನು ಪ್ರಾಣದಂತೆ ಪ್ರಿಯನಾದ ಶಿವನನ್ನು ಒಳಗೂ ಹೊರಗೂ ಅನುಭವಿಸುತ್ತ ಆಯಾ ಕಾಲದ ಸುಖದುಃಖಗಳನ್ನು ಶಿವನ ಪ್ರಸಾದವೆಂದು ಸ್ವೀಕರಿಸುತ್ತ ಶಿರಸ್ಸಿನಲ್ಲಿ ಶೋಭಿಸುವ ಭಾವಲಿಂಗದೊಡನೆ ಸಮರಸವಾಗಿ ಬೆರೆತು ಅಮೃತನಾಗುವನು. ವೀರಶೈವಸಂಪ್ರದಾಯವು ಇದನ್ನು ಭಾವಲಿಂಗಾರ್ಚನವೆಂದು ಕರೆದಿದೆ. ಈ ತ್ರಿವಿಧೋಪಾಸನವೇ ಲಿಂಗಾಂಗಸಾಮರಸ್ಯವನ್ನು ಸಾಧಿಸುತ್ತದೆ. ದೇಹದಲ್ಲಿರುವ ಶಿವನು ಮಹಾಪ್ರಕಾಶನೂ, ಸರ್ವಾಧಾರನೂ ಆದ್ದರಿಂದ ಲಿಂಗವೆನಿಸಿ ಸರ್ವರಿಗೂ ಉಪಾಸ್ಯನೆನಿಸಿರುವನು. ಆ ಶಿವನ ಅಂಶನೇ ಆಗಿರುವ ಜೀವನ ಅಲ್ಪಪ್ರಕಾಶನೂ ಅಲ್ಪಶಕ್ತಿಕನೂ ಆಗಿ ಉಪಾಸಕನೆನಿಸಿರುವನು; ಹಾಗೆಯೇ ಶಿವನ ಲೀಲಾವಿನೋದಕ್ಕಾಶ್ರಯನಾದ್ದರಿಂದ ಅಂಗನೆನಿಸಿರುವನು. ಇಂತಹ ಜೀವನು ಗುರುವಿನ ಕರುಣೆಯಿಂದ ತನ್ನ ಪ್ರಾಣಲಿಂಗವನ್ನು ಹೊರಗೆ ಅರ್ಚನೆಗಾಗಿ ಪಡೆಯುವನು. ಇದು ಅವನಿಗೆ ಪ್ರಿಯವಾದ್ದರಿಂದ ಇಷ್ಟ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಲಿಂಗವೆನಿಸುವುದು. ಇವರ ನಿತ್ಯಸಂಪರ್ಕದಿಂದ ಅವನಿಗೆ ಪ್ರಾಣಲಿಂಗದ ಅನುಭವ ಸಹಜವಾಗುವುದು. ಅಲ್ಲಿಂದ ಮುಂದೆ ಆವನು ಭಾವರೂಪದಿಂದ ಎಲ್ಲರೊಳಗೂ ನೆಲಸಿರುವ ಶಿವನನ್ನೇ ಕಾಣತೊಡಗುವನು. ಹೀಗೆ ದೇಹದಲ್ಲಿ ಇಷ್ಟಪ್ರಾಣಭಾವವೆನಿಸಿದ ಶಿವನ ನಿರಂತರೋಪಾಸನದಿಂದ ಜೀವನು ಯೋಗಿಯಾಗುವನು.

ಶಿವನ ಉಪಾಸನದಿಂದಲೇ ಜೀವನಿಗೆ ಈ ಬಗೆಯ ಹೆಸರು ಸಹಜವೆನಿಸುತ್ತದೆ. ಜೀವನು ತನ್ನ ಇಷ್ಟದೈವವೆನಿಸಿದ ಶಿವಲಿಂಗದ ಸೇವೆಗೆ ದೇಹೇಂದ್ರಿಯಗಳನ್ನು ಅರ್ಪಿಸುತ್ತ ಅವುಗಳ ಮೇಲಿನ ಅಭಿಮಾನವನ್ನು ತ್ಯಾಗಮಾಡುವುದರಿಂದ ತ್ಯಾಗಾಂಗ (ತ್ಯಾಗಿ) ಎನಿಸುವನು. ಹಾಗೆಯೇ ಅವನು ಪ್ರಾಣಲಿಂಗದೊಡನೆ ಸಕಲಭೋಗ್ಯವಸ್ತುಗಳನ್ನು ಮಿತವಾಗಿ ಭೋಗಿಸುವುದರಿಂದ ಭೋಗಾಂಗ (ಭೋಗಿ) ಎನಿಸುವನು. ಹೀಗೆಯೇ ಭಾವಲಿಂಗದೊಡನೆ ಬೆರೆಯುವುದರಿಂದ ಅವನು ಯೋಗಾಂಗ (ಯೋಗಿ) ಎನಿಸುವನು. ಹೀಗೆ ಜೀವನು ತ್ಯಾಗದಿಂದಲೇ ಯೋಗಿಯಾಗಬೇಕಾಗಿದೆ. ತ್ಯಾಗವಿಲ್ಲದವನು ಯೋಗಾನಂದವನ್ನು ಅನುಭವಿಸಲಾರನು. ಈ ಬಗೆಯ ಯೋಗವನ್ನು ಶ್ವೇತಾಶ್ವತರಶ್ರುತಿಯು ಸಾಧಕರೆಲ್ಲರಿಗೂ ಉಪದೇಶಿಸಿದೆ. ಇದೇ ಶಿವಯೋಗವನ್ನೇ ವೀರಶೈವಸಂಪ್ರದಾಯವು ಒತ್ತಿಹೇಳಿದೆ. ಹೀಗೆ ಯೋಗಮಾರ್ಗವನ್ನು ತಿಳಿಸಿರುವುದರಿಂದ ಈ ಶ್ರುತಿಯು ವೀರಶೈವಸಂಪ್ರದಾಯಕ್ಕನುಗುಣವಾಗಿದೆ ಎಂಬುದು ವ್ಯಕ್ತವಾಗುತ್ತದೆ. ಈ ಬಗೆಯ ಅಂಗಲಿಂಗರೇ ಆರು ಇಂದ್ರಿಯಗಳಲ್ಲೂ ನೆಲಸಿ ಆಯಾ ಕಾಲದಲ್ಲಿ ಒದಗುವ ಸುಖದುಃಖಗಳನ್ನು ಆಗಲೇ ಅಂಗನು ಲಿಂಗಕ್ಕೆ ಭಕ್ತಿಯಿಂದ ಅರ್ಪಿಸುತ್ತಲೂ, ಲಿಂಗನು ಅದನ್ನು ವಾತ್ಸಲ್ಯದಿಂದ ಸ್ವೀಕರಿಸುತ್ತಲೂ ಇರುವುವೇ ಷಟ್ಸ್ಥಲೋಪಾಸನವೆನಿಸುತ್ತದೆ. ಇದೇ ಲೋಕವ್ಯವಹಾರವೆಂದು ಪ್ರಸಿದ್ಧವಾಗಿದೆ. ಜನರು ತಿಳಿಯಲಿ, ತಿಳಿಯದಿರಲಿ, ಲೋಕದಲ್ಲಿ ನಡೆಯುತ್ತಿರುವುದೆಲ್ಲವೂ ಷಟ್ಸ್ಥಲಾತ್ಮಕನಾದ ಶಿವನ ಲೀಲೆಯೇ ಆಗಿದೆ. ಜನರು ಕಂಡದ್ದು ಮುಟ್ಟಿದ್ದು ಕೇಳಿದ್ದು ರುಚಿಸಿದ್ದು ಮೂಸಿಸಿದ್ದು ಭಾವಿಸಿದ್ದು ಇದೆಲ್ಲವೂ ಪ್ರತಿಯೊಂದು ದೇಹದಲ್ಲೂ ಜೀವನು ಶಿವನಿಗೆ ಅರ್ಪಿಸುತ್ತಲೂ ಶಿವನು ಸ್ವೀಕರಿಸುತ್ತಲೂ ಇರುವುದೇ ಆಗಿದೆ. ಆದರೆ ಯಾರು ಇದನ್ನು ಅರಿತಿರುವರೋ ಅವರಿಗೆ ಮಾತ್ರ ಇದು ಕಾಯಕವೆನಿಸುವುದು. ಅರಿತವರಿಗೆ ಇದೆಲ್ಲವೂ ಯೋಗಮಾರ್ಗವೆನಿಸುವುದು, ಇದರಿಂದ ಅವರಿಗೆ ಶಿವನ ಪ್ರಸಾದವು ದೊರಕುತ್ತದೆ. ಯಾರು ದೇಹದಲ್ಲಿ ಲಿಂಗಾಂಗಗಳ ಬೆಸುಗೆಯನ್ನು ತಿಳಿದಿಲ್ಲವೋ ಅವರಿಗೆ ಇದೆಲ್ಲವೂ ಭೋಗಜೀವನವೆನಿಸುತ್ತದೆ. ಇದರಿಂದ ಅವರಿಗೆ ವಿಷಯಾಸಕ್ತಿಯು ಪಶುಭಾವನೆಯು ಬೆಳೆಯುತ್ತದೆ. ಹೀಗೆ ಮಾನವರು ಯೋಗದ ಮಹತ್ತ್ವವನ್ನೂ, ಆವಶ್ಯಕತೆಯನ್ನೂ ತಿಳಿಯಬೇಕಾದರೆ ಶ್ವೇತಾಶ್ವತರೋಪನಿಷತ್ತನ್ನು ಅವಶ್ಯವಾಗಿ ಓದಬೇಕೆಂಬ ಭಾವನೆಯನ್ನು ಮಹರ್ಷಿಯು ನಮಗೆ ಹುಟ್ಟಿಸಿರುವನು. ಇದನ್ನು ಯೋಗದರ್ಶನವೆಂದು ಕರೆಯುವ ಮಟ್ಟದಲ್ಲಿ ಯೋಗದ ಮಹತ್ತ್ವವನ್ನು ಈ ಶ್ರುತಿಯು ಎತ್ತಿಹಿಡಿದಿದೆ.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಹೀಗೆ ಈ ಶ್ರುತಿಯು ಯೋಗವನ್ನು ಎತ್ತಿಹಿಡಿದು ಪತಂಜಲಿಯ ಅಷ್ಟಾಂಗಯೋಗವಪ್ರಕ್ರಿಯೆಗೆ ಆಶ್ರಯವನ್ನು ನೀಡಿರುವುದೆಂದು ಸ್ಪಷ್ಟಪಡುವುದಲ್ಲದೆ ಅವರ ಪರಿಣಾಮುವೆನಿಸಿದ ಶಿವಯೋಗದ ಕಡೆಗೆ ತನ್ನ ಗಮನವನ್ನು ಕೇಂದ್ರೀಕರಿಸಿದೆ. ಇಂತಹ ಶಿವಯೋಗವನ್ನು ಶ್ರುತಿಯು ವಿವರಿಸಿ ಅದಕ್ಕೆ ಶಿವಜ್ಞಾನವೇ ಮುಖ್ಯವಾದ ಅವಲಂಬನವೆಂಬುದನ್ನು ಸ್ಪಷ್ಟಪಡಿಸಿದೆ. ದೇಹದೊಳಗೆ ಸಹಜವಾಗಿ ಶಿವಜೀವರು ಇಬ್ಬರೂ ನೆಲಸಿದ್ದು ಜೀವನು ದೇಹದಲ್ಲಿ ಅಭಿಮಾನಿಸಿಕೊಂಡಿರುವಾಗ ಅವನಿಗೆ ಅಲ್ಲಿಯೇ ಅವ್ಯಕ್ತವಾಗಿ ನೆಲಸಿರುವ ಶಿವನ ಜ್ಞಾನವೇ ಇಲ್ಲದಿದ್ದರೆ ಶಿವಯೋಗದ ವಾಸನೆಯೇ ಅಂಟಲಾರದು. ಶಿವನನ್ನು ತಿಳಿಯದೇ ಇದ್ದರೆ ಜೀವನು ತಾನೇ ಸ್ವತಂತ್ರಿಸಿ ಮೆರೆಯಲಾರಂಭಿಸುವುದು ಸಹಜ. ತನಗೆ ಶಿವನು ಪತಿ ಎಂಬುದನ್ನು ಜೀವನು ತಿಳಿದರೆಯೇ ಜೀವನಿಗೆ ಶಿವಯೋಗದ ಬಯಕೆ ಉಂಟಾದೀತು; ಮುಂದೆ ಅದನ್ನು ಸಾಧಿಸಲು ಅವನು ತ್ರಿವಿಧೋಪಾಸನವನ್ನು ಮಾಡಿಯಾನು. ಹಾಗೆ ಮಾಡಲು ಅವನಿಗೆ ಶಿವಜ್ಞಾನವೇ ಇಲ್ಲದಿದ್ದರೆ ಅವನು ಅಹಂಕಾರಮಮಕಾರಗಳಿಂದ ಮರೆಯುತ್ತ ಶಿವಯೋಗವನ್ನೇ ಗಮನಿಸಲಾರನು. ಆದ್ದರಿಂದಲೇ ಶ್ರುತಿಯು ಶಿವಯೋಗಕ್ಕೆ ಜ್ಞಾನದ ಅವಲಂಬನವನ್ನು ಒತ್ತಿ ಹೇಳಿದೆ. "ತಮೇವ ವಿದಿತ್ವಾಽತಿ ಮೃತ್ಯುಮೇತಿ ನಾನ್ಯಃ ಪಂಥಾ ವಿದ್ಯತೇಽಯನಾಯ" ಹೀಗೆ ಅನೇಕ ವಾಕ್ಯಗಳಲ್ಲಿ ಶಿವಜ್ಞಾನದಿಂದಲೇ ಜೀವನು ಉದ್ಧಾರವಾಗಬೇಕೆಂಬುದನ್ನು ಶ್ರುತಿಯು ತಿಳಿಸುತ್ತದೆ. ಶಿವನೇ ಜೀವನ ಬಂಧಮೋಕ್ಷಗಳಿಗೂ, ರಕ್ಷಣಕ್ಕೂ ಕಾರಣವೆನಿಸಿರುವನೆಂದೂ, ಶಿವನ ಪ್ರಕಾಶದಿಂದಲೇ ವಿಶ್ವವೆಲ್ಲವೂ ಶೋಭಿಸುತ್ತಿರುವುದೆಂದೂ, ಸೂರ್ಯನ ಪ್ರಕಾಶಕ್ಕೂ ಶಿವಪ್ರಕಾಶವೇ ಅವಲಂಬನವೆಂದೂ, ಶ್ರುತಿಯು ತಿಳಿಸಿ ಅವನೇ ಸಾಧಕರೆಲ್ಲರಿಗೂ ಆಶ್ರಯನಾಗಲರ್ಹನೆಂಬುದನ್ನು ದೃಢಪಡಿಸಿದೆ. ಹೀಗೆ ಎಲ್ಲರಲ್ಲೂ ಸಾಕ್ಷಿಯಾಗಿದ್ದರೂ ನಿರ್ಲಿಪ್ತನೂ ಉದಾಸೀನನೂ ಆಗಿ ಕೈವಲ್ಯಸ್ಥಿತಿಯಲ್ಲಿ ಆತ್ಮಾರಾಮನಾಗಿರುವ ಸ್ವಪ್ರಕಾಶ ಶಿವನನ್ನು ತೊರೆದರೆ ಯಾವ ಜೀವನು ತಾನೆ ಸ್ವತಂತ್ರನಾಗಿ ಬಾಳಿಯಾನು? ಮತ್ತು ಲೋಕದಲ್ಲಿ ವ್ಯವಹರಿಸಿಯಾನು? ಆದ್ದರಿಂದ ಜೀವನು ಯಾವಾಗಲೂ ಶಿವನನ್ನೇ ಅನುಸರಿಸಬೇಕೆಂದು ಶ್ರುತಿ ವಿಧಿಸಿದೆ. ಅವನಿಂದಲೇ ಇವನಿಗೆ ಪಾಶವು ತೊಲಗಬೇಕಾಗಿದೆ. ಹೀಗೆ ಒಳಗೂ ಹೊರಗೂ ಶಿವನನ್ನು ಅರ್ಚಿಸುವುದರಿಂದಲೇ ಸಾಧಕನು ಈ ದೇಹದಲ್ಲಿದ್ದರೂ ಅವಕ್ಕೆ ಅಂಟವಂತೆ ಕೈವಲ್ಯಾವಸ್ಥೆಯನ್ನು ಅನುಭವಿಸುವನು. ಈ ಸ್ಥಿತಿಯಲ್ಲಿ ಅವನಿಗೆ ಬೇರೆ ದೇಹವೇ ದೊರಕುವುದೆಂದು ಶ್ರುತಿಯು ತಿಳಿಸಿದೆ. ಇದನ್ನು ಶಿವಮಯವಾದ ಪ್ರಸಾದಕಾಯವೆಂದು ಅನುಭವಿಗಳು ಕರೆಯುತ್ತಾರೆ. ಇದರಿಂದ ಸಾಧಕನಿಗೆ ಬರುವ ಫಲವನ್ನು ವಿಶ್ವೈಶ್ವರ್ಯವೆಂದು ಶ್ರುತಿಯು ತಿಳಿಸಿದೆ. "ತಸ್ಯಾಭಿಧ್ಯಾನಾತ್ತೃತೀಯಂ ದೇಹಭೇದೇ ವಿಶ್ವೈಶ್ವರ್ಯಂ ಕೇವಲ ಆಪ್ತಕಾಮಃ" (1–11) ಹೀಗೆ ಶ್ರುತಿಯು ಸಾಧಕನಿಗೆ ದೊರಕುವ ಯೋಗದ ಫಲವನ್ನು ತಿಳಿಸಿದೆ. ಇದು ಅವನಿಗೆ ಪೂರಸಯು ಫಲವೆನಿಸಿದೆ.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಸರ್ವಪಾಶತ್ಯಾಗ ಮತ್ತು ಜನ್ಮಮೃತ್ಯುವಿಯೋಗ ಇವೆರಡು ಫಲಗಳ ಜೊತೆಗೆ ಮೂರನೆಯ ದೇಹದಲ್ಲಿ ವಿಶ್ವೈಶ್ವರ್ಯವೆಂಬ ಮೂರನೆಯ ಫಲವನ್ನು ಶ್ರುತಿ ತಿಳಿಸಿದೆ. ಇದೇಯೇ ಜೀವನಸ್ವಾತಂತ್ರ್ಯದ ಕೊನೆಯ ಹಂತ; ಪರಿಪೂರ್ಣತೆಯ ಶಿಖರ. ಇದನ್ನು ಎಲ್ಲರೂ ಸಾಧಿಸಬೇಕೆಂದೂ ಇದು ಪ್ರತಿಯೊಬ್ಬರಲ್ಲೂ ಅಡಗಿದೆ ಎಂದು ಇದನ್ನು ಪಡೆದಮೇಲೆ ಬೇರೆ ಏನನ್ನೂ ಪಡೆಯಬೇಕಾಗಿಲ್ಲವೆಂದೂ ಶ್ರುತಿಯು ತಿಳಿಸಿದೆ. ಮಾನವರೆಲ್ಲರೂ ಇದನ್ನು ಪಡೆದು ಅಮೃತರಾಗಲೆಂದು ಶ್ವೇತಾಶ್ವತರ ಮಹರ್ಷಿಯ ಬಯಕೆ. "ಶೃಣ್ವಂತು ವಿಶ್ವೇ ಅಮೃತಸ್ಯ ಪುತ್ರಾಃ" ಎಂದು ಮಹರ್ಷಿಯು ವಿಶಾಲಭಾವನೆಯಿಂದ ಸಾಧಕರೆಲ್ಲರನ್ನೂ ಕರೆದು ಅವರ ಗಮನವನ್ನು ಹೃದಯದಲ್ಲಿರುವ ಈಶ್ವರನಕಡೆಗೆ ತಿರುಗಿಸುತ್ತಾನೆ. ಸಾಧಕನು ಭೀಕರವಾದ ಸಂಸಾರಪ್ರವಾಹಗಳನ್ನು ಶಿವನೆಂಬ ದೋಣಿಯಿಂದಲೇ ದಾಟಬೇಕೆಂದು ಮಹರ್ಷಿಯು ಉಪದೇಶಿಸಿರುವುದು ಯುಕ್ತವೆನಿಸಿದೆ.

ಜೀವನ ಬಂಧಮೋಕ್ಷಗಳ ವ್ಯವಸ್ಥೆಯನ್ನು ಸುಗಮವಾದ ರೀತಿಯಲ್ಲಿ ಶ್ರುತಿಯು ಸ್ಪಷ್ಟಪಡಿಸಿದೆ. "ಅನೀಶಶ್ಚಾತ್ಮಾ ಬಧ್ಯತೇ ಭೋಕ್ತೃಭಾವಾತ್ ಜ್ಞಾತ್ವಾ ದೇವಂ ಮುಚ್ಯತೇ ಸರ್ವಪಾಶೈಃ" ಎಂಬ ಒಂದೇ ಮಂತ್ರದಲ್ಲಿ ಬಂಧಮೋಕ್ಷಗಳೆರಡಕ್ಕೂ ಕಾರಣವನ್ನು ಶ್ರುತಿಯು ತಿಳಿಸಿದೆ. "ಭೋಕ್ತೃಭಾವವೇ ಬಂಧದ ಕಾರಣ ಶಿವಜ್ಞಾನದಿಂದಲೇ ಅದರ ಬಿಡುಗಡೆಯಾಗುವುದು" ಹೀಗೆ ಸ್ಪಷ್ಟಪಡಿಸಿದ್ದರಿಂದ ಜೀವನು ಕರ್ಮಫಲವನ್ನು ಭೋಗಿಸುತ್ತ ಬದ್ಧನಾಗದೆ ಅದನ್ನು ಶಿವನಿಗೆ ಆಗಾಗಲೇ ಅರ್ಪಿಸುತ್ತ ಮುಕ್ತನಾಗುವ ವಿಧಾನವನ್ನು ಶ್ರುತಿಯು ಎಲ್ಲರಿಗೂ ಮನವರಿಕೆ ಮಾಡಿದಂತಾಗಿದೆ. ದೇಹದೊಳಗೆ ಜೀವನ ಕರ್ಮಗಳಿಗೆ ಸಾಕ್ಷಿಯಾಗಿ ಶಿವನಿರುವುದನ್ನು ಜೀವನು ತಿಳಿದು ಆಗಾಗಲೇ ಕರ್ಮಫಲಗಳನ್ನು ಶಿವನಿಗೆ ಅರ್ಪಿಸುತ್ತ ಬಂದರೆ ನಿತ್ಯಸುಖಿಯಾಗುವನು. ಹಾಗೆ ತಿಳಿಯದೆ ಎಲ್ಲವನ್ನು ತಾನೇ ಭೋಗಿಸತೊಡಗಿದ್ದರೆ ಶಿವದ್ರೋಹದ ಅಪರಾಧಕ್ಕೆ ಗುರಿಯಾಗಿ ಕಳ್ಳನೆನಿಸುವನು. ಇಂತವನಿಗೆ ಈ ದೇಹವೇ ಕಾರಾಗೃಹವಾಸವೆನಿಸಿರುವುದು ಸಹಜ. ಇದರಿಂದ ಬಿಡುಗಡೆಯಾಗಲು ಅವನಿಗೆ ಶಿವಜ್ಞಾನವೇ ದಿವ್ಯೌಷಧ. ಅವನು ಮಾಡುವ ಪ್ರತಿಯೊಂದು ಕರ್ಮವನ್ನು ಶಿವನ ಸೇವೆ ಎಂದು ಶ್ರದ್ಧೆಯಿಂದ ನಡೆಸುವುದೇ ಇದಕ್ಕೆ ಅವನು ಆಚರಿಸುವ ಪಥ್ಯವಾಗಿದ್ದರೆ ಔಷಧವು ಬೇಗನೆ ಫಲವನ್ನು ಕೊಡಬಲ್ಲದು. ಶಿವಜ್ಞಾನವೆಂಬ ಔಷಧವು ಶಿವಸೇವೆ ಎಂಬ ಪಥ್ಯದಿಂದ ಭವಪಾಶವೆಂಬ ರೋಗವನ್ನು ಬೇಗನೆ ಪರಿಹರಿಸಬಲ್ಲದು; ವಿಶ್ವೈಶ್ವರ್ಯವೆಂಬ ಆರೋಗ್ಯವನ್ನು ದೊರಕಿಸಬಲ್ಲದು. ಇದೆಲ್ಲವೂ ತ್ರಿವಿಧೋಪಾಸನವಿಂದ ಅವನಿಗೆ ದೊರಕುವ ಶಿವನ ಪ್ರಸಾದವೆಂದು ಶ್ರುತಿಯು ಭಾವಿಸಿದೆ. ಇದರಿಂದ ಆರು ಇಂದ್ರಿಯಗಳಲ್ಲೂ ಶಿವನು ಆರುಬಗೆಯಾಗಿ ನೆಲಸಿರುವನೆಂಬ ಅರಿವುಂಟಾಗುವುದು. ಇದನ್ನೇ ಷಟ್ಸಲೋಪಾಸನವೆಂದು ಕರೆಯಲಾಗಿದೆ. ಜ್ಞಾನ ಕ್ರಿಯೆಗಳ ಸಮನ್ವಯದೃಷ್ಟಿಯೇ ಈ ಷಟ್ಸ್ಥಲೋಪಾಸನವೆನಿಸಿದೆ. ಇದು ವೀರ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಶೈವನ ನಿತ್ಯಜೀವನದ ಉಸಿರು. ಇವನ್ನು ತಿಳಿದು ಆಚರಿಸುವವರೆಲ್ಲರೂ ವೀರ ಶೈವರೇ; ಅಮೃತಪುತ್ರರೇ. ಹೀಗೆ ಎಲ್ಲರೂ ಆಗಲೆಂಬುದೇ ಶ್ವೇತಾಶ್ವತರಮಹ ರ್ಷಿಯ ಹಿರಿಯ ಆಶೆ. ಇದೆಲ್ಲಕ್ಕೂ ಮೂಲವೇ ಆತ್ಮವಿಶ್ವಾಸ. ಇದಿಲ್ಲದವನೇ ರೋಗಿ; ದುಃಖಿ; ಕಪಟಿ. ಇಂತವನು ಭೂಮಿಗೆ ಭಾರವೆನಿಸುವನು. "ಕರಿಯು ಕನ್ನಡಿಯೊಳಗೆ ಅಡಗಿದಂತೆ ದೇವನು ನಮ್ಮೊಳಗೆ ನೆಲಸಿರುವಾಗ ನಾವು ಏಕೆ ಬಡವ ರಾದೇವು? ರೋಗಿಗಳಾದೇವು?" ಎಂದು ತಿಳಿದು ನಂಬಿದವನಿಗೆ ಭಯಶೋಕ ಮೋಹಗಳು ಹೇಗೆ ಬಂದಾವು? ಇಂತಹ ದಿವ್ಯಸಂದೇಶವನ್ನು ಶ್ರುತಿಯು ಜಗತ್ತಿಗೆ ಸಾರುತ್ತಿರುವುದರಿಂದ ಈ ವಿಶಾಲಭಾವನೆಯ ಹಿನ್ನೆಲೆಯನ್ನು ಎಲ್ಲರೂ ಅರಿಯ ಬೇಕಾಗಿದೆ. ಇದಕ್ಕೆ ಶ್ರುತಿಯಲ್ಲಿ ಹೇಳಿರುವ ತ್ರಿವಿಧೋಪಾಸನವೇ ದಿವ್ಯಸಂಜೀವಿನಿ ಎನಿಸಿದೆ. ಹೃದಯದಲ್ಲಿರುವ ಶಿವನನ್ನು ತಿಳಿದು ಅವನಿಗಾಗಿ ಎಲ್ಲ ವ್ಯವಹಾರ ಗಳನ್ನು ನಡೆಸುವುದೇ ವೀರಶೈವಧರ್ಮದ ಷಟ್ಸ್ಥಲೋಪಾಸನಮಾರ್ಗವೆನಿಸಿದೆ. ಇವನ್ನು ಹಿಂದೆ ಬ್ರಹ್ಮವಾದಿಗಳು ಮನಗಂಡಿದ್ದರು. ಶಿವ ಜೀವರು ದೇಹದ ಆರು ಇಂದ್ರಿಯಗಳಲ್ಲೂ ಸಹಜವಾಗಿ ನೆಲಸಿ ವ್ಯವಹರಿಸುತ್ತಿರುವುದನ್ನೇ ಆ ಜ್ಞಾನಿಗಳು ಷಟ್ಸ್ಥಲೋಪಾಸನವೆಂದು ಕರೆದಿರುವರು. ಇದ್ದದ್ದನ್ನು ಇದ್ದ ಹಾಗೆ ಭಾವಿಸಿ ತಿಳಿದು ಆಚರಿಸುವವನೇ ಬಾಳಿನ ರಹಸ್ಯವನ್ನು ಮನಗಾಣುವನು. ಅವನೇ ನಿತ್ಯ ಸುಖಿ ಎನಿಸುವನು. ಎಲ್ಲರೂ ಹೀಗೆ ಆಗಲು ಪ್ರಯತ್ನಿಸಲೆಂಬುದೇ ಶ್ರುತಿಯ ದಿವ್ಯೋಪದೇಶ. ಇದನ್ನು ನಿರಂತರಸಾಧನದಿಂದ ಬಾಳಿನಲ್ಲಿ ಅಳವಡಿಸಿಕೊಳ್ಳಬೇಕು.

ಪ್ರಪಂಚದ ಜನರು ಇಂದ್ರಿಯಗಳಿಂದ ಬರುವ ಸುಖ ದುಃಖಗಳನ್ನು ಸ್ವಾರ್ಥ ದೃಷ್ಟಿಯಿಂದ ಸ್ವೀಕರಿಸಿ ಭೋಗಿಸುವರು. ಶಿವಜ್ಞಾನಿಯಾದರೋ ಅವನ್ನು ಶಿವನ ಪ್ರಸಾದವೆಂದು ಅನುಭವಿಸುವನು. ಇಂತಹ ಪ್ರಸಾದಜೀವಿಯು ಇಲ್ಲಿಯೇ ಎಲ್ಲರಂತೆ ಇವೇ ದೇಹದಲ್ಲಿ ಬಾಳುತ್ತಿದ್ದರೂ ಎರಡನೆಯ ಜನ್ಮವನ್ನೂ ಮತ್ತು ದೇಹವನ್ನೂ ಪಡೆಯುವನು. ಅವನು ಎಲ್ಲರಂತೆ ಉಂಡು ತಿಂದು ಮಲಗಿ ಕಾಲವನ್ನು ಕಳೆಯು ತ್ತಿದ್ದರೂ ಅವನ ಬಾಳಿನ ರೀತಿಯೇ ಬೇರೆಯಾಗಿರುತ್ತದೆ. ಇದೇ ಅಮೃತಜೀವನ ಇಂತಹ ದಿವ್ಯಜೀವಿಗೆ ಆಕಾಶವೇ ಹೊದಿಕೆಯಾಗುವುದು. ಯಾರಿಗೆ ಚರ್ಮವು ಹೊದಿಕೆಯೋ ಅವನೇ ಬಾಳಿನಲ್ಲಿ ನರಳುವನು; ಆದರೆ ಆಕಾಶವನ್ನೇ ಹೊದ್ದು ಕೊಂಡಿರುವವನಿಗೆ ದುಃಖವೇ ಇರುವುದಿಲ್ಲ. ರೋಗ ರುಜಿನಗಳೆಲ್ಲವೂ ಅವನಿಗೆ ಶಿವನ ಪ್ರಸಾದವೇ ಆಗತೊಡಗುವುವು. ಪ್ರಸಾದಿಗೆ ದುಃಖದ ವಾಸನೆಯೇ ಇರುವು ದಿಲ್ಲ. ಹೃದಯದಲ್ಲಿ ಸಂಶಯಕ್ಕೆಡೆಯಿಲ್ಲದಂತಿದ್ದು, ಕರ್ಮಗಳನ್ನು ಫಲಾಪೇಕ್ಷೆ ಯಿಲ್ಲದೆ, ವೈಯಕ್ತಿಕಭಾವನೆಯಿಲ್ಲದೆ ಈಶ್ವರನ ಸೇವೆ ಎಂದು ನಡೆಸುತ್ತ ಬಂದರೆ ಎಲ್ಲರೂ ಅಮೃತರಾಗಲು ಸಾಧ್ಯವಿದೆ ಎಂಬುದನ್ನು ಜಗತ್ತಿಗೆ ಸಾರುವುದೇ ಶ್ವೇತಾಶ್ವ ತರೋಪನಿಷತ್ತಿನ ದಿವ್ಯೋಪದೇಶವೆನಿಸಿದೆ. ತಾಯ್ತಂದೆಗಳಿಂದ ಪಡೆದ ಜನ್ಮವು ನಮ್ಮನ್ನು ಭೋಗದ ಕಡೆಗೆ ಒಯ್ದರೆ ಶ್ರುತಿಯು ನಮ್ಮ ಗಮನವನ್ನು ದಿವ್ಯಜ್ಞಾನಿ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಯಾದ ಗುರುವಿನ ಕಡೆಗೆ ಸೆಳೆದು ದೇಹದೊಳಗೆ ನೆಲಸಿರುವ ಶಿವನ ಪರಿಚಯವನ್ನು ಮಾಡಿಸಿಕೊಟ್ಟು ಅವನ ಅನುಭವದಿಂದ ನಮಗೆ ಬಾಳಿನಲ್ಲಿ ಹೊಸಬೆಳಕನ್ನು ದೊರಕಿಸಲಿದೆ. ಇದೇ ನಮಗೆ ಈಗ ಆಗಬೇಕಾಗಿರುವ ಶಕ್ತಿವಿಕಾಸ. ದೇಹವೆಂಬ ಸೆರೆಮನೆಯ ವಾಸದಿಂದ ನಮ್ಮ ಶಕ್ತಿಯು ಸಂಕೋಚಗೊಂಡಿದೆ. ಇದರಿಂದ ನಮ್ಮಲ್ಲಿ ಸ್ವಾರ್ಥತೆ, ವ್ಯಾಮೋಹ, ಅಹಂಕಾರಗಳು ಬೆಳೆದು ತಾಂಡವವಾಡುತ್ತಿವೆ. ಇವು ತೊಲಗಿ ನಮ್ಮ ಇಚ್ಛಾ ಜ್ಞಾನ ಕ್ರಿಯಾಶಕ್ತಿಗಳು ವಿಕಾಸವಾಗಬೇಕಾಗಿವೆ. ನಮ್ಮ ಇಚ್ಛೆ ಸ್ವಾರ್ಥತೆಯ ಕಿಲುಬನ್ನು ತೊರೆದು ವಿಶಾಲವಾಗಬೇಕಾಗಿದೆ. ನಾಡಿನ ಹಿತದ ಬಯಕೆಯೇ ನಮ್ಮ ಗುರಿಯಾಗಬೇಕು. ವಿಶ್ವವನ್ನು ಆತ್ಮೀಯತೆಯಿಂದ ಪ್ರೀತಿಸುವಷ್ಟರ ಮಟ್ಟಕ್ಕೆ ಜ್ಞಾನ ಶಕ್ತಿಯು ಬೆಳೆಯಬೇಕು. ಕರ್ತವ್ಯನಿಷ್ಠೆಯಿಂದ ಸರ್ವರ ಹಿತವನ್ನು ಸಾಧಿಸುವಷ್ಟರ ಮಟ್ಟಕ್ಕೆ ಕ್ರಿಯಾಶಕ್ತಿ ನಮ್ಮಲ್ಲಿ ವ್ಯಾಪಿಸಬೇಕು. ಶಕ್ತಿವಿಕಾಸವೇ ದಿವ್ಯಜೀವನವೆನಿಸುತ್ತದೆ. ಹೀಗೆ ಬಾಳುತ್ತ ಸಾಧಕರೆಲ್ಲರೂ ಅಮೃತಪುತ್ರರಾಗಲೆಂಬುದೇ ಶ್ವೇತಾಶ್ವತರಮಹರ್ಷಿಯ ಬಯಕೆ. ವೀರಶೈವ ಧರ್ಮವೂ ಮಾನವರಿಗೆ ಇದನ್ನೇ ಬೋಧಿಸುತ್ತಿದೆ. "ಸರ್ವಜೀವರಿಗೆ ಲೇಸನೇ ಬಯಸುವುದು ಬಾಳಿನ ಗುರಿ" ಎಂಬು ವೀರಶೈವಧರ್ಮವು ಜಗತ್ತಿಗೆ ಸಾರುತ್ತಿದೆ. ಹೀಗೆ ಶ್ವೇತಾಶ್ವತರಶ್ರುತಿಯು ವೀರಶೈವದರ್ಶನಕ್ಕೆ ಯುಕ್ತವಾಗಿ ಹೊಂದುವ ಪ್ರಯುಕ್ತ ಇದನ್ನು ಅದಕ್ಕನುಗುಣವಾಗಿ ಇಲ್ಲಿ ವಿವರಿಸಲಾಗಿದೆ. ಇದನ್ನು ಸಾಧಕರೆಲ್ಲರೂ ಮನಗಂಡು ಅಮೃತಪುತ್ರರಾಗಲೆಂದು ಆಶಿಸಲಾಗಿದೆ.

ಈ ರೀತಿಯಲ್ಲಿ ಭಾಷ್ಯವನ್ನು ಬರೆದು ಅನುವಾದದೊಡನೆ ಈಗ ಪ್ರಕಟಿಸಿದ್ದರೂ ವೀರಶೈವರಿಗಾಗಲೀ, ಇತರ ಸಾಧಕರಿಗಾಗಲೀ ಇದರಿಂದ ಪ್ರಯೋಜನವೇನೆಂಬ ಪ್ರಶ್ನೆಯನ್ನು ಈಗ ಪರಿಶೀಲಿಸಬೇಕಾಗಿದೆ. ವೀರಶೈವರು ತಮ್ಮ ಸಿದ್ಧಾಂತ ತತ್ತ್ವವು ಶಕ್ತಿವಿಶಿಷ್ಟಾದ್ವೈತವೋ ಅಥವಾ ಶಿವಾದ್ವೈತವೋ ಎಂಬ ಆಲೋಚನೆಯಲ್ಲಿಯೇ ನಿರತರಾಗಿರುವರು. ಅವರಿಗೆ ಈ ಭಾಷ್ಯವನ್ನು ನೋಡುವ ಇಚ್ಛೆಯೇ ಹುಟ್ಟುವುದಿಲ್ಲ. ಬೇರೆಯವರು ವೀರಶೈವಭಾಷ್ಯವನ್ನು ಏಕೆ ನೋಡಬೇಕೆಂದು ಭಾವಿಸಿ ಉದಾಸೀನರಾಗುವರು. ಇಂತಹ ಪರಿಸ್ಥಿತಿಯಲ್ಲಿ ಈ ಭಾಷ್ಯವೇಕೆ ಬೇಕು ಎಂಬ ಸಂಶಯವು ತಲೆದೋರುವುದು ಸಹಜ. ಆದರೆ ಈ ಸಂಶಯವನ್ನು ಶ್ರುತಿಯೇ ಪರಿಹರಿಸಿದೆ. "ಯಾರಿಗೆ ದೇವನಲ್ಲಿಯೂ, ಅವನ ಸ್ವರೂಪವನ್ನು ತಿಳಿದ ಗುರುವಿನಲ್ಲಿಯೂ ಜೀವಂತ ವಿಶ್ವಾಸವಿದೆಯೋ, ಅವರನ್ನು ಆಶ್ರಯಿಸಿ ತನ್ನ ಪಾಶವನ್ನು ನೀಗಿಕೊಳ್ಳಬೇಕೆಂಬ ಇಚ್ಛೆ ಇದೆಯೋ ಅಂತವನಿಗೆ ಮಾತ್ರವೇ ಈ ಬಗೆಯ ಉದಾತ್ತ ತತ್ತ್ವಗಳು ಅರ್ಥವಾಗುತ್ತವೆ" ಎಂದು ಶ್ರುತಿಯೇ ತಿಳಿಸಿದೆ. ದೇಹದೊಳಗೆ ಶಿವಜೀವರು ನೆಲಸಿ ವ್ಯವಹರಿಸುತ್ತಿರುವುದಂತೂ ಸಹಜ. ಇದನ್ನು ತಿಳಿಯುವುದು ಪ್ರತಿಯೊಬ್ಬ ಸಾಧಕನ ಕರ್ತವ್ಯ. ಇದನ್ನು ತಿಳಿಯಲು ವೀರಶೈವರು, ಇತರರು ಎಂಬ ಭೇದಭಾವನೆಯೇ ಇಲ್ಲ. ಅವರವರ ದೇಹದಲ್ಲಿ ನೆಲಸಿರುವ ಶಿವತತ್ತ್ವವನ್ನು

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ತಿಳಿಯಲು ಎಲ್ಲರಿಗೂ ಅಧಿಕಾರವಿದೆ. ಆ ಶಿವನು ಸರ್ವವ್ಯಾಪಕನೆನಿಸಿ, ಜೀವನು ಪರಿಮಿತನೂ ಸಂಕುಚಿತನೂ ಆಗಿರುವುದನ್ನು ತಿಳಿಯಲು ಯಾರಿಗೆ ಅವಕಾಶವಿಲ್ಲ. ಹೀಗೆ ಶಿವನು ಶಕ್ತಿವಿಶಿಷ್ಟನಾಗಿರುವಂತೆಯೇ ಜೀವನೂ ಶಕ್ತಿವಿಶಿಷ್ಟನೇ ಆಗಿರುವನೆಂಬ ಅಂಶವು ಎಲ್ಲರಿಗೂ ತಿಳಿದದ್ದೇ ಆಗಿದೆ. ಶಿವನ ಶಕ್ತಿ ಚಿದ್ರೂಪವಾದರೆ ಜೀವನ ಶಕ್ತಿ ಚಿತ್ತ ಅಥವಾ ಪ್ರಕೃತಿ ಅಥವಾ ಮಾಯೆ ಎನಿಸಿದೆ. ಚಿಚ್ಛಕ್ತಿ ಅಥವಾ ಪರಾಶಕ್ತಿಯು ಸಚ್ಚಿದಾನಂದವೆನಿಸಿದ್ದರೆ ಚಿತ್ತಶಕ್ತಿಯು ಸತ್ತ್ವರಜಸ್ತಮೋಗುಣವೆನಿಸಿದೆ. ಶಿವ ಜೀವರಿಬ್ಬರೂ ಚೇತನರೇ ಆದರೂ ಶಕ್ತಿವಿಶಿಷ್ಟರಾದ್ದರಿಂದಲೇ ಅವರಿಗೆ ಭೇದವು ಸಹಜವಾಗಿ ನೆಲಸಿದೆ. ಅವರ ಭೇದವು ಕಲ್ಪಿತವಲ್ಲ; ಆಕಸ್ಮಿಕವಲ್ಲ; ಆದರೆ ಪ್ರಾಕೃತಿಕವಾದದ್ದು; ಶಕ್ತಿಯಿಂದ ಸಹಜವಾಗಿ ಬಂದಿರತಕ್ಕದ್ದು. ಶಿವನ ಚಿತ್ಪ್ರಕೃತಿಯೇ ಜೀವನ ಚಿತ್ತಪ್ರಕೃತಿ ಎನಿಸಿದೆ. ಹೀಗೆ ಇಬ್ಬರಿಗೂ ಭೇದವಿರುವುದರಿಂದಲೇ ಆ ಭೇದವನ್ನು ನಿರಂತರೋಪಾಸನದಿಂದ ತೊಲಗಿಸಿ ಅವರಿಗೆ ಯೋಗವನ್ನು ಶ್ರುತಿಯು ಬೋಧಿಸಿದೆ. ತ್ರಿವಿಧೋಪಾಸನದಿಂದ ಭೇದವು ಕ್ರಮವಾಗಿ ತೊಲಗಿ ಅಭೇದವು ಸಂಘಟಿಸುತ್ತದೆ. ಇದನ್ನೇ ಶ್ರುತಿಯಲ್ಲಿ ವಿಶ್ವೈಶ್ವರ್ಯವೆಂದು ಕರೆಯಲಾಗಿದೆ. ಜೀವನು ಸಂಸಾರದಶೆಯಲ್ಲಿ ಶಿವನ ಚೇತನಾಂಶವೇ ಹೊರತು ಶಿವನೇ ಅಲ್ಲ. ಅವನು ಶಿವನೇ ಆಗಿದ್ದಿದ್ದರೆ ಅವನಿಗೆ ಶಿವನ ಉಪಾಸನವೇ ಬೇಕಿರಲಿಲ್ಲ. ಆದರೂ ಅವನು ಶಿವಾಂಶನೆಂಬುದನ್ನು ಗುರುವಿನಿಂದ ತಿಳಿದು ತನ್ನೊಳಗೆ ತನಗಾಗಿ ನೆಲಸಿರುವ ಶಿವನನ್ನು ತಿಳಿಯಲು ಪ್ರಯತ್ನಿಸುವನು. ಈ ಪ್ರಯತ್ನವೇ ತ್ರಿವಿಧೋಪಾಸನ ಮತ್ತು ಷಟ್ಸ್ಥಲಲೀಲೆ. ಹೀಗೆ ಜೀವನು ಶಿವನಿಂದ ಸಹಜವಾಗಿ ಭಿನ್ನನಾಗಿದ್ದರೂ ಭಕ್ತಿಯ ಪ್ರಭಾವದಿಂದ ಶಿವನಿಗೆ ಪ್ರಿಯನಾಗತೊಡಗುವನು. ಜೀವನನ್ನು ಮಾಯೆ ಎನಿಸಿದ ಚಿತ್ತಶಕ್ತಿಯ ಸಂಕೋಲೆಯಿಂದ ಬಿಡಿಸಲು ಚಿಚ್ಛಶಕ್ತಿಯೇ ಭಕ್ತಿ ಎನಿಸಿ ಅವನಿಗೆ ನೆರವಾಗುವುದು. ಇದು ಅವನಿಗೆ ಪಶ್ಚಾತ್ತಾಪದಿಂದಲೂ, ಶಿವಾನುಗ್ರಹದಿಂದಲೂ ದೊರಕುವ ದಿವ್ಯಪ್ರಸಾದ. ಇದರ ಪ್ರಭಾವದಿಂದ ಅವನು ಆತ್ಮಶಕ್ತಿಯನ್ನು ವಿಕಾಸಗೊಳಿಸಿಕೊಳ್ಳಬೇಕಾಗಿದೆ.

ಹೀಗೆ ಜೀವನಿಗೆ ಚಿತ್ತಶಕ್ತಿಯು ಚಿತ್‌ಶಕ್ತಿಯಾಗಿ ಪರಿಣಮಿಸಿದಲ್ಲದೆ ಅವನು ಶಿವನಾಗಲಿಕ್ಕೆ ಸಾಧ್ಯವಿಲ್ಲವಾಗಿದೆ. ಸಂಸಾರದಶೆಯಲ್ಲಿ ಶಕ್ತಿವೈಶಿಷ್ಟ್ಯದಿಂದ ಸಹಜವಾಗಿದ್ದ ಭೇದವು ತೊಲಗಿ ಚಿತ್ತವೇ ಚಿದ್ರೂಪವಾಗಿ ಪರಿಣಮಿಸಿದಾಗ ಜೀವನು ಶಿವನಾಗಲಿಕ್ಕೆ ಯಾವ ಅಡ್ಡಿಯೂ ಇಲ್ಲ. ಮಾನವೀಪ್ರಕೃತಿಯು ದೈವೀಪ್ರಕೃತಿಯಾಗಿ ಪರಿಣಮಿಸಿದಲ್ಲದೆ ಜೀವನು ಶಿವನಾಗಲಿಕ್ಕೆ ಶಕ್ಯವಿಲ್ಲ. ಸತ್ತ್ವಗುಣವು ಸದ್ರೂಪವಾಗಿಯೂ, ರಜೋಗುಣವು ಚಿದ್ರೂಪವಾಗಿಯೂ, ತಮೋಗುಣವು ಆನಂದರೂಪವಾಗಿಯೂ ಪರಿಣಮಿಸಬೇಕಾಗಿದೆ. ಆಗಲೇ ಅವನಿಗೆ ಇಚ್ಛಾಜ್ಞಾನಕ್ರಿಯಾಶಕ್ತಿಗಳು ವಿಕಾಸಗೊಳ್ಳಲಿವೆ. ಇವು ಮೂರೂ ಸಂಕುಚಿತಗಳಾಗಿ ಆಣವ, ಮಾಯೀಯ, ಕಾರ್ಮಿಕವೆಂಬ ಮಲಗಳಾಗಿರುವಾಗ ಜೀವನನ್ನು ಯಾರು ತಾನೇ ಶಿವನೆಂದು ಕರೆ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ದಾರು? 'ಮಲಾವೃತಃ ಸಂಸಾರೀ' ಎಂದು ಶಿವಸೂತ್ರವು ಜೀವನನ್ನು ಬದ್ಧಪಶುವೆಂದು ಕರೆದಿದೆ. ಇವನಿಗೆ ಪಾಶವಿಮೋಚನೆಯಾಗದ ಹೊರತು ಇವನು ಬುದ್ಧನಾಗಲಾರನು. ಇವನಿಗೆ ಶಿವಯೋಗವು ಲಭಿಸಬೇಕಾದರೆ ಮೊದಲು ಪಾಶವು ತೊಲಗಿ ಗುಣಗಳ ವಿಕಾಸವಾಗಬೇಕಾಗಿದೆ. ಅವನಿಗೆ ಬದ್ಧಾವಸ್ಥೆಯಲ್ಲಿ ಚಿತ್ತಶಕ್ತಿಯೂ, ಬುದ್ಧಾವಸ್ಥೆಯಲ್ಲಿ ಚಿಚ್ಛಕ್ತಿಯೂ ಸಂಬಂಧಪಟ್ಟಿರುವುದರಿಂದ ಸಂಸಾರ ಮೋಕ್ಷಗಳೆಂಬ ಎರಡು ಅವಸ್ಥೆಗಳಲ್ಲೂ ಶಕ್ತಿವೈಶಿಷ್ಟ್ಯವಿದ್ದೇ ಇದೆ. ಆದರೆ ಹಿಂದಿನ ಪ್ರಕೃತಿ ಬುದ್ಧಾವಸ್ಥೆಯಲ್ಲಿ ಸತ್ಪರಿಣಾಮವನ್ನು ಹೊಂದಿರುವುದರಿಂದ ಅವನ ಇಚ್ಛಾಜ್ಞಾನ ಕ್ರಿಯೆಗಳು ವಿಶಾಲವೂ ವ್ಯಾಪಕವೂ ಆಗುತ್ತವೆ. ಜೀವನಿಗೆ ಶಿವನೊಡನೆ ಅದ್ವೈತವು ಶಕ್ತಿವಿಕಾಸದಿಂದಲೇ ಸಂಭವಿಸಬೇಕಾಗಿದೆ. ಹೀಗೆ ಶಕ್ತಿವಿಶಿಷ್ಟಾದ್ವೈತವೆಂಬ ಪದವು ಶಿವಯೋಗನೆಂಬ ಅರ್ಥವನ್ನೇ ವಿಶದಪಡಿಸಲಿದೆ. ಇಂತಹ ಸ್ಥಿತಿಯಲ್ಲಿ "ನಮ್ಮ ತತ್ತ್ವವು ಶಿವಾದ್ವೈತವೋ, ಶಕ್ತಿವಿಶಿಷ್ಟಾದ್ವೈತವೋ" ಎಂಬ ಆಲೋಚನೆಯಲ್ಲಿ ಮಗ್ನರಾಗುವುದು ಅಷ್ಟು ಯುಕ್ತವಲ್ಲ. ಶಿವನೊಡನೆ ಜೀವನಿಗೆ ಸಾಮರಸ್ಯವೇನೋ ಎಲ್ಲರಿಗೂ ಇಷ್ಟವೇ ಆಗಿದೆ. ಅದರಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲ. ಆದರೆ ಬದ್ಧಾವಸ್ಥೆಯಲ್ಲೂ, ಬುದ್ಧಾವಸ್ಥೆಯಲ್ಲೂ ಶಕ್ತಿವೈಶಿಷ್ಟ್ಯವೇ ಇದ್ದು ಆ ಶಕ್ತಿಯಲ್ಲಿ ಭೇದವು ಸಹಜವಾಗಿ ಇರುವುದರಿಂದ ಅದನ್ನು ಕ್ರಮವಾಗಿ ತೊಲಗಿಸಿ ಅಭೇದಾನಂದವನ್ನು ತ್ರಿವಿಧೋಪಾಸನವು ಶಿವಜ್ಞಾನದ ಅವಲಂಬನದ ಮೇಲೆ ದೊರಕಿಸಲಿದೆ ಎಂಬುದನ್ನು ಸಾಧಕರೆಲ್ಲರೂ ಮನಗಂಡರೆ ಸಾಕಾಗಿದೆ. ಇದುವೆ ನಿಜವಾದ ಅಧ್ಯಾತ್ಮವಿಕಾಸ. ಇದರಲ್ಲಿ ಲಕ್ಷ್ಯವಿಟ್ಟವರು ತತ್ತ್ವದ ಹೆಸರಿನಲ್ಲಿ ವಿವಾದವನ್ನೇ ಮಾಡುವುದಿಲ್ಲ. ಶಿವಾದ್ವೈತವೇ ಆಧ್ಯಾತ್ಮವಿಚಾರದ ಪರಿಣಾಮವಾದರೂ ಅದು ಸಾಧನಮಾರ್ಗವನ್ನು ತಿಳಿಸುವುದಿಲ್ಲ. ಬದ್ಧಾವಸ್ಥೆಯ ಚಿತ್ತಶಕ್ತಿವೈಶಿಷ್ಟ್ಯವನ್ನು ತೊಲಗಿಸಿಕೊಂಡು ಬುದ್ಧಾವಸ್ಥೆಯ ಚಿಚ್ಛಕ್ತಿವೈಶಿಷ್ಟ್ಯವನ್ನು ಸಾಧಿಸಿದಲ್ಲದೆ ಶಿವಾದ್ವೈತವು ಸಿದ್ಧಿಸುವಂತಿಲ್ಲ. ಶಕ್ತಿವಿಶಿಷ್ಟಾದ್ವೈತದಲ್ಲಿ ಈ ಶಿವಾದ್ವೈತವು ಸೇರಿಕೊಂಡಿದ್ದರೂ ಶಿವಾದ್ವೈತದಲ್ಲಿ ಶಕ್ತಿವಿಶಿಷ್ಟಾದ್ವೈತವು ಸೇರಿಲ್ಲ. ಶಿವನೆಂದರೆ ಶಕ್ತಿವಿಶಿಷ್ಟದೇವನೆಂದೇ ಅರ್ಥವಾಗುವುದಿಲ್ಲ. ನಿರ್ವಿಶೇಷಬ್ರಹ್ಮಕ್ಕೂ ಶಿವಪದವು ಅನ್ವಯಿಸುತ್ತದೆ. ಆದರೆ ಅದು ಈ ಶ್ರುತಿಗೂ ವೀರಶೈವದರ್ಶನಕ್ಕೂ ಇಷ್ಟವಿಲ್ಲ. ಆದ್ದರಿಂದ ಶಿವಾದ್ವೈತವೆಂದರೆ ಅದ್ವೈತಮತದ ಬ್ರಹ್ಮಾದ್ವೈತದಲ್ಲಿ ಕೊನೆಗಾಣುವುದು. ಅದು ಸಿದ್ಧಾಂತಕ್ಕೆ ವಿರುದ್ಧವಾದೀತು. ಹೀಗೆ ಶಕ್ತಿವಿಶಿಷ್ಟಾದ್ವೈತವು ಶಕ್ತಿವಿಶಿಷ್ಟಾದ್ವೈತದ ಮೂಲಕ ಸಹಜವಾಗಿ ಬಂದಿರುವ ಶಿವಜೀವಭೇದವನ್ನು ತೊಲಗಿಸಿ ಶಕ್ತಿವಿಕಾಸದ ಮೂಲಕ ಜೀವನಿಗೆ ಶಿವಾಭೇದದ ದಿವ್ಯಾನಂದವನ್ನು ದೊರಕಿಸುವುದರಿಂದ ಸಾಧನ ಮತ್ತು ಸಿದ್ಧಾಂತಗಳೆರಡನ್ನೂ ತಿಳಿಸುತ್ತಲಿದೆ. ಹೀಗೆ ಶಿವಾದ್ವೈತವೂ ಶಕ್ತಿವಿಶಿಷ್ಟಾದ್ವೈತದಲ್ಲಿಯೇ ಸೇರಿರುವುದರಿಂದ ಅವೆರಡಕ್ಕೂ ಭೇದವೇನೆಂಬ ಜಿಜ್ಞಾಸೆಗೆ ಸಾಧಕರು ಪ್ರವೇಶಿಸದೆ ಆ ಜಿಜ್ಞಾಸೆಯನ್ನು ಹುಟ್ಟಿಸಿರುವ ಶಕ್ತಿಸಂಕೋಚದ ವ್ಯಾಮೋಹದೃಷ್ಟಿಯನ್ನು ತೊಲಗಿಸಲಿಕ್ಕಾಗಿ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ನಿರಂತರವೂ ದೇಹದಲ್ಲಿ ನಡೆಯುತ್ತಿರುವ ಷಟ್ಸ್ಥಲೋಪಾಸನದ ಕಡೆಗೆ ಗಮನವನ್ನು ಕೊಡುವುದು ಮೇಲು. ಇದರಿಂದ ಆತ್ಮಕಲ್ಯಾಣವಷ್ಟೇ ಅಲ್ಲದೆ ಲೋಕಕಲ್ಯಾಣವೂ ಆಗಲಿರುವುದು. ಶಕ್ತಿವಿಶಿಷ್ಟಾದ್ವೈತದಲ್ಲಿ ಶಿವಾದ್ವೈತವೂ ಸೇರಿರುವುದರಿಂದ ಆ ಬಗ್ಗೆ ಯಾರಿಗೂ ವಿವಾದವಿಲ್ಲ. ಆದರೆ ಮಾನವೀಪ್ರಕೃತಿಯು ಕ್ರಮವಾಗಿ ಬದಲಾವಣೆಯಾಗಬೇಕಾದ್ದರಿಂದಲೂ, ಕೇವಲ ಶಿವಜ್ಞಾನದಿಂದಲೇ ಅದು ಆಗದಿರುವುದರಿಂದಲೂ, ತ್ರಿವಿಧೋಪಾಸನವನ್ನು ಜೀವನು ಅವಶ್ಯವಾಗಿ ನಡೆಸಲೇಬೇಕಾಗಿರುವುದರಿಂದಲೂ ಶಕ್ತಿವಿಶಿಷ್ಟಾದ್ವೈತವು ಮಾನವಕಲ್ಯಾಣವನ್ನು ಯುಕ್ತರೀತಿಯಲ್ಲಿ ಸಾಧಿಸಲಿರುವುದು. ಇದರಲ್ಲಿ ವಿಶಿಷ್ಟಾದ್ವೈತಮತದ ಅಂಧಾನುಕರಣವಿದೆಯೆಂದು ಭಾವಿಸುವುದು ಯುಕ್ತವಲ್ಲ. ಅದಕ್ಕೂ ಇದಕ್ಕೂ ಇರುವ ವೈಶಿಷ್ಟ್ಯವನ್ನು ಬೇರೆ ಕಡೆಯಲ್ಲಿ ತಿಳಿಸಿದೆ.

ಈ ಬಗೆಯ ಚಿಂತನೆಯಿಂದ ಸಾಧಕರು ತಮ್ಮ ಹೃದಯವನ್ನು ಕೆಡಿಸಿಕೊಳ್ಳದೆ ಅಲ್ಲಿ ನಿರ್ಲಿಪ್ತನಾಗಿ ನೆಲಸಿರುವ ಶಿವನ ಪರಿಚಯವನ್ನು ಪಡೆದು ಅವನೊಡನೆ ಸೇರಿ ತಮ್ಮ ಶಕ್ತಿಯನ್ನು ವಿಕಾಸಗೊಳಿಸಿಕೊಳ್ಳಲು ಪ್ರಯತ್ನಿಸಬೇಕಾಗಿದೆ. ಇದಕ್ಕೆ ವೀರಶೈವರು, ಇತರರು ಎಂಬ ಭೇದಭಾವನೆಗೆ ಅವಕಾಶವೇ ಇಲ್ಲ. ಹೃದಯದೊಳಗಿನ ಜ್ಞಾನರತ್ನದಿಂದ ತಮ್ಮನ್ನು ಅಲಂಕರಿಸಿಕೊಳ್ಳಲು ಯಾರಿಗೆ ಅರ್ಹತೆ ಇಲ್ಲ? ಆ ಜ್ಞಾನಕ್ಕೆ ಹಿರಿದು ಕಿರಿದೆಂಬ ಭೇದವಿಲ್ಲ. ಅದನ್ನು ತಿಳಿದು ಅದರೊಡನೆ ಬೆರೆಯುವುದೇ ಶಿವಯೋಗ. ಅದರಿಂದಲೇ ನಾವು ಅಮೃತಪುತ್ರರಾಗಲಿರುವೆವು. ಹೀಗೆ ಸಾಧಕರೆಲ್ಲರೂ ಅಮೃತಪುತ್ರರಾಗಲೆಂಬುದೇ ಶ್ವೇತಾಶ್ವತರಮಹರ್ಷಿಯ ಆಶಯ. ಇದನ್ನು ಜಾತಿ, ಮತ, ಕುಲ, ಗೋತ್ರ, ಸೂತ್ರಗಳ ಭೇದವಿಲ್ಲದೆ ಎಲ್ಲರೂ ಮನಗಾಣಲೆಂಬುದೇ ಈ ಭಾಷ್ಯದ ಆಶಯವಾಗಿದೆ. ಹೀಗೆ ಮಹರ್ಷಿಯ ಸದಾಶಯವನ್ನು ಈ ಮೂಲಕ ವ್ಯಕ್ತಪಡಿಸಲು ಸಿಕ್ಕಿದ ಸದವಕಾಶವನ್ನು ಸದುಪಯೋಗಪಡಿಸಿಕೊಳ್ಳಲಾಗಿದೆ. ದಿವ್ಯಾಮೃತದ ಸವಿಯೂಟಕ್ಕೆ ಎಲೆಯ ಹಂಗಿಲ್ಲ. ಒಲುಮೆಯ ಕೂಟಕ್ಕೆ ಹಾಸಿಗೆಯ ಹಂಗಿಲ್ಲ. ವೀರಶೈವಭಾಷ್ಯವಾದರೂ ಇದು ಆತ್ಮಜ್ಞಾನದ ಬೆಳಕನ್ನು ದೊರಕಿಸುತ್ತಿರುವುದರಿಂದ ಇದನ್ನು ಎಲ್ಲರೂ ಉಪಯೋಗಿಸಲಿ. ಮಾನವರನ್ನು ಶಿವಾನುಭವಸುಖಕ್ಕಾಗಿ ಪ್ರೇರಿಸುವ ಶರಣಗೀತೆಯ ಪದ್ಯದಿಂದ ಈ ಭೂಮಿಕೆಯನ್ನು ಮುಗಿಸಲಾಗಿದೆ.

ಬೀಜೇ ಸ್ಥಿತಂ ವೃಕ್ಷಫಲಂ ಹಿ ಸೂಕ್ಷ್ಮಂ ಕಿಂ ಭೋಕ್ತುಮರ್ಹಂ ಪರಿದೃಶ್ಯತೇಽದ್ಯ ।
ಪಯಃಸ್ಥಿತಂ ಕಿಂ ಘೃತಮಾಶಯಾಪ್ಯತೇ ಇಕ್ಷುಸ್ಥಿತಂ ಕಿಂ ಗುಡಮಾಪ್ಸ್ಯತೇಽಕ್ಷ್ಣಾ ॥
ಸ್ವಸ್ಮಿಂಸ್ಥಿತಂ ಯಜ್ಛಿವತತ್ತ್ವಮೇತತ್ ಸ್ಮೃತಿಕ್ಷಣೇನೈವ ಮತೌ ಸ್ಫುರೇತ್ಕಿಮ್ ।
ವಿಚಿಂತ್ಯ ವಿಜ್ಞಾಯ ಪ್ರಮಥ್ಯ ಭೂಯಃ ಪ್ರಯೋಗತಶ್ಚೈವ ಪ್ರಸಾದ್ಯ ನಿತ್ಯಮ್ ॥
ತತ್ತ್ವಾನುಭಾವೈಕಸುಖೇಽಭಿಸಂಗೋ ನಿಷ್ಣಾತಭಕ್ತಂ ಶರಣಂ ವಿಹಾಯ ।
ಅನ್ಯೈಶ್ಚ ಕಿಂ ಸಾಧಯಿತುಂ ಹಿ ಶಕ್ಯಂ ಗುಹೇಶ್ವರಾಶ್ರಾವಯ ಭೃತ್ಯವಾರ್ತಾಮ್ ॥

ಮಾನಸಗಂಗೋತ್ರಿ, ಮೈಸೂರುವಿಶ್ವವಿದ್ಯಾನಿಲಯ, ಮೈಸೂರು.

ಟಿ. ಜಿ. ಸಿದ್ಧಾಪ್ಪಾರಾಧ್ಯ, ಸಜ್ಜನವಿಧೇಯ.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

आत्मनिवेदनम्

पूज्यपितृवर्याणामादेशतः पञ्चवार्षिकं ज्ञानयज्ञमुपक्रम्य तदवधौ लोककल्याणकारकाः कतिपय ग्रन्थाः प्रकाशिता इति महाजना विदन्त्येव। प्रथमं रंभापुरीवीरपीठाध्यक्षवर्याणां जगद्गुरुश्रीवीरगङ्गाधरशिवाचार्यमहास्वामिनामुदाराश्रयेण प्रकटितं शक्तिविशिष्टाद्वैतदर्शनं देशविदेशेषु अनेकेषां साधकानां तदन्तर्वर्तिना चिच्छक्तिविशिष्टेनेश्वरेण अद्वैतं साधयद्विलसति। अनन्तरं श्रीशैलपीठाध्यक्षवर्याणां जगद्गुरुश्रीवागीशपण्डिताराध्यमहास्वामिनामुदारप्रोत्साहेण च प्रकटितः श्रीकरभाष्यानुवादः सन्मान्यैः कर्णाटदेशीयविद्यामन्त्रिवर्यैः श्रीमद्भिः एस् आर कण्ठिमहोदयैरुद्घाटितस्सन् महाजनानां जीवनं पावनयन् श्रीकरयंश्च विराजत इत्यपि सुविदितमेव सर्वेषाम्। वीरशैवधर्मेऽभिजातोऽहं व्यवहारकालेऽपि यथा तं धर्ममाचरेयंस्तथा यथामति प्रयतितव्यमिति पित्रादेशं शिरसा वहन् महास्वामिनां दिव्यप्रसादेन तथैव प्रयतितवान्। चित्तशक्तिविशिष्टस्य मम मद्धृदयस्थस्य चिच्छक्तिविशिष्टस्येश्वरस्य च शक्तिवैशिष्ट्येन सहजतया स्थितो यो भेदस्तं गुर्वनुग्रहादेव क्रमशः परिहृत्य हृदयस्थेश्वरे समरसतया विलीनः श्रीकरभाष्यक्रियासारयोः परिचयेन ज्ञानक्रियासमन्वयात्मिकां दृष्टिं जीवनेऽधिगम्य ज्ञानयज्ञेऽवशिष्टं महत्तरं कार्यं परिसमापयितुं तमेवेश्वरं निरन्तरं चिन्तयत् कतिपयदिवसानत्यवाहयम्॥

भगवद्गीतायाः श्वेताश्वतरोपनिषदश्च वीरशैवदर्शनरीत्या भाष्ये विलेख्ये इति पूज्यपितृवर्यस्य आज्ञा आसीत्किल। तन्निर्वाहाय महागुरुः को वा मेऽवकाशं दद्यादिति मे दैनन्दिनी चिन्ता समजनि। एतच्चिन्तामग्नस्य मे चित्रदुर्गप्रान्ते प्रसाराङ्गभाषणाय गन्तुमवकाश एकदा समुपलब्धः। तदानीं चित्रदुर्गनगरे महेश्वरमहोत्सवः जगद्गुरुश्रीमल्लिकार्जुनमुरुघराजेन्द्रमहास्वामिनां दिव्यसन्निधौ प्रचाल्यमान आसीत्। महेश्वरवंशे जातो महेश्वरप्रियश्चाहं महेश्वरप्रसादा-

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

कांक्षी महेश्वरमहोत्सवं गत्वा तत्र महाजनसमाजे निर्लिप्ततयाऽवस्थितान् जगद्गुरुमहास्वामिनोऽन्तर्बहिश्चापश्यम् । महास्वामिनोऽपि मां दृष्ट्वा सन्तुष्टान्तरङ्गा निरुपाधिकेन वात्सल्येन मदीयं कुशलमपृच्छन् । पुरा शिवानुभवमण्टपे बसवादिप्रमथैस्समावृतो निरञ्जनपीठमधितिष्ठन् अल्लमप्रभुर्यथा सच्चिदानन्दनित्यपरिपूर्णाविरळपरंज्योतिस्स्वरूप अशोभतेति मम मनसि यथा सुप्रतिष्ठितः आसीत्तथैव पवित्रभावना श्रीपूज्पादानां दिव्यदर्शनेन मय्युत्पन्ना । महास्वामिनो मामेवमन्वगृह्णन् । "त्वया गुरुपीठे यथा सेवा समर्पिता तथा जङ्गमपीठेऽपि काचन सेवा समर्पणीय " इत्येवमुक्त्वा ते कृपया मामपश्यन् ॥

पूज्यपादानाममृतवाणी मन्मनसि सत्परिणाममुत्पादयामास । तदीयं परमवैराग्यं, हृदयस्थे प्राणलिङ्गे तैरनुभूयमानं सामरस्यं, तथापि लोककल्याणाय तैराचर्यमाणः कर्मयोगः, तादृशमेव शिवपूजानुष्ठानं, निष्पक्षपातेन योग्यतापुरस्करणं, स्वाभाविकमौदार्यं, बहिरन्तश्च विलसन्ती परमा शान्तिरसाधारणीतृप्तिः परमवैराग्यं इत्येवमादिभिस्सर्वैर्गुणैराकृष्टोऽहं मनस्येवमचिन्तयम् 'एकस्य वस्तुनः परिचयाय नेत्रद्वयमुपयुज्यतेऽस्माभिः । नेत्रद्वयेनापि दृश्यमानं वस्त्वेकमेव । तथैव हृद्रयेऽमूर्तं शिवमनुभवितुं गुरुजङ्गमावुभावप्युपयोक्तव्यौ । उभयोरेकभावनयार्चनेन लभ्यं परवस्त्वेकमेव । 'भेददृष्टिर्नरकाय ; अभेदद्रष्टिर्नित्यसुखाय' इति पूज्यपितृवर्याः सदा वदन्त आसन् । निरञ्जनपीठमधितिष्ठन्नपि निर्लिप्ततया स्थित्वा लोककल्याणं विशेषतः साधयन् जङ्गमोऽपि गुरुरिव समाश्रयणीयः । अस्मिन् पीठेऽपि या काचन सेवा समर्प्यते चेत्तदैव मज्जीवनं फलिष्यति ' इति । तदा जगद्गुरुपादयोर्भक्तिपूर्वकं विज्ञापितं मया " भवतामनुग्रहेणैव विलिखितं श्वेताश्वतरोपनिषद्वीरशैवभाष्यं भवत्पादयोर्भक्त्या समर्प्यत " । इति । एतदाकर्ण्य महास्वामिनस्सन्तुष्टा मामाशीर्भिः पर्यपूरयन् ।

महास्वामिनां पादारविन्दयोरिदं भाष्यं समर्पणीयमिति वचनं मया यद्यपि दत्तमेव । तथापि काचन चिन्ता मम मनसि समजनि । महास्वामिनो यद्यपि न केवलं मे, अपि तु मानववर्गस्यैव निरञ्जनतामहत्त्वं स्वीयाचरणद्वारा

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

प्रतिपादयितुं समागतो महेश्वर एवेत्यत्र न कस्यापि विवादः । तथापि वीरगोत्रोत्पन्नेन गुरुपरंपरानुसारिणा मया निरञ्जनपरंपरानुवर्तनं युज्यते न वेति विचारयितुमुपक्रान्तम् । तदानीं तयोः परंपरयोः परस्परं ऐकरूप्यं सामरस्यं च वर्तते न वेति विचारस्तदा मे दृष्टिमाकर्षयत् । अनन्तरं गच्छता कालेन वचनवाङ्मये शरणैराचरितं निरञ्जनसंप्रदायं यथामति परिशील्य तमेव रेणुकागस्त्यसंवादरूपे सिद्धान्तशिखामणौ निरूपितेन गुरुसंप्रदायेन च तुलनात्मिकया दृष्ट्या व्यमृशम् । तदा तयोरुभयोरपि परंपरयोरैक्यं दृष्ट्वा परमानन्दभरितोऽभवम् । वीरशैवधर्मे यादृशः सिद्धान्तस्तत्प्रतिपादको यस्संप्रदायश्च रेणुकाचार्यैरगस्त्यमहर्षये यथा प्रतिपादितस्तथैव शरणा अपि तदर्थमेव शिवप्रेरिता अत्रागत्य तदीयं कार्यं निर्वर्त्य शिवलोकं गता इत्यज्ञासिषम् । आचार्यैः संस्कृतभाषायां निरूपित एव सिद्धान्तः अल्लमादिभिः शरणैः कन्नडभाषायां निरूपितः । अतस्तयोर्न कदापि भेदोऽस्तीत्ययमंशो मन्मनसि सुदृढो बभूव । षट्स्थलोपासमार्गोऽप्याचार्यैर्यथा निरूपितस्तथैव शरणैश्च प्रतिपाद्यत इत्यवलोक्य परमपूज्यानां जगद्गुरुश्रीमल्लिकार्जुनमहास्वामिनां पादारविन्दयोर्मे मनः सुदृढं विलीनं बभूव । पुरा तेभ्यः प्रदत्तं मदीयं वचनं तथैवाचरितुं दृढसङ्कल्पस्तदानीं सञ्जातो मयि ॥

लौकिकदृष्ट्या च मत्सङ्कल्पं परिशील्य भाष्यसमर्पणाय कृतनिश्चय आसम् । शैवाग्रगण्योऽप्पय्यदीक्षितः परमवैष्णववेदान्तदेशिकप्रणीताय यादवाभ्युदयाय व्याख्यानं कृतवान् । निरञ्जनपरंपरानुगताः श्रीमरितोण्डदार्याः वीरशैवानन्दचन्द्रिकायां गुरुपीठस्थानाचार्यान् गौरवपूर्वकं प्रशंसितवन्तः । मेटीकुर्केग्रामस्थनिरञ्जनशार्वीयैर्विरक्तस्वामिभिर्गुरुपीठीयस्य कुप्पूरुमरुळसिद्धस्वामिनश्चरितं भक्तिपूर्वकं विलिखितं विराजते । एवं च साक्षात्कृतधर्मसु योगिषु विशालदृष्टिस्साहजिक एव । अतो गुरुजङ्गमयोरुभयोरपि शिवभावनया पुरस्करणं मानववर्गस्य श्रेयस्करमिति सम्यगालोच्य प्रकृतं भाष्यपुष्पं पूज्यपादेषु निरञ्जनपीठाध्यक्षेषु भक्त्या समर्पयितुमुद्युक्तोऽभवम् ॥

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

मदाश्रयदातारः पूज्या इति यदाऽहं निश्चितवान् तदा तदीयमूल-पीठाध्यक्षाणां शिवयोगसमाधेस्सन्दर्शनाय प्रस्थितवानहं तदैव महासमाधे-र्दक्षिणभागे पतितं पुष्पमेकमपश्यम्। एवं प्रसादमनुगृह्य महादेवस्सर्वसंशय-हान्या मदीयं विश्वासं दृढीचकारेत्यहमचिन्तयम्। एतादृशां शिवयोगिनां समाश्रयेण मे मनसि सन्तोषस्सञ्जातः। ते महास्वामिनो मुरुघेशनामानो निरञ्जन-पीठाधिरूढेभ्यः अल्लमप्रभुवर्येभ्य अष्टमास्तन्नाम्नस्समयस्य च प्रवर्तारः शिवयोगसाम्राज्यमनुभवन्त एव भक्तानुग्रहलीलां निर्वहन्तः श्रीचित्रदुर्गमहाक्षेत्रे शिवयोगसमाधौ विराजमाना वर्तन्त इति प्रमोदस्थानमेतत् ॥

निरंजनपरंपरानुगताः सर्वेऽपि महास्वामिनः परमवैराग्यशालिनस्त-तपस्विनश्च आसन्। तेषां महिमातिशयः कर्णाटके सर्वेषां विदित एव। एकदा जगद्गुरुजयदेवमुरुघराजेन्द्रमहास्वामिनः कल्याणनगरे सर्पभूषणमठे भक्तानुग्रहलीलां निर्वहन्त आसन्। तदानीमहं आकस्मिकतया तत्र गतः महास्वामिन अपश्यम्। तस्मिन् दिने मदीया पत्नी हृद्रोगेण, माता च चर्म-रोगेण पीड्यमाने आस्ताम्। महस्वामिनो मामनिमेषदृष्ट्याऽवलोक्य कृपया मे फलद्वयमनुगृह्य अवदन् "तव भार्या माता च रोगग्रस्ते वर्तेते। उभे अपि त्वया समभावनया अवलोक्येते। इयं च ते दृष्टिर्लोककल्याणाय प्रभवेदित्या-शास्महे। तयोः रोगेण ते न कोऽपि बाधः सञ्जायेत। अनयोरेकं फलं मात्रा, अपरं च भार्यया उपयुज्यताम्" इत्युक्त्वा तत्फलद्वयं मे ददुः। तदैव फलद्वयं द्वाभ्यामप्युपयुक्तम्। तद्दिनादरभ्यैतावत्पर्यन्तं द्वयोरपि तादृशो रोगस्य वासनैव नास्ति। इदानीन्तना अपि महास्वामिनो गीताभाष्ये शरण-वचनानि पद्यरूपेण विरच्य तैः समन्वयः कार्य इति मां एकदा आदिशन्। मम पद्यरचनाभ्यास एव नासीत्। मनसि महस्वामिनः स्मारंस्मारं अनेकानि वचनानि निरर्गळतया पद्यरूपेण ग्रथितानि। एवं प्रशांतचित्ताः करुणार्द्र-हृदयास्ते मातृवद्भाव्यन्ते मया। तैः क्रियमाणानि सार्वजनिकहितसाधकानि विद्यावर्धकानि महत्तराणि विश्रुतानि कार्याणि महाजनाः जानन्त्येव ॥

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

तदानीमपि सन्देहान्तरमापतितम् । परशिवार्चननैरन्तर्येण तदेकतामुपगतानामेषां शिवयोगिसार्वभौमानां पादयुगळे श्वेताश्वतरोपनिषद्भाष्यसमर्पणं युक्तं न वेति विचारः पुनरुत्पन्नः । शिवयोगिनस्तु संन्यासयोगात् शुद्धसत्त्वा विराजन्ते । निःस्पृहास्तु महास्वामिनः कैवल्यस्थितिमनुभवन्त एतद्भाष्यं स्वीकर्तुं अनुमोदन्ते न वेति विचारो मय्यस्फुरत् । तथापि तदैव महास्वामिनामनुग्रहेणायं संशयो निवारित एव । शिवयोगस्यैव प्रदिपादकमिदं भाष्यं महाशिवयोगिभ्यो यदार्प्येत तदा ते प्रीता भवेयुरेवेत्यभावयम् । श्वेताश्वतरोपनिषद्भाष्यस्य परमार्थोऽपि " साधकः स्वात्मनिष्ठे महेश्वरे विलीन एवानन्दी भवेत् । तदर्थं सः ज्ञानक्रियासमन्वयमार्गमेवाश्रयेत् ; एवं स्वान्तर्गतं शिवं ज्ञात्वा तदुपासनेनैव तदनुग्रहं लभेत । ततश्च पाशविमोचनेन निर्मलो भूत्वा सः सामरस्यमनुभवेत् " इत्येवं प्रसिद्धः । अतः सामरस्यमनुभवत्सु शिवयोगिषु सामरस्यप्रतिपादकस्यास्य भाष्यस्य समर्पणे औचित्यं महद्वर्तत इति विभाव्य दृढनिर्धारोऽभवम् । एवं विगळितसर्वसंशयेन मया मत्पितृवर्यस्य तुष्ट्यै मद्वंशजानां श्रेयसे च भाष्यमिदमात्मनिवेदनपुरस्सरं मुरुघेशपादयोर्भक्त्या समर्प्यते । अतस्तदीयं ग्रन्थमिमं तदीयेन सेवकेन सकाले परिसमाप्य सदयं स्वीकृत्य च भृत्यमिममनुगृहीतवते तत्त्वात्मकाय श्रीमुरुघेशाय अत्यन्तं कृतज्ञोऽस्मि । तदीयपीठे स्थित्वा तदीयं लोककल्याणकार्यं उत्साहेन निर्वहन्तः श्रीजगद्गुरुमल्लिकार्जुनमहास्वामिनोऽव्याजवात्सल्येन एतं ग्रन्थं श्रीजगद्गुरुमुरुघराजेन्द्रविद्यापीठग्रन्थमालायां प्रकटय्य मां प्रोत्साहितवन्तः । तैरनुगृहीतमिमं महोपकारं न कदापि विस्मर्तुं शक्यम् । एवं चिरस्मरणीयेभ्यः श्रीजगद्गुरुभ्यस्साष्टाङ्गप्रणामपूर्विकां कृतज्ञतां भक्त्या समर्प्य सद्भक्तास्साधकाः भाष्यावलोकनेन संतुष्यन्त्विति प्रार्थये॥

अ. १-५ मन्त्रे 'पञ्चाशद्भेदां' इत्यत्र 'पञ्चावर्तां' इति, भूमिकायां 1 पुटे ' विद्वांसः ' इत्यत्र 'विदुष' एवं मुद्रणदोषाः केचन शोधित अपि प्रमादादवशिष्टा यद्यपि स्फुरेयुः । तान् सहृदयास्सदयं मर्षयन्त्विति सविनयमभ्यर्थये।

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

एतन्मुद्रणावसरे मैसूरसर्कारमुद्रणालयाधिकारिणः श्री बि. पि. मल्लराजेअरसु महोदया ह्यमौल्येन सहकारेणोपकृतवन्तः । तेभ्यो गुरुगुरुवेशः प्रसन्नो भवत्वित्यभ्यर्थये । ताण्डवमूर्तिमुद्रणालयमालिकः श्री नटराज्महोदयः प्रेम्णा मुद्रणकार्यं सम्यक् निरुह्य प्रोत्साहितवान् । अतस्तस्मा अपि कृतज्ञतां प्रकटये ॥

ಆತ್ಮನಿವೇದನದ ಅನುವಾದ

ಪೂಜ್ಯಪಿತೃವರ್ಯರ ಆಜ್ಞೆಯಂತೆ ಐದು ವರ್ಷಗಳ ಕಾಲ ಜ್ಞಾನಯಜ್ಞ ವನ್ನಾರಂಭಿಸಿ ಆ ಅವಧಿಯೊಳಗೆ ಆತ್ಮಕಲ್ಯಾಣವನ್ನು ಸಾಧಿಸುವಂತಹ ಕೆಲವು ಗ್ರಂಥಗಳನ್ನು ಪ್ರಕಾಶಪಡಿಸಿದ್ದಾಯಿತು. ಮೊಟ್ಟಮೊದಲಿಗೆ ರಂಭಾಪುರೀವೀರ ಪೀಠಾಧ್ಯಕ್ಷರಾದ ಜಗದ್ಗುರುಶ್ರೀವೀರಗಂಗಾಧರಶಿವಾಚಾರ್ಯಮಹಾಸ್ವಾಮಿಗಳವರ ಉದಾರಾಶ್ರಯದಿಂದ ಪ್ರಕಟಿಸಿದ ಶಕ್ತಿವಿಶಿಷ್ಟಾದ್ವೈತದರ್ಶನವು ದೇಶವಿದೇಶಗಳಲ್ಲಿ ಅನೇಕ ಸಾಧಕರಿಗೆ ಅವರೊಳಗಿರುವ ಚಿಚ್ಛಕ್ತಿವಿಶಿಷ್ಟಪರಶಿವನೊಡನೆ ಅದ್ವೈತವನ್ನು ಸಾಧಿಸಿಕೊಟ್ಟು ಅವರ ಶಕ್ತಿವಿಕಾಸಕ್ಕೆ ಅವಕಾಶವನ್ನು ಕಲ್ಪಿಸಿರುವುದು. ಅನಂತರ ಶ್ರೀಶೈಲಪೀಠಾಧ್ಯಕ್ಷರಾದ ಜಗದ್ಗುರು ಶ್ರೀವಾಗೀಶಪಂಡಿತಾರಾಧ್ಯಶಿವಾಚಾರ್ಯ ಮಹಾಸ್ವಾಮಿಗಳವರ ಉದಾರಪ್ರೋತ್ಸಾಹದಿಂದ ಶ್ರೀಕರಭಾಷ್ಯದ ಅನುವಾದವನ್ನು ಮೈಸೂರುದೇಶದ ಮಾನ್ಯ ವಿದ್ಯಾಮಂತ್ರಿ ಶ್ರೀ ಎಸ್. ಆರ್. ಕಂಠಿಯವರ ಉದ್ಘಾಟನೆಯ ಮೂಲಕ ಪ್ರಕಟಿಸಿದ್ದಾಯಿತು. ಅದು ಮಹಾಜನರ ಜೀವನವನ್ನು ಶ್ರೀಕರ ಗೊಳಿಸುತ್ತಲಿರುವುದು ಎಲ್ಲರಿಗೂ ತಿಳಿದೇ ಇದೆ. ವೀರಶೈವಧರ್ಮದಲ್ಲಿ ಹುಟ್ಟಿದ ನಾನು ವ್ಯವಹಾರಕಾಲದಲ್ಲಿಯೂ ಆ ಧರ್ಮವನ್ನು ಸೂಕ್ತವಾಗಿ ಆಚರಿಸುವಂತೆ ತಿಳಿಸಲು ಸಾಧ್ಯವಾದಷ್ಟು ಯತ್ನಿಸಬೇಕೆಂದು ತಂದೆಯವರು ತಿಳಿಸಿದ್ದ ಆಜ್ಞೆಯನ್ನು ಅವರ ಆಶೀರ್ವಾದದಿಂದಲೇ ದೊರೆತ ಮಹಾಸ್ವಾಮಿಗಳ ದಿವ್ಯಪ್ರಸಾದದ ಮೂಲಕ ಶಿರಸಾವಹಿಸಿ ನಡೆಸಿದ್ದಾಯಿತು. ಚಿತ್ತಶಕ್ತಿಯೊಡಗೂಡಿದ್ದ ನನಗೂ ಹೃದಯದಲ್ಲಿ ನೆಲಸಿರುವ ಚಿಚ್ಛಕ್ತಿವಿಶಿಷ್ಟಶಿವನಿಗೂ ಶಕ್ತಿಯ ಮೂಲಕ ಸಹಜವಾಗಿದ್ದ ಭೇದವು ಮಹಾಗುರುಗಳ ಕೃಪಾದೃಷ್ಟಿಯಿಂದ ಕ್ರಮವಾಗಿ ತೊಲಗಿ ಆ ಶಿವನೊಡನೆ ಸಮರಸವಾಗಿ ಬೆರೆತು ಶ್ರೀಕರಭಾಷ್ಯ ಕ್ರಿಯಾಸಾರಗಳ ಪರಿಚಯದಿಂದ ಜ್ಞಾನಕ್ರಿಯಾ ಸಮನ್ವಯದೃಷ್ಟಿಯನ್ನು ಪಡೆದು ಜ್ಞಾನಯಜ್ಞದಲ್ಲಿ ಉಳಿದಿರುವ ಮಹತ್ತರವಾದ ಕಾರ್ಯವನ್ನು ಮುಗಿಸಲು ಆದೇ ಶಿವನನ್ನೇ ನಿರಂತರವೂ ಧ್ಯಾನಿಸುತ್ತಿದ್ದೆನು.

ಭಗವದ್ಗೀತೆ ಮತ್ತು ಶ್ವೇತಾಶ್ವತರೋಪನಿಷತ್ತು ಇವೆರಡಕ್ಕೂ ವೀರಶೈವ ದರ್ಶನಕ್ಕೆ ಅನುಗುಣವಾಗಿ ಭಾಷ್ಯಗಳನ್ನು ಬರೆಯಬೇಕೆಂದು ಪಿತೃವರ್ಯರ ಆಜ್ಞೆ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಯೊಂದು ಉಳಿದಿತ್ತು. ಅದರಂತೆ ಅವನ್ನು ಬರೆದು ಅವುಗಳ ಮುದ್ರಣಕಾರ್ಯವನ್ನು ನಿರ್ವಹಿಸಲು ಯಾವ ಮಹಾಗುರುವು ನನಗೆ ಅವಕಾಶವನ್ನು ನೀಡಿಯಾರು ಎಂಬುದೇ ನನಗೆ ಪ್ರತಿನಿಮಿಷದ ಚಿಂತೆಯಾಯಿತು. ಈ ಚಿಂತೆಯಲ್ಲಿಯೇ ಮುಳುಗಿದ್ದ ನನಗೆ ಒಮ್ಮೆ ಚಿತ್ರದುರ್ಗಪ್ರಾಂತ್ಯದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ಭಾಷಣಕ್ಕಾಗಿ ಹೋಗಬೇಕಾದ ಸನ್ನಿವೇಶ ಒದಗಿತು. ಆಗ ಚಿತ್ರದುರ್ಗದಲ್ಲಿ ಮಹೇಶ್ವರನ ಜಾತ್ರೆಯು ಅಲ್ಲಿಯ ಬೃಹನ್ಮಠಾಧ್ಯಕ್ಷರಾದ ಜಗದ್ಗುರು ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರವರ ನೇತೃತ್ವದಲ್ಲಿ ನಡೆಯುತ್ತಿತ್ತು. ಮಹೇಶ್ವರವಂಶದಲ್ಲಿ ಅವತರಿಸಿ ಮಹೇಶ್ವರನಿಗೆ ಪ್ರಿಯನೆನಿಸಿದ್ದ ನನಗೆ ಮಹೇಶ್ವರನ ಪ್ರಸಾದವನ್ನು ಬಯಸುತ್ತ ಮಹೇಶ್ವರಜಾತ್ರೆಗೆ ಹೋಗಿ ವೀರಮಾಹೇಶ್ವರರೆನಿಸಿದ ಜಗದ್ಗುರು ಮಹಾಸ್ವಾಮಿಗಳನ್ನು ಭೇಟಿಮಾಡಿದೆನು. ನಾನು ಅವರನ್ನು ಕಂಡದ್ದು ನನ್ನ ಜೀವಮಾನದಲ್ಲಿ ಅದೇ ಮೊದಲನೆಯದು. ಮಹಾಸ್ವಾಮಿಗಳೂ ಸಹ ನನ್ನನ್ನು ನೋಡಲು ಇಚ್ಛಿಸಿದ್ದಂತೆ ಅವರ ವಾತ್ಸಲ್ಯದಿಂದ ನಾನು ಅರಿತೆನು. ಅವರು ನನ್ನನ್ನು ಕಂಡು ಬಹಳ ಸಂತೋಷಗೊಂಡು ನನ್ನ ಕುಶಲವನ್ನು ಆ ಜನಸಂದಣಿಯಲ್ಲಿಯೇ ಶಾಂತತೆಯಿಂದ ವಿಚಾರಿಸಿದರು. ಅವರ ಶಾಂತವರ್ತನೆ ನನ್ನ ಮನಸ್ಸಿನ ಮೇಲೆ ಉತ್ತಮಪರಿಣಾಮವನ್ನುಂಟುಮಾಡಿತು. ಹಿಂದೆ ಶಿವಾನುಭವಮಂಟಪದಲ್ಲಿ ಬಸವಾದಿಪ್ರಮಥರೊಡಗೂಡಿ ನಿರಂಜನ ಪೀಠದಲ್ಲಿ ನೆಲಸಿದ್ದ ಅಲ್ಲಮಪ್ರಭು ಹೇಗೆ ಸಚ್ಚಿದಾನಂದಸ್ವರೂಪರಾಗಿ ನಿರ್ಲಿಪ್ತತೆಯಿಂದ ಚಿದಾಕಾಶದಲ್ಲಿ ನೆಲಸಿದ್ದರೆಂದು ವಚನಶಾಸ್ತ್ರದಲ್ಲಿ ಕೇಳಿದ್ದೆನೋ ಅದರ ನೆನಪು ನನಗೆ ಜಗದ್ಗುರುಗಳ ದರ್ಶನದಿಂದ ಉಂಟಾಯಿತು. ಲೋಕಕಲ್ಯಾಣಕ್ಕಾಗಿ ಅವತರಿಸಿದ ಮಹಾವಿಭೂತಿಗಳು ಹೀಗೆಯೇ ಅವ್ಯಾಜವಾತ್ಸಲ್ಯದಿಂದ ಜನರನ್ನು ಅನುಗ್ರಹಿಸುವುದು ಸಹಜವೆಂಬ ಭಾವನೆ ಅಂದು ನನಗೆ ದೃಢವಾಯಿತು. ಮಹಾಸ್ವಾಮಿಗಳು ನನ್ನನ್ನು ದಯೆಯಿಂದ ಅನುಗ್ರಹಿಸಿ "ಮಾನವಕಲ್ಯಾಣಕ್ಕಾಗಿ ಶಿವನೇ ಗುರುಜಂಗಮರೂಪದಿಂದ ಅವತರಿಸಿರುವಾಗ ನೀನು ಗುರುಪೀಠಕ್ಕೆ ಸಾಕಷ್ಟು ಸೇವೆಯನ್ನು ಸಲ್ಲಿಸಿರುವೆ ಎಂಬ ಅಂಶವು ಸನ್ನಿಧಿಗೆ ವೇದ್ಯವಾಗಿ ತುಂಬ ಸಂತೋಷವಾಗಿದೆ. ಅದರಂತೆ ಜಂಗಮಪೀಠಕ್ಕೂ ಸಾಕಷ್ಟು ಸೇವೆಯನ್ನು ಸಲ್ಲಿಸುವುದು ನಿನ್ನ ಕರ್ತವ್ಯವಲ್ಲವೆ?" ಹೀಗೆ ನನ್ನ ಕರ್ತವ್ಯದ ಬಗ್ಗೆ ಎಚ್ಚರಿಸಿದರು.

ಮಹಾಸ್ವಾಮಿಗಳು ಹೀಗೆ ಎಚ್ಚರಿಸಿ ಮಾತೃವಾತ್ಸಲ್ಯದ ಆನಂದಭಾಷ್ಪದಿಂದ ನನ್ನನ್ನು ನೋಡಿದರು. ನನಗೆ ಬಹುಕಾಲದಿಂದ ಅಗಲಿದ್ದ ತಾಯಿಯನ್ನು ಅಂದು ಕಂಡಂತಾಯಿತು- ಆಗ ಆನಂದಪರವಶನಾಗಿ ನನ್ನನ್ನು ನಾನೇ ವಿಚಾರಿಸತೊಡಗಿದೆನು. "ಒಂದು ವಸ್ತುವಿನ ಪರಿಚಯಕ್ಕಾಗಿ ನಾವು ಎರಡು ಕಣ್ಣುಗಳನ್ನೂ ಉಪಯೋಗಿಸುತ್ತೇವೆ. ಇವೆರಡರಿಂದಲೂ ನಾವು ನೋಡುವ ವಸ್ತು ಒಂದೇ. ಹಾಗೆ ನಿರಾಕಾರ ಪರಮಾತ್ಮನನ್ನು ಹೃದಯದಲ್ಲಿ ಕಂಡನುಭವಿಸಲು ನಮಗೆ ಗುರುಜಂಗಮರಿಬ್ಬರೂ ಅವಶ್ಯಕ. ಇವರಿಬ್ಬರ ಮೂಲಕ ನಾವು ಪಡೆಯುವ ವಸ್ತು ಒಂದೇ. ಆದರಿಂದ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಇಬ್ಬರನ್ನೂ ಏಕಭಾವನೆಯಿಂದ ಗೌರವಿಸುವುದು ನನ್ನ ಕರ್ತವ್ಯ. ಭೇದದೃಷ್ಟಿಯಿಂದ ದುಃಖವೂ, ಅಭೇದದೃಷ್ಟಿಯಿಂದ ನಿತ್ಯಸುಖವೂ ಉಂಟೆಂದು ಪೂಜ್ಯ ಪಿತೃವರ್ಯರು ಹೇಳುತ್ತಿದ್ದರು. ಗುರುಪೀಠದಲ್ಲಿ ಸೇವೆಯನ್ನು ಸಲ್ಲಿಸಿರುವಂತೆಯೇ ಜಂಗಮಪೀಠದಲ್ಲೂ ಸೇವೆಯನ್ನು ಸಲ್ಲಿಸುವುದು ನನ್ನ ಧರ್ಮ. ಆದ್ದರಿಂದ ಶ್ವೇತಾಶ್ವತರೋಪನಿಷದ್ಭಾಷ್ಯವನ್ನು ಮಹಾಸ್ವಾಮಿಗಳಿಗೆ ಅರ್ಪಿಸುವುದೇ ಶ್ರೇಯಸ್ಕರ." ಹೀಗೆ ಮನಸ್ಸಿನಲ್ಲಿ ಭಾವಿಸಿ ಮಹಾಸ್ವಾಮಿಗಳಿಗೆ ಅದೇ ಅಭಿಪ್ರಾಯವನ್ನು ತಿಳಿಸಿದೆನು. ಅವರು ಅದನ್ನು ಕೇಳಿ ಸಂತುಷ್ಟರಾಗಿ ನನಗೆ ಆಶೀರ್ವದಿಸಿದರು.

ಮಹಾಸ್ವಾಮಿಗಳಲ್ಲಿ ಹೀಗೆ ಅರಿಕೆ ಮಾಡಿಕೊಂಡಮೇಲೂ ನನಗೆ ಬೇರೊಂದು ಸಂಶಯವು ತಲೆದೋರಿತು. ಮಹಾಸ್ವಾಮಿಗಳು ನನಗಷ್ಟೇ ಅಲ್ಲದೆ ಮಾನವವರ್ಗಕ್ಕೇ ನಿರಂಜನಸ್ಥಿತಿಯ ಮಹತ್ತ್ವವನ್ನು ಸ್ವಂತ ಆಚರಣದಿಂದ ತಿಳಿಸಲಿಕ್ಕಾಗಿ ಅವತರಿಸಿದ ಸಾಕ್ಷಾತ್ ಮಹೇಶ್ವರನೇ ಎಂಬಲ್ಲಿ ಯಾರಿಗೂ ಸಂಶಯವಿಲ್ಲ. ಆದರೂ "ವೀರಗೋತ್ರದಲ್ಲಿ ಜನಿಸಿ ಗುರುಪರಂಪರೆಗೆ ಸೇರಿದ ನಾನು ನಿರಂಜನಪರಂಪರೆಯನ್ನು ಅನುಸರಿಸುವುದು ಯುಕ್ತವೆ? ಇವೆರಡು ಪರಂಪರೆಗಳಲ್ಲಿ ಏಕರೂಪತೆಯೂ, ಸಾಮರಸ್ಯವೂ ಉಂಟೆ?" ಎಂಬ ವಿಚಾರವು ನನ್ನ ಗಮನವನ್ನು ಸೆಳೆಯಿತು. ಅನಂತರ ವಚನವಾಙ್ಮಯದಲ್ಲಿ ಶರಣರು ಆಚರಿಸಿ ತೋರಿಸಿರುವ ಸಾಧನಮಾರ್ಗವನ್ನು ರೇಣುಕಾಗಸ್ತ್ಯ ಸಂವಾದರೂಪವಾದ ಸಿದ್ಧಾಂತಶಿಖಾಮಣಿಯಲ್ಲಿ ಹೇಳಿರುವ ಸಾಧನಮಾರ್ಗದೊಡನೆ ತುಲನಾತ್ಮಕದೃಷ್ಟಿಯಿಂದ ಪರಿಶೀಲಿಸತೊಡಗಿದೆನು. ಆಗ ಅವೆರಡರ ಗುರಿಯೂ ಒಂದೇ ಎಂಬುದನ್ನು ಕಂಡು ನಾನು ಸಂತೋಷಗೊಂಡೆನು. ವೀರಶೈವ ಧರ್ಮದಲ್ಲಿ ಸಿದ್ಧಾಂತ ಮತ್ತು ಸಂಪ್ರದಾಯಗಳನ್ನು ರೇಣುಕಾಚಾರ್ಯರು ಅಗಸ್ತ್ಯ ಮಹರ್ಷಿಗೆ ಹೇಳಿರುವಂತೆಯೇ ಶರಣರೂ ಸಹ ಅದೇ ಕಾರ್ಯಕ್ಕಾಗಿಯೇ ಶಿವನ ಪ್ರೇರಣೆಯಂತೆ ಇಲ್ಲಿಗೆ ಬಂದಿದ್ದು ತಮ್ಮ ಭಾಗದ ಕಾರ್ಯವನ್ನು ನೆರವೇರಿಸಿ ಶಿವನ ಅನುಗ್ರಹಕ್ಕೆ ಪಾತ್ರರಾಗಿ ಶಿವಲೋಕಕ್ಕೆ ತೆರಳಿರುವರು. ಆಚಾರ್ಯರು ಸಂಸ್ಕೃತ ಭಾಷೆಯಲ್ಲಿ ಹೇಳಿರುವುದನ್ನೇ ಶರಣರು ಕನ್ನಡಭಾಷೆಯಲ್ಲಿ ತಿಳಿಸಿರುವರು. ಅಲ್ಲಿ ಇಷ್ಟು ಮಾತ್ರವೇ ಹೊರತು ಬೇರೆ ಯಾವ ವ್ಯತ್ಯಾಸವೂ ಕಾಣುವುದಿಲ್ಲ. ಹಾಗೆಯೇ ಷಟ್ಸ್ಥಲೋಪಾಸನಮಾರ್ಗವನ್ನೂ ಸಹ ಆಚಾರ್ಯರು ತೋರಿಸಿದಂತೆಯೇ ಶರಣರೂ ಸಹ ಆಚರಿಸಿ ತೋರಿಸಿರುವರು. ಪರಿಸ್ಥಿತಿಯು ಹೀಗಿರುವಾಗ ಸಾಧಕರು ಗುರು ಜಂಗಮರಿಬ್ಬರಲ್ಲೂ ಭೇದವನ್ನೆಣಿಸದೆ ಗೌರವಿಸಬೇಕಾದ್ದು ಅವಶ್ಯಕವೆಂದು ತಿಳಿದು ಪರಮಪೂಜ್ಯರಾದ ಜಗದ್ಗುರುಶ್ರೀಮಲ್ಲಿಕಾರ್ಜುನಮಹಾಸ್ವಾಮಿಗಳ ಪಾದಾರವಿಂದಗಳಲ್ಲಿ ನನ್ನ ಮನಸ್ಸನ್ನು ದೃಢವಾಗಿ ಅಂಟಿಸಿಕೊಂಡೆನು. ಹಿಂದೆ ಅವರಿಗೆ ಮಹೇಶ್ವರಜಾತ್ರೆಯಲ್ಲಿ ಕೊಟ್ಟಿದ್ದ ವಚನವನ್ನು ಅದರಂತೆಯೇ ಆಚರಿಸಲು ಸಂಕಲ್ಪಮಾಡಿದೆನು.

ಲೌಕಿಕದೃಷ್ಟಿಯಿಂದಲೂ ನನ್ನ ಸಂಕಲ್ಪವನ್ನು ಪರಿಶೀಲಿಸಿದೆನು. ಶೈವಾಗ್ರಗಣ್ಯರಾದ ಅಪ್ಪಯ್ಯದೀಕ್ಷಿತರು ಪರಮವೈಷ್ಣವರೆನಿಸಿದ ವೇದಾಂತದೇಶಿಕರಿಂದ ರಚಿತ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ವಾದ ಯಾದವಾಭ್ಯುದಯಕ್ಕೆ ವ್ಯಾಖ್ಯಾನವನ್ನು ಬರೆದಿರುವರು. ನಿರಂಜನಪರಂಪರೆಯ ಶ್ರೀಮರಿತೋಂಟದಾರ್ಯರು ತಮ್ಮ ವೀರಶೈವಾನಂದಚಂದ್ರಿಕೆಯಲ್ಲಿ ಗುರುಪೀಠದ ಆಚಾರ್ಯರನ್ನು ಗೌರವದಿಂದ ಪ್ರಶಂಸಿಸಿರುವರು. ಮೋಟೆಕುರ್ಕೆಗ್ರಾಮದ ವಿರಕ್ತ ಮಠಾಧಿಪತಿಗಳು ಭಕ್ತಿಯಿಂದ ಬರೆದಿರುವ ಗುರುಪೀಠದ ಕುಪ್ಪೂರು ಮರುಳಸಿದ್ಧ ಸ್ವಾಮಿಗಳ ಚರಿತ್ರವು ಪ್ರಸಿದ್ಧವಾಗಿದೆ. ಆದ್ದರಿಂದ ತತ್ತ್ವವನ್ನು ತಿಳಿದ ಶಿವಯೋಗಿ ಗಳಲ್ಲಿ ವಿಶಾಲದೃಷ್ಟಿಯು ಸಹಜವಾಗಿ ನೆಲಸಿರುತ್ತದೆ. ಹೀಗೆ ಗುರುಜಂಗಮರು ತಾವಾಗಿಯೇ ಸಮರಸವಾಗಿ ಬಾಳುತ್ತಿರುವುದನ್ನು ಇತಿಹಾಸದಲ್ಲಿ ನಾವು ಕಾಣುತ್ತಿರು ವುದರಿಂದ ವರ್ಧಿಷ್ಣು ಮಾನವರೂ ಸಹ ಅದೇ ಮಾರ್ಗವನ್ನಾಚರಿಸುವುದು ಶ್ರೇಯಸ್ಕರ ವೆಂದು ತೀರ್ಮಾನಿಸಿ ನಿರಂಜನಪೀಠಾಧ್ಯಕ್ಷರಾದ ಮಹಾಸ್ವಾಮಿಗಳ ಪಾದಾರವಿಂದ ಗಳಲ್ಲಿ ಭಾಷ್ಯವನ್ನು ಭಕ್ತಿಯಿಂದ ಸಮರ್ಪಿಸಲು ಅನುವಾದನು.

ನನಗೆ ಆಶ್ರಯವನ್ನು ನೀಡಿದ ಮಹಾಸ್ವಾಮಿಗಳು ಪೂಜ್ಯರೆಂದು ತಿಳಿದಮೇಲೆ ಅವರ ಮೂಲಪೀಠದ ಕರ್ತೃಗಳ ಶಿವಯೋಗಸಮಾಧಿಯನ್ನು ನೋಡಲು ಹೊರಟೆನು. ನನ್ನನ್ನು ಕಂಡೊಡನೆ ಶಿವಯೋಗದಲ್ಲಿದ್ದ ಮಹಾಸ್ವಾಮಿಗಳು ಕೃಪೆಮಾಡಿ ಸಮಾಧಿಯ ಬಲಗಡೆ ಒಂದು ಪುಷ್ಪವನ್ನು ಅನುಗ್ರಹಿಸಿದರು. ಮಹಾಸ್ವಾಮಿಗಳು ಹೀಗೆ ಪ್ರಸಾದವನ್ನು ಅನುಗ್ರಹಿಸಿ ನನ್ನ ಸಂಶಯಗಳನ್ನು ಪರಿಹರಿಸಿ ನನ್ನಲ್ಲಿ ವಿಶ್ವಾಸವನ್ನು ನೆಲೆಗೊಳಿಸಿದರೆಂದು ಭಾವಿಸಿದೆನು. ಇಂತಹ ಮಹಾಶಿವಯೋಗಿಗಳನ್ನಾಶ್ರಯಿಸಿದ್ದ ರಿಂದ ನನ್ನ ಮನಸ್ಸಿಗೆ ಸಂತೋಷವುಂಟಾಯಿತು. ಶಿವಯೋಗಿಸಾರ್ವಭೌಮರೆನಿಸಿದ ಆ ಮರುಘೇಶಮಹಾಸ್ವಾಮಿಗಳು ನಿರಂಜನಪೀಠಾಧ್ಯಕ್ಷರಾದ ಅಲ್ಲಮಪ್ರಭುವಿನಿಂದ ಎಂಟನೆಯವರಾಗಿ ಮುರುಘಸಮಯಕ್ಕೆ ಪ್ರವರ್ತಕರೆನಿಸಿ ಚಿತ್ರದುರ್ಗದ ಬೃಹನ್ಮಠ ದಲ್ಲಿ ಶಿವಯೋಗಸಮಾಧಿಯಲ್ಲಿ ನೆಲಸಿ ಶಿವಯೋಗಾನಂದವನ್ನು ಅನುಭವಿಸುತ್ತಲೇ ಭಕ್ತಾನುಗ್ರಹಲೀಲೆಯನ್ನು ನಿರ್ವಹಿಸುತ್ತಿರುವರೆಂಬುದು ಸಂತೋಷದ ಸಂಗತಿ.

ಇದೇ ಪರಂಪರೆಯ ಶ್ರೀಜಗದ್ಗುರುಜಯದೇವಮುರುಘರಾಜೇಂದ್ರಮಹಾ ಸ್ವಾಮಿಗಳು ಒಮ್ಮೆ ಬೆಂಗಳೂರಿನ ಸರ್ಪಭೂಷಣಮಠದಲ್ಲಿ ಭಕ್ತರನ್ನು ಅನುಗ್ರಹಿಸು ತ್ತಿದ್ದ ವೇಳೆ ನಾನು ಆಕಸ್ಮಿಕವಾಗಿ ಅವರ ದರ್ಶನಕ್ಕೆ ಹೋದೆನು. ಅಂದು ಮನೆ ಯಲ್ಲಿ ಚಿ|| ಸೌ||ಗೆ ಹೊಟ್ಟೆನೋವೂ, ಮಾತೃಶ್ರೀಯವರಿಗೆ ಚರ್ಮರೋಗವೂ ಬಹಳ ವಾಗಿ ಇದ್ದುದರಿಂದ ನನ್ನ ಮನಸ್ಸಿಗೆ ಕೊಂಚ ನೋವಾಗಿತ್ತು. ಮಹಾಸ್ವಾಮಿಗಳು ನನ್ನ ಹೃದಯವನ್ನು ಅರಿತು ನನಗೆ ಎರಡು ಹಣ್ಣುಗಳನ್ನು ಆಶೀರ್ವದಿಸಿ ಒಂದನ್ನು ಹೆಂಡತಿಗೂ, ಮತ್ತೊಂದನ್ನು ತಾಯಿಗೂ ಕೊಡುವಂತೆ ಹೇಳಿದರು. "ಇಬ್ಬರೂ ನಿನಗೆ ತಾಯಿಯರೇ ಆಗಿದ್ದಾರೆ. ಈಗ ಅವರಿಗೆ ಮೈಯಲ್ಲಿ ಚೆನ್ನಾಗಿಲ್ಲ. ಇವನ್ನು ಅವರಿಗೆ ಕೊಡು" ಎಂದು ಅವರು ಹೇಳಿದಾಗ ನನಗೆ ಅವರ ತಪಶ್ಶಕ್ತಿಯೂ ಜಿತೇಂದ್ರಿಯತ್ವವೂ ಎಷ್ಟು ಮಹತ್ತ್ವದನೆಂಬ ಅರಿವುಂಟಾಯಿತು. ಅವನ್ನು ಅಂದೇ ಇಬ್ಬರಿಗೂ ಕೊಟ್ಟೆನು. ಅಂದಿನಿಂದ ಇಂದಿನವರೆಗೂ ಅವರಿಬ್ಬರೂ ಆರೋಗ್ಯವಾಗಿರು

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ವರು. ಈಗ ನಿರಂಜನಪೀಠದಲ್ಲಿರುವ ಜಗದ್ಗುರು ಶ್ರೀಮಲ್ಲಿಕಾರ್ಜುನಮಹಾಸ್ವಾಮಿಗಳು ಶರಣವಚನಗಳನ್ನು ಪದ್ಯಗಳಾಗಿ ಬರೆದು ಗೀತಾಭಾಷ್ಯದಲ್ಲಿ ಉದಾಹರಿಸುವಂತೆ ಅಪ್ಪಣೆಮಾಡಿದರು. ಅವರ ಪ್ರಸಾದದಿಂದ ಅನೇಕ ವಚನಗಳನ್ನು ಛಂದೋಬದ್ಧವಾಗಿ ಬರೆಯುವ ಪ್ರತಿಭೆಯುಂಟಾಯಿತು. ಹೀಗೆ ನಿರಂಜನಪೀಠದ ಮಹಾಸ್ವಾಮಿಗಳೆಲ್ಲರೂ ತಪೋವೈಭವದಿಂದ ಯೋಗನಿಷ್ಠರಾಗಿ ಅದ್ಭುತರೀತಿಯಲ್ಲಿ ಭಕ್ತರನ್ನು ಅನುಗ್ರಹಿಸುತ್ತಿರುವುದು ವಿಶ್ರುತವಾಗಿದೆ. ಆದರಲ್ಲೂ ಈಗಿನ ಮಹಾಸ್ವಾಮಿಗಳವರು ವಿದ್ವಾಂಸರೂ ಪರಮವೈರಾಗ್ಯಶಾಲಿಗಳೂ ಆಗಿ ಉದಾರಭಾವದಿಂದ ವಿದ್ಯಾಪೀಠವನ್ನೇರ್ಪಡಿಸಿ ಅದರ ಆಶ್ರಯದಲ್ಲಿ ಧರ್ಮಗ್ರಂಥಗಳನ್ನು ಪ್ರಕಾಶಪಡಿಸುತ್ತಲೂ, ಸಾರ್ವಜನಿಕಹಿತಕ್ಕಾಗಿ ಅನೇಕ ಧರ್ಮಕಾರ್ಯಗಳನ್ನು ನೆರವೇರಿಸುತ್ತಲೂ ಮಾನವಕಲ್ಯಾಣವನ್ನು ವಿಶೇಷರೀತಿಯಲ್ಲಿ ನಡೆಸುತ್ತಲೂ ಇರುವುದನ್ನು ಮಹಾಜನರೆಲ್ಲರೂ ಕಂಡು ಸಂತೋಷಗೊಂಡಿರುವರು.

ಅವರ ಉಧಾರಪ್ರೋತ್ಸಾಹವನ್ನೂ, ಯೋಗ್ಯತಾಪ್ರೇಮವನ್ನೂ, ಸಾಹಿತ್ಯಸಂಸ್ಕೃತಿಗಳ ಪ್ರಸಾರದಲ್ಲಿ ಅವರಿಗಿರುವ ಉತ್ಸಾಹವನ್ನೂ ಕಂಡು ಸಂತೋಷದಿಂದ ಭಾಷ್ಯವನ್ನು ಅವರಿಗೆ ಅರ್ಪಿಸಲು ಸಮ್ಮತಿಸಿದರೂ ಸಹ ನನಗೆ ಬೇರೊಂದು ಸಂದೇಹವು ತಲೆದೋರಿತು. ಪರಶಿವನ ಅರ್ಚನೆಯಲ್ಲಿಯೇ ತನ್ಮಯರಾಗಿರುವ ಈ ಶಿವಯೋಗಿವರ್ಯರಿಗೆ ಈ ಭಾಷ್ಯವನ್ನು ಅರ್ಪಿಸುವುದು ಯುಕ್ತವೇ ಅಲ್ಲವೇ ಎಂಬ ವಿಚಾರವು ಮತ್ತೆ ಸಂಭವಿಸಿತು. ಶಿವಯೋಗಿಗಳು ಸಂನ್ಯಾಸಯೋಗದಿಂದ ನಿರ್ಮಲರಾಗಿರುವರು. 'ನಿಸ್ಪೃಹಸ್ಯ ತೃಣಂ ಜಗತ್' ಎಂಬಂತೆ ಎಲ್ಲಾ ಬಗೆಯ ಆಶೆಗಳನ್ನು ತೊರೆದು ಕೈವಲ್ಯಾನಂದವನ್ನು ಅನುಭವಿಸುತ್ತಿರುವ ಇಂತಹ ವೈರಾಗ್ಯಶಾಲಿಗಳು ಈ ಭಾಷ್ಯವನ್ನು ಸ್ವೀಕರಿಸಲು ಒಪ್ಪುವರೇ ಎಂಬುವ ವಿಚಾರವು ನನ್ನಲ್ಲಿ ತಲೆದೋರಿತು. ಆದರೂ ಮಹಾಸ್ವಾಮಿಗಳ ಅನುಗ್ರಹದಿಂದ ನನ್ನ ಸಂಶಯವು ಆಗಲೇ ಪರಿಹಾರವಾಯಿತು. ಶಿವಯೋಗವನ್ನೇ ವಿವರಿಸುವ ಈ ಭಾಷ್ಯವನ್ನು ಮಹಾಶಿವಯೋಗಿಗಳಿಗೆ ಅರ್ಪಿಸಿದರೆ ಇದರಿಂದ ಅವರಿಗೆ ನಿಜವಾಗಿಯೂ ಸಂತೋಷವಾಗುವುದೆಂದು ನಾನು ಭಾವಿಸಿಡೆನು. ಶ್ವೇತಾಶ್ವತರೋಪನಿಷತ್ತಿನ ಪರಮಾರ್ಥವಾದರೂ ಇಷ್ಟೇಯೆ. "ಸಾಧಕನು ತನ್ನೊಳಗಿರುವ ಮಹೇಶ್ವರನಲ್ಲಿ ಬೆರೆತು ನಿತ್ಯಸುಖಿಯಾಗಬೇಕು. ಅದಕ್ಕಾಗಿ ಅವನು ಸಮನ್ವಯದ ಮಾರ್ಗವನ್ನೆ ಆಶ್ರಯಿಸಬೇಕು. ತಿಳಿವಿಲ್ಲದೆ ಮಾಡುವ ಕ್ರಿಯೆಯೊಂದೂ ಫಲಿಸುವುದಿಲ್ಲ. ತನ್ನೊಳಗೆ ತನ್ನ ರಕ್ಷಣೆಗಾಗಿ ಶಿವನಿರುವನೆಂಬುದನ್ನು ತಿಳಿದು ಅವನಿಗೆ ತನ್ನ ಸ್ವಂತ ಸುಖಸಾಧನಗಳನ್ನು ಅರ್ಪಿಸಿ ಸೇವಿಸುವುದರಿಂದಲೇ ಅವನ ಅನುಗ್ರಹವು ದೊರೆಯಲಿರುವುದು. ಆಗಲೇ ಮಾನವನು ಪಾಶವಿಮೋಚನದಿಂದ ನಿರ್ಮಲನಾಗಿ ಶಿವನೊಡನೆ ಸಾಮರಸ್ಯವನ್ನು ಅನುಭವಿಸುವನು." ಇದೇ ಈ ಉಪನಿಷತ್ತಿನ ಸಾರಸಂದೇಶವೆಂಬುದು ಸುಪ್ರಸಿದ್ಧವೆನಿಸಿದೆ. ಆದ್ದರಿಂದಲೇ ಸಾಮರಸ್ಯವನ್ನು ಅನುಭವಿಸುತ್ತಿರುವ ಶಿವಯೋಗಿಗಳಿಗೆ ಅದೇ ಸಾಮರಸ್ಯವನ್ನು

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಬೋಧಿಸುವ ಈ ಭಾಷ್ಯವನ್ನು ಸಮರ್ಪಿಸುವುದರಲ್ಲಿ ಒಂದು ಹೆಚ್ಚಿನ ಔಚಿತ್ಯವಿದೆ" ಎಂದು ಭಾವಿಸಿ ನನ್ನ ಹಿಂದಿನ ನಿರ್ಧಾರಕ್ಕೆ ಒಪ್ಪಿದೆನು. ಹೀಗೆ ಎಲ್ಲಾ ಸಂಶಯ ಗಳನ್ನು ಕಳೆದುಕೊಂಡು ಪಿತೃವರ್ಯರ ಸಂತೋಷಕ್ಕಾಗಿಯೂ, ನನ್ನ ವಂಶೀಯರ ಶ್ರೇಯಸ್ಸಿಗಾಗಿಯೂ ಆತ್ಮನಿವೇದನಪೂರ್ವಕವಾಗಿ ಈ ಭಾಷ್ಯವನ್ನು ಶ್ರೀ ಮುರು ಘೇಶನ ಪಾದಗಳಲ್ಲಿ ಭಕ್ತಿಯಿಂದ ಅರ್ಪಿಸಿದ್ದೇನೆ. ಶ್ರೀ ಮುರುಘೇಶನು ತನ್ನ ಮಹಿಮಾತಿಶಯವನ್ನು ಪ್ರಶಂಸಿಸುವ ಪರಮಪವಿತ್ರವೆನಿಸಿದ ಈ ಭಾಷ್ಯವನ್ನು ತನ್ನ ಸೇವಕನ ಕಡೆಯಿಂದ ಸಕಾಲದಲ್ಲಿ ನೇರವೇರಿಸಿಕೊಂಡು ದಯೆಯಿಂದ ಇದನ್ನು ಒಪ್ಪಿಸಿಕೊಂಡು ತನ್ನ ಸೇವಕನನ್ನು ಅನುಗ್ರಹಸಿದ್ದಕ್ಕಾಗಿ ಅತ್ಯಂತ ಕೃತಜ್ಞ ನಾಗಿದ್ದೇನೆ. ಅವರ ಪೀಠದಲ್ಲಿ ಕುಳಿತು ಅವನು ವಹಿಸಿದ ಲೋಕಕಲ್ಯಾಣಕಾರ್ಯ ಗಳನ್ನು ಉತ್ಸಾಹದಿಂದ ನೆರವೇರಿಸುತ್ತಲಿರುವ ಶ್ರೀ ಜಗದ್ಗುರು ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು ಅವ್ಯಾಜಪ್ರೇಮದಿಂದ ಈ ಗ್ರಂಥವನ್ನು ಜಗದ್ಗುರು ಮುರುಘರಾಜೇಂದ್ರವಿದ್ಯಾಪೀಠಗ್ರಂಥಮಾಲೆಯಲ್ಲಿ ಪ್ರಕಟಿಸಿ ನನ್ನನ್ನು ವಾತ್ಸಲ್ಯದಿಂದ ಪ್ರೋತ್ಸಾಹಿಸಿರುವರು. ಅವರು ಅನುಗ್ರಹಿಸಿದ ಈ ಮಹೋಪ ಕಾರವನ್ನು ನಾನು ಎಂದೆಂದಿಗೂ ಮರೆಯಲಾರೆನು. ಹೀಗೆ ಚಿರಸ್ಮರಣೀಯರಾದ ಜಗದ್ಗುರು ಮಹಾಸ್ವಾಮಿಗಳವರಲ್ಲಿ ಸಾಷ್ಟಾಂಗಪ್ರಣಾಮಪೂರ್ವಕವಾದ ಕೃತಜ್ಞತೆ ಯನ್ನು ಭಕ್ತಿಯಿಂದ ಸಲ್ಲಿಸಿದ್ದೇನೆ. ಸದ್ಭಕ್ತರೆಲ್ಲರೂ ಈ ಭಾಷ್ಯವನ್ನು ಓದಿ ಸಂತೋಷಪಡಲೆಂದು ಪ್ರಾರ್ಥಿಸುವ,

ಟಿ. ಜಿ. ಸಿದ್ಧಪ್ಪಾರಾಧ್ಯ

ವಿದ್ವಾಂಸರ ಅಭಿಪ್ರಾಯಗಳು

Sahitya Siromani S. Ramachandra Rao, M.A.
Professor of Post Graduate Studies in Sanskrit
Mysore University, Mysore.

अध्यात्मक्षेत्रे प्रस्थानत्रयं मानवकल्याणसाधनाय बद्धकक्षं वर्तत इति सुप्रसिद्धमेव । तत्राप्युपनिषत्प्रस्थानं मानवश्रेयसे महत्तरं सौकर्यं परिकल्प्य इह परत्र च सुखं सन्तोषं चावहतीति सुविदितमेव । तत्रापि श्वेताश्वतरोपनिषत् मानवस्वरूपं यथार्थरीत्या विवेचयन्ती तदीयं मनः तदन्तरङ्गस्थेश्वरे द्रढयितुं विशेषतः प्रयतते । द्वेषमात्सर्यादिभिः कलुषिते जगति मानवो यथा स्वीयहृदयं परिशोध्य सत्यशुद्धं व्यवहारं यथा शान्त्या निर्वहेत् तथा दिव्यमुपदेशं कुर्वतीयमुपनिषत् सर्वैरप्यवश्यमवलोकनीया

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

तादृश्याः पवित्राया उपनिषदोऽर्थं भाष्यरूपेण विशदीकृत्य तदीयानुवादेन सह तां इदंप्रथमतया प्रकटयन्तो डा. टि. जि. सिद्धप्पाराध्यमहोदयाः सर्वैरभिनन्द्याः एतादृशं भाष्यं श्री जगद्गुरुमुरुघराजेन्द्रविद्यापीठग्रन्थमालायां प्रथमपुष्परूपेण प्रकटद्यत इत्येतत्सन्तोषावहम्। हृदयङ्गमया ललितया च रीत्या भाष्यमनुवादं च विलेख्य असदृशं ज्ञानयज्ञं सन्तोषेण निर्वहन्तो डा. सिद्धप्पाराध्याः मैसूरुविश्वविद्यालये संस्कृतविभागस्य उज्वलकीर्तिं सुप्रतिष्ठितवन्तः। भाष्यकर्तारः एते महाशया एवमेव इतरभाष्यग्रन्थान्विरच्य मानवकल्याणं परमात्मानुग्रहेण विशेषतः साधयन्त्वित्यभ्यर्थये ॥

मैसूरु, 26-9-65. एस्. रामचन्द्राव्.

Sri M. Yamunacharya, M.A. *Mysore University*
Professor of philosophy (Rtd.) *29-9-1965*

Svetasvatara Upanishad is *par excellence* a theistic Upanishad and a source of the ideas of Vedantic Theism in India. This Upanishad has been commented upon by the great Vedantic teachers of the past. Dr. Siddapparadhya has done a distinct service to Upanishadic Scholarship by furnishing us with a very lucid commentary on this Upanishad in Sanskrit and has also appended a Kannada translation of his Sanskrit commentary. This commentary is in the light of the doctrines of Virasaivism and is being published as the first flower or pushpa in the list of Philosophical works to be published by Sri Jagadguru Murugharajendra Vidyapitha of Brihanmatha, Chitaldurg. Students of Virasaivism and of the theistic movements of India will welcome greatly a commentary of this type from a modern Scholar of distinction.

M. Yamunacharya.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಪ್ರೊ॥ M. ಯಾಮುನಾಚಾರ್ಯರ ಅಭಿಪ್ರಾಯದ ಅನುವಾದ.

ಶ್ವೇತಾಶ್ವತರೋಪನಿಷತ್ತು ಮಾನವಕಲ್ಯಾಣಕ್ಕಾಗಿ ಸಗುಣೇಶ್ವರನ ಆರಾಧನದ ಮಹತ್ತ್ವವನ್ನು ಬೋಧಿಸುವ ಶ್ರೇಷ್ಠವರ್ಗದ ಉಪನಿಷತ್ತೆನಿಸಿ ಆ ಬಗೆಯ ಭಾವನೆಗಳಿಗೆ ಉದಾರಾಶ್ರಯವನ್ನು ನೀಡಿದೆ. ಇದಕ್ಕೆ ಹಿಂದಿನಿಂದಲೂ ಅನೇಕ ದಾರ್ಶನಿಕ ಆಚಾರ್ಯರು ಭಾಷ್ಯಗಳನ್ನು ಬರೆದಿರುವರು. ಈಗ ಡಾ॥ ಸಿದ್ಧಪ್ಪಾರಾಧ್ಯರು ಈ ಉಪನಿಷತ್ತಿಗೆ ಸಂಸ್ಕೃತದಲ್ಲಿ ಎಲ್ಲರಿಗೂ ತಿಳಿಯುವಷ್ಟು ಸುಲಭವಾದ ರೀತಿಯಲ್ಲಿ ಭಾಷ್ಯವನ್ನು ಅನುವಾದದೊಡನೆ ಬರೆದು ಉಪನಿಷತ್ತಿನ ಜ್ಞಾನಭಂಡಾರವನ್ನು ತಿಳಿಯಲು ಬಯಸುವವರಿಗೆ ಹೆಚ್ಚಿನ ಸೇವೆಯನ್ನು ಸಲ್ಲಿಸಿರುವರು. ಈ ಭಾಷ್ಯವು ವೀರಶೈವಸಿದ್ಧಾಂತಕ್ಕನುಗುಣವಾಗಿದ್ದು ಚಿತ್ರದುರ್ಗದ ಶ್ರೀ ಜಗದ್ಗುರು ಮುರುಘರಾಜೇಂದ್ರವಿದ್ಯಾಪೀಠದ ಆಶ್ರಯದಲ್ಲಿ ಪ್ರಥಮಪುಷ್ಪವಾಗಿ ಪ್ರಕಟವಾಗಿದೆ. ಆಳವಾದ ಪಾಂಡಿತ್ಯವನ್ನು ಆಧುನಿಕರೀತಿಯ ಸಂಶೋಧನದೊಡನೆ ಅಳವಡಿಸಿ ಕೊಂಡಿರುವ ಈ ವಿದ್ವಾಂಸರ ಅಮೋಘವಾದ ಈ ಭಾಷ್ಯವು ವೀರಶೈವತತ್ತ್ವಜಿಜ್ಞಾಸುಗಳಿಗೂ ಭಾರತೀಯಸಗುಣಾರಾಧಕರೆಲ್ಲರಿಗೂ ಅತ್ಯಂತೋಪಕಾರಕವೆನಿಸಿದೆ.

Sri V. T. Tirunarayana Iyangar, M.A. — Mysore,
Professor of Sanskrit, (Rtd.) — 28-9-65.

डाक्टर्प्रशस्तिभाजा श्रीमता सिद्धप्पाराध्यविदुषा केचन ग्रन्था दार्शनिका आलङ्कारिकाश्च संस्कृतभाषायां कर्णाटकभाषायां च विरचिताः। अद्य वेदान्तशास्त्रे उपनिषदां भगवद्गीतायाश्च वीरशैवदर्शनानुगुणं संस्कृतभाषायां विरचिता व्याख्याग्रन्थाः अद्यावधि नोपलब्धा इति तद्वैकल्यपरिजिहीर्षया अयं महाशयः संस्कृतवाण्यां प्रथमं श्वेताश्वतरोपनिषन्मन्त्राणां सुलभशैल्या व्याख्यानं कर्तुं प्रवृत्त इत्यभिनन्दनीयः। सनातनतत्त्वस्य धर्मस्य च प्रकाशनपरिपालनभरः आर्षमतानुसारिणां स्वाभाविक एव। भाष्यकर्तुरस्य महोदयस्येतरभाष्यविलेखने विशुद्धां दृष्टिं, दृढं सङ्कल्पं, महाजनप्रोत्साहं च वर्धयतु सर्वथा भगवानिति प्रार्थये। चित्रदुर्गस्थजगद्गुरुविद्यापीठग्रन्थमालायां श्रीजगद्गुरुमल्लिकार्जुनमुरुघराजेन्द्रमहास्वामिभिः सादरमयं पवित्रो धार्मिकग्रन्थः प्रकाश्यत इत्याकर्ण्य मुदितोऽस्मि। मठाधीशानां ईदृशेषु ज्ञानवर्धकेषु सत्कर्मसु श्रद्धा अभिनन्दनीया

वि. टि. तिरुनारणय्यङ्गार्

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಪ್ರೊಫೆಸರ್ S. ರಾಮಚಂದ್ರರಾಯರ ಅಭಿಪ್ರಾಯದ ಅನುವಾದ

ಆಧ್ಯಾತ್ಮಕ್ಷೇತ್ರದಲ್ಲಿ ಉಪನಿಷತ್ತುಗಳು, ಬ್ರಹ್ಮಸೂತ್ರ, ಭಗವದ್ಗೀತೆ ಇವು ಮಾನವರೆಲ್ಲರ ಕಲ್ಯಾಣವನ್ನು ಸಾಧಿಸಲು ಸಿದ್ಧವಾಗಿವೆ ಎಂಬುದು ವಿಶ್ರುತವಾಗಿದೆ. ಅದರೊಳಗೆ ಉಪನಿಷತ್ಪ್ರಸ್ಥಾನವು ಮಾನವರ ಶ್ರೇಯಸ್ಸಿಗೆ ಹೆಚ್ಚಿನ ಸೌಕರ್ಯವನ್ನು ಕಲ್ಪಿಸಿ ಇಹಪರಸುಖಸಂತೋಷಗಳನ್ನು ದೊರಕಿಸುತ್ತಲಿದೆ ಎಂಬುದು ಎಲ್ಲರಿಗೂ ತಿಳಿದಿದೆ. ಆದರಲ್ಲೂ ಶ್ವೇತಾಶ್ವತರೋಪನಿಷತ್ತು ಮಾನವನ ಸ್ವರೂಪವನ್ನು ಸೂಕ್ತರೀತಿಯಲ್ಲಿ ಪರಿಶೀಲಿಸಿ ಅವನ ಮನಸ್ಸನ್ನು ಹೃದಯದಲ್ಲಿರುವ ಈಶ್ವರನಲ್ಲಿ ನೆಲೆಗೊಳಿಸಲು ಹೆಚ್ಚಿನ ರೀತಿಯಲ್ಲಿ ಪ್ರಯತ್ನಿಸಿದೆ. ದ್ವೇಷಮಾತ್ಸರ್ಯಗಳಿಂದ ಕಲುಷಿತನಾದ ಪ್ರಪಂಚದಲ್ಲಿ ಮಾನವನು ತನ್ನ ಹೃದಯವನ್ನು ಪರಿಶೋಧಿಸಿ ಸತ್ಯ ಶುದ್ಧವಾದ ವ್ಯವಹಾರವನ್ನು ಶಾಂತರೀತಿಯಿಂದ ನಡೆಸುವಂತೆ ಅವನಿಗೆ ಸೂಕ್ತವಾದ ಉಪದೇಶವನ್ನು ಅನುಗ್ರಹಿಸುತ್ತಲಿರುವ ಈ ಉಪನಿಷತ್ತು ಎಲ್ಲರಿಗೂ ಆದರಣೀಯ ವೆನಿಸಿದೆ. ಇಂತಹ ಪವಿತ್ರವಾದ ಉಪನಿಷತ್ತಿಗೆ ಭಾಷ್ಯವನ್ನು ಬರೆದು ಅದರ ಅನುವಾದದೊಡನೆ ಈಗ ಪ್ರಕಟಿಸಿರುವ ವಿದ್ವಾನ್ ಡಾ|| ಟಿ. ಜಿ. ಸಿದ್ಧಪ್ಪಾರಾಧ್ಯ ರನ್ನು ಸಂತೋಷದಿಂದ ಅಭಿನಂದಿಸಬೇಕಾಗಿದೆ. ಈ ಭಾಷ್ಯವು ಶ್ರೀಜಗದ್ಗುರು ಮುರುಘರಾಜೇಂದ್ರವಿದ್ಯಾಪೀಠಗ್ರಂಥಮಾಲೆಯಲ್ಲಿ ಪ್ರಥಮಪುಷ್ಪವಾಗಿ ಪ್ರಕಟಿತ ವಾಗುವುದನ್ನು ಕೇಳಿ ಸಂತೋಷವಾಗಿದೆ. ಮನೋಹರವೂ ಸುಂದರವೂ ಆದ ರೀತಿಯಲ್ಲಿ ಭಾಷ್ಯವನ್ನು ಅನುವಾದದೊಡನೆ ಬರೆದು ಅದ್ಭುತವಾದ ಜ್ಞಾನಯಜ್ಞ ವನ್ನು ಸಂತೋಷದಿಂದ ನಡೆಸಿರುವ ಡಾ|| ಸಿದ್ಧಪ್ಪಾರಾಧ್ಯರು ಮೈಸೂರು ವಿಶ್ವವಿದ್ಯಾ ನಿಲಯದ ಸಂಸ್ಕೃತಶಾಖೆಯ ಉಜ್ವಲಕೀರ್ತಿಯನ್ನು ನೆಲೆಗೊಳಿಸಿರುವರು. ಭಾಷ್ಯಕರ್ತರಾದ ಈ ಮಹಾಶಯರು ಹೀಗೆಯೇ ಇತರ ಭಾಷ್ಯಗಳನ್ನೂ ರಚಿಸಿ ಮಾನವಕಲ್ಯಾಣವನ್ನು ಪರಮಾತ್ಮನ ಅನುಗ್ರಹದಿಂದ ವಿಶೇಷವಾಗಿ ಸಾಧಿಸಲೆಂದು ಆತ್ಮೀಯತೆಯಿಂದ ಬಯಸುತ್ತೇನೆ.

ಪ್ರೊ|| V. T. ತಿರುನಾರಣಯ್ಯಂಗಾರ್ಯರ ಅಭಿಪ್ರಾಯದ ಅನುವಾದ

ಡಾಕ್ಟರೇಟ್ ಪ್ರಶಸ್ತಿಯನ್ನು ಹೊಂದಿರುವ ಶ್ರೀ ಸಿದ್ಧಪ್ಪಾರಾಧ್ಯರು ಈಗಾಗಲೇ ಕೆಲವು ದಾರ್ಶನಿಕ ಹಾಗೂ ಆಲಂಕಾರಿಕಗ್ರಂಥಗಳನ್ನು ಸಂಸ್ಕೃತಭಾಷೆಯಲ್ಲೂ ಕನ್ನಡ ಭಾಷೆಯಲ್ಲೂ ರಚಿಸಿರುವರು. ಈಗ ವೇದಾಂತಶಾಸ್ತ್ರದಲ್ಲಿ ಉಪನಿಷತ್ತುಗಳಿಗೂ ಭಗವದ್ಗೀತೆಗೂ ವೀರಶೈವದರ್ಶನಕ್ಕನುಗುಣವಾಗಿ ಸಂಸ್ಕೃತದಲ್ಲಿ ಭಾಷ್ಯಗ್ರಂಥಗಳು ಈವರಿವಿಗೂ ಪ್ರಕಟವಾಗದಿರುವ ಕೊರತೆಯನ್ನು ಪರಿಹರಿಸಲು ಈ ಮಹಾಶಯರು ಮೊದಲಿಗೆ ಶ್ವೇತಾಶ್ವತರೋಪನಿಷತ್ತಿಗೆ ಭಾಷ್ಯವನ್ನು ಅನುವಾದದೊಡನೆ ಬರೆದಿರು ವುದು ಅಭಿನಂದನೀಯವೆನಿಸಿದೆ. ಸನಾತನತತ್ತ್ವವನ್ನೂ, ಧರ್ಮವನ್ನೂ ಪ್ರಕಾಶ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಪಡಿಸುವ ಹೊಣೆ ಆರ್ಯಮತಾನುಯಾಯಿಗಳೆಲ್ಲರಿಗೂ ಸಮಾನವಾಗಿ ಅನ್ವಯಿಸುತ್ತದೆ. ಸತ್ಸಂಪ್ರದಾಯಬದ್ಧರಾದ ಈ ಮಹಾಶಯರು ಸರ್ವರಿಗೂ ಅನ್ವಯಿಸುವಂತೆ ಭಾಷ್ಯವನ್ನು ಸಮಂಜಸವಾಗಿ ಬರೆದು ದರ್ಶನಕ್ಷೇತ್ರಕ್ಕೆ ಹೆಚ್ಚಿನ ಸೇವೆಯನ್ನು ಸಲ್ಲಿಸಿರುವುದು ಪಂಡಿತಪಾಮರರೆಲ್ಲರನ್ನೂ ಸಂತೈಸುತ್ತಿದೆ. ಇದರಂತೆಯೇ ಇತರ ಭಾಷ್ಯಗಳನ್ನು ಬರೆಯಲು ಪರಿಶುದ್ಧದೃಷ್ಟಿಯನ್ನೂ, ದೃಢಸಂಕಲ್ಪವನ್ನೂ, ಮಹಾಜನರ ಪ್ರೋತ್ಸಾಹವನ್ನೂ ಭಗವಂತನು ಇನ್ನೂ ಹೆಚ್ಚಾಗಿ ದೊರಕಿಸಲೆಂದು ಪ್ರಾರ್ಥಿಸುತ್ತೇನೆ. ಚಿತ್ರದುರ್ಗದ ಶ್ರೀ ಜಗದ್ಗುರು ವಿದ್ಯಾಪೀಠಗ್ರಂಥಮಾಲೆಯಲ್ಲಿ ಶ್ರೀ ಜಗದ್ಗುರು ಮಲ್ಲಿಕಾರ್ಜುನಮುರುಘರಾಜೇಂದ್ರಮಹಾಸ್ವಾಮಿಗಳವರು ಪವಿತ್ರವಾದ ಈ ಧರ್ಮಗ್ರಂಥವನ್ನು ಪ್ರಕಟಿಸಿರುವುದು ನಾಡಿಗೆ ಸಂತೋಷವನ್ನು ನೀಡಿದೆ. ಈ ಬಗೆಯ ಜ್ಞಾನವರ್ಧಕವಾದ ಸತ್ಕರ್ಮಗಳಲ್ಲಿ ಮಹಾಸ್ವಾಮಿಗಳಿಗೆ ಇರುವ ಶ್ರದ್ಧೋತ್ಸಾಹವು ಅಭಿನಂದನೀಯವೂ, ಇತರರಿಗೆ ಮಾರ್ಗದರ್ಶಕವೂ ಆಗಿದೆ. ಈ ಗ್ರಂಥಮಾಲೆಯು ಹೀಗೆಯೇ ಅನೇಕಸದ್ಗ್ರಂಥಗಳನ್ನು ಪ್ರಕಟಿಸಿ ಸಮಾಜಕಲ್ಯಾಣವನ್ನು ವಿಶೇಷವಾಗಿ ನೆರವೇರಿಸಲೆಂದು ಸಂತೋಷದಿಂದ ಬಯಸುತ್ತೇನೆ.

अवशिष्टानां शुद्धाशुद्धानां सूची

पुट	अशुद्धः	शुद्धः	पुट	अशुद्धः	शुद्धः
1	अर्वायीना	अर्वाचीना	13	शिवं—	शिवं
	निर्मार्तॄणां	निर्मातॄणां	16	एव च	एवं च
	निरूषित	निरूपित	17	सङ्कायो	सङ्कोचो
6	विदुषः	विद्वांसः		जीवस्प	जीमस्प
	विलीनोपि	विलीनोऽपि		मिमान	भिमान
7	हृदयस्यं	हृदयस्थं		जोवनं	जीवं
	दिषयभूता	विषयभूताः		साधक	साधकाः
	श्रीशङ्कर	तथापि श्रीशङ्कर	18	निर्यल	निर्मल
	चार्येरपि	चार्यैरपि		भवन्तु	भवन्तु ।
8	प्यास्यमेव	प्यस्यामेव	36	मेऽवकाश	मेऽवकाशं
	सर्वेषमपि	सर्वेषामपि	37	पूज्पादा	पूज्यपादा
	स्थेस्वरे	स्थेश्वरे		समर्पणीय	समर्पणीया

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

अतःश्च	अतश्च	अयेदब्रष्टि	अभेददृष्टि
रमेमः	रभेदः	१ द्रुरोंमें	दुरुर्मे
13 जीवस्स्य	जीवस्य	काम	कामः।
१ प्रसायात्	प्रसादात्	३८ जानप्ति	जानन्ति
२ दोंषो	दोषो	यप्ति	यन्ति
एर्वं	एवं	३९ न्वथतया	न्वर्थतया
४ र्नाम–	र्नाम	विकासक	विकासकः
६ अश क्ति	अशक्ति	४० प्रकुतिक	प्रकृतिक
तदसिद्धौः	त्वसिद्धौ	तरतिति	तरत्विति ।
ग्यैश्वर्या	ग्यैश्वर्या	४१ समस्त	" समस
मङ्गळ	मङ्गळं	४३ भेदं अभेदं	भेदः अभेदः
९ ब्रह्म	व्रह्म	विद्यमा	विद्यमान
११ रोपासेन	रोपासनेन	पेक्षयापि।	पेक्षयापि
१२ एतत्रयं	एतत् त्रयं	नेत्यानन्दः	नित्यानन्दः
१४ प्रद याख्ये	प्रदायाख्ये	४५ तमग्र्यं	तमाहुरग्र्यं
१७ मप्युक्तम्	मप्युक्तम्	४७ प्राययति	प्रापयति
१९ सर्पिं:	सर्पिः	४८ स्वयंम	स्वयम
२० तोन्नि	तो नि	भक्त	भक्तः
बुद्धे	बुद्धे––	सपस्त	समस्त
२६ इत्यनुवृत्ति	इत्यनुवृत्तिः	त्व पुमा	त्वं पुमा
२७ प्रमञ्चं	प्रपञ्चं	४९ व्यवथित	व्यवस्थित
२८ यद्गवर्तते	यद्वर्तते	वोपादन	वोपादान
३१ पशायां	दशायां	५० लीहित	लोहित
३४ सर्वतो वहु	सर्वतोबाहु	अतश्च	अतश्च
३६ सुख तव्नन्	सुखं तन्वन्	समघि	समधि
मत्कृष्टं	मुत्कृष्टं	५२ कृस्याकृत्य	कृत्याकृत्य

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

३८	भन्ति	भवन्ति		जन्म	जन्म––
५३	रुपयिष्ट	रूपदिष्ट	८१	परस्मिकाल	परस्मिकाल
५५	मात्म जना	मात्मना	८२	पूवं	पूर्वं
	निष्टां	निष्ठां		वत्सलत्त्वंम्	वत्सल त्वम्
५६	वेन्त्र या	वेत्र व्या	८३	पण्ययीथ्यां	पण्यवीथ्यां
५७	तत्प्रप्य	तत्प्राप्य		चेस्किमहं	चेत्किमहं
५८	हावीषा	हविषा	८४	मिद्रिया	मिन्द्रिया
५९	। इति	इति		णायतस्मै	णाय । तस्मै
६०	भंवन्ति	भवन्ति		विवेपिनां	विवेचनां
६३	सोभ्यया	सौम्यया	८५	जनुमातुं	अनुमातुं
६७	पचनि	पचति		स्वुभावतो	स्वभावतो
७०	नांशोपे	नांशोऽपि		मायायवृत	माययावृत
७१	अत्धर्मो	आत्मधर्मो		सोऽस्याकं	सोऽस्माकं
	शरीरकै	शरीरैक	८७	वस्यायां	वस्थायां
७२	णामगन्	णामवान्		तत्साधंका	तत्साधका
७४	राजादीनां	गजादीनां	८८	यया	मया
	जीव तेषां	जीवस्तेषां		भूर्तन	भूतेन
७६	यो व्यवहारं	व्यवहारं यो		मनसा ।	मनसा
	नीडाख्य	नीडाख्यं	८९	कुत्तत्स	कुतस्त
७७	वा सर्वस्य	सर्वस्य		रजस्तसां	रजस्तमसां
७९	मानवैरिति–	मानवैरिति		संसारमोक्षे	ससारमोक्ष
एको हंसो भुवनस्यास्य मध्ये स एवाग्निः सलिले सन्निविष्टः।
तमेव विदित्वाऽतिमृत्युमेति नान्यः पन्था विद्यतेऽयनाय॥ १५॥

अस्य भुवनस्य जगतो मध्ये हंसः पूर्वमन्त्रप्रतिपाद्यो विलक्षणः सूर्यस्यापि सूर्यः प्रकाशकः परशिव एकोऽद्वितीयो विराजते। स एवाग्निरग्नि-रिव सर्वपापदाहकस्सन् सलिले सलिलपरिणामरूपेऽस्मिन्शरीरे। 'पञ्चम्यामा-हुतावापः पुरुषवचसो भवन्ति' इत्यपामेव शरीररूपेण परिणाम उक्तः। सन्निविष्टस्सम्यक् निविष्ट अन्तर्यामित्वेनावस्थितः। तमन्तर्यामिणं विदित्वैव मृत्युं संसारमत्येति अतीत्य गच्छति। अन्यस्तदतिरिक्तः पन्था नास्त्येव॥

स विश्वकृद्विश्वविदात्मयोनिर्ज्ञः कालकारो गुणी सर्वविद्यः।
प्रधानक्षेत्रज्ञपतिर्गुणेशः संसारमोक्षस्थितिबन्धहेतुः॥ १६॥

कुतस्तज्ज्ञानादेव मोक्ष उच्यत इत्यत्राह। सः परमात्मैव विश्वकृत् जगत्स्रष्टा, विश्ववित् सर्वज्ञः। आत्मयोनिरात्मा चासौ योनिश्चेति विश्वव्यापकं सर्वोपादानं च संपद्यते। एवमेव सः ज्ञो ज्ञानस्वरूपः तथैव कालकारः सर्वा-धारस्य कालस्यपि स्रष्टा। गुणी अपहतपाप्मत्वादिगुणवान्। सर्ववित्सर्वज्ञः। यद्यपि 'विश्ववित्' इत्युक्तम्, अथापि लोके सर्वशब्दस्यासङ्कुचितस्य कुत्रापि प्रयोगादर्शनात् अत्रापि भगवतस्सर्वज्ञत्वं न संकुचितमिति सूचनाय पुनरुक्त दार्ढ्याय। य ईदृशः प्रधानक्षेत्रज्ञपतिः प्रधानं प्रकृतिः, क्षेत्रज्ञो जीवस्तयोः पतिः। गुणेशस्सत्त्वरजस्तसां नियन्ता च सः। अत एव सः संसारमोक्षस्थिति-

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

बन्धहेतुः संसारो जगत्, मोक्षो मुक्तिः, स्थितिर्जीवनं, बन्धस्संसारपाशः, एतेषां सर्वेषामपि स एव हेतुः। अतस्तज्ज्ञानमेव मोक्षहेतुर्नान्यदित्यर्थः फलति ॥१६॥

स तन्मयो ह्यमृत ईशसंस्थो ज्ञः सर्वगो भुवनस्यास्य गोप्ता।
य ईशे अस्य जगतो नित्यमेव नान्यो हेतुर्विद्यत ईशनाय ॥ १७ ॥

सः तन्मयः पूर्वोक्तज्योतिर्मयोऽमृतो मरणरहितः। ईशसंस्थ ईशत्वेन सर्वनियन्तृत्वेन सम्यक् व्यवस्थितः। ज्ञः सर्वज्ञस्सर्वगो विभुरस्य भुवनस्व जगतो गोप्ता च संपद्यते। तस्यैव स्वरूपं विविच्य निर्दिशति य इत्यादिना। योऽस्य जगतो नित्यमेव सदैव ईशे ईष्टे। त्रिकालेऽपि जगन्नियमनाय न अन्यः कारणं भवितुमर्हति। य एतादृशोऽस्ति स इति पूर्वेणान्वयः ॥ १७ ॥

यो ब्रह्माणं विदधाति पूर्वं यो वै वेदांश्च प्रहिणोति तस्मै।
तं ह देवमात्मबुद्धिप्रकाशं मुमुक्षुर्वै शरणमहं प्रपद्ये ॥ १८ ॥

एवं परमेश्वरं स्तुत्वा तदितरज्ञानस्य मोक्षसाधनत्वनिषेधात् तमेव स्वमोक्षार्थमाश्रयति। यः पूर्वं सर्वेषामाद्यं ब्रह्माणं चतुर्मुखं विदधाति सृजति। यो वै यश्च तस्मै वेदांश्च प्रहिणोति उपदिशति। आत्मबुद्धिप्रकाशं आत्मनो मम बुद्धेः प्रकाशहेतुम्। "मत्तः स्मृतिर्ज्ञानमपोहनं च" इति गीताया-मुक्तम्। तं देवं परमात्मानं मुमुक्षुः संसारान्मोक्षं प्राप्तुमिच्छुरहं शरणं प्रपद्ये शरणत्वेनाश्रये। शरणागतेर्नान्यो मोक्षोपायोऽस्ति ॥ १८ ॥

निष्कलं निष्क्रियं शान्तं निरवद्यं निरञ्जनम्।
अमृतस्य परं सेतुं दग्धेन्धनमिवानलम् ॥ १९ ॥

निष्कलं कला अवयवास्तद्रहितं निरवयवमित्यर्थः। निष्क्रियं निश्चलम्। अत एव शान्तं निर्विकारम्। अत एव निरवद्यं सर्वविधदोषरहितम्। निरञ्जनं सर्वविधलेपरहितम्। अमृतस्य मोक्षस्य परमुत्तमं सेतुं प्राप्त्युपायभूतम्। दग्धेन्धनमवणमिव स्थितम्। इन्धने सति धूमादिकं स्यात्, तन्निरासाय दग्धेन्धमित्युक्तम्। एतादृशं देवं मुमुक्षुरहं शरणं प्रपद्य इत्यन्वयः ॥ १९ ॥

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

यदा चर्मवदाकाशं वेष्टयिष्यन्ति मानवाः ।
तदा शिवमविज्ञाय दुःखस्यान्तो भविष्यति ॥ २० ॥

एवं स्वयं परमशिवं समाश्रित्य तदितरोपायो मोक्षप्राप्त्यै नास्त्येवेति सम्यक् द्रढयति। मानवा मनुष्या आकाशं चर्मवद्यदा वेष्टयिष्यन्ति आच्छादयिष्यन्ति तदैव देवमुक्तपरमशिवमविज्ञाय अज्ञात्वापि दुःखस्य संसारदुःखस्य अन्तो नाशो भविष्यति । यथा आकाशस्य च चर्मवद्वेष्टनमशक्यं तथा परमशिवं सर्वकारणमज्ञात्वा मोक्षोऽप्यसंभवीत्यर्थः ॥ २० ॥

तपःप्रभावाद्देवप्रसादाच्च ब्रह्म ह श्वेताश्वत्वरोऽथ विद्वान् ।
अत्याश्रमिभ्यः परमं पवित्रं प्रोवाच सम्यगृषिसंघजुष्टम् ॥ २१ ॥

तपःप्रभावात् तपसो योगादेर्माहात्म्यात्, तन्मूलाद्देवप्रसादात् परमात्मानुग्रहाच्च ब्रह्म विद्वान् ब्रह्मज्ञानी श्वेताश्वतरस्तन्नामको ऋषिरत्याश्रमिभ्यः । अतिः पूजायाम् । पूज्याश्रमस्संन्यासस्तद्वध्द्भ्यो ऋषिसंघजुष्टं बहुभिः ऋषिभिः सेवितं बहुभिरनुभूतमिति यावत् । परमं पवित्रमिदं तत्त्वं प्रोवाचोपदिदेश ।

वेदान्ते परमं गुह्यं पुराकल्पे प्रचोदितम् ।
नाप्रशान्ताय दातव्यं नापुत्रायाशिष्याय वा पुनः ॥ २२ ॥

वेदान्ते उपनिषत्सु परममत्यन्तं गुह्यं रहस्यभूतं पुराकल्पे पुरातन एव काले प्रचोदितमुपदिष्टम् । अनादिसिद्धमित्यर्थः । इदं प्रशान्तचित्ताय पुत्राय, शिष्याय वा दातव्यमुपदेष्टव्यम् । अप्रशान्ताय शान्तिरहिताय विषयादिप्रवणाय पुत्राय शिष्याय वा न दातव्यं नोपदेष्टव्यम् ॥ २२ ॥

यस्य देवे परा भक्तिर्यथा देवे तथा गुरौ ।
तस्यैते कथिता ह्यर्थाः प्रकाशन्ते महात्मनः प्रकाशन्ते महात्मनः ॥

यस्य जीवस्य देवे एतादृशे परमशिवे परा उत्कृष्टा भक्तिरस्ति यथा देवे तथैव गुरौ च वर्तते, तस्यैव महात्मन उत्तमप्रकृतेरेव कथिता एतावता ग्रन्थेन उक्ता एते अर्थाः प्रकाशन्ते प्रकाशेयुः । "प्रकाशन्ते महात्मनः" इति पुनरावृत्तिरुपदेशसमाप्तिसूचनार्थमिति ज्ञेयम् ॥२३ ॥

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

शुद्धाशुद्धसूची

पु.	अशुद्धः	शुद्धः	पु.	अशुद्धः	शुद्धः
१	मृत्ये	भृत्ये	४१	साककै	साधकै
	कम्पा	कम्पः	४१	पुष्प	यथा पुष्प
	एप	एष	४४	एबेदं	एवेदं
	प्रवृत्तं	प्रवृत्तं		पाहं	पादं
२	बुद्धैर्हि	बुद्धेर्हि	४४	इशानं	ईशानं
	रमते	णमते	४६	चि यं	चायं
	ब्रह्म	ब्रह्म	३७	प्राययति	प्रापयति
	वन्ति	वदन्ति	४८	मकेतनं	मचेतनं
७	भूनैः	भूतैः	४९	प्यनत्पन्न	त्यनुत्पन्न
९	नियासक	नियमक		लीहित	लोहित
	सादृश	एदादृश		भोगाद्	भोगान्
११	वाच्योः	वाच्यो	५२	तदानि	तदानीं
	समविष्टे	समाविष्टे	५३	षोत्तम	षोत्तमः
१२	सम्पद्यते	संपद्यते		दखस्य	दुःखस्य
	ईशनीशौ	ईशानीशौ	५५	परमात्मजना	परमात्मना
१४	सन्विग्ध	सन्दिग्ध	५६	यापृता	व्यापृतां
	हस्वा	हत्वा	५७	तत्सर्वं	मत्सर्वं
१७	रिशुद्ध	परिशुद्धः		उपक्त्तिः	उत्पत्तिः
	यःप	यः	५८	भुवर्ता	भुवना
३१	मलर्वि	मलैर्वि	६२	वोच दधि	वोचदधि
३२	लोक	लोकं		नास्येव	नास्त्येव
३५	धारयंस	धारयसि	६३	समर्धेन	समर्थेन
४१	तदीत	तदीयं		भीतः ।	भीतः
	सवस्त	समस्त	३४	क्त थस्यैव	क्तार्थस्यैव

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಶ್ವೇತಾಶ್ವತರೋಪನಿಷದ್ವೀರಶೈವಭಾಷ್ಯ

ಪ್ರಥಮಾಧ್ಯಾಯ

"ಓಂ ಶಿವಾಯ ಪರಬ್ರಹ್ಮಣೇ ನಮಃ"

ಶ್ರೀರೇಣುಕಾರ್ಯಂ ಗುರುವರ್ಯಮೀಡೇ ಭಕ್ತೌಘಸಂರಕ್ಷಣಬದ್ಧಕಕ್ಷ್ಯಮ್ ।
ಮದೀಯಹೃತ್ಪದ್ಮವಿರಾಜಮಾನಃ ಸೋಽಯಂ ಗುರುರ್ಭಾಷ್ಯಮಿದಂ ತನೋತಿ ॥

ಆಚಾರ್ಯವರ್ಯೋ ಹಿ ಮಹಾಕೃಪಾಳುಸ್ತದೀಯಭೃತ್ಯೇ ವಿಹಿತಾನುಕಂಪಃ ।
ಗುರ್ವರ್ಥಮೇತತ್ಪುರುಷಾರ್ಥಮೂಲಂ ಪ್ರಕಾಶಯತ್ಯೇವ ಸತಾಂ ಹಿತಾಯ ॥

ಗುರ್ವಾಜ್ಞಯಾ ಕೇವಲಮಾತ್ಮಶ್ರೇಯಸ್ಸಂಪ್ರಾಪ್ತಯೇಽರ್ಥಂ ವಿವೃಣೋತಿ ಕಾಮಂ
ಸ್ವಚಿತ್ತದೋಷಪ್ರಶಮಾಯ ಭೃತ್ಯೋ ಹ್ಯಾತ್ಮಾರ್ಪಣೇನೈವ ತದಂಘ್ರಿಪದ್ಮೇ ॥

ನಿರಂಜನಾರ್ಯೋ ಮುರುಘೇಶಯೋಗೀ ಜಗದ್ಗುರುರ್ಮೇ ಕುರುತಾಂ ಪ್ರಸಾದಮ್ ।
ವಿನಾ ಪ್ರಸಾದಂ ಕಥಮೇಷ ಭೃತ್ಯಃ ಪ್ರವರ್ತತೇ ಭಾಷ್ಯವಿಲೇಖನಾಯ ॥

ಶ್ರೀತೋಂಟದಾರ್ಯೋ ಭವರೋಗವೈದ್ಯಸ್ಸಮಾಧಿಮಗ್ನಶ್ಚರಜಂಗಮಾಖ್ಯಃ ।
ಚಿದಾತ್ಮಭಾವೇ ವಿಲಸನ್ಮುದೈವ ಸಂಪ್ರೇರಯತ್ಯದ್ಯ ತದೀಯಭೃತ್ಯಮ್ ॥

ಸದಾನುರಕ್ತೋ ಗುರುಪಾದಪದ್ಮೇ ಸನ್ಯಸ್ತಚಿತ್ತಃ ಪರಯಾ ಹಿ ಭಕ್ತ್ಯಾ ।
ಗುರುಪ್ರಸಾದಾತ್ಕುರುತೇ ಹಿ ಭಾಷ್ಯಂ ವೇದಾರ್ಥಸಾರಂ ಗುರುತುಷ್ಟಯೇಽಸ್ತು ॥

ಗುಬ್ಬಯ್ಯಪುತ್ರಸ್ಸುಗೃಹೀತನಾಮಾ ಸಿದ್ಧಾರ್ಯ ಏಷಃ ಶಿವಪಾದಮಗ್ನಃ ।
ಪಿತುರ್ನಿಯೋಗಾತ್ಕುರುತೇಽದ್ಯ ಭಾಷ್ಯಂ ಸುನಿಶ್ಚಿತಾರ್ಥಂ ಖಲು ಚಂದ್ರಿಕಾಖ್ಯಂ ॥

ಶ್ರೀವೀರಗೋತ್ರೋತ್ಥಿತ ಏಷ ಭೃತ್ಯಃ ಶ್ರೀರೇಣುಕಾಚಾರ್ಯವರಪ್ರಸಾದಾತ್ ।
ವೀರೇಶಯೋಗಾನ್ನ ಚ ಬುದ್ಧಿಲೋಭಾಲ್ಲಬ್ಧಾಧಿಕಾರೋಽತ್ರ ಹಿ ಸಂಪ್ರಯುಂಕ್ತೇ ॥

ಶ್ವೇತಾಶ್ವನಾಮಾ ಮುನಿಸಾರ್ವಭೌಮಃ ಶಿವಸ್ಯ ತತ್ತ್ವಂ ವಿವೃಣೀತುಕಾಮಃ ।
ಸ್ವೇನಾನುಭೂತಾಂ ಶಿವಶಕ್ತಿಲೀಲಾಂ ಪ್ರಶಂಸಯತ್ಯತ್ರ ತಪಃಪ್ರಭಾವಾತ್ ॥

ತದೀಯಶ್ರುತ್ಯರ್ಥವಿವೇಚನಾಯ ಭಾಷ್ಯಂ ಪ್ರವೃತ್ತಂ ಶಿವಸತ್ಪ್ರಸಾದಾತ್ ।
ಸರ್ವೈಃ ಪರಿಗ್ರಾಹ್ಯಮಿದಂ ಯಥಾ ಸ್ಯಾತ್ ತಥೈವ ಯತ್ನಃ ಕ್ರಿಯತೇಽನುರಾಗಾತ್

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಕರ್ಣಾಟವಾಣ್ಯಾ ಸಮಲಂಕೃತಂ ಚೇದ್ಭಾಷ್ಯಂ ಸಮೂಲಂ ಲಭತೇ ಪ್ರಸಾರಮ್ ।
ಏವಂ ವಿಚಿಂತ್ಯೈವ ತಥಾ ಪ್ರವೃತ್ತಂ ತದೀಯಲಾಭೋಽಸ್ತು ಜಗತ್ಯಜಸ್ರಮ್ ॥

ಯದ್ಯತ್ರ ದೋಷೋ ವಿಶದಾರ್ಥಬೋಧೇ ಮದೀಯಬುದ್ಧೇರ್ಹಿ ವಿಕಾಸನಾರ್ಥಮ್ ।
ನಿವೇದ್ಯ ನಿಷ್ಣಾತಸುಹೃದ್ವರೇಣ್ಯೈಃ ಗುರುಪ್ರಸಾದಂ ಲಭತಾಂ ಪ್ರಕಾಮಮ್ ॥

ಪರಮಪೂಜ್ಯರೆನಿಸಿದ ರೇಣುಕಾಚಾರ್ಯ, ಮುರುಘೇಶ, ಮತ್ತು ತೋಂಟದಾರ್ಯ ಈ ಮಹಾಶಿವಯೋಗಿಗಳಿಗೆ ಭಕ್ತಿಯಿಂದ ಸಾಷ್ಟಾಂಗಪ್ರಣಾಮಗಳನ್ನು ಸಲ್ಲಿಸಿ ವೀರಗೋತ್ರದಲ್ಲಿ ಜನಿಸಿದ ಶ್ರೀ ಗುಬ್ಬಯ್ಯಾರ್ಯರ ಪುತ್ರನಾದ ಸಿದ್ಧಾರ್ಯನೆಂಬ ಗುರುಚರಣಾರಾಧಕನು ಹರಗುರುಜಂಗಮರ ಸತ್ಪ್ರೇರಣೆಯಿಂದ ಶ್ವೇತಾಶ್ವತರೋಪನಿಷತ್ತಿಗೆ ವೀರಶೈವಭಾಷ್ಯವನ್ನು ಬರೆದು ಅದನ್ನು ಚಂದ್ರಿಕೆಯೆಂಬ ಅನುವಾದದೊಡನೆ ಕನ್ನಡನಾಡಿನ ಹಿತದೃಷ್ಟಿಯಿಂದ ಪ್ರಕಟಿಸಲಿದ್ದಾನೆ. ಈ ಉಪನಿಷತ್ತಿನ ಅರ್ಥವಿವರಣೆಯಲ್ಲಿ ಏನಾದರೂ ದೋಷವಿದ್ದಲ್ಲಿ ಅದನ್ನು ಸಹೃದಯರು ಸೋದರನ ಗಮನಕ್ಕೆ ತಂದು ಗುರುಪ್ರಸಾದಕ್ಕೆ ಪಾತ್ರರಾಗಲೆಂದು ಬಯಸಲಾಗಿದೆ.

ಚಿಚ್ಛಕ್ತಿವಿಶಿಷ್ಟನಾದ ಪರಶಿವನೇ ಚಿತ್ತಶಕ್ತಿವಿಶಿಷ್ಟಚೇತನರಾಗಿಯೂ, ಜಡವಾದ ಪಂಚಭೂತಗಳಾಗಿಯೂ ಪರಿಣಮಿಸಿದ್ದಾನೆ. ಆದ್ದರಿಂದಲೇ ಪರಶಿವನಿಗೂ ಚೇತನಾಚೇತನಪ್ರಪಂಚಕ್ಕೂ ಕಾರಣಾವಸ್ಥೆಯಲ್ಲಿ ಅಭೇದವೂ, ಕಾರ್ಯಾವಸ್ಥೆಯಲ್ಲಿ ಭೇದವೂ ಸಂಭವಿಸುತ್ತವೆ. ಆದ್ದರಿಂದಲೇ ಶಿವಜೀವರಿಗೂ, ಶಿವಜಗತ್ತುಗಳಿಗೂ ಅವಸ್ಥಾಭೇದದಿಂದಲೂ ಕಾಲಭೇದದಿಂದಲೂ ಭೇದಾಭೇದಗಳೆರಡನ್ನೂ ಅನ್ವಯಿಸಲು ಸಾಧ್ಯವಾಗುತ್ತದೆ. ಶಿವನ ಚೇತನಾಂಶನಾದ ಜೀವನಿಗೆ ಮಾಯಾಶಕ್ತಿಯ ಸಂಪರ್ಕದಿಂದ ಸಹಜವಾಗಿ ಶಕ್ತಿಯೇ ಸಂಕೋಚಗೊಂಡಿರುವ ಪ್ರಯುಕ್ತ ಸಂಸಾರದಶೆಯಲ್ಲಿ ಅವನಿಗೆ ಪರಶಿವನಿಂದ ಸ್ವಾಭಾವಿಕವಾದ ಭೇದವನ್ನೂ, ನಿರಂತರೋಪಾಸನೆಯಿಂದಾಗುವ ಶಕ್ತಿವಿಕಾಸದ ಮೂಲಕ ಪರಶಿವನೊಡನೆ ವಾಸ್ತವಿಕವಾದ ಅಭೇದವನ್ನೂ, ಹಾಗೆಯೇ ಪರಶಿವನಿಗೂ ಜಡಪ್ರಪಂಚಕ್ಕೂ ನಾಮರೂಪಗಳ ಮೂಲಕ ಸ್ವಾಭಾವಿಕವಾದ ಭೇದವನ್ನೂ, ಸದ್ರೂಪದಿಂದ ವಾಸ್ತವಿಕವಾದ ಅಭೇದವನ್ನೂ ವೀರಶೈವಮತವು ಒಪ್ಪಿದೆ. ಆದ್ದರಿಂದಲೇ ಶಕ್ತಿಯ ಸಂಕೋಚವಿಕಾಸಗಳ ಮೂಲಕ ಭೇದಾಭೇದಗಳ ಸಮನ್ವಯವನ್ನು ಪ್ರತಿಪಾದಿಸುವ ಶಕ್ತಿವಿಶಿಷ್ಟಾದ್ವೈತದರ್ಶನವು ವೀರಶೈವಮತಕ್ಕೆ ಸಮ್ಮತವೆಂದು ವೀರಪೀಠಸ್ಥಾಪಕರಾದ ಜಗದ್ಗುರು ಶ್ರೀ ರೇಣುಕಾಚಾರ್ಯರು, ಶ್ರೀಶೈಲಪೀಠಾಧ್ಯಕ್ಷರಾಗಿದ್ದ ಶ್ರೀಪತಿಪಂಡಿತಾರಾಧ್ಯರು ಇವರೇ ಮೊದಲಾದ ವೀರಶೈವದಾರ್ಶನಿಕರು ಅಪ್ಪಣೆಕೊಡಿಸಿರುತ್ತಾರೆ. ಈ ಅಂಶವನ್ನು ಶಕ್ತಿವಿಶಿಷ್ಟಾದ್ವೈತದರ್ಶನದಲ್ಲಿ ವಿಸ್ತಾರವಾಗಿ ನಿರೂಪಿಸಲಾಗಿದೆ. ಈ ದರ್ಶನಕ್ಕನುಗುಣವಾಗಿ ಶ್ವೇತಾಶ್ವತರೋಪನಿಷತ್ತಿಗೆ ಭಾಷ್ಯವನ್ನು ಈಗ ರಚಿಸಲಾಗುವುದು.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಬ್ರಹ್ಮವಾದಿನೋ ವದಂತಿ ಕಿಂ ಕಾರಣಂ ಬ್ರಹ್ಮ
ಕುತಃ ಸ್ಮ ಜಾತಾಃ ಜೀವಾಮು ಕೇನ ಕ್ವ ಚ ಸಂಪ್ರತಿಷ್ಠಾ ।
ಅಧಿಷ್ಠಿತಾಃ ಕೇನ ಸುಖೇತರೇಷು ವರ್ತಾಮಹೇ ।
ಬ್ರಹ್ಮವಿದೋ ವ್ಯವಸ್ಥಾಮ್ ॥ ೧ ॥

ಮುಂದೆ ತಿಳಿಸಬೇಕಾಗಿರುವ ವಿಷಯಕ್ಕೆ ಅನುಕೂಲವಾಗುವಂತೆ ಶ್ವೇತಾಶ್ವತರ ಮಹರ್ಷಿಯು ಈ ಮಂತ್ರದಲ್ಲಿ ಸೂಕ್ತವಾದ ಪೀಠಿಕೆಯನ್ನು ರಚಿಸಿದ್ದಾನೆ. ಬ್ರಹ್ಮವಾದಿಗಳು ಮುಂದೆ ತಿಳಿಸುವ ರೀತಿಯಲ್ಲಿ ಬ್ರಹ್ಮಸ್ವರೂಪದ ಬಗ್ಗೆ ವಿಚಾರಮಾಡುತ್ತಾರೆ. ಇಲ್ಲಿ ಬ್ರಹ್ಮವಾದಿಗಳೆಂದರೆ ಬ್ರಹ್ಮಸ್ವರೂಪವನ್ನು ತಿಳಿದು ಇತರರಿಗೆ ತಿಳಿಸಬೇಕೆಂಬ ಇಚ್ಛೆಯುಳ್ಳವರೆಂದರ್ಥ. ಪರಶಿವಬ್ರಹ್ಮದ ಸ್ವರೂಪವನ್ನು ತಿಳಿದು ಲೋಕಹಿತಾರ್ಥವಾಗಿ ತಿಳಿಸಲು ಆಸಕ್ತಿಯುಳ್ಳ ದಿವ್ಯಜ್ಞಾನಿಗಳೂ, ಶಿವಯೋಗಿಸರ್ವಭೌಮರೂ ಆದ ಮಹರ್ಷಿಗಳೇ ಇಲ್ಲಿ ಬ್ರಹ್ಮವಾದಿಗಳೆನಿಸುತ್ತಾರೆ. ಇಂತಹ ತತ್ತ್ವಜಿಜ್ಞಾಸುಗಳು ಶ್ವೇತಾಶ್ವತರಮಹರ್ಷಿವರ್ಯನ ಕಾಲಕ್ಕೆ ಹೇರಳವಾಗಿದ್ದರೆಂದು ಇದರಿಂದ ತಿಳಿದು ಬರುತ್ತದೆ. ಇವರು ಬ್ರಹ್ಮದ ಬಗ್ಗೆ ಏನು ಹೇಳುತ್ತಾರೆ? ಎಂಬುದನ್ನು ಮುಂದೆ ತಿಳಿಸಲಾಗಿದೆ. ಪ್ರತ್ಯಕ್ಷಗೋಚರವಾದ ಈ ಜಗತ್ತಿಗೆ ಕಾರಣವೆಂದು ಶಾಸ್ತ್ರಗಳಲ್ಲಿ ಕೆಲವು ಕಡೆ ಪ್ರತಿಪಾದಿತವಾಗಿರುವ ಪರಬ್ರಹ್ಮದ ಸ್ವರೂಪವೆಂತಹದು ? ಎಂಬುದಾಗಿ ಅವರು ಸ್ವರೂಪದ ಬಗ್ಗೆ ಪ್ರಶ್ನೆ ಮಾಡಿದ್ದಾರೆ. ಅಥವಾ ಪರಶಿವಬ್ರಹ್ಮವು ಜಗತ್ತಿಗೆ ಎಂತಹ ಕಾರಣವಿರಬಹುದು ? ಕೇವಲ ನಿಮಿತ್ತಕಾರಣವಷ್ಟೆಯೆ ? ಅಥವಾ ಉಪಾದಾನಕಾರಣವೇ ಅಥವಾ ಎರಡೂ ಆಗಿರಬಹುದೆ ? ಎಂಬುದಾಗಿ ಅವರು ಕಾರಣಪ್ರಶ್ನೆಯನ್ನು ಮೊದಲು ಎತ್ತಿದ್ದಾರೆ. ಅಥವಾ ಮುಂದಿನ ವಾಕ್ಯಕ್ಕೆ ಅನುಸಾರವಾಗಿ "ಜಗತ್ತಿಗೆ ಕಾರಣವಾಗಿರುವುದು ಬ್ರಹ್ಮವೆ ? ಅಥವಾ ಪ್ರಕೃತಿ ಮೊದಲಾಗಿ ಬೇರೆ ಯಾವುದಾದರೂ ಇರಬಹುದೆ ?" ಹೀಗಾದರೂ ಅವರು ಪ್ರಶ್ನೆ ಮಾಡಿರಬಹುದು. ಕಾರ್ಯವೆನಿಸಿದ ಈ ಜಗತ್ತಿನ ಸ್ವರೂಪವನ್ನು ಪರಿಶೀಲಿಸುವ ದೃಷ್ಟಿಯಿಂದ ಅವರು ಮುಂದೆ ಪ್ರಶ್ನೆಮಾಡುತ್ತಾರೆ. "ನಾವು ಹೇಗೆ ಹುಟ್ಟಿದೆವು ? ಎಲ್ಲಿಂದ ಬಂದೆವು? ಹೇಗೆ ನಾವು ಬದುಕೋಣ? ಎಲ್ಲಿ ನಾವು ನೆಲೆಯಾಗಿ ನಿಲ್ಲೋಣ? ಯಾವ ಪ್ರಬಲಕಾರಣದಿಂದ ನಾವು ಸುಖದುಃಖಗಳಿಗೆ ಅಂಟಿಕೊಂಡಿರುವೆವು ? ಇವುಗಳ ಸಂಪರ್ಕ ನಮಗೆ ಯಾತರಿಂದ ಉಂಟಾಯಿತು ? ಬ್ರಹ್ಮಸ್ವರೂಪವನ್ನು ತಿಳಿಯುವುದರಲ್ಲಿ ಆಸಕ್ತರಾದ ನಾವು ಹೇಗೆ ಈ ಸುಖದುಃಖಗಳ ವ್ಯವಸ್ಥೆಯನ್ನು ಆಶ್ರಯಿಸಿಕೊಂಡು ನಿಂತಿರುವೆವು ? ನಮ್ಮ ಇಚ್ಛೆ ಇಲ್ಲದಿದ್ದರೂ ಸುಖದುಃಖಗಳು ನಮಗೆ ಹೇಗೆ ಸಂಭವಿಸುತ್ತವೆ ? ಇವುಗಳನ್ನು ಹೀಗೆ ವ್ಯವಸ್ಥೆಮಾಡಿದವರು ಯಾರು? ಇದೆಲ್ಲಕ್ಕೂ ಆಧಾರವೆನಿಸಿದ ಪ್ರಮಾಣವೇನಾದರೂ ಉಂಟೆ ?" ಎಂಬುದಾಗಿ ಕಾರ್ಯಪ್ರಪಂಚದ ಬಗ್ಗೆ ಅವರು ವಿಚಾರಮಾಡತೊಡಗಿದರು.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಅವರ ವಿಚಾರಸರಣಿ ಹೇಗೆ ಮುಂದುವರಿಯಿತು ? ಎಂಬುದನ್ನು ಕೇಳಿರಿ.

ಕಾಲಃ ಸ್ವಭಾವೋ ನಿಯತಿರ್ಯದೃಚ್ಛಾ ಭೂತಾನಿ ।
ಯೋನಿಃ ಪುರುಷ ಇತಿ ಚಿಂತ್ಯಮ್, ಸಂಯೋಗ ಏಷಾಂ ।
ನ ತ್ವಾತ್ಮಭಾವಾತ್ ಆತ್ಮಾಪ್ಯನೀಶಃ ಸುಖದುಃಖಹೇತೋಃ ॥ ೨ ॥

ವಿಕಾರಗಳಿಂದ ಕೂಡಿದ ಈ ಜಗತ್ತಿಗೆ ಕಾಲವೇ ಕಾರಣವಿರಬಹುದೆ? ಎಲ್ಲಕ್ಕೂ ಕಾಲವೇ ಆಧಾರವೆಂಬ ನ್ಯಾಯವಂತೂ ತಿಳಿದೇ ಇದೆ. ಅಥವಾ ಆಯಾ ಪದಾರ್ಥಗಳ ಸ್ವಭಾವವೇ ಈ ಜಗತ್ತಿಗೆ ಕಾರಣವಿರಬಹುದೆ? ನಿಯತಿ ಎಂದರೆ ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮ. ಅದನ್ನು ಅದೃಷ್ಟವೆಂದೂ ಕರೆಯಲಾಗಿದೆ. ಇದೇ ಈ ವಿಕಾರಾತ್ಮಕವಾದ ಜಗತ್ತಿಗೆ ಕಾರಣವಿರಬಹುದೆ? ಯದೃಚ್ಛಾ = ಇದೆಲ್ಲವೂ ಆಕಸ್ಮಿಕವಾಗಿ ಕಂಡುಬಂದು ಆಮೇಲೆ ಕಣ್ಮರೆಯಾಗುವಂತಹದೆ? ಪಂಚಭೂತಗಳಿಂದಲೇ ಇವೆಲ್ಲವೂ ಆಗಿರಬಹುದೆ? ಅಥವಾ ಚೇತನಜೀವನೇ ಇದೆಲ್ಲಕ್ಕೂ ಕಾರಣನಿರಬಹುದೆ? ಒಟ್ಟಿನಲ್ಲಿ ಇದೆಲ್ಲವೂ ವಿಚಾರಾಸ್ಪದವಾಗಿದೆ. ಅಥವಾ ಇವೆಲ್ಲದರ ಸಮೂಹದಿಂದಲೇ ಹೀಗೆ ಜಗತ್ತು ರೂಪಗೊಂಡಿರಬಹುದೆ? ಆದರೆ ವಿಚಾರಮಾಡಿ ನೋಡಿದಲ್ಲಿ ಆತ್ಮನೊಬ್ಬನಿರುವುದರಿಂದ ಅವನಿಗೆ ಅಧೀನವಾಗಿರುವ ಪಂಚಭೂತಗಳ ಸಮೂಹವು ಜಗತ್ತಿಗೆ ಕಾರಣವೆನಿಸಲಾರದು. ಸಮೂಹವು ಯಾವಾಗಲೂ ಪರಮಾತ್ಮನಿಗಾಗಿಯೇ ಪ್ರವರ್ತಿಸುವುದರಿಂದ ಅದು ಸ್ವತಂತ್ರವಾಗಿ ಜಗತ್ತಿಗೆ ಕಾರಣವೆನಿಸಲಾರದು. ಹಾಗಾದರೆ ಸ್ವತಂತ್ರನೂ, ಸರ್ವಪ್ರೇರಕನೂ ಆದ ಜೀವಾತ್ಮನನ್ನೇ ಇದೆಲ್ಲಕ್ಕೂ ಕಾರಣವೆಂದು ಭಾವಿಸೋಣವೇ ? ಅಂದರೆ ಅವನು ಕರ್ಮಾಧೀನನೂ ಅಶಕ್ತನೂ ಆದ್ದರಿಂದ ಈ ಜಗತ್ತಿಗೆ ಕಾರಣನಾಗಲಾರನು. ಇಲ್ಲಿ ಕಾಣುತ್ತಿರುವ ಸುಖದುಃಖಗಳೆಲ್ಲಕ್ಕೂ ಕಾರಣವಾಗಿ ಪೂರ್ವಾರ್ಜಿತವಾದ ಕರ್ಮ ಒಂದು ಇರುವುದರಿಂದ ಜೀವನು ತನ್ನ ಸುಖದುಃಖಗಳನ್ನು ನಿಯಮನಮಾಡಲು ಅಶಕ್ತನಾಗಿರುವನೆಂದು ಅನುಭವಿಗಳು ಹೇಳುತ್ತಾರೆ. ಆದ್ದರಿಂದ ಜಗತ್ತಿಗೆ ಕಾರಣವೇನಿರಬೇಕು ? ಎಂದು ಬ್ರಹ್ಮವಾದಿಗಳು ವಿಚಾರಮಾಡಿದ್ದು ಸೂಕ್ತವಾಗಿದೆ.

ತೇ ಧ್ಯಾನಯೋಗಾನುಗತಾ ಅಪಶ್ಯನ್
ದೇವಾತ್ಮಶಕ್ತಿಂ ಸ್ವಗುಣೈರ್ನಿಗೂಢಾಂ ।
ಯಃ ಕಾರಣಾನಿ ನಿಖಿಲಾನಿ ತಾನಿ
ಕಾಲಾತ್ಮಯುಕ್ತಾನ್ಯಧಿತಿಷ್ಠತ್ಯೇಕಃ ॥ ೩ ॥

ಹೀಗೆ ಸ್ವಬುದ್ಧಿಯಿಂದ ಎಷ್ಟು ವಿಚಾರಮಾಡಿದರೂ ಜಗತ್ತಿಗೆ ಕಾರಣವು ಯಾವುದೆಂಬುದನ್ನು ನಿರ್ಧರಿಸಲು ಅಶಕ್ತರಾಗಿ ಮಹರ್ಷಿಗಳು ಧ್ಯಾನಯೋಗದಿಂದ ಮನಸ್ಸನ್ನು ಸಮಾಧಾನಗೊಳಿಸಿಕೊಂಡು ಜಗತ್ತಿಗೆ ಕಾರಣವು ಇಂತಹದೇ ಇರ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಬೇಕೆಂದು ನಿಷ್ಕರ್ಷೆಮಾಡಿಕೊಂಡರು. ಅಂತಹ ಕಾರಣ ಯಾವುದು ? ಎಂಬುದನ್ನು ಮುಂದೆ ಅವರೇ ತಿಳಿಸುತ್ತಾರೆ. ದೇವಾತ್ಮಶಕ್ತಿಯೇ ಜಗತ್ತಿಗೆ ಕಾರಣವಿರಬೇಕೆಂದು ಅವರು ಕಂಡುಕೊಂಡರು. ಭಕ್ತಾನುಗ್ರಹಲೀಲೆಗಾಗಿ ಲೋಕದಲ್ಲಿ ವಿಹರಿಸುತ್ತಿರುವ ಪರಶಿವಬ್ರಹ್ಮಕ್ಕಿಂತ ಬೇರೆಯಲ್ಲದೆ ಅವನ ಪ್ರಾಣರೂಪವೇ ಆದ ಸಚ್ಚಿದಾನಂದಸ್ವರೂಪದ ಶಕ್ತಿಯೇ ಜಗತ್ತಿಗೆ ಕಾರಣವಿರಬೇಕೆಂದು ಅವರು ತಿಳಿದರು. "ತದೀಯಾ ಪರಮಾಶಕ್ತಿಃ ಸಚ್ಚಿದಾನಂದಲಕ್ಷಣಾ" ಎಂದು ಪರಮಾತ್ಮನಲ್ಲಿ ಪರಾಶಕ್ತಿಯು ಸಚ್ಚಿದಾನಂದರೂಪದಿಂದಲೇ ನೆಲಸಿರುವುದೆಂದು ಪೂಜ್ಯ ಶ್ರೀ ರೇಣುಕಾಚಾರ್ಯರು ಅಗಸ್ತ್ಯಮಹರ್ಷಿಗೆ ಬೋಧಿಸಿದ್ದನ್ನು ಸಿದ್ಧಾಂತಶಿಖಾಮಣಿಯು ತಿಳಿಸಿದೆ. "ಪ್ರಾಣಾರಾಮಂ" ಎಂಬ ಶ್ರುತಿಯು ಪ್ರಾಣಶಕ್ತಿಯಲ್ಲಿ ಪರಶಿವನು ವಿಹರಿಸುತ್ತಿರುವನೆಂದು ತಿಳಿಸುತ್ತದೆ. ಶಕ್ತಿ ಮತ್ತು ಶಕ್ತಿಮಾನ್ ಪರಮೇಶ್ವರ ಇಬ್ಬರೂ ಸಚ್ಚಿದಾನಂದಸ್ವರೂಪರೇ ಆದ್ದರಿಂದ ಶಕ್ತಿಯು ಶಕ್ತನಾದ ಪರಮೇಶ್ವರನ ಆತ್ಮಸ್ವರೂಪವೆನಿಸಿದೆ. ಹೀಗೆ ಶಕ್ತಿಯು ಜಗತ್ತಿಗೆ ಕಾರಣವಾದ್ದರಿಂದಲೇ ಆ ಶಕ್ತಿಗಿಂತ ಬೇರೆಯಲ್ಲದ ಪರಮೇಶ್ವರನೂ ಜಗತ್ತಿಗೆ ಕಾರಣನೆಂಬುದು ಸ್ವತಸ್ಸಿದ್ಧವಾಯಿತು. ಅಥವಾ ಶಕ್ತಿಗೂ ಶಕ್ತನಾದ ಪರಮೇಶ್ವರನಿಗೂ ಸಾಮರಸ್ಯವನ್ನು ಈ ಸಿದ್ಧಾಂತದಲ್ಲಿ ಅಂಗೀಕರಿಸಿರುವುದರಿಂದ ಪರಮೇಶ್ವರನ ಸ್ವರೂಪವೆನಿಸಿದ ಪ್ರಾಣರೂಪವಾದ ಚಿತ್‌ಶಕ್ತಿಯನ್ನೇ ಜಗತ್ತಿಗೆ ಕಾರಣವೆಂದು ಹೇಳಬಹುದು. ಆದ್ದರಿಂದಲೇ ಜಗತ್ತಿಗೆ ಪರಮೇಶ್ವರನು ನಿಮಿತ್ತಕಾರಣವೂ ಹಾಗೆಯೇ ಉಪಾದಾನಕಾರಣವೂ ಆಗಿರುವನು. ಜಗತ್ತಿಗೆ ಸಾಕ್ಷಾದುಪಾದಾನವೆನಿಸಿರುವ ಶಕ್ತಿಗಿಂತಲೂ ಶಿವನು ಬೇರೆಯಲ್ಲವಾದ್ದರಿಂದಲೂ, ಶಕ್ತಿಯ ಸಂಕಲ್ಪಕ್ಕೆ ಅಂದರೆ ಇಚ್ಛೆಗೆ ಶಿವನೇ ಆಶ್ರಯನಾಗಿರುವುದರಿಂದಲೂ ಶಿವನು ನಿಮಿತ್ತವೂ ಆಗಿರುವನು. ಆದ್ದರಿಂದಲೇ ಅವನು ಜಗತ್ತಿಗೆ ಉಪಾದಾನವೆನಿಸಿ ಅಭಿನ್ನನೂ, ನಿಮಿತ್ತವೆನಿಸಿ ಭಿನ್ನನೂ ಆಗಿರುವನು. ಹೀಗೆ ಜಗದ್ಬ್ರಹ್ಮಗಳಿಗೆ ಭೇದಾಭೇದಗಳೆರಡೂ ಸಿದ್ಧಿಸುತ್ತವೆ. ಇದೇ ಶಕ್ತಿಯು ಕ್ರಮವಾಗಿ ಪರಿಣಮಿಸುತ್ತ ಕೊನೆಗೆ ಪ್ರಕೃತಿ ಎನಿಸುತ್ತದೆ. ಪ್ರಕೃತಿ ಎಂದರೆ ಅತ್ಯುತ್ಕೃಷ್ಟವಾದ ರಚನೆ ಎಂದರ್ಥ. ಹೀಗೆ ವಿಚಿತ್ರವಾದ ರಚನೆ ಎನಿಸಿದ್ದರಿಂದಲೇ ಇದು ಸತ್ತ್ವ, ರಜಸ್ಸು, ತಮಸ್ಸು ಎಂಬ ಮೂರು ಗುಣಗಳಿರುವ ದ್ರವ್ಯವೆನಿಸಿದೆ. ರಚನೆಗೆ ಆಶ್ರಯವಾದ ದ್ರವ್ಯವೊಂದಿಲ್ಲದಿದ್ದರೆ ಆ ರಚನೆಯೇ ಹೊಂದಿಕೆಯಾಗದೆ ಹೋದೀತು. ಆದ್ದರಿಂದ ಪರಮೇಶ್ವರನ ಚಿದ್ರೂಪವಾದ ಶಕ್ತಿಯೇ ಸತ್ತ್ವ, ರಜಸ್ಸು, ತಮಸ್ಸು ಎಂಬ ತ್ರಿಗುಣದ್ರವ್ಯವಾಗಿ ಪರಿಣಮಿಸುತ್ತದೆ. ಆದರೆ ತ್ರಿಗುಣದ್ರವ್ಯವನ್ನು ಒಪ್ಪಿದ್ದರಿಂದ ಜಗತ್ತಿಗೆ ಉಪಾದಾನವೆನಿಸಿದ ಚಿತ್‌ಶಕ್ತಿಯಲ್ಲಿಯೂ ಈ ಮೂರು ಗುಣಗಳಿರಬೇಕೆಂದು ಹೇಳಬೇಕಲ್ಲವೆ ? ಹೀಗೆ ಪರಮಾತ್ಮನ ಪ್ರಾಣವೆನಿಸಿದ ಶಕ್ತಿಯಲ್ಲೂ ತ್ರಿಗುಣಗಳನ್ನು ಒಪ್ಪುವುದಾದರೆ ಇದು ಸಿದ್ಧಾಂತಕ್ಕೆ ವಿರುದ್ಧವಾದೀತು. ಇಲ್ಲಿ ಶಕ್ತಿಯು ಚಿದ್ರೂಪವಾಗಿರುವುದೆಂಬುದೇ ನಮಗೆ ಸಮ್ಮತವೆಂದು ಆಲೋಚಿಸಿ ಜಗತ್ಕಾರಣವಾದ ಶಕ್ತಿ ಎಂದರೆ ತ್ರಿಗುಣಾತ್ಮಕ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ವಾದ ಪ್ರಕೃತಿಶಕ್ತಿಯೇ ಆಗಬೇಕೆಂಬುದನ್ನು ಮುಂದೆ ತಿಳಿಸಲಾಗಿದೆ. ಸತ್ತ್ವ, ರಜಸ್ಸು, ತಮಸ್ಸು ಈ ಮೂರುಗುಣಗಳೇ ಪ್ರಕೃತಿಯ ಸ್ವರೂಪವೆನಿಸಿವೆ. ಈ ಪ್ರಕೃತಿಗೆ ವಿಚಿತ್ರವಾದ ಆಕಾರವಿರುವುದರಿಂದಲೂ, ಇದು ಎಲ್ಲರನ್ನೂ ಆಕರ್ಷಿಸಲು ಸಮರ್ಥವಾಗಿರುವುದರಿಂದಲೂ ಇದನ್ನು ಮಾಯೆ ಎಂದು ಅನುಭವಿಗಳು ಕರೆದಿದ್ದಾರೆ. ಸರ್ವಾಕರ್ಷಕವಾದ್ದರಿಂದಲೇ ಪ್ರಕೃತಿಯನ್ನು ಮಾಯೆ ಎಂದು ತಿಳಿಯಬೇಕೆಂದು ಶ್ರುತಿಯು ಸಾರುತ್ತಿದೆ. ಹೀಗೆ ಮಾಯೆ ಎಂದು ಕರೆಯಲ್ಪಡುವ ಈ ಪ್ರಕೃತಿಯು ಚಿತ್‌ಶಕ್ತಿಯ ಪರಿಣಾಮವೇ ಆಗಿದೆ. ಆದರೆ ಈ ಮೂರು ಗುಣಗಳು ಪರಾಶಕ್ತಿ ಎನಿಸಿದ ಚಿತ್‌ಶಕ್ತಿಯ ಅವಸ್ಥೆಯಲ್ಲಿ ಸ್ಫುಟವಾಗಿ ಕಾಣಿಸಿಕೊಳ್ಳದೆ ಗೋಪ್ಯವಾಗಿ ಅಡಗಿರುತ್ತವೆ. ಅವು ಪ್ರಕಾಶವಾಗದಿದ್ದರೂ ವಾಸ್ತವವಾಗಿ ಅಲ್ಲಿ ಇದ್ದೇ ಇರುತ್ತವೆ; ಆದರೆ ಪ್ರಕೃತಿ ಎನಿಸಿದ ಮಾಯಾಶಕ್ತಿಯಲ್ಲಿ ಅವು ಎದ್ದು ಕಾಣುತ್ತವೆ; ಚಿಚ್ಛಕ್ತಿಯು ಜಗತ್ತಾಗಿ ಪರಿಣಮಿಸಿದಾಗ ಅದರ ಧರ್ಮಗಳೆನಿಸಿದ ಸತ್ತ್ವರಜಸ್ತಮೋಗುಣಗಳು ಅದರಲ್ಲಿ ಇರುವುವೆಂದು ತಿಳಿಯಲು ಯಾರಿಗೂ ಸಾಧ್ಯವಾಗುವುದಿಲ್ಲ. ಆದರೆ ಇವು ಆ ಚಿತ್‌ಶಕ್ತಿಯ ಪರಿಣಾಮವೇ ಆದ ಮಾಯಾಶಕ್ತಿಯಲ್ಲಿ ಹೇಗೆ ಸ್ಪಷ್ಟವಾಗಿ ಕಂಡುಬರುತ್ತವೆ? ಎಂಬುದಾಗಿ ಯಾರಾದರೂ ಆಕ್ಷೇಪಿಸಿದರೆ ಅದಕ್ಕೆ ಸಮಾಧಾನವನ್ನು ಮುಂದೆ ತಿಳಿಸಲಾಗುವುದು. ಪರಿಣಾಮದಲ್ಲಿ ಇದೊಂದು ಸ್ವಭಾವವೆಂದು ಎಲ್ಲರೂ ಒಪ್ಪಲೇಬೇಕು. ಅಡಕೆ ವೀಳೆಯದೆಲೆಗಳನ್ನು ಸುಣ್ಣದೊಡನೆ ಸೇರಿಸಿದಾಗ ಹಿಂದೆ ಕಾಣದಿದ್ದ ಕೆಂಪುಬಣ್ಣವು ನಾಲಿಗೆಯಲ್ಲಿ ಕಾಣಬರುವುದೆಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಮೊದಲು ತಾಂಬುಲದಲ್ಲಿ ಕೆಂಪುಬಣ್ಣವು ಕಾಣುತ್ತಿರಲಿಲ್ಲವಾದರೂ ಹಿಂದೆ ಇದ್ದದ್ದೇ ಕಂಡುಬರುವುದು ಎಂದು ವಾದಿಸುವ ಸತ್ಕಾರ್ಯವಾದಿಗಳು ಇಲ್ಲಿ ಯಾವ ಸಮಾಧಾನವನ್ನು ತಿಳಿಸುವರೋ ಅದನ್ನೇ ಇಲ್ಲಿಯೂ ಹೇಳಬೇಕಾಗುತ್ತದೆ. ಹೀಗೆ ಇಷ್ಟೊಂದು ವಿಲಕ್ಷಣವಾದ ಶಕ್ತಿಯೇ ಜಗತ್ತಿಗೆ ಕಾರಣವಾಗಿರುವಾಗ ಪರಶಿವಬ್ರಹ್ಮವನ್ನು ಜಗತ್ತಿಗೆ ಕಾರಣವೆಂದು ಏಕೆ ಹೇಳಬೇಕು? ಎಂದು ಆಕ್ಷೇಪಿಸಿದರೆ ಅದಕ್ಕೆ ಸಮಾಧಾನವನ್ನು ಮುಂದೆ ತಿಳಿಸಲಾಗಿದೆ. ಇಷ್ಟೊಂದು ಅದ್ಭುತವಾದ ಶಕ್ತಿಯುಳ್ಳ ಪರಶಿವನೊಬ್ಬನೇ ಜಗತ್ತಿಗೆ ಕಾರಣವೆಂದು ಅಂಗೀಕೃತವಾಗಿರುವ ಕಾಲ ಜೀವ ಮೊದಲಾದವನ್ನೂ ಸಹ ನಿಯಮನಮಾಡುತ್ತಿರುವನು. ಸಾರಥಿಯು ರಥವನ್ನು ನಡೆಸುವಂತೆ, ಜೀವನು ಶರೀರವನ್ನು ವ್ಯವಸ್ಥೆಯಿಂದ ನಡೆಸುತ್ತಿರುವಂತೆ ಪರಮಾತ್ಮನೊಬ್ಬನೇ ಜಗತ್ತಿನ ಕಾರಣಗಳೆಲ್ಲಕ್ಕೂ ಪರಮಕಾರಣನೆನಿಸಿ ಎಲ್ಲವನ್ನೂ ನಿರ್ವಹಿಸುತ್ತಿರುವನು. ಶರೀರದಲ್ಲಿ ನಡೆಯುತ್ತಿರುವ ಕಾರ್ಯಗಳೆಲ್ಲಕ್ಕೂ ಜೀವನೇ ಹೇಗೆ ಕರ್ತನೆನಿಸಿರುವನೋ ಹಾಗೆ ಪ್ರಕೃತಿ, ಕಾಲ, ಜೀವ ಮೊದಲಾದವರು ನಡೆಸುವ ಕಾರ್ಯಗಳೆಲ್ಲಕ್ಕೂ ಪರಮಾತ್ಮನೇ ಕರ್ತನೆನಿಸಿದ್ದಾನೆ. ಆದ್ದರಿಂದ ವಿಚಿತ್ರವಾದ ಜಗತ್ತೆಲ್ಲವನ್ನೂ ಸೃಷ್ಟಿಸಿದವನು ಸ್ವತಂತ್ರನಾದ ಪರಮೇಶ್ವರನಲ್ಲದೆ ಬೇರೆಯಲ್ಲವೆಂದು ನಿಷ್ಕರ್ಷಿಸಲಾಗಿದೆ.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ತಮೇಕನೇಮಿಂ ತ್ರಿವೃತಂ ಷೋಡಶಾಂತಂ
ಶತಾರ್ಧಾರಂ ವಿಂಶತಿಪ್ರತ್ಯರಾಭಿಃ ।
ಅಷ್ಟಾಭಿಃ ಷಡ್ಭಿಃ ವಿಶ್ವರೂಪೈಕಪಾಶಂ
ತ್ರಿಮಾರ್ಗಭೇದಂ ದ್ವಿನಿಮಿತ್ತೈಕಮೋಹಮ್ ॥ ೪ ॥

ಹೀಗೆ ಸಮಸ್ತ ಜಗತ್ತಿಗೂ ಕಾರಣವೆನಿಸಿದ ಪರಶಿವಬ್ರಹ್ಮದ ಸ್ವರೂಪವನ್ನು ಅನಾಯಾಸದಿಂದ ತಿಳಿಸಲಿಕ್ಕಾಗಿ ಚಕ್ರದೊಡನೆ ಆರೋಪಿಸುವ ಮೂಲಕ ಆ ಬ್ರಹ್ಮ ವಸ್ತುವನ್ನು ಇಲ್ಲಿ ವರ್ಣಿಸಲಾಗಿದೆ. ಯಾವನು ಸಮಸ್ತ ಕಾರಣಗಳನ್ನೂ ನಿಯಮನ ಮಾಡುತ್ತಿರುವನೋ ಅಂತಹ ಪರಮಾತ್ಮನಿಗೆ ಮಾಯೆ, ಪ್ರಕೃತಿ, ಅವಿದ್ಯೆ ಎಂಬ ಶಬ್ದಗಳಿಂದ ಕರೆಯಲ್ಪಡುವ ಶಕ್ತಿಯು ಚಕ್ರದ ಪಟ್ಟಿಯಂತೆ ಜಗದ್ರಚನೆಗೆ ಆಧಾರ ವಾಗಿರುವುದು. ನೇಮಿಯೇ ಚಕ್ರದ ಭಾಗಗಳೆಲ್ಲವನ್ನೂ ಸಂಘಟಿಸುವ ಆಧಾರ ವೆಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಹಾಗೆಯೇ ಮಾಯಾಶಕ್ತಿಯೇ ಜಗತ್ತೆಲ್ಲಕ್ಕೂ ಸಂಘಟಕವಾಗಿ ಆಶ್ರಯವೆನಿಸಿದೆ. ಇದರಂತೆಯೇ ಪರಬ್ರಹ್ಮವೆಂಬ ಚಕ್ರವು ಸತ್ತ್ವರಜಸ್ತಮೋಗುಣಗಳೆಂಬ ಬಣ್ಣಗಳಿಂದ ತುಂಬಿಕೊಂಡಿದೆ. ಐದು ಭೂತಗಳು ಹನ್ನೊಂದು ಇಂದ್ರಿಯಗಳು ಒಟ್ಟು ಈ ಹದಿನಾರು ಅಂಗಗಳು ಬ್ರಹ್ಮ ಚಕ್ರದ ಕೊನೆಯ ಭಾಗಗಳೆನಿಸಿವೆ. ಬ್ರಹ್ಮದ ಪರಿಣಾಮವು ಇವುಗಳಲ್ಲಿಯೇ ಕೊನೆಗಾಣುತ್ತದೆ. ಐವತ್ತು ವಿಪರ್ಯಯಭೇಧಗಳು ಬ್ರಹ್ಮಚಕ್ರದ ಅರಗಳೆನಿಸಿವೆ. ತಮಸ್ಸು, ಮೋಹ, ಮಹಾಮೋಹ, ತಾಮಿಸ್ರ, ಅಂಧತಾಮಿಸ್ರ ಇವು ಐದು ಜ್ಞಾನ ವಿಪರ್ಯಯಗಳೆನಿಸಿವೆ. ಹಾಗೆಯೇ ಅಶಕ್ತಿ ಎಂಬುದು ಇಪ್ಪತ್ತೆಂಟುಬಗೆಯಾಗಿದೆ. ಪುಷ್ಟಿ ಎಂಬುದು ಒಂಬತ್ತು ಬಗೆಯಾಗಿದೆ. ಇದಷ್ಟೇ ಅಲ್ಲದೆ, ಎಂಟುಬಗೆಯ ಸಿದ್ಧಿಗಳಿವೆ ? ಇವೆಲ್ಲವೂ ಸೇರಿ ಐವತ್ತು ಜ್ಞಾನದ ಬಗೆಗಳು. ಅವುಗಳಲ್ಲಿ ತಮಸ್ಸು ಎಂಟು ಬಗೆಯಾಗಿದೆ. ಚೇತನವೆನಿಸದಿರುವ ಎಂಟು ಬಗೆಯ ಪ್ರಕೃತಿಗಳಲ್ಲಿ ಚೇತನ ಭಾವನೆಯನ್ನು ಕಲ್ಪಿಸುವ ಮೂಲಕ ವಿಪರೀತಜ್ಞಾನವು ಎಂಟು ಬಗೆಯಾಗಿದೆ. ಹಾಗೆಯೇ ಮೋಹವೂ ಎಂಟು ಬಗೆಯಾಗಿದೆ. ಅಣಿಮಾದಿಶಕ್ತಿಗಳೇ ಮೋಹ ವೆನಿಸುತ್ತವೆ. ಮಹಾಮೋಹವು ಹತ್ತು ಬಗೆಯಾಗಿದೆ. ಐಹಿಕವೂ ಆಮುಷ್ಮಿ ಕವೂ ಆದ ಶಬ್ದವೇ ಮೊದಲಾದ ಭೋಜ್ಯವಸ್ತುಗಳಲ್ಲೂ, ಸ್ವರ್ಗದಲ್ಲೂ ಹುಟ್ಟುವ ಆಗ್ರಹವೇ ಮಹಾಮೋಹವೆನಿಸುತ್ತದೆ. ತಾಮಿಸ್ರವು ಹದಿನೆಂಟು ಬಗೆಯಾಗಿದೆ, ಹಿಂದೆ ಹೇಳಿದ ಹತ್ತು ಬಗೆಯ ಭೋಜ್ಯವಿಷಯಗಳನ್ನು ಎಂಟು ಬಗೆಯ ಐಶ್ವರ್ಯ ಗಳೊಡನೆ ಸಾಧಿಸಲು ಪ್ರಯತ್ನಪಡುವವನಿಗೆ ಅದು ಸಿದ್ಧಿಸದೇ ಇದ್ದಾಗ ಹುಟ್ಟುವ ಕ್ರೋಧವೇ ತಾಮಿಸ್ರವೆನಿಸುತ್ತದೆ. ಅಂಧತಾಮಿಸ್ರವೂ ಹದಿನೆಂಟು ಬಗೆಯಾಗಿದೆ. ಎಂಟು ಬಗೆಯ ಐಶ್ವರ್ಯಗಳನ್ನೂ, ಹತ್ತು ಬಗೆಯ ವಿಷಯಗಳನ್ನು ಭೋಗಿಸು ತ್ತಿರುವಾಗ ಮಧ್ಯದಲ್ಲಿಯೇ ಮರಣವನ್ನು ಹೊಂದುತ್ತಿರುವವನಿಗೆ ಹುಟ್ಟುವ ಶೋಕವೇ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಅಂಧತಾಮಿಸ್ರವೆನಿಸುತ್ತದೆ. ಹನ್ನೊಂದು ಇಂದ್ರಿಯಗಳ ದೌರ್ಬಲ್ಯದಿಂದಲೂ, ಅಂತಃಕರಣದ ಒಂಭತ್ತುಬಗೆಯ ದೌರ್ಬಲ್ಯದಿಂದಲೂ, ಅಷ್ಟಸಿದ್ಧಿಗಳು ವ್ಯತ್ಯಾಸ ವಾಗಿ ಪರಿಣಮಿಸುವುದರಿಂದಲೂ ಅಶಕ್ತಿಯು ಒಟ್ಟು ಇಪ್ಪತ್ತೆಂಟು ಬಗೆಯಾಗಿದೆ. ಪ್ರಕೃತಿ, ಉಪಾದಾನ, ಕಾಲ, ಭಾಗ್ಯವೆನಿಸಿದವು ನಾಲ್ಕು ಮತ್ತು ಪಂಚವಿಷಯಗಳ ಶಮನವೆನಿಸಿದವು ಐದು; ಹೀಗೆ ವಿಪರ್ಯಯಗಳೊಡನೆ ಅಶಕ್ತಿ, ಪುಷ್ಟಿ, ಸಿದ್ಧಿ ಎಂಬವು ಸೇರಿ ಐವತ್ತು ಬ್ರಹ್ಮಚಕ್ರದ ಅರಗಳೆನಿಸಿವೆ. ಹೀಗೆಯೇ ಬ್ರಹ್ಮಚಕ್ರದಲ್ಲಿ ಹತ್ತು ಇಂದ್ರಿಯಗಳು ಅವುಗಳ ವಿಷಯಗಳೊಡನೆ ಕೂಡಿ ಇಪ್ಪತ್ತು ಅಡ್ಡವಾದ ಕಂಬಿ ಗಳೆನಿಸಿವೆ. ಹಾಗೆಯೇ ಎಂಟುಬಗೆಯ ಆರು ಗುಂಪುಗಳು ಕೂಡಿಕೊಂಡಿವೆ. "ನೆಲ, ನೀರು, ಬೆಂಕಿ, ಗಾಳಿ, ಆಕಾಶ, ಮನಸ್ಸು, ಬುದ್ಧಿ, ಅಹಂಕಾರ ಎಂದು ನನ್ನ ಪ್ರಕೃತಿ ಎಂಟು ಬಗೆಯಾಗಿದೆ" ಎಂದು ಗೀತೆಯಲ್ಲಿ ಹೇಳಿರುವಂತೆ ಎಂಟು ಪ್ರಕೃತಿಗಳಿವೆ. ತ್ವಕ್ಕು, ಚರ್ಮ, ಮಾಂಸ, ರಕ್ತ, ಮೇದಸ್ಸು, ಮೂಳೆ, ಮಜ್ಜೆ, ಶುಕ್ರ ಹೀಗೆ ಎಂಟು ಧಾತುಗಳಿವೆ. ಅಣಿಮ ಮಹಿಮ ಗರಿಮ ಲಘಿಮ ಪ್ರಾಪ್ತಿ ಪ್ರಾಕಾಮ್ಯ ಈಶತ್ವ ವಶಿತ್ವ ಇವು ಐಶ್ವರ್ಯಗಳು. ಧರ್ಮ ಜ್ಞಾನ ವೈರಾಗ್ಯ ಐಶ್ವರ್ಯ ಅಧರ್ಮ ಅಜ್ಞಾನ ಅವೈರಾಗ್ಯ ಅನೈಶ್ವರ್ಯ ಎಂಬ ಎಂಟು ಭಾವಗಳು. ಬ್ರಹ್ಮ, ಪ್ರಜಾ ಪತಿ, ದೇವ, ಗಂಧರ್ವ, ಯಕ್ಷ, ರಾಕ್ಷಸ, ಪಿತೃದೇವತೆಗಳು, ಪಿಶಾಚಿಗಳು ಎಂಬ ಎಂಟು ದೇವತೆಗಳು. ದಯೆ, ಕ್ಷಾಂತಿ, ಅನಸೂಯೆ, ಶೌಚ, ಅನಾಯಾಸ (ಆಯಾಸವಿಲ್ಲದೆ ಕೆಲಸ ಮಾಡುವುದು), ಮಂಗಳ, ಅಕಾರ್ಪಣ್ಯ(ದೈನ್ಯದಿಂದ ಬೇಡದೆ ಇರುವಿಕೆ), ಅಸ್ಪೃಹ ಎಂದು ಎಂಟು ಆತ್ಮಗುಣಗಳಿವೆ. ಬ್ರಹ್ಮಚಕ್ರವು ಈ ಆರು ಬಗೆಯ ಅಷ್ಟಕಗಳಿಂದ ಕೂಡಿದೆ. ಇಷ್ಟೇ ಅಲ್ಲದೆ, ಈ ಬ್ರಹ್ಮಚಕ್ರದಿಂದ ಹೊರ ಟಿರುವ ಕಾಮಪಾಶವು ಅನೇಕ ಬಗೆಯಾಗಿ ವ್ಯಾಪಿಸಿದೆ. ಐಹಿಕವಾಗಿ ಹೆಂಡತಿ ಮಕ್ಕಳನ್ನು ಪಡೆಯುವುದು. ಸ್ವರ್ಗಸುಖವನ್ನು ಪಡೆಯುವುದು ಹೀಗೆ ಕಾಮವೆಂಬ ಒಂದೇ ಪಾಶವು ಅನೇಕ ಬಗೆಯಾಗಿ ಎಲ್ಲೆಲ್ಲೂ ಹರಡಿಕೊಂಡಿದೆ. ಈ ಚಕ್ರವು ಧರ್ಮ, ಅಧರ್ಮ, ಜ್ಞಾನವೆಂಬ ಮೂರು ಮಾರ್ಗಗಳಲ್ಲಿ ಪ್ರವರ್ತಿಸುತ್ತಲಿದೆ. "ನಾನೇ ಸತ್, ಅಸತ್–ಮೃತ್ಯು, ಅಮೃತ ಎರಡೂ ಆಗಿರುವೆನು" "ನನ್ನಿಂದಲೇ ಜನರಿಗೆ ಅರಿವು ಮರೆವು ನೆನಹು ಉಂಟಾಗುತ್ತಲಿವೆ" ಎಂದು ಪರಮಾತ್ಮನೇ ಹೇಳಿದ್ದಾನೆ. ಹೀಗೆ ಈ ಚಕ್ರವು ಜನರಿಗೆ ಪುಣ್ಯಪಾಪಗಳೆರಡರಲ್ಲೂ ಒಂದೇ ಬಗೆಯ ವ್ಯಾಮೋಹವನ್ನು ಹುಟ್ಟಿಸುತ್ತಲಿದೆ. ಈ ರೀತಿಯಲ್ಲಿ ದೇಹ, ಇಂದ್ರಿಯ, ಮನಸ್ಸು, ಬುದ್ಧಿ, ಜಾತಿ ಮೊದಲಾದ ಅನಾತ್ಮವಸ್ತುಗಳಲ್ಲಿ ಆತ್ಮಾಭಿಮಾನವನ್ನು ಬ್ರಹ್ಮಚಕ್ರವು ಹುಟ್ಟಿಸುತ್ತಲಿರುವುದರಿಂದಲೇ ಜನರು ಪುಣ್ಯವನ್ನು ಪಾಪವೆಂದೂ, ಪಾಪವನ್ನು ಪುಣ್ಯವೆಂದೂ ಭಾವಿಸುತ್ತಿದ್ದಾರೆ. ಇಂತಹ ಚಕ್ರಾಕಾರದ ಪರಶಿವ ಬ್ರಹ್ಮವನ್ನು ಶಿವಯೋಗಿಗಳಾದ ಮಹರ್ಷಿಗಳು ಧ್ಯಾನಯೋಗದಿಂದ ತಿಳಿದರು. ಹೀಗೆ ಬ್ರಹ್ಮವು ಚಕ್ರಾಕಾರದಿಂದ ಲೋಕವನ್ನು ವ್ಯಾಪಿಸಿರುವುದು.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಪಂಚಸ್ರೋತೋಽಂಬುಂ ಪಂಚಯೋನ್ಯುಗ್ರವಕ್ರಾಂ
ಪಂಚಪ್ರಾಣೋರ್ಮಿಂ ಪಂಚಬುದ್ಧ್ಯಾದಿಮೂಲಾಮ್ ।
ಪಂಚಾವರ್ತಾಂ ಪಂಚದುಃಖೌಘವೇಗಾಂ
ಪಂಚಾಶದ್ಭೇದಾಂ ಪಂಚಪರ್ವಾಮಧೀಮಃ ॥ ೫ ॥

ಹೀಗೆ ಚಕ್ರಾಕಾರದಿಂದ ಆರೋಪಿಸಿದ ಪರಶಿವಬ್ರಹ್ಮವನ್ನು ಮತ್ತೆ ನದೀ ರೂಪದಿಂದ ಆರೋಪಿಸಲಾಗುವುದು. ಬ್ರಹ್ಮನದಿಯು ಜಗತ್ತನ್ನೆಲ್ಲಾ ವ್ಯಾಪಿಸಿ ಕೊಂಡಿದೆ. ಕಣ್ಣು ಮೊದಲಾದ ಐದು ಜ್ಞಾನೇಂದ್ರಿಯಗಳೇ ಈ ಬ್ರಹ್ಮನದಿಯಲ್ಲಿ ನೀರಿನ ಸ್ಥಾನದಲ್ಲಿವೆ. ನೀರು ಹರಿದಂತೆ ಜ್ಞಾನೇಂದ್ರಿಯಗಳು ಶಬ್ದಾದಿವಿಷಯ ಗಳನ್ನು ಗ್ರಹಿಸಲಿಕ್ಕಾಗಿ ಎಲ್ಲಾ ಕಡೆಗಳಲ್ಲೂ ಹರಿಯುತ್ತಲಿವೆ. ಪೃಥಿವಿ ಮೊದಲಾದ ಪಂಚಭೂತಗಳಿಂದ ಬ್ರಹ್ಮನದಿಯು ಭೀಕರವೂ, ಸುಂದರವೂ ಆಗಿ ಕಂಗೊಳಿಸುತ್ತಿದೆ. ಹಾಗೆಯೇ ಐದು ಬಗೆಯ ಕರ್ಮೇಂದ್ರಿಯಗಳು ಎಲ್ಲೆಲ್ಲೂ ವ್ಯಾಪಿಸಿರುವುದರಿಂದ ಬ್ರಹ್ಮನದಿಯ ಅಲೆಗಳೆನಿಸಿವೆ. ಶಬ್ದವೇ ಮೊದಲಾದ ಐದು ಬಗೆಯ ಜ್ಞಾನಗಳಿಗೆ ಕಾರಣವೆನಿಸಿದ ಮನಸ್ಸೇ ಬ್ರಹ್ಮನದಿಯ ಮೂಲಸ್ಥಾನ ವೆನಿಸಿದೆ. ಮನಸ್ಸಿನ ಪ್ರೇರಣೆಯಿಂದಲೇ ಬ್ರಹ್ಮಾಂಶರಾದ ಜೀವರು ಎಲ್ಲಾ ಬಗೆಯ ಜ್ಞಾನವನ್ನು ಪಡೆಯುತ್ತಿರುವರು. ಹಾಗೆ ಈ ಸಂಸಾರಸಾಗರದಲ್ಲಿ ಈಜಾಡುತ್ತಿರುವ ಜೀವರಿಗೆ ಮನಸ್ಸೇ ಎಲ್ಲಾ ಇಂದ್ರಿಯಗಳಿಗೂ ಪ್ರೇರಕವಾಗಿ ಭೋಗ್ಯವಿಷಯಗಳ ಜ್ಞಾನವನ್ನು ದೊರಕಿಸುತ್ತಲಿದೆ. ಈ ಶಬ್ದಾದಿವಿಷಯಗಳೆಂಬ ಸುಳಿಗಳಲ್ಲಿ ಪ್ರಾಣಿಗಳೆಲ್ಲರೂ ಸಿಕ್ಕಿ ನರಳುತ್ತಿರುವುದರಿಂದ ಇವೇ ಬ್ರಹ್ಮನದಿಯ ಸುಳಿಗಳೆನಿಸಿವೆ. ಗರ್ಭವಾಸ, ಹುಟ್ಟುವಿಕೆ, ಮುಪ್ಪು, ರೋಗ, ಮರಣವೆಂಬ ದುಃಖಗಳೇ ಬ್ರಹ್ಮನದಿಯ ಪೂರ್ಣಪ್ರವಾಹವೆನಿಸಿವೆ, ಅವಿದ್ಯೆ, ಅಸ್ಮಿತೆ, ರಾಗ, ದ್ವೇಷ, ಅಭಿನಿವೇಶ ಎಂಬ ಐದು ಬಗೆಯ ಕ್ಲೇಶಗಳೇ ಬ್ರಹ್ಮನದಿಯ ಪರ್ವಗಳೆನಿ ಸಿವೆ. ಹೀಗೆ ಬ್ರಹ್ಮನದಿಯು ವಿಶ್ವದಲ್ಲೆಲ್ಲಾ ಪ್ರಸರಿಸಿರುವುದಾಗಿ ಅವರು ತಿಳಿದರು.

ಸರ್ವವ್ಯಾಪಕವೂ ಸರ್ವಾತ್ಮಕವೂ ಅಮೃತವೂ ಆದ ಪರಶಿವಬ್ರಹ್ಮವನ್ನು ಜನರಿಗೆ ಸುಖವಾಗಿ ತಿಳಿಸಲಿಕ್ಕಾಗಿ ಹೀಗೆ ಚಕ್ರವೆಂದೂ, ನದಿಯೆಂದೂ ಆರೋಪಿಸಿದ ಬ್ರಹ್ಮವಾದಿಗಳು “ಕಾರ್ಯವೂ ಕಾರಣವೂ ಆಗಿರುವ ಈ ಬ್ರಹ್ಮಚಕ್ರದಲ್ಲಿ ಜೀವನು ಸಂಚರಿಸುತ್ತ ಸುಖದುಃಖಗಳನ್ನು ಏಕೆ ಅನುಭವಿಸುತ್ತಿರುವನು ? ಇವನು ಇದರಿಂದ ಹೇಗೆ ಬಿಡುಗಡೆಯನ್ನು ಹೊಂದಬಲ್ಲನು ?” ಎಂದು ಪ್ರಶ್ನೆಮಾಡಿ ಅದಕ್ಕೆ ಸೂಕ್ತವಾದ ಉತ್ತರವನ್ನು ಅವರೇ ಮುಂದೆ ತಿಳಿಸುತ್ತಾರೆ.

ಸರ್ವಜೀವೇ ಸರ್ವಸಂಸ್ಥೇ ಬೃಹಂತೇ
ತಸ್ಮಿನ್ ಹಂಸೋ ಭ್ರಾಮ್ಯತೇ ಬ್ರಹ್ಮಚಕ್ರೇ ।

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಪೃಥಗಾತ್ಮಾನಂ ಪ್ರೇರಿತಾರಂ ಚ ಮತ್ವಾ
ಜುಷ್ಟಸ್ತತಸ್ತೇನಾಮೃತತ್ವಮೇತಿ ॥ ೬ ॥

ಸಮಸ್ತ ಚರಾಚರಜೀವಿಗಳು ಬ್ರಹ್ಮವನ್ನು ಪೂರ್ಣವಾಗಿ ಆಶ್ರಯಿಸಿಕೊಂಡೇ ಜೀವಿಸುತ್ತಿರುವರು. ಎಲ್ಲರೂ ಕೊನೆಗೆ ಬ್ರಹ್ಮದಲ್ಲಿಯೇ ತಮ್ಮ ಜೀವನವನ್ನು ಕೊನೆಗಾಣಿಸುವರು. "ಎಲ್ಲರೂ ಯಾವನಿಂದ ಹುಟ್ಟಿಬಂದಿರುವರೋ, ಯಾವನ ಬಯಲಿನಲ್ಲಿ ಬಾಳಿ ಬದುಕಿ ಕೊನೆಗೆ ಯಾವನಲ್ಲಿಯೇ ಸೇರುವರೋ ಅವನೇ ಬ್ರಹ್ಮ ವಸ್ತು" ಎಂದು ತೈತ್ತಿರೀಯೋಪನಿಷತ್ತು ಸ್ಪಷ್ಟವಾಗಿ ಬ್ರಹ್ಮದ ಲಕ್ಷಣವನ್ನು ತಿಳಿಸಿದೆ. ಇಂತಹ ಬ್ರಹ್ಮಚಕ್ರವು ಅನಂತಬ್ರಹ್ಮಾಂಡಗಳನ್ನೊಳಗೊಂಡು ಬೃಹದಾಕಾರವಾಗಿರುವುದರಿಂದಲೇ ಅದಕ್ಕೆ ಬ್ರಹ್ಮಪದವು ಯಥಾರ್ಥವಾಗಿ ಅನ್ವಯಿಸುತ್ತದೆ. ಇಂತಹ ಚಕ್ರದಲ್ಲಿ ಜೀವನು ಸೋಽಹಂಜ್ಞಾನಕ್ಕಾಗಿ ಹಂಸಪಕ್ಷಿಯಂತೆ ಸುತ್ತಾಡುತ್ತಿರುವನು. ಆದ್ದರಿಂದಲೇ ಜೀವನಿಗೆ ಹಂಸನೆಂದು ಕರೆಯಲಾಗಿದೆ. "ಹಂತಿ ಅಧ್ವಾನಂ ಗಚ್ಛತೀತಿ ಹಂಸಃ." ವಿಶ್ವವೇ ಷಡಧ್ವಮಯವಾಗಿದೆ. ವರ್ಣ, ಪದ, ಮಂತ್ರ, ಭುವನ, ತತ್ತ್ವ, ಕಲೆ ಇವೇ ಆ ಆರು ಅಧ್ವಗಳು. ಇವುಗಳ ಮೂಲಕವೇ ಜೀವನು ಹಾಯ್ದುಹೋಗಬೇಕಾಗಿದೆ. ಇವುಗಳೊಡನೆ ವ್ಯವಹರಿಸುತ್ತಿರುವುದೇ ಅವನಿಗೆ ಜೀವನಯಾತ್ರೆ ಎನಿಸಿದೆ. ಆದ್ದರಿಂದಲೇ ಅವನಿಗೆ ಆರು ಮಾರ್ಗಗಳ ಪರಿಚಯವೂ ಆವಶ್ಯಕವೆನಿಸಿದೆ. ಪರಶಿವಬ್ರಹ್ಮವೇ ಈ ಆರೂ ಆಗಿದ್ದರೂ ಅದು ಇವುಗಳಿಂದ ಆಚೆಗೂ ವ್ಯಾಪಿಸಿದೆ. ಆದ್ದರಿಂದ ಜೀವನು ಷಡಧ್ವಗಳಷ್ಟರಲ್ಲಿಯೇ ಅಲೆದಾಡದೆ ಅಲ್ಲಿಂದಾಚೆಗೆ ಷಡಧ್ವಾತೀತವೂ, ಪರಂಜ್ಯೋತಿಸ್ವರೂಪವೂ ಆದ ಪರಶಿವಬ್ರಹ್ಮವನ್ನು ಅನುಭವಿಸಬೇಕಾಗಿದೆ. ಆದರೆ ಅವನು ದೇಹಾಭಿಮಾನದಿಂದಲೂ, ವಿಷಯವ್ಯಾಮೋಹದಿಂದಲೂ ಷಡಧ್ವಗಳಲ್ಲಿಯೇ ಮೈಮರೆತು ಅವುಗಳಿಂದಾಚೆಗೆ ಹೋಗುವ ಮಾರ್ಗವನ್ನೇ ತಿಳಿಯದೆ, ಒದ್ದಾಡುತ್ತಿರುವನು. ಇದಕ್ಕೆ ಕಾರಣವೇನಿರಬಹುದು? ಎಂಬುದನ್ನು ಮುಂದೆ ತಿಳಿಸಲಾಗಿದೆ. ತನಗೆ ಪ್ರೇರಕನಾದ ಪರಮೇಶ್ವರನಿಂದ ತನ್ನನ್ನು ಬೇರೆ ಎಂದು ತಿಳಿದಿರುವುದೇ ಅವನ ಈ ಬಗೆಯ ಭ್ರಮಣಕ್ಕೆ ಕಾರಣವೆನಿಸಿದೆ. ತಾನು ಶಿವನ ಅಂಶನೆನಿಸಿದ್ದರಿಂದ ತನ್ನಮೇಲೆ ಶಿವನಿಗೆ ಆತ್ಮೀಯತೆಯುಂಟೆಂಬುದನ್ನೇ ಅವನು ಮರೆತಿರುವನು- ತನಗೆ ಶಿವನ ಸ್ಮರಣವೇ ಇಲ್ಲದ್ದರಿಂದ ತನ್ನನ್ನು ಶಿವನಿಂದ ಪ್ರತ್ಯೇಕವೆಂದು ಭಾವಿಸಿರುವುದೇ ಇಷ್ಟೆಲ್ಲಾ ಅನರ್ಥಗಳಿಗೂ ಮೂಲವೆನಿಸಿತು. ಇವನಿಗೆ ಈ ಭೇದಭಾವನೆಯನ್ನು ಹುಟ್ಟಿಸಿರುವುದೇ ಆಣವಮಲವೆನಿಸಿದೆ, ಇವನು ಪರಶಿವನ ಚೇತನಾಂಶನಾದರೂ ಇವನಿಗೆ ಅವನನ್ನು ಮರೆಯಿಸಿ ಇವನಲ್ಲಿ ಅಣುತ್ವಬುದ್ಧಿಯನ್ನು ಆಣವಮಲವು ಹುಟ್ಟಿಸಿದೆ. ಆದ್ದರಿಂದಲೇ ತನಗೆ ಪ್ರೇರಕನಾಗಿ ತನ್ನೊಡನೆ ತನ್ನ ಹೃದಯದಲ್ಲಿಯೇ ಸಾಕ್ಷಿಯಾಗಿ ಕುಳಿತಿರುವ ಪರಶಿವನ ಕಡೆಗೆ ಇವನ ಗಮನವು ಹರಿಯುತ್ತಿಲ್ಲ. ಹೀಗೆ ಬ್ರಹ್ಮಚಕ್ರದಲ್ಲಿ ಬ್ರಹ್ಮ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ವನ್ನು ಗಮನಿಸದೆಯೇ ಜೀವಹಂಸವು ಅಹಂಕಾರಾಭಿಮಾನಗಳಿಂದ ಮೆರೆಯುತ್ತಲಿದೆ. ಇಲ್ಲಿ ಜೀವನಿಗೆ ಪಾಶವೆಂದರೆ ಆಣವಮಲವಷ್ಟೇ ಅಲ್ಲ; ಆದರೆ ಮಾಯೀಯ ಕಾರ್ಮಿಕ ನೆಂಬ ಮಲಗಳೂ ಅಂಟಿಕೊಂಡಿವೆ. ಜೀವನು ಶಿವಾಂಶನಾದ್ದರಿಂದ ವಿಭುವಾಗಿದ್ದರೂ ಆಣವಮಲದ ಪ್ರಭಾವದಿಂದ ಅಣುವಾಗಿದ್ದಾನೆ. ಇದರ ದುಷ್ಪರಿಣಾಮವಾಗಿ ಅವನು ತನ್ನ ಇಚ್ಛಾಶಕ್ತಿಯ ವೈಶಾಲ್ಯವನ್ನು ಕಳೆದುಕೊಂಡು ಸ್ವಾರ್ಥತೆಯಿಂದ ವ್ಯವಹರಿಸುತ್ತಿರುವನು. ಹಾಗೆಯೇ ಮಾಯೀಯಮಲವು ಇವನ ಜ್ಞಾನಶಕ್ತಿಯ ವೈಶಾಲ್ಯವನ್ನು ಮರೆಯಿಸಿ ಹೆಂಡತಿ ಮಕ್ಕಳೇ ಮೊದಲಾದ ಕೆಲವರನ್ನು ಮಾತ್ರವೇ ತನ್ನವರೆಂದು ಭಾವಿಸುವಷ್ಟು ಸಂಕುಚಿತದೃಷ್ಟಿಯ ವ್ಯಾಮೋಹವನ್ನು ಇವನಲ್ಲಿ ಹುಟ್ಟಿಸಿದೆ. ಕಾರ್ಮಿಕಮಲವು ಕ್ರಿಯಾಶಕ್ತಿಯ ಅದ್ಭುತರಚನಾನೈಪುಣ್ಯವನ್ನು ತೊಲಗಿಸಿ ಅಹಂಕಾರದ ದುಷ್ಪ್ರವೃತ್ತಿಯನ್ನು ಹುಟ್ಟಿಸಿದೆ. ಇದರ ಪ್ರಭಾವದಿಂದಲೇ ಜೀವನು ಕರ್ಮಯೋಗಿಯಾಗದೆ ಕರ್ಮಿ ಎನಿಸಿರುವನು. ಹೀಗೆ ಸಹಜವಾಗಿ ಸ್ವಾರ್ಥಿಯೂ ವ್ಯಾಮೋಹಿಯೂ, ಕರ್ಮಿಯೂ ಆಗಿರುವ ಜೀವನು ಈ ಮೂರು ಬಗೆಯ ಪಾಶಗಳಿಂದ ಪಾರಾಗಲು ಉಪಾಯವೇನಾದರೂ ಇದೆಯೇ ಎಂಬುದನ್ನು ಮುಂದೆ ತಿಳಿಸಲಾಗುವುದು. ಇವನು ವಿಶ್ವದ ಹಿತವನ್ನು ಬಯಸುತ್ತಲೂ, ವಿವೇಚಿಸುತ್ತಲೂ, ನಿರ್ವಹಿಸುತ್ತಲೂ ನಿಶ್ಚಿಂತನೂ, ಆತ್ಮಾರಾಮನೂ ಆಗಿ ಬಾಳಲಿಕ್ಕೆ ಸಾಧ್ಯವಿದೆಯೆ? ಇವನು ಒಳಗೆ ವಿರಕ್ತನೂ, ಹೊರಗೆ ಆಸಕ್ತನೂ ಆಗಲಿಕ್ಕೆ ಅವಕಾಶವಿದೆಯೆ? ಇವನು ಅಂತರಂಗದಲ್ಲಿ ಪೂರ್ಣಕಾಮನೂ, ಅಕಾಮನೂ ಆಗಿದ್ದು ಬಹಿರಂಗದಲ್ಲಿ ನಿರಭಿಮಾನದಿಂದ ಕರ್ತವ್ಯಗಳೆಲ್ಲವನ್ನೂ ನಿರ್ವಹಿಸುವ ಚಾತುರ್ಯವನ್ನು ಪಡೆಯಬಹುದೆ? ಮಲಪಾಶದಿಂದ ಬಿಡುಗಡೆಯಾಗಿ ಸ್ವಾತಂತ್ರ್ಯವನ್ನೂ ಪರಿಪೂರ್ಣತೆಯನ್ನೂ ಪಡೆಯಲು ಇವನಿಗೆ ಸಾಧ್ಯವಿದೆಯೆ? ಎಂಬ ಅಂಶವನ್ನು ಪರ್ಯಾಲೋಚಿಸಿ ಇಲ್ಲಿ ಸಮಾಧಾನವನ್ನು ತಿಳಿಸಲಾಗಿದೆ. ಇವನು ತನ್ನ ವಾಸ್ತವವಾದ ಶಿವಭಾವವನ್ನು ನಿತ್ಯವ್ಯವಹಾರದಲ್ಲಿ ಜ್ಞಾಪಿಸಿಕೊಳ್ಳುತ್ತ ಬಂದರೆ ಅಂತಹ ಅಭೇದಜ್ಞಾನದಿಂದ ಇಲ್ಲಿಯೇ ಈ ದೇಹದಲ್ಲಿಯೇ ಅಮೃತನಾಗಬಲ್ಲನು. ಹೀಗೆ ಇವನು ಎಲ್ಲಾ ವ್ಯವಹಾರಗಳಲ್ಲೂ ಸ್ವತಂತ್ರನಾಗಿ ಪ್ರವರ್ತಿಸದೆ ತನ್ನ ಹೃದಯದೊಳಗೆ ತನಗಾಗಿ ಕಾಯ್ದು ಕುಳಿತಿರುವ ಶಿವನ ನಿತ್ಯಸ್ಮರಣದಿಂದ ಅವನೊಡನೆ ಬೆರೆತು ಅವನ ದಾಸನಾಗಿ ಅವನ ಪ್ರೇರಣೆಯಂತೆ ವ್ಯವಹರಿಸುವುದೊಂದೇ ಪಾಶವಿಮೋಚನೆಗೆ ಉಳಿದಿರುವ ಸೂಕ್ತವಾದ ಉಪಾಯ. ಎಲ್ಲವನ್ನೂ ತಾನೇ ಮಾಡುವೆನೆಂಬ ಅಹಂಕಾರಕ್ಕೂ ಇವನು ಸಿಕ್ಕಬಾರದು; ಹಾಗೆಯೇ ಎಲ್ಲವನ್ನೂ ಶಿವನೇ ನಿರ್ವಹಿಸುವನೆಂಬ ಅಜ್ಞಾನಕ್ಕೂ ಸಿಕ್ಕಬಾರದು. ನಾನೆಂಬುದು ಅಹಂಕಾರವಾದರೆ ನೀನೆಂಬುದು ಅಜ್ಞಾನ. ನಾನು ನೀನು ಎಂಬ ಎರಡು ವ್ಯವಹಾರಗಳಿಗೂ ಅಂಟದೆ ಜೀವನು ತಾನೇ ತಾನಾಗಿದ್ದು ನಿಶ್ಶಬ್ದದಲ್ಲಿ ನಿಂತರೆ ಎಲ್ಲ ವ್ಯವಹಾರಗಳನ್ನೂ ಕರ್ತವ್ಯನಿಷ್ಠೆಯಿಂದಲೂ, ನಿರಭಿಮಾನದೃಷ್ಟಿಯಿಂದಲೂ ನಿರ್ವಹಿಸುತ್ತ ಶಾಂತನಾಗಿರಬಲ್ಲನು. ಇದೇ ಅವನಿಗೆ ಆಗಬೇಕಾಗಿರುವ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಪಾಶವಿಮೋಚನೆ. ಇದೇ ಅವನು ಪಡೆಯಬೇಕಾಗಿರುವ ಪರಿಪೂರ್ಣತೆ; ಶಕ್ತಿವಿಕಾಸ; ಮತ್ತು ಆತ್ಮಸ್ವಾತಂತ್ರ್ಯ ; ನಿರ್ಮಲತೆ ; ಸಮಾಧಾನ. ಅಲ್ಲಿಗೆ ಇಲ್ಲಿಯೇ ಜೀವನಿಗೆ ಅವಿವೇಕದಶೆಯಲ್ಲಿ ಅಂದರೆ ತನಗೆ ಪ್ರೇರಕನಾಗಿ ತನ್ನಲ್ಲಿಯೇ ಇರುವ ಶಿವನನ್ನು ತಿಳಿಯದೆ ಇರುವಾಗ ಸಂಸಾರಾವಸ್ಥೆಯು ಸಹಜವಾಗಿತ್ತು. ಹೀಗೆ ಸ್ವಾಭಾವಿಕವಾದ ಪಾಶದಿಂದ ಬದ್ಧನಾಗಿ ಜೀವನು ತನ್ನೊಡನೆಯೇ ಇರುವ ಶಿವನನ್ನು ಮರೆತು ಅಹಂಕಾರದಿಂದ ಮೆರೆಯುತ್ತಿರುವುದರಿಂದ ಸಂಸಾರದಶೆಯಲ್ಲಿ ಇವನಿಗೂ ಶಿವನಿಗೂ ಸ್ವಾಭಾವಿಕವಾದ ಭೇದವಿರುವುದು. ಹೀಗೆ ಶಕ್ತಿಸಂಕೋಚವೇ ಜೀವಭಾವವೆನಿಸಿದೆ. ಇದರಿಂದ ಅವನಲ್ಲಿ ಭೇದಜ್ಞಾನವು ಸಹಜವಾಗಿ ನೆಲಸಿತ್ತು. ಆದರೂ ಇವನಿಗೆ ತನ್ನ ದುರ್ವರ್ತನೆಯ ಬಗ್ಗೆ ಅಶಾಂತತೆಯಿಂದ ಆಗಾಗ್ಗೆ ಸಂತಾಪವುಂಟಾಗಿ ಅದರಿಂದ ಇವನು ತನ್ನ ಅಶಕ್ತತೆಯನ್ನು ತಿಳಿದು ಶಕ್ತನೂ, ದಯಾಮಯನೂ ಆದ ಪರಮಾತ್ಮನ ಕಡೆಗೆ ಗಮನಿಸತೊಡಗುವನು. ಈ ಬಗೆಯ ಗಮನವನ್ನು ಹುಟ್ಟಿಸುವುದೂ ಪರಮಾತ್ಮನ ಕೆಲಸವೇ. ಅವನ ಈ ಕೆಲಸವೇ ಶಕ್ತಿಪಾತ ಅಥವಾ ಅನುಗ್ರಹವೆನಿಸಿದೆ. ಯಾವ ಜೀವನು ತನ್ನ ತಪ್ಪುಗಳಿಗೆ ಆಗಾಗ್ಗೆ ಪಶ್ಚಾತ್ತಾಪಪಡುವನೋ ಅವನೇ ಈ ಅನುಗ್ರಹಕ್ಕೆ ಪಾತ್ರನಾಗುವನು. ಹೀಗೆ ಪರಮಾತ್ಮನ ಕೃಪಾದೃಷ್ಟಿಗೆ ಬಿದ್ದವನು ತನ್ನ ಸ್ವಭಾವವನ್ನು ಬದಲಾಯಿಸಿಕೊಳ್ಳುವುದು ಸಹಜ. ಪರಮಾತ್ಮನು ಅಮೃತ ಸ್ವರೂಪನೂ ಆನಂದಮಯನೂ ಆದ್ದರಿಂದಲೇ ತನ್ನನ್ನು ತಿಳಿದು ಆಶ್ರಯಿಸಿದ ಸಾಧಕರಿಗೆ ಅಮೃತಸ್ಥಿತಿಯನ್ನು ದೊರಕಿಸಬಲ್ಲನು. ಪರಮಾತ್ಮನೇ ಜನರನ್ನು ಸಂಸಾರದಲ್ಲಿ ಪ್ರವರ್ತಿಸಲಿಕ್ಕೂ, ಇದರಿಂದ ಬಿಡಿಸಲಿಕ್ಕೂ, ರಕ್ಷಿಸಲಿಕ್ಕೂ, ತನ್ನ ಕಡೆಗೆ ತಿರುಗಿಸಿಕೊಳ್ಳಲಿಕ್ಕೂ ಕಾರಣನಾಗಿರುವುದರಿಂದ ಅವನಿಂದಲೇ ಜೀವಹಂಸನಿಗೆ ವ್ಯಾಮೋಹದೃಷ್ಟಿಯು ತೊಲಗಬೇಕಾಗಿದೆ. ಹೀಗೆ ಜೀವನಿಗೆ ಬದ್ಧಾವಸ್ಥೆಯಲ್ಲಿ ಸಂಸಾರವೂ, ಬುದ್ಧಾವಸ್ಥೆಯಲ್ಲಿ ಮೋಕ್ಷವೂ ಈ ದೇಹದಲ್ಲಿಯೇ ದೊರೆಯಲಿವೆ. ಇದನ್ನು ತಿಳಿದು ಜೀವನು ತನ್ನ ಪಾಶವಿಮೋಚನೆಗಾಗಿ ನಿತ್ಯವೂ ಕ್ರಿಯೆಯಲ್ಲಿ ತೊಡಗಬೇಕು. ತಿಳಿದು ಮಾಡುವ ಕ್ರಿಯೆಯು ಇವನನ್ನು ಬಂಧಿಸಲಾರದು; ಆದರೆ ತಿಳಿಯದೆ ಮಾಡುವ ಕ್ರಿಯೆಯಿಂದಲೇ ಇವನಿಗೆ ಬಂಧನದ ಬಾಧೆ ಹೆಚ್ಚಲಿರುವುದು.

ಈ ರೀತಿಯಲ್ಲಿ ಜೀವರು ಶಿವೈಕ್ಯಜ್ಞಾನವನ್ನು ಪಡೆದು ಲೋಕದಲ್ಲಿ ವ್ಯವಹರಿಸುತ್ತ ಬಂದರೆ ಅವರಿಗೆ ಭಯ ಶೋಕ ಮೋಹಗಳು ಅಂಟುವುದಿಲ್ಲವೆಂದೂ, ಹೀಗೆ ಪ್ರವರ್ತಿಸುವವರು ಅನೇಕರು ಪಾಶದಿಂದ ಬಿಡುಗಡೆಯಾದರೆಂದೂ ಇಲ್ಲಿ ತಿಳಿಸಿದೆ.

ಉದ್ಗೀತಮೇತತ್ಪರಮಂ ತು ಬ್ರಹ್ಮ
ತಸ್ಮಿಂಸ್ತ್ರಯಂ ಸುಪ್ರತಿಷ್ಠಾಕ್ಷರಂ ಚ ।
ಅತ್ರಾಂತರಂ ಬ್ರಹ್ಮವಿದೋ ವಿದಿತ್ವಾ
ಲೀನಾಬ್ರಹ್ಮಣಿ ತತ್ಪರಾ ಯೋನಿಮುಕ್ತಾಃ ॥ ೭ ॥

ಪರಶಿವಬ್ರಹ್ಮವು ಲೋಕದಲ್ಲಿ ಎಲ್ಲ ವಸ್ತುಗಳಲ್ಲಿಯೂ ಸದ್ರೂಪದಿಂದಲೂ,

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಎಲ್ಲ ಪ್ರಾಣಿಗಳಲ್ಲೂ ಸಚ್ಚಿದ್ರೂಪದಿಂದಲೂ ನೆಲಸಿರುವುದೆಂದು ಅನುಭವಿಗಳು ಹೇಳುತ್ತಾರೆ. ಇಂತಹ ಪರಶಿವಬ್ರಹ್ಮವು ಲೋಕದಲ್ಲಿ ಭೋಕ್ತೃ, ಭೋಗ್ಯ, ಪ್ರೇರಕ ಎಂದು ಮೂರು ಬಗೆಯಾಗಿ ನೆಲಸಿದೆ. ಶಿವನೇ ಫಲವನ್ನು ಭೋಗಿಸುವ ಜೀವನೂ, ಶಬ್ದಾದಿ ಭೋಜ್ಯವಸ್ತುವೂ, ಈ ವಿಷಯಗಳ ಕಡೆಗೆ ಜೀವರನ್ನು ಅವರವರ ಇಚ್ಛೆಯಂತೆ ಪ್ರೇರಿಸುವ ಈಶ್ವರನೂ ಆಗಿರುವನು. ಆದ್ದರಿಂದಲೇ ಅವನು ವಿಶ್ವವೆಲ್ಲಕ್ಕೂ ಆಧಾರನೆನಿಸಿದ್ದು ಅಕ್ಷರ ಅಂದರೆ ನಾಶಾದಿವಿಕಾರರಹಿತನಾಗಿದ್ದಾನೆ. ಇವನೇ ಜಗದ್ವ್ಯಾಪಕನಾಗಿದ್ದರೂ ಅಕ್ಷರನೆನಿಸಿದ್ದಾನೆ ಎಂದು ಶ್ರುತಿಯು ತಿಳಿಸಿದೆ. " ಈ ಜಗತ್ತೆಲ್ಲವೂ ಅವನ ಆಶ್ರಯದಿಂದ ಅವನಲ್ಲಿಯೇ ನೆಲೆಗೊಂಡಿದೆ " ಎಂದು ಚರಾಚರಪ್ರಪಂಚಕ್ಕೆ ಅವನ ಆಶ್ರಯವನ್ನು ಅದೇ ಶ್ರುತಿಯೇ ತಿಳಿಸುತ್ತದೆ. ಹೀಗೆ ಸರ್ವರಿಗೂ ಆಶ್ರಯವೆನಿಸಿದ್ದರೂ ನಿರ್ವಿಕಾರನಾಗಿರುವ ಪರಮಾತ್ಮನಿಗೂ ತಮಗೂ ಸಹಜವಾಗಿರುವ ಭೇದವನ್ನು ತಿಳಿದು ಆ ಮೂಲಕ ಅನೇಕರು ಜನ್ಮಜರಾಮರಣರೂಪವಾದ ಸಂಸಾರದಿಂದ ಬಿಡುಗಡೆಯನ್ನು ಹೊಂದಿ ಪರಶಿವನಲ್ಲಿಯೇ ಲೀನರಾದರು. ಪುನರ್ಜನ್ಮನಿವೃತ್ತಿಯೇ ಮುಕ್ತಿ ಎಂದು ಎಲ್ಲರೂ ಒಪ್ಪಿರುವರು. ಮತ್ತೆ ಹುಟ್ಟದಂತಾಗಬೇಕಾದರೆ ಮಾನವರಿಗೆ ತಮ್ಮ ಹೃದಯದಲ್ಲಿ ನೆಲಸಿರುವ ಶಿವನ ಅನುಭವ ಒಂದೇ ಸೂಕ್ತವಾದ ಉಪಾಯವೆನಿಸಿದೆ. ಅವನನ್ನು ತಿಳಿದು ಅವನ ಮೆಚ್ಚುಗೆಗಾಗಿ ಅವನ ಸೇವೆ ಎಂದು ಲೋಕವ್ಯವಹಾರಗಳನ್ನು ನಡೆಸುವುದೊಂದೇ ಮುಕ್ತಿಯ ಮಾರ್ಗ. ಯಾರನ್ನು ಕಂಡರೂ ಅವರಲ್ಲಿರುವ ಶಿವನನ್ನೇ ಗಮನಿಸಿ ಆ ಶಿವನ ಸಲುವಾಗಿಯೇ ಅವನ ಲೋಪದೋಷಗಳನ್ನು ಎಣಿಸದೆ ಅವನನ್ನು ಪ್ರೀತಿಸಿ ಗೌರವಿಸುವುದೇ ಮಾನವನಿಗೆ ಮತ್ತೆ ಹುಟ್ಟದಂತಹ ಸ್ಥಿತಿಯನ್ನು ಪಡೆಯುವ ಉಪಾಯವೆನಿಸಿದೆ. ಹೀಗೆ ಜೀವನಿಗೆ ಸಂಸಾರದಲ್ಲಿ ಅಲೆದಾಟವನ್ನು ತಪ್ಪಿಸಿ ಅವನು ಮತ್ತೆ ಇಲ್ಲಿಗೆ ಬರದಂತಹ ಉಪಾಯವನ್ನು ಇಲ್ಲಿ ತಿಳಿಸಲಾಗಿದೆ. ಈ ಉಪಾಯವೇ ಶಿವನ ಅನುಭವ ಮತ್ತು ಇದರ ಬೆಳಕಿನಲ್ಲಿ ನಿರ್ಲಿಪ್ತತೆಯಿಂದ ನಡೆಸುವ ಕ್ರಿಯೆ. ಇವೆರಡು ಮಾರ್ಗಗಳಿಂದಲೇ ಅನೇಕರು ಮುಕ್ತರಾಗಿರುವರು. ಆದ್ದರಿಂದಲೇ ಇಲ್ಲಿ ಜ್ಞಾನಕ್ರಿಯಾಸಮನ್ವಯ ಮಾರ್ಗವನ್ನು ಮುಕ್ತಿಸಾಧನವೆಂದು ತಿಳಿಸಲಾಗಿದೆ.

ಒಬ್ಬ ಶಿವನೇ ಲೋಕದಲ್ಲಿ ಜೀವನೂ, ಭೋಕ್ತೃವೂ ಪ್ರೇರಕೇಶ್ವರನೂ ಆಗಿರುವಾಗ ಈ ಜೀವೇಶ್ವರರಲ್ಲಿ ಒಬ್ಬನು ಉಪಾಸಕನೂ, ಮತ್ತೊಬ್ಬನು ಉಪಾಸ್ಯನೂ ಆಗಿರುವುದಾಗಿ ಭೇದವು ಏತಕ್ಕಾಗಿ ಬಂದಿತು ? ಈ ಭೇದವು ತೊಲಗುವುದೆಂತು ? ಎಂದು ಪ್ರಶ್ನಿಸಿ ಇದಕ್ಕೆ ಉತ್ತರವನ್ನು ಮಹರ್ಷಿಯೇ ತಿಳಿಸುತ್ತಾನೆ.

ಸಂಯುಕ್ತಮೇತತ್ ಕ್ಷರಮಕ್ಷರಂ ಚ
ವ್ಯಕ್ತಾವ್ಯಕ್ತಂ ಭರತೇ ವಿಶ್ವಮೀಶಃ |
ಅನೀಶಶ್ಚಾತ್ಮಾ ಬಧ್ಯತೇ ಭೋಕ್ತೃಭಾವಾತ್
ಜ್ಞಾತ್ವಾ ದೇವಂ ಮುಚ್ಯತೇ ಸರ್ವಪಾಶೈಃ ‖೮‖

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

SRI JAGADGURU VISHWARADHYA
SIMHASAN JNANAMANDIR
LIBRARY
Jangamwadi Math, Varanasi
Acc. No. 6527

ಒಬ್ಬ ಪರಮೇಶ್ವರನೇ ವ್ಯಕ್ತವೂ, ಅವ್ಯಕ್ತವೂ ಆಗಿರುವ ಈ ವಿಶ್ವವೆಲ್ಲವನ್ನೂ ಹಿಡಿದು ರಕ್ಷಿಸುತ್ತಿರುವನು. ಶಕ್ತಿವಿಶಿಷ್ಟನಾದ ಅವನು ಜಗದ್ರೂಪವಾಗಿ ಪರಿಣಮಿಸುವಾಗ ಬುದ್ಧಿತತ್ತ್ವದಿಂದ ಪೃಥಿವಿಯವರೆವಿಗೂ ಆಗುವ ಪರಿಣಾಮವು ವ್ಯಕ್ತವೆನಿಸುತ್ತದೆ. ಇವೆಲ್ಲಕ್ಕೂ ಮೂಲಕಾರಣವೆನಿಸಿದ ಜಡವಾದ ಪ್ರಕೃತಿಶಕ್ತಿಯು ಅವ್ಯಕ್ತವೆನಿಸುತ್ತದೆ. ಇವೆರಡನ್ನೂ ಕ್ರಮವಾಗಿ ಕ್ಷರವೆಂದೂ, ಅಕ್ಷರವೆಂದೂ ಅನುಭವಿಗಳು ಕರೆಯುತ್ತಾರೆ. ಅಥವಾ 'ಕ್ಷರಾತ್ಮಾನೌ' ಎಂದು ಮುಂದೆ ಹೇಳುವ ಪ್ರಕೃತಿ ಪುರುಷರನ್ನು ಕ್ಷರ ಅಕ್ಷರಶಬ್ದಗಳಿಂದಲೂ, ವ್ಯಕ್ತ ಅವ್ಯಕ್ತಶಬ್ದಗಳಿಂದಲೂ ಭಾವಿಸಬಹುದು. ಕ್ಷರವೆಂದರೆ ಪ್ರಕೃತಿ ಮತ್ತು ವ್ಯಕ್ತತತ್ತ್ವ. ಅಕ್ಷರವೆಂದರೆ ಪುರುಷ ಮತ್ತು ಅವ್ಯಕ್ತತತ್ತ್ವ. ಪ್ರಕೃತಿಪುರುಷರು ಯಾವಾಗಲೂ ಕೂಡಿರುವಂತೆ ವ್ಯಕ್ತಾವ್ಯಕ್ತ ತತ್ತ್ವಗಳೂ ಕೂಡಿಯೇ ಇವೆ. ಈ ವಿಶ್ವವು ಇವೆರಡರಿಂದಲೂ ತುಂಬಿಕೊಂಡಿದೆ. ಇಂತಹ ಅಖಂಡವಿಶ್ವವನ್ನು ಈಶ್ವರನು ಹಿಡಿದು ನಿಲ್ಲಿಸಿಕೊಂಡಿರುವನು. ಲೋಕದಲ್ಲಿರುವ ಸರ್ವಭೂತಗಳೂ ಕ್ಷರವೆನಿಸಿದೆ. ಇವುಗಳ ಮಧ್ಯದಲ್ಲಿ ಸಾಕ್ಷಿಯಾಗಿ ನೆಲಸಿರುವ ಜೀವನೇ ಅಕ್ಷರನೆನಿಸಿರುವನು. ಇಂತಹ ಜೀವರೆಲ್ಲರಿಗೂ ಪೋಷಕನಾಗಿರುವ ಈಶ್ವರನು ಉತ್ತಮಪುರುಷ, ಪರಮಾತ್ಮ ಎನಿಸಿರುವನು. "ಯಾವ ಈತನೇ ಮೂರುಲೋಕವನ್ನೂ ಆವರಿಸಿ ರಕ್ಷಿಸುತ್ತಲಿದ್ದರೂ ನಿರ್ವಿಕಾರನಾಗಿರುವುದರಿಂದ ಈಶ್ವರನೆನಿಸಿದ್ದಾನೆ" ಎಂದು ಕೃಷ್ಣಗೀತೆಯಲ್ಲಿ ಹೇಳಿದೆ. ಹೀಗೆ ಜೀವೇಶ್ವರರಿಬ್ಬರೂ ಚೇತನರೇ ಆಗಿದ್ದರೂ ಈಶ್ವರನು ದೇವರೆಲ್ಲರಿಗೂ ನಿಯಾಮಕನಾದ್ದರಿಂದ ಅವನಿಗೆ ಬಂಧವುಂಟಾಗುವುದಿಲ್ಲ. ಕಳ್ಳ ಮತ್ತು ರಾಜಭಟ ಇಬ್ಬರೂ ಸೆರೆಮನೆಯಲ್ಲಿದ್ದರೂ ಇಬ್ಬರಿಗೂ ಬಂಧನವು ಸಂಭವಿಸುವುದಿಲ್ಲ ; ಆದರೆ ಚೋರನಿಗೆ ಮಾತ್ರವೇ ಅದು ಸಂಭವಿಸುವುದು. ಹಾಗೆ ಜೀವೇಶ್ವರರಿಬ್ಬರೂ ಈ ದೇಹದಲ್ಲಿದ್ದರೂ ಜೀವನು ಸುಖದುಃಖಗಳನ್ನು ಭೋಗಿಸುತ್ತಿರುವುದರಿಂದ ಹಿಗ್ಗುತ್ತ ತಗ್ಗುತ್ತ ಬದ್ಧನಾಗುವನು, ಆದರೆ ಈಶ್ವರನಿಗೆ ಸುಖದುಃಖಗಳ ಸೋಂಕೇ ಇಲ್ಲದ್ದರಿಂದ ಅವನು ಬದ್ಧನಾಗಲಾರನು. ಜೀವಾತ್ಮನು ಅಕ್ಷರನೆನಿಸಿದರೂ ಸಹ ತಾನು ಹಿಂದೆ ಮಾಡಿದ ಕರ್ಮಗಳ ಫಲವನ್ನು ಅನುಭವಿಸುತ್ತಿರುವುದರಿಂದ ಪರಾಧೀನನೂ, ಅಶಕ್ತನೂ ಆಗಿರುವನು. ಆದ್ದರಿಂದಲೇ ಅವನು ಸಂಸಾರದಲ್ಲಿ ಈಶ್ವರನನ್ನು ಮರೆತು ತಾನೇ ಅಹಂಕಾರದಿಂದ ಪ್ರವರ್ತಿಸಿ ಮಾಡಿದ್ದೇ ಕರ್ಮವೆನಿಸಿ ಅವನನ್ನು ಬಂಧಿಸುತ್ತಿರುವಾಗ ಅವನಿಗೆ ಇದರಿಂದ ಬಿಡುಗಡೆ ಹೇಗೆ ಸಂಭವಿಸೀತು ? ಎಂಬುದನ್ನು ಮುಂದೆ ತಿಳಿಸಲಾಗುವುದು. ಪರಮಾತ್ಮನನ್ನು ತಿಳಿದರೆ ಜೀವನಿಗೆ ಕರ್ಮಪಾಶವು ತೊಲಗುವುದು. ಈ ಪರಮಾತ್ಮನು ದೇಹದಲ್ಲಿ ಜೀವನೊಡನೆ ಹೇಗೆ ನೆಲಸಿರುವನು ? ಶಿರಸ್ಸಿನ ಸಹಸ್ರಾರಕಮಲದಲ್ಲಿ ಭಾವರೂಪದಿಂದ ಅಂದರೆ ಸನ್ಮಯನಾಗಿಯೂ, ಹೃದಯದ ಎಂಟುದಳದ ಕಮಲದಲ್ಲಿ ಪ್ರಾಣರೂಪದಿಂದ ಅಂದರೆ ಚಿನ್ಮಯನಾಗಿಯೂ, ಭ್ರೂಮಧ್ಯದಲ್ಲಿ ಆನಂದಮಯನಾಗಿ ಅಂದರೆ ತನಗೆ ಪ್ರಿಯನಾದ ಇಷ್ಟರೂಪದಿಂದಲೂ ಭಕ್ತಾನುಗ್ರಹಲೀಲೆಗಾಗಿ ಪ್ರಕಾಶಿಸುತ್ತಿ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ರುವನು: ಹೀಗೆ ಚಿತ್ಪ್ರಕಾಶಸ್ವರೂಪನಾದ ಪರಮೇಶ್ವರನನ್ನು ತಿಳಿದವನು ಎಲ್ಲಾ ಪಾಶಗಳಿಂದಲೂ ಬಿಡುಗಡೆಯಾಗುವನು. ಲೋಕದಲ್ಲಿ ಪಾಶದಿಂದಲೇ ತಪ್ಪಿತಸ್ಥರನ್ನು ಬಂಧಿಸುವ ಪದ್ಧತಿ ಇರುವುದರಿಂದ ಇಲ್ಲಿ ಜೀವನಿಗೆ ಆಗಿರುವ ಬಂಧನವನ್ನು ಪಾಶವೆಂದು ಕರೆಯಲಾಗಿದೆ. ಅವನಲ್ಲಿರುವ ಮೂರುಬಗೆಯಾದ ಆಣವ, ಮಾಯೀಯ, ಕಾರ್ಮಿಕವೆಂಬ ಮೂಲಗಳು ದೇವಾನುಗ್ರಹದಿಂದಲೇ ತೊಲಗುವುವು. ಜೀವನು ಶಿವಾಂಶನಾದರೂ ಮಾಯಾಶಕ್ತಿಯ ಆವರಣದಿಂದ ಅವನ ವಿಶಾಲವೂ ವ್ಯಾಪಕವೂ ಆದ ಇಚ್ಛಾಜ್ಞಾನಕ್ರಿಯಾಶಕ್ತಿಗಳು ಸಂಕುಚಿತವಾಗಿ ಆಣವ, ಮಾಯೀಯ, ಕಾರ್ಮಿಕ ಮಲಗಳಾಗಿ ಪರಿಣಮಿಸಿವೆ. ಹೀಗೆ ಶಕ್ತಿಸಂಕೋಚವೇ ಮಲಪಾಶವೆನಿಸಿದೆ. ಆಣವಮಲವು ಇಚ್ಛಾಶಕ್ತಿಯ ಸಂಕೋಚವೆನಿಸಿ ಜೀವನಲ್ಲಿ ಅಣುತ್ವಬುದ್ಧಿಯ ಮೂಲಕ ಅವನಿಗೆ ಇತರರಿಂದಲೂ, ಪರಮಾತ್ಮನಿಂದಲೂ ಭೇದಭಾವನೆಯನ್ನು ಹುಟ್ಟಿಸಿದೆ. ಆದ್ದರಿಂದಲೇ ಸರ್ವರ ಹಿತವನ್ನು ಬಯಸುವ ಇಚ್ಛಾಶಕ್ತಿಯ ಸ್ಥಾನದಲ್ಲಿ ಸ್ವಾರ್ಥಬುದ್ಧಿಯು ಜೀವನಲ್ಲಿ ಹುಟ್ಟಿದೆ. ಮಾಯೀಯವೆಂಬ ಮೂಲವು ಜ್ಞಾನಶಕ್ತಿಯ ಸಂಕೋಚವೆನಿಸಿ ಜೀವನ ವಿಶಾಲವಾದ ಆತ್ಮೀಯತೆಯನ್ನೂ, ಆತ್ಮಾಪಮ್ಯದೃಷ್ಟಿಯನ್ನೂ, ಸಾರ್ವಜನಿಕವಿವೇಚನೆಯನ್ನೂ ತೊರೆಯಿಸಿ ಅವನಿಗೆ ತನ್ನ ಹಿತವನ್ನು ಸಾಧಿಸಿಕೊಡುವ ಹೆಂಡತಿ ಮಕ್ಕಳನ್ನು ಮಾತ್ರವೇ ತನ್ನವರೆಂದು ಮೋಹಿಸುವ ಅನುರಾಗವೆಂಬ ಸಂಕುಚಿತದೃಷ್ಟಿಯನ್ನು ಹುಟ್ಟಿಸಿದೆ. ಆದ್ದರಿಂದ ವಿಶ್ವದ ಹಿತದಲ್ಲಿ ಆಸಕ್ತವಾದ ಜ್ಞಾನಶಕ್ತಿಯ ಸ್ಥಾನದಲ್ಲಿ ತನ್ನ ರಕ್ತಸಂಬಂಧಿಗಳಾದ ಕೆಲವರಲ್ಲಿ ಮಾತ್ರವೇ ಅಂಟಿಸುವಂತಹ ವ್ಯಾಮೋಹಬುದ್ಧಿಯು ಅವನಲ್ಲಿ ಹುಟ್ಟಿಸಿದೆ. ಕಾರ್ಮಿಕವೆಂಬ ಮಲವು ವಿಶ್ವದ ಹಿತವನ್ನು ಸಾಧಿಸಲು ಸಮರ್ಥವಾದ ಕ್ರಿಯಾಶಕ್ತಿಯ ಸಂಕೋಚವೆನಿಸಿ ವಿಶ್ವವೆಲ್ಲಕ್ಕೂ ತಾನೇ ಕರ್ತನೆಂಬ ಅಹಂಕಾರವನ್ನು ಅವನಲ್ಲಿ ಹುಟ್ಟಿಸಿದೆ. ಆದ್ದರಿಂದಲೇ ವಿಶಾಲವಾದ ಕ್ರಿಯಾಶಕ್ತಿಯ ಸ್ಥಾನದಲ್ಲಿ ತನ್ನ ಹಿತವನ್ನು ಮಾತ್ರವೇ ಸಾಧಿಸಬೇಕೆಂಬ ಅಭಿಮಾನವು ಅವನಲ್ಲಿ ಹುಟ್ಟಿದೆ. ಈ ಮಲಗಳಿಂದುಂಟಾಗುವ ದುಷ್ಪರಿಣಾಮವು ಅಸಹ್ಯವೇ ಆಗಿದೆ. ಆಣವಮಲವು ಜೀವನ ಸದ್ರೂಪವಾದ ಸತ್ಯಪ್ರಕೃತಿಯನ್ನು ತೊಲಗಿಸಿರುತ್ತದೆ. ಮಾಯೀಯಮಲವು ಚಿದ್ರೂಪವಾದ ಜ್ಞಾನಪ್ರಕೃತಿಯನ್ನು ತೊಲಗಿಸಿರುತ್ತದೆ. ಕಾರ್ಮಿಕಮಲವು ಆನಂದರೂಪವಾದ ಕ್ರಿಯಾಪ್ರಕೃತಿಯನ್ನು ತೊಲಗಿಸಿರುತ್ತದೆ. ಈ ಬಗೆಯ ಮಲಗಳ ಆವರಣವೇ ಜೀವನಿಗೆ ಬಂಧವೆನಿಸಿದೆ. ಇದು ತೊಲಗಬೇಕಾದರೆ ಜೀವನು ಅವ್ಯಕ್ತವೂ, ಕಾರಣಶರೀರವೂ ಎನಿಸಿದ ಶಿರಸ್ಸಿನ ಸಹಸ್ರಾರಚಕ್ರದಲ್ಲಿ ಪ್ರಕಾಶಿಸುತ್ತಿರುವ ಭಾವಲಿಂಗದೊಡನೆ ಬೆರೆಯಬೇಕು. ಹಾಗೆ ಬೆರೆಯಲು ಸಾಕಷ್ಟು ಯೋಗ್ಯತೆಯುಳ್ಳವನಾದ್ದರಿಂದಲೇ ಜೀವನು ಯೋಗಾಂಗನೆನಿಸಿರುವನು. ಯೋಗವೆಂದರೆ ಜೀವೇಶ್ವರರ ಸಾಮರಸ್ಯ. ಇದಾದರೂ ಜೀವನು ನಿರ್ಮಲನಾಗಿ ಈಶ್ವರನನ್ನು ನಿರಂತರವೂ ಅರ್ಚಿಸುವುದರಿಂದಲೇ ಲಭಿಸುತ್ತದೆ. ವ್ಯಕ್ತವೂ ಅವ್ಯಕ್ತವೂ ಆದ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಹೃದಯದಲ್ಲಿ ಪ್ರಾಣರೂಪದಿಂದ ಚಿನ್ಮಯನಾಗಿ ಶೋಭಿಸುತ್ತಿರುವ ಈಶ್ವರನೊಡನೆ ಭೋಗವನ್ನು ಅನುಭವಿಸಲು ಶಕ್ತನಾದ್ದರಿಂದಲೇ ಜೀವನು ಭೋಗಾಂಗನೆನಿಸುವನು. ಜೀವನು ತನ್ನ ಭೋಗವನ್ನು ಪ್ರಾಣಪತಿಗೆ ಅರ್ಪಿಸಿ ಅದನ್ನು ಪ್ರಸಾದರೂಪವಾಗಿ ಭೋಗಿಸುವುದೇ ಜೀವೇಶ್ವರರಯೋಗಕ್ಕೆ ಮುಖ್ಯಕಾರಣವೆನಿಸಿದೆ. ಈ ಬಗೆಯ ಭೋಗವು ಜೀವನಿಗೆ ದೊರೆಯಬೇಕಾದರೆ ವ್ಯಕ್ತವೆನಿಸಿದ ಸ್ಥೂಲಶರೀರದ ಭ್ರೂಮಧ್ಯ ದಲ್ಲಿ ಆನಂದಮಯನಾಗಿ ಪ್ರಕಾಶಿಸುತ್ತಿರುವ ಇಷ್ಟಲಿಂಗದ ಉಪಾಸನೆಗಾಗಿ ಅವನು ತನ್ನ ದೇಹೇಂದ್ರಿಯಗಳನ್ನು ನಿರಭಿಮಾನದಿಂದ ಅರ್ಪಿಸಬೇಕು. ಹೀಗೆ ಅರ್ಪಿಸಿದ ರೆಯೇ ಅವನು ತ್ಯಾಗಾಂಗನೆನಿಸುವನು. ಸ್ವಾರ್ಥತೆಯ ತ್ಯಾಗದಿಂದಲೇ ಜೀವನಿಗೆ ಪ್ರಸಾದಭೋಗವು ಲಭಿಸುವುದು. ಪ್ರಸಾದಭೋಗದಿಂದಲೇ ಅವನಿಗೆ ಯೋಗಾನಂದದ ಅನುಭವವಾಗುವುದು. ದೇಹದ ಮೇಲಿನ ಅಭಿಮಾನವನ್ನು ತೊರೆದಲ್ಲದೆ ಜೀವಾತ್ಮನ ಉಪಾಸನವು ಸಿದ್ಧಿಸುವಂತಿಲ್ಲ, ಈ ಉಪಾಸನದ ಮೂಲಕವೇ ಜೀವನು ಶಿವನ ವಿನೋದಕ್ಕೆ ಅವಕಾಶವನ್ನು ಕಲ್ಪಿಸುವುದರಿಂದ ಜೀವನು ಶಿವನ (ಅಂಗ)ಲೀಲಾವಿನೋದ ಭೂಮಿ ಎನಿಸಿರುವನು. ಶಿರಸ್ಸಿನಲ್ಲೂ ಹೃದಯದಲ್ಲೂ ಭ್ರೂಮಧ್ಯದಲ್ಲೂ ಪ್ರಕಾಶಿಸುವ ಚಿತ್ಪ್ರಕಾಶವು ಇಷ್ಟಲಿಂಗವೆನಿಸಿ ತ್ಯಾಗಾಂಗನಿಂದ ಅರ್ಚಿಸಿಕೊಳ್ಳುತ್ತಲೂ, ಪ್ರಾಣ ಲಿಂಗವೆನಿಸಿ ಭೋಗಾಂಗನಿಗೆ ಪ್ರಸಾದವನ್ನು ಕರುಣಿಸುತ್ತಲೂ, ಭಾವಲಿಂಗನೆನಿಸಿ ಯೋಗಾಂಗನನ್ನು ತನ್ನೊಡನೆ ಶಿರಸ್ಸಿನಲ್ಲಿ ಸಮರಸವಾಗಿ ಸೇರಿಸಿಕೊಳ್ಳುತ್ತಲೂ ತನ್ನ ಲೀಲೆಯನ್ನು ಮಾನವದೇಹದಲ್ಲಿ ನಡೆಸುತ್ತಿರುವುದು. ಈ ದೇಹದಲ್ಲಿ ಈಶ್ವರನು ಮಹಾಪ್ರಕಾಶನೂ ನಿರ್ವಿಕಾರನೂ ಸರ್ವಜ್ಞನೂ ಆಗಿದ್ದು ಲಿಂಗವೆನಿಸಿರುವನು. ಅರಿ ವಿಲ್ಲದೆಯೇ ಅವನ ಜೊತೆಯಲ್ಲಿ ನೆಲಸಿರುವ ಜೀವನು ಅಲ್ಪಪ್ರಕಾಶನೂ ವಿಕಾರಿಯೂ ಅಜ್ಞನೂ ಆಗಿದ್ದು ಅಂಗನೆನಿಸಿರುವನು. ಅಂಗನು ಲಿಂಗಕ್ಕೆ ಸಂಬಂಧಿಸಿದ್ದರೂ ಅವನ ಶಕ್ತಿಯನ್ನು ಮಾಯೆಯು ಅಪಹರಿಸಿರುವುದರಿಂದ ಅಶಕ್ತನಾಗಿರುವನು. ಗುರುವಿನ ಕಟಾಕ್ಷದಿಂದಲೂ, ಅವನು ಉಪದೇಶಿಸಿದ ಮಂತ್ರವನ್ನು ನಿರಂತರವೂ ಪಠಿಸುವುದರಿಂದಲೂ, ಅವನು ಅನುಗ್ರಹಿಸಿದ ಕ್ರಿಯಾಲಿಂಗವನ್ನು ತನ್ನ ಇಷ್ಟದೇವ ನೆಂದು ಭಾವಿಸಿ ನಿತ್ಯವೂ ಅರ್ಚನೆ ಮಾಡುವುದರಿಂದಲೂ ಜೀವನ ಅಶಕ್ತತೆಯು ಪರಿಹರವಾಗುವುದು. ಇದನ್ನೇ ಬಂಧವಿಮೋಚನೆ ಎಂದು ಹಿರಿಯರು ಹೇಳುತ್ತಾರೆ. ಇಲ್ಲಿ ಕ್ರಿಯಾಲಿಂಗದ ಅರ್ಚನನೆಂದರೆ ಹೃದಯದಲ್ಲಿ ಅಂಗುಷ್ಠಪ್ರಮಾಣದಲ್ಲಿ ನೆಲಸಿ ರುವ ಚಿತ್ಪ್ರಕಾಶವನ್ನು ಗುರುಕೃಪೆಯಿಂದ ಹೊರಗೆ ಪಡೆದು ಅದೇ ಪ್ರಮಾಣದ ಲಿಂಗದಲ್ಲಿ ಸಮಾವೇಶಗೊಳಿಸಿಕೊಂಡು ಪ್ರಾಣಭಾವನೆಯಿಂದ ಅರ್ಚಿಸುವುದೆಂದರ್ಥ. ಇಂತಹ ಅರ್ಚನೆಯಿಂದ ಜೀವನಿಗೆ ಕಾರ್ಮಿಕಪಾಶವು ತೊಲಗಿ ಅಹಂಕಾರ ಮಮ ಕಾರಗಳೂ, ಕಾಮಕ್ರೋಧಗಳೂ ಅಡಗುವುವು. ಹೀಗೆ ಗುರು ಉಪದೇಶಿಸಿದ ಪ್ರಣವ ಪಂಚಾಕ್ಷರಮಹಾಮಂತ್ರವನ್ನು ಜಪಿಸುತ್ತ ಜೀವನು ಪ್ರಸನ್ನಹೃದಯನಾಗಿ ವಿಶ್ವ ವನ್ನು ಆತ್ಮೀಯತೆಯಿಂದ ಪ್ರೀತಿಸುತ್ತಾನೆ. ಈ ರೀತಿಯಲ್ಲಿ ಮಂತ್ರಜಪದಿಂದ ಜೀವ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ನಿಗೆ ಮಾಯೇಯಪಾಶವು ತೊಲಗಿ ಅಭಿಮಾನ ವ್ಯಾಮೋಹಗಳು ಅಡಗುವುವು. ಇಷ್ಟಲಿಂಗದ ಅರ್ಚನೆಯಿಂದ ಅಹಂಕಾರಸ್ಥಿತಿಯೂ, ಮಂತ್ರದ ನಿರಂತರಜಪದಿಂದ ಶಿವದೃಷ್ಟಿಯೂ ಜೀವನಿಗೆ ಲಭಿಸಿದ ಮೇಲೆ ಅವನು ಎಲ್ಲರಲ್ಲೂ ಸದ್ರೂಪನಾದ ಶಿವನನ್ನೇ ಕಾಣುತ್ತ ರಾಗದ್ವೇಷಗಳಿಂದ ದೂರನಾಗಿ ಅಮೃತಸ್ಥಾನವೆನಿಸಿದ ಶಿರಸ್ಸನ್ನು ಅಮೃತನಾಡಿಯ ಮೂಲಕ ಪ್ರವೇಶಿಸಿ ಅಲ್ಲಿ ಅಮೃತಸ್ವರೂಪನೂ, ಮಹಾಪ್ರಕಾಶನೂ ಆದ ಆನಂದಮಯಪರಶಿವನಲ್ಲಿ ಸಮರಸವಾಗಿ ಬೆರೆಯುವನು. ಇದರಿಂದ ಜೀವನಿಗೆ ತಾನು ಅಣುವೆಂಬ ಭಾವನೆಯು ತೊಲಗಿ ವಿಭುವೆಂಬ ಭಾವನೆಯು ನೆಲಸುವುದು. ಇದನ್ನೇ ಆಣವಮಲಪಾಶದ ವಿಮೋಚನವೆಂದು ಕರೆಯಲಾಗಿದೆ. ಇದರ ಪರಿಣಾಮವಾಗಿ ಜೀವನು ಶಕ್ತಿವಿಕಾಸದಿಂದ ಅದ್ವೈತಾನಂದವನ್ನು ಅನುಭವಿಸುತ್ತಾನೆ. ಈ ಮಂತ್ರದಲ್ಲಿ ಹೇಳಿರುವ ಮಲಪಾಶವಿಮೋಚನವು ಈ ರೀತಿಯಲ್ಲಿ ಸಂಭವಿಸುವುದಾಗಿ ಭಾವಿಸಬೇಕು. ದೇಹದಲ್ಲಿ ಜೀವೇಶ್ವರರಿಬ್ಬರೂ ಇರುವರೆಂಬುದನ್ನು ಮುಂದೆ ಇದೇ ಶ್ರುತಿಯು ತಿಳಿಸುತ್ತದೆ. "ಒಂದೇ ವೃಕ್ಷದಲ್ಲಿ ಸಮಾನವರ್ಣದ ಮತ್ತು ಸಮಾನಾಕಾರದ ಪಕ್ಷಿಗಳೆರಡು ನೆಲಸಿರುವುವು. ಅವುಗಳಲ್ಲಿ ಒಂದು ಸಿಹಿ ಕಹಿ ಫಲಗಳನ್ನು ಭೋಗಿಸುತ್ತಲೂ, ಮತ್ತೊಂದು ಏನನ್ನೂ ತಿನ್ನದೆ ನಿರ್ಲಿಪ್ತವಾಗಿ ಶೋಭಿಸುತ್ತಲೂ ಇರುವುವು." ಇಲ್ಲಿ ಪಕ್ಷಿಗಳೆಂದರೆ ಜೀವೇಶ್ವರರಿಬ್ಬರು. ಇವರಲ್ಲಿ ಜೀವನು ಸುಖದುಃಖಗಳನ್ನು ಭೋಗಿಸುತ್ತಲೂ, ಶಿವನು ಏನನ್ನೂ ತಿನ್ನದೆ ನಿರ್ಲಿಪ್ತನಾಗಿ ನೋಡುತ್ತಲೂ ಇರುವನು ಎಂದು ತಿಳಿಸಿದೆ. ಒಂದೇ ವೃಕ್ಷದಲ್ಲಿ ಜೀವನು ನೆಲಸಿ ರೂಪಾದಿವಿಷಯಗಳಿಗೆ ಮೋಹಿಸುತ್ತ ಅಶಕ್ತತೆಯಿಂದ ಅಳುತ್ತಿರುವನು. ಅವನು ತನ್ನೊಡನೆ ತನಗೆ ನಿಯಾಮಕನಾಗಿ ನಿರ್ಲಿಪ್ತತೆಯಿಂದ ನೆಲಸಿರುವ ಶಿವನನ್ನು ಸೇವಿಸಿ ಅವನ ಮಹಿಮೆಯನ್ನು ತಿಳಿದಾಗ ಅವನ ಶೋಕ ಮೋಹಗಳು ತೊಲಗುವುವು. ಹೀಗೆ ಶ್ರುತಿಯಲ್ಲಿ ಹೇಳಿರುವ ಜೀವೇಶ್ವರರೇ ಅಂಗ ಮತ್ತು ಲಿಂಗ ಎನಿಸಿ ಉಪಾಸಕೋಪಾಸ್ಯಲೀಲೆಯನ್ನು ಸಹಜವಾಗಿ ನಡೆಸುತ್ತಿರುವರು. ಇವರಲ್ಲಿ ಜೀವನು ವೇಧಾಮನುಕ್ರಿಯಾರೂಪವಾದ ದೀಕ್ಷೆಯಿಂದ ಸುಸಂಸ್ಕೃತನಾಗಿ ಮಲದೋಷಗಳನ್ನು ಕಳೆದುಕೊಂಡು ಶುದ್ಧನಾದರೆ ಅಮೃತಮಯವಾದ ಭಾವಲಿಂಗದಲ್ಲಿ ಸಮರಸವಾಗಿ ಬೆರೆತು ಆನಂದವನ್ನು ಅನುಭವಿಸತೊಡಗುವನು. ಆದರೆ ಈ ಬಗೆಯ ಆನಂದಾನುಭವವು ಶಿವಾನುಗ್ರಹದಿಂದಲೇ ಅಂಗನೆನಿಸಿದ ಶುದ್ಧಜೀವನಿಗೆ ದೊರೆಯಲಿರುವುದು.

ಜೀವೇಶ್ವರರಿಗೆ ಇರುವ ಪರಸ್ಪರವೈಲಕ್ಷಣ್ಯವನ್ನು ಮತ್ತೆ ವಿಸ್ತರಿಸುತ್ತಾನೆ.

ಜ್ಞಾಜ್ಞೌ ದ್ವಾವಜಾವೀಶಾನೀಶಾ
ಅಜಾ ಹ್ಯೇಕಾ ಭೋಕ್ತೃಭೋಗ್ಯಾರ್ಥಯುಕ್ತಾ ।
ಅನಂತಶ್ಚಾತ್ಮಾ ವಿಶ್ವರೂಪೋ ಹ್ಯಕರ್ತಾ
ತ್ರಯಂ ಯದಾ ವಿಂದತೇ ಬ್ರಹ್ಮಮೇತತ್ ॥ ೯ ॥

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಜ್ಞಃ ಎಂದರೆ ಸರ್ವಜ್ಞನಾದ ಈಶ್ವರನು. ಅಜ್ಞ ಎಂದರೆ ಏನನ್ನೂ ತಿಳಿಯದಿರುವ ಜೀವನು. ಇವರಿಬ್ಬರೂ ಸಹ ಸನಾತನಕಾಲದಿಂದಲೂ ಇರುವಂತವರು; ಹೀಗೆಯೇ ಸನಾತನವೆನಿಸಿದ ಪ್ರಕೃತಿ ಒಂದಿದೆ. "ಪ್ರಕೃತಿ ಪುರುಷ ಇಬ್ಬರನ್ನೂ ಅನಾದಿ ಎಂದು ತಿಳಿಯಿರಿ" ಎಂದು ಗೀತೆ ಹೇಳಿದೆ. ಇಲ್ಲಿ ಪ್ರಕೃತಿಯಿಂದಾಗ ಬೇಕಾದ ಕಾರ್ಯವನ್ನು ತಿಳಿಸಲಾಗಿದೆ. ಭೋಕ್ತೃ ಅಂದರೆ ಐಹಿಕಫಲಗಳನ್ನು ಅನುಭವಿಸುತ್ತಿರುವ ಜೀವ. ಇವನಿಗೆ ಭೋಗ್ಯವೆನಿಸಿದ ಶಬ್ದಾದಿವಿಷಯಗಳನ್ನು ಒದಗಿಸುವುದೇ ಪ್ರಕೃತಿಯ ಕೆಲಸ. ಹೀಗೆ ಈಶ್ವರ, ಜೀವ, ಪ್ರಕೃತಿ ಈ ಮೂವರೂ ಸನಾತನರೆಂದು ಹೇಳಿಯಾಯಿತು. ಸರ್ವವ್ಯಾಪಕನಾದ ಈಶ್ವರನು ಅನಂತಜೀವರಲ್ಲಿ ಅನಂತಾಕಾರಗಳಿಂದ ನೆಲಸಿದ್ದರೂ ಅಣುವೆನಿಸದೆ, ಕರ್ಮಕ್ಕೆ ಅಧೀನನಾಗದೆ, ಅಜ್ಞನಾಗದೆ, ಪುಣ್ಯಪಾಪಗಳೆರಡನ್ನೂ ಆಚರಿಸದೆ ಇರುವುದರಿಂದ ಫಲಗಳು ಅವನಿಗೆ ಅಂಟುವುದಿಲ್ಲ. ಜೀವನಾದರೋ ಅಜ್ಞನೂ ಅಣುವೂ ಕರ್ತನೂ ಆದ್ದರಿಂದ ಭೋಕ್ತೃವೆನಿಸಿರುವನು. ಈಶ್ವರನು ಸರ್ವಜ್ಞನೂ ವಿಭುವೂ ಅಕರ್ತನೂ ಆದ್ದರಿಂದ ಭೋಕ್ತೃವೂ ಆಗಿಲ್ಲ. ಹೀಗೆ ಈ ಮೂರು ಬಗೆಯ ವೈಲಕ್ಷಣ್ಯವನ್ನು ಜೀವನು ಯಾವಾಗ ಕಾಣುವನೋ ಆಗಲೇ ಅವನು ಆನಂದಮಯವಾದ ಪರಶಿವಲಿಂಗದಲ್ಲಿ ಸಮರಸವಾಗಿ ಬೆರೆತು ಐಕ್ಯಸುಖವನ್ನು ಅನುಭವಿಸುತ್ತಾನೆ.

ಜೀವ, ಈಶ್ವರ, ಪ್ರಕೃತಿ ಇವರಿಗೆ ಇರುವ ಭೇದವನ್ನು ಮತ್ತೆ ತಿಳಿಸುತ್ತಾನೆ.

> ಕ್ಷರಂ ಪ್ರಧಾನಮಮೃತಾಕ್ಷರಂ ಹರಃ
> ಕ್ಷರಾತ್ಮಾನಾವೀಶತೇ ದೇವ ಏಕಃ ।
> ತಸ್ಯಾಭಿಧ್ಯಾನಾದ್ಯೋಜನಾತ್ತತ್ತ್ವಭಾವಾತ್
> ಭೂಯಶ್ಚಾಂತೇ ವಿಶ್ವಮಾಯಾನಿವೃತ್ತಿಃ ॥ ೧೦ ॥

ಪ್ರಧಾನ ಅಂದರೆ ಪ್ರಕೃತಿಯು ಯಾವಾಗಲೂ ವಿಕಾರಗಳನ್ನು ಹೊಂದುವಂತಹದು. ಹರ ಅಂದರೆ ಮಲಪಾಶವನ್ನು ಪರಿಹರಿಸುತ್ತ ದೇಹದಲ್ಲಿ ನೆಲಸಿರುವ ಭಾವಪ್ರಾಣೇಷ್ಟರೂಪನಾದ ಪರಮೇಶ್ವರನು ಅಮೃತನೂ ನಿರ್ವಿಕಾರನೂ ಆಗಿರುವನು; ಜರಾಮರಣಗಳಿಲ್ಲದ್ದರಿಂದ ಮೃತ್ಯುಂಜಯನೂ, ನಾಶವಿಲ್ಲದ್ದರಿಂದ ಅಕ್ಷರನೂ ಆಗಿರುವನು. ಹೀಗೆ ಸರ್ವಪ್ರಕಾಶನಾದ ಈ ಈಶ್ವರನೊಬ್ಬನೇ ಪ್ರಕೃತಿ ಎನಿಸಿದ ದೇಹವನ್ನೂ, ಅದರಲ್ಲಿ ನೆಲಸಿರುವ ಜೀವನನ್ನೂ ನಿಯಮನಮಾಡುತ್ತಿರುವನು. ಸೂಕ್ಷ್ಮಶರೀರವೆನಿಸಿದ ಹೃದಯದಲ್ಲಿ ಅಂಗುಷ್ಠಪ್ರಮಾಣದಲ್ಲಿದ್ದು ಚಿನ್ಮಯನಾಗಿ ಶೋಭಿಸುತ್ತ ಪ್ರಾಣಲಿಂಗವೆನಿಸಿದ ಪರಮೇಶ್ವರನನ್ನು ನಿರ್ಮಲವಾದ ಮನದಲ್ಲಿ ನಿರಂತರವೂ ಧ್ಯಾನಿಸುವುದರಿಂದಲೂ, ಭ್ರೂಮಧ್ಯದಲ್ಲಿ ಆನಂದಮಯನಾಗಿ ಶೋಭಿಸುತ್ತ ಇಷ್ಟಲಿಂಗವೆನಿಸಿದ ಪರಮೇಶ್ವರನನ್ನು ಸ್ಥೂಲದೇಹದಲ್ಲಿ ನಿತ್ಯಾರ್ಚನೆಗಾಗಿ ಧರಿಸುವುದರಿಂದಲೂ, ಶಿರಸ್ಸಿನಲ್ಲಿ ಸಾವಿರದಳದ ಕಮಲದಲ್ಲಿ ಲೀಲೆಯಿಂದ ಸದ್ರೂಪದಲ್ಲಿ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ವಿಹರಿಸುತ್ತ ಭಾವಲಿಂಗವೆನಿಸಿರುವ ಪರಮೇಶ್ವರನೊಡನೆ ಜೀವನು ಸಮರಸವಾಗಿ ಬೆರೆಯುವುದರಿಂದಲೂ ಜೀವನಿಗೆ ಮಲಪಾಶಗಳೆಲ್ಲವೂ ಪೂರ್ತಿಯಾಗಿ ತೊಲಗುವುವು. ಆದರೆ ಅವನಿಗೆ ಪ್ರಾಣಲಿಂಗದ ಅನುಸಂಧಾನವೂ, ಇಷ್ಟಲಿಂಗದ ಅರ್ಚನೆಯೂ, ಭಾವಲಿಂಗದೊಡವೆರಸುವಿಕೆಯೂ ಮತ್ತೆ ಮತ್ತೆ ಮೇಲಿಂದ ಮೇಲೆ ಆಗುತ್ತಿರಬೇಕು. ಆಗಲೇ ಅವನಿಗೆ ಒಮ್ಮೆ ಕಾರಣಶರೀರದಲ್ಲಿ ನೆಲಸಿದ್ದ ಆಣವ ಮಲವೂ, ಸೂಕ್ಷ್ಮಶರೀರದಲ್ಲಿ ನೆಲಸಿದ್ದ ಮಾಯೀಯ ಮಲವು ಸ್ಥೂಲಶರೀರದಲ್ಲಿ ನೆಲಸಿದ್ದ ಕಾರ್ಮಿಕಮಲವೂ ಕ್ರಮವಾಗಿ ತೊಲಗುತ್ತವೆ. ಈ ಮೂರೂ ಸಹ ತ್ರಿಗುಣಾತ್ಮಕವಾದ ಮಾಯಾಶಕ್ತಿಯ ಪರಿಣಾಮಗಳೆನಿಸಿವೆ. ಜೀವನಿಗೆ ಪ್ರಾಣಲಿಂಗದ ಅನುಸಂಧಾನದಿಂದ ಮಾಯೀಯಮಲವೂ, ಇಷ್ಟಲಿಂಗದ ಅರ್ಚನೆಯಿಂದ ಕಾರ್ಮಿಕಮಲವೂ, ಕೊನೆಗೆ ಭಾವಲಿಂಗದಲ್ಲಿ ಐಕ್ಯನಾಗುವುದರಿಂದ ಆಣವಮಲವೂ ಪೂರ್ತಿಯಾಗಿ ತೊಲಗುವುವು. ಈ ಮೂರು ಬಗೆಯ ಮಲಗಳನ್ನು ಜೀವನಿಗೆ ಅಂಟಿಸಿದ್ದ ಮಾಯಾಶಕ್ತಿಯಾದರೋ ಶಿವನಿಂದಲೇ ಬಂದು ಅವನ ವಿನೋದಕ್ಕಾಗಿ ಜಗದ್ರೂಪವಾಗಿ ಪರಿಣಮಿಸಿ ಕೊನೆಗೆ ಅವನಲ್ಲಿಯೇ ಲೀನವಾಗುವ ಸ್ವಭಾವವುಳ್ಳದ್ದೆಂದು ಶಿವಾಗಮಗಳು ತಿಳಿಸಿವೆ. ಇಂತಹ ಮಾಯಾಶಕ್ತಿಯು ಜೀವನನ್ನು ಒಳಗೆ ಹೊರಗೆ ಪೂರ್ತಿಯಾಗಿ ಮೋಹಿಸುತ್ತಿದ್ದರೂ ಜೀವನು ತನ್ನ ಮೂರು ದೇಹಗಳಲ್ಲೂ ಮೂರು ಬಗೆಯ ಉಪಾಸನೆಯನ್ನು ನಡೆಸುವುದರಿಂದ ಅವನ ಸತ್ತ್ವರಜಸ್ತಮಃ ಪ್ರಕೃತಿಯೇ ಸಚ್ಚಿದಾನಂದಮಯವಾಗಿ ಪರಿಣಮಿಸುವುದು. ಆಗ ಮಾಯಾಶಕ್ತಿಯ ಪರಿಣಾಮವೆನಿಸಿದ್ದ ಚಿತ್ತ ಅಥವಾ ಪ್ರಕೃತಿಯು ಚಿಚ್ಛಕ್ತಿಯಾಗಿ ಮಾರ್ಪಡುವುದು. ಹೀಗೆ ಜೀವನ ಸ್ವಭಾವವೇ ಬದಲಾವಣೆಯನ್ನು ಹೊಂದುವುದರಿಂದ ಅವನು ಶಿವನೇ ಆಗಲು ಅನುಕೂಲವಾಗುತ್ತದೆ. ಇದೆಲ್ಲವೂ ಅವನ ಉಪಾಸನೆಯನ್ನೇ ಅವಲಂಬಿಸಿವೆ. "ಯಾರು ತಮಗೆ ಬೇರೆ ಗತಿಯೇ ಇಲ್ಲವೆಂದು ನಂಬಿ ನನ್ನನ್ನೇ ಉಪಾಸನೆ ಮಾಡುವರೋ ಅಂತಹ ನಿತ್ಯಾಭಿಯುಕ್ತರಿಗೆ ನನ್ನೊಡನೆ ನಿತ್ಯಸಂಪರ್ಕವಿರುವುದರಿಂದ ಅವರ ಯೋಗಕ್ಷೇಮಗಳನ್ನು ನಾನೇ ನಡೆಸಿಕೊಳ್ಳುವೆನು" ಎಂದು ಗೀತೆಯಲ್ಲಿ ಪರಮಾತ್ಮನೇ ನೇರವಾಗಿ ಉಪದೇಶಿಸಿರುವನು. ಇಲ್ಲಿ ನಿತ್ಯಾಭಿಯುಕ್ತರೆಂದರೆ ಪರಮೇಶ್ವರನೊಡನೆ ನಿತ್ಯಸಂಪರ್ಕವನ್ನು ಹೊಂದಿದವರೆಂದರ್ಥ. ಇಂತಹ ನಿತ್ಯಸಂಪರ್ಕವು ಪರಶಿವಬ್ರಹ್ಮದ ಸ್ಥೂಲಶರೀರವೆನಿಸಿದ ಇಷ್ಟಲಿಂಗವನ್ನು ನಿರಂತರವೂ ದೇಹದಲ್ಲಿ ಒಳಗೂ ಹೊರಗೂ ಧರಿಸಿ ಅರ್ಚಿಸುವುದರಿಂದ ಉಂಟಾಗುತ್ತದೆ. ಜಗದ್ವ್ಯಾಪಕತ್ವವೇ ಶಿವನ ಲಕ್ಷಣವೆನಿಸಿದೆ. ಆದಾದರೋ ಅವನು ಅಖಂಡ ಜಗದಾಕಾರನೂ, ಜಗತ್ತಿಗೆ ಆಶ್ರಯನೂ ಆಗಿರುವನೆಂಬುದೇ ಆಗಿದೆ. ಹೀಗೆ ವಿಶ್ವವೆಲ್ಲಕ್ಕೂ ಆಶ್ರಯಸ್ಥಲವಾಗಿರುವುದರಿಂದಲೇ ಪರಶಿವಬ್ರಹ್ಮವನ್ನು ಅಖಂಡಲಿಂಗವೆಂದೂ, ಸ್ಥಲವೆಂದೂ ಅನುಭವಿಗಳು ಕರೆದಿರುವುದು ಯುಕ್ತವೇ ಆಗಿದೆ. ಎಲ್ಲರಿಗೂ ಸುಲಭವಾಗಿ ತಿಳಿಯಲಿಕ್ಕಾಗದೆ ಇರುವುದರಿಂದ ಇದು ಅಗಮ್ಯ ಮತ್ತು ಅಗೋಚರ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಎನಿಸಿದೆ. ಇದು ಎಲ್ಲಕ್ಕೂ ಪ್ರಮಾಣವೆನಿಸಿ ಇದಕ್ಕೆ ಯಾವ ಪ್ರಮಾಣವೂ ಇಲ್ಲದ್ದ ರಿಂದ ಇದು ಅಪ್ರಮಾಣವೆನಿಸಿದೆ. ಇಂತಹ ಅಖಂಡಲಿಂಗವು ಮಾನವದೇಹದಲ್ಲಿ ಶಿರಸ್ಸು, ಹೃದಯ, ಭ್ರೂಮಧ್ಯ ಈ ಮೂರು ಕಡೆಗಳಲ್ಲಿ ಭಾವ, ಪ್ರಾಣ, ಇಷ್ಟರೂಪ ದಿಂದ ಭಕ್ತಾನುಗ್ರಹಲೀಲೆಗಾಗಿ ನೆಲಸಿದೆ. ಹೀಗೆ ಅವನು ದೇಹದಲ್ಲಿ ಮೂರು ಬಗೆ ಯಾಗಿ ನೆಲಸಿರುವುದರಿಂದಲೇ ಬಾದರಾಯಣರು ಬ್ರಹ್ಮಸೂತ್ರದಲ್ಲಿ ಉಪಾಸನಾ ತ್ರೈವಿಧ್ಯವನ್ನು ಉಪದೇಶಿಸಿದ್ದಾರೆ. ದೇಹದಲ್ಲಿ ಪರಮಾತ್ಮನು ನೆಲಸಿರುವುದನ್ನು "ಅರ್ಭಕೌಕಸ್ತ್ವಾತ್" ಎಂಬ ಸೂತ್ರದಲ್ಲಿ ಅವರೇ ಸ್ಪಷ್ಟಪಡಿಸಿದ್ದಾರೆ. ಆದರೆ ಈ ಬಗೆಯ ಉಪಾಸನೆಯನ್ನು ಮತ್ತೆ ಮತ್ತೆ ಮಾಡುತ್ತಲಿದ್ದರೆಯೇ ಮಾಯಾ ಶಕ್ತಿಯ ಪ್ರಕೃತಿಯು ಬದಲಾವಣೆಯಾಗುವುದು. ಇದರಿಂದಲೇ ಜೀವನು ಶಿವನಾಗು ವನು. ಈ ವಿಷಯವನ್ನು ಶಕ್ತಿವಿಶಿಷ್ಟಾದ್ವೈತದರ್ಶನದ ದ್ವಿತೀಯಭಾಗದಲ್ಲಿ ವಿಸ್ತಾರ ವಾಗಿ ನಿರೂಪಿಸಲಾಗಿದೆ. ವಾಚಕರು ಅದನ್ನು ಅಲ್ಲಿ ತಿಳಿಯಬಹುದು.

ಹೀಗೆ ಪರಶಿವಬ್ರಹ್ಮನನ್ನು ಒಳಗೂ ಹೊರಗೂ ಧ್ಯಾನಿಸಿ ಅರ್ಚಿಸುತ್ತಿರುವ ಭಕ್ತನಿಗೆ ದೊರಕುವ ಫಲವನ್ನು ಮುಂದೆ ತಿಳಿಸುತ್ತಾನೆ.

> ಜ್ಞಾತ್ವಾ ದೇವಂ ಸರ್ವಪಾಶಾಪಹಾನಿಃ
> ಕ್ಷೀಣೈಃ ಕ್ಲೇಶೈರ್ಜನ್ಮಮೃತ್ಯುಪ್ರಹಾಣಿಃ ।
> ತಸ್ಯಾಭಿಧ್ಯಾನಾತ್ತೃತೀಯಂ ದೇಹಭೇದೇ
> ವಿಶ್ವೈಶ್ವರ್ಯಂ ಕೇವಲ ಆಪ್ತಕಾಮಃ ॥ ೧೧ ॥

ದೇವನನ್ನು ತಿಳಿದವನಿಗೆ ಮಲಪಾಶಗಳೆಲ್ಲವೂ ತೊಲಗುತ್ತವೆ. ದೇವನೆಂದರೆ ಸೃಷ್ಟಿ, ಸ್ಥಿತಿ, ಸಂಹಾರ, ತಿರೋಧಾನ, ಅನುಗ್ರಹಗಳೆಂಬ ಜಗದ್ವ್ಯಾಪಾರವನ್ನು ಅನಾಯಾಸವಾಗಿ ತನ್ನ ವಿನೋದಕ್ಕಾಗಿ ನಡೆಸುತ್ತಲಿರುವ ಸರ್ವಕಾರಣನಾದ ಪರಶಿವ ಬ್ರಹ್ಮವೆಂದರ್ಥ. ವಿಶ್ವವನ್ನು ತನ್ನೊಳಗೆ ಅಡಗಿಸಿರುವ ಇಂತಹ ಅಖಂಡಲಿಂಗವನ್ನು ಅರ್ಚನೆಯಮೂಲಕ ತಿಳಿದು ಧ್ಯಾನಿಸುತ್ತಿರುವವನಿಗೆ ಬಂಧಹೇತುವೆನಿಸಿದ ಅವಿದ್ಯೆ, ಅಸ್ಮಿತೆ, ರಾಗ, ದ್ವೇಷ, ಅಭಿನಿವೇಶವೆಂದು ಐದುಬಗೆಯಾಗಿರುವ ಪಾಶವು ತೊಲಗು ವುದು. ಆ ಮೂಲಕ ಕ್ಲೇಶಗಳೆಲ್ಲವೂ ತೊಲಗಿ ಜನನಮರಣರೂಪವಾದ ಸಂಸಾರ ಚಕ್ರದಲ್ಲಿ ಅಲೆದಾಟವು ತೊಲಗುವುದು. ಹೀಗೆ ಅಲೆದಾಟವು ತಪ್ಪಿದರೆ ಏನಾಗುತ್ತದೆ ಎಂಬುದನ್ನು ಮುಂದೆ ತಿಳಿಸಲಾಗಿದೆ. ಶರೀರದಲ್ಲಿ ನೆಲಸಿರುವ ಶಿವನನ್ನು ನಿರಂ ತರವೂ ಧ್ಯಾನಿಸಿ ಅರ್ಚಿಸುವುದರಿಂದ ಜೀವನಿಗೆ ತನ್ನ ಹಿಂದಿನ ಪ್ರಕೃತಿ ಹೇಗೆ ಬದಲಾ ವಣೆಯಾಗುವುದು? ಅಂದರೆ ಶಿವದೀಕ್ಷೆಯಲ್ಲಿ ಶುದ್ಧವೂ, ಪಂಚಾಕ್ಷರೀಮಹಾಮಂತ್ರದ ಜಪದಿಂದ ಪಾವನವೂ ಆದ ಬೇರೊಂದು ದೇಹವೇ ಅವನಿಗೆ ಲಭಿಸುವುದು. ಇಂತಹ ಪ್ರಸಾದಕಾಯದಲ್ಲಿ ಅವನಿಗೆ ವಿಶ್ವೈಶ್ವರ್ಯವೆಂಬ ಮೂರನೆಯಫಲವು ಲಭಿಸುವುದು.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಮೊದಲನೆಯ ಫಲವು ಪಾಶನಿವೃತ್ತಿ ; ಎರಡನೆಯ ಫಲವು ಜನನಮರಣನಿವೃತ್ತಿ. ಮೂರನೆಯ ಫಲವೆನಿಸಿದ ವಿಶ್ವೈಶ್ವರ್ಯವನ್ನು ಇಲ್ಲಿ ತಿಳಿಸಲಾಗಿದೆ. ಪರಮೇಶ್ವರನ ವೈಭವಸಮೃದ್ಧಿಯೇ ಇಲ್ಲಿ ವಿಶ್ವೈಶ್ವರ್ಯವೆನಿಸುತ್ತದೆ. ಜಗತ್ತೆಲ್ಲವನ್ನೂ ನಿಯಮನಮಾಡುವ ಸಾಮರ್ಥ್ಯವೇ ಇದು. "ಬ್ರಹ್ಮವನ್ನು ತಿಳಿದವನು ಬ್ರಹ್ಮವೇ ಆಗುತ್ತಾನೆ" ಎಂಬ ಶ್ರುತಿಯಂತೆ ಪರಶಿವಬ್ರಹ್ಮದ ಉಪಾಸಕನು ಬ್ರಹ್ಮಭಾವವನ್ನೇ ಹೊಂದುವನು. "ಯಾವಾಗ ಮಾನವನಿಗೆ ಹೃದಯದಲ್ಲಿರುವ ಆಶೆಗಳೆಲ್ಲವೂ ತೊಲಗುತ್ತವೆಯೋ ಆ ಕೂಡಲೇ ಅವನು ಅಮೃತನಾಗುತ್ತಾನೆ. ಆಗ ಅವನಿಗೆ ಇಲ್ಲಿಯೇ ಬ್ರಹ್ಮದೊಡನೆ ಸಾಮರಸ್ಯವು ಲಭಿಸುತ್ತದೆ." ಎಂಬ ಶ್ರುತಿ ಪ್ರಮಾಣದಂತೆ ಯಾವನಿಗೆ ಹೃದಯವಿಕಾಸದಿಂದ ಬಯಕೆಗಳೆಲ್ಲವೂ ಶಿವನಲ್ಲಿ ಲಯಿಸುತ್ತವೆಯೋ ಆಗ ಪ್ರಸಾದರೂಪವಾಗಿ ಬದಲಾವಣೆಹೊಂದಿದ ಈ ದೇಹದಲ್ಲಿಯೇ ಜೀವನು ನಿರ್ಮಲನಾಗಿ ಅಮೃತನಾಗುತ್ತಾನೆ. ಇಂತಹ ಅಮೃತಸ್ಥಿತಿಯೇ ಜೀವನು ಇಲ್ಲಿ ದೇಹದ ಸಹಕಾರದಿಂದ ಹೊಂದುವ ಕೊನೆಯ ಫಲ. ಇದನ್ನು ಶ್ರುತಿಯು ವಿಶ್ವೈಶ್ವರ್ಯವೆಂದು ತಿಳಿಸಿದೆ. ಇದನ್ನು ಹೊಂದಲು ಜೀವನು ಬೇರೊಂದೆಡೆಗೆ ಹೋಗಬೇಕಾಗಿಲ್ಲ. "ಇಲ್ಲಿ ಅದನ್ನು ತಿಳಿದು ಸಾಧಿಸಿಕೊಂಡರೆ ಇವನ ಭಾಗಕ್ಕೆ ಅದು ಇದ್ದೇ ಇರುತ್ತದೆ. ಇಲ್ಲಿ ತಿಳಿಯದೆ ಬಿಟ್ಟರೆ ಅದು ಅವನಿಗೆ ಇನ್ನೆಲ್ಲಿಯೂ ದೊರೆಯುವಂತೆಯೇ ಇಲ್ಲ" ಎಂದು ಕೇನೋಪನಿಷತ್ತು ತಿಳಿಸಿದೆ. ಇಲ್ಲಿಯೇ ದೀಕ್ಷೆ ಎಂಬ ಅಗ್ನಿಯಲ್ಲಿ ಬೆಂದು ಹಿಂದಿನ ದೇಹವನ್ನು ಕಳೆದುಕೊಂಡು ಹೊಸದಾಗಿ ಪಡೆದ ಬೇರೊಂದು ದಿವ್ಯದೇಹದಲ್ಲಿ ಆತ್ಮಸ್ವರೂಪವನ್ನು ಅನುಭವಿಸಿದವನೇ ಅಮೃತಸ್ಥಿತಿಯನ್ನು ಹೊಂದುವನು. ಇಲ್ಲಿ ಪ್ರಮಾದದಿಂದ ಇದನ್ನು ತಿಳಿಯದೆ ಬಿಟ್ಟರೆ ಮತ್ತೆಲ್ಲಿಯೂ ಅದು ದೊರಕುವಂತೆಯೇ ಇಲ್ಲ. ಇಲ್ಲಿಯೇ ಅಂತಹ ಫಲವನ್ನು ದೀಕ್ಷಾಗ್ನಿಯಿಂದ ಶುದ್ಧನಾದ ಜೀವನೇ ಹೊಂದಬಲ್ಲನು. ಈ ಬಗೆಯ ಸಂಸ್ಕಾರವನ್ನು ಹೊಂದದವನಿಗೆ ಇಂತಹ ಅಮೃತಸ್ಥಿತಿಯು ದೊರಕುವಂತಿಲ್ಲ. ಈ ಅಭಿಪ್ರಾಯವನ್ನು ಋಗ್ವೇದವು ಸ್ಪಷ್ಟಪಡಿಸಿದೆ. ಅಲ್ಲಿ ಬರುವ ಮಂತ್ರದ ಆಶ್ರಯ ಹೀಗಿದೆ. ಮಂತ್ರಸ್ವರೂಪನಾದ ಪರಮಾತ್ಮನ ದಿವ್ಯವೈಭವವನ್ನು ಅರಿತ ಮಹರ್ಷಿಯು ಹೇಳುತ್ತಾನೆ. "ಸೃಷ್ಟಿಕರ್ತಬ್ರಹ್ಮನಿಗೆ ನಿಯಾಮಕನಾದ ಪರಮೇಶ್ವರನೇ, ನಿನ್ನ ದಿವ್ಯಮೂರ್ತರೂಪವು ಎಲ್ಲರನ್ನೂ ಪಾವನಗೊಳಿಸಲು ಸಮರ್ಥವೆನಿಸಿ ವಿಶ್ವವನ್ನೇ ಆವರಿಸಿಕೊಂಡಿದೆ. ಎಲ್ಲರನ್ನೂ ರಕ್ಷಿಸಲು ಸಮರ್ಥನೂ ಪತಿಯೂ ಎನಿಸಿದ ನೀನು ದಯೆಯಿಂದ ಮಾನವರ ಸ್ಥೂಲಸೂಕ್ಷ್ಮಕಾರಣಶರೀರಗಳಲ್ಲಿ ಇಷ್ಟಪ್ರಾಣಭಾವರೂಪದಿಂದ ನೆಲಸಿರುವೆ." ಹೀಗೆ ತನ್ನ ದೇಹದಲ್ಲಿ ತನ್ನ ಹಿತಕ್ಕಾಗಿಯೇ ನೆಲಸಿರುವ ಲಿಂಗವನ್ನು ಮಹರ್ಷಿಯು ಸಂತೋಷ್ಯದಿಂದ ಸಂಬೋಧಿಸಿ ಇಂತಹ ಲಿಂಗವನ್ನು ತಿಳಿದು ಅರ್ಚಿಸಿದ್ದಕ್ಕಾಗಿ ತನ್ನನ್ನು ಧನನೆಂದು ಭಾವಿಸುತ್ತಾನೆ. ಇಲ್ಲಿ ವೀರಶೈವದೀಕ್ಷೆಯ ಮೂಲವನ್ನು ಕಾಣಬಹುದ.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಯಾವನು ಮೂರುಬಗೆಯ ದೀಕ್ಷೆಗಳಿಂದ ಮೂರುಬಗೆಯ ಮಲಗಳನ್ನು ಕಳೆದುಕೊಂಡು ಉತ್ತಮಸಂಸ್ಕಾರವನ್ನು ಹೊಂದಿರುವನೋ ಅವನೇ ತನ್ನ ಹೃದಯದಲ್ಲಿರುವ ಪರಶಿವಲಿಂಗವನ್ನು ಗುರುವಿನಿಂದ ಹೊರಗೆ ಪಡೆದು ಪ್ರಾಣಭಾವನೆಯಿಂದ ದೇಹದಲ್ಲಿ ಧರಿಸಿ ಅರ್ಚಿಸಲು ಅರ್ಹನಾಗುವನು. ಹಾಗೆ ದೀಕ್ಷಾಗ್ನಿಯಲ್ಲಿ ಬೇಯದೆ ಇರುವ ಅಸಂಸ್ಕೃತಜೀವನು ಆಮನೆನಿಸುವನು. ಅಂತವನಿಗೆ ಲಿಂಗದ ನಿತ್ಯಾಭಿಯೋಗವು ದೊರಕಲಾರದು; ಅವನಿಗೆ ಉಪಾಸನದ ಅಧಿಕಾರವೂ ದೊರಕುವುದಿಲ್ಲ. ಹೀಗೆ ಸಂಸ್ಕೃತನಾದವನೇ ಪರಿಶುದ್ಧನಾಗಿ ಈ ಪವಿತ್ರದೇಹದಲ್ಲಿ ಶಿವಸಾಯುಜ್ಯವನ್ನು ಅನುಭವಿಸಬಲ್ಲನು. ಈ ಅಭಿಪ್ರಾಯವನ್ನು ಈ ಮಂತ್ರದಲ್ಲಿ 'ದೇಹಭೇದೇ' ಎಂಬ ಪದವು ತಿಳಿಸುತ್ತದೆ. ಇದೇ ಜೀವನ್ಮುಕ್ತಿ ಎನಿಸುತ್ತದೆ. ಯಾವನು ಇಲ್ಲಿಯೇ ಶಿವನಾಗುವನೋ ಅವನು ಶಿವನ ದಿವ್ಯವಿಭೂತಿಯನ್ನು ಅನುಭವಿಸುತ್ತ ಇಲ್ಲಿಯೇ ನಿತ್ಯಮುಕ್ತನೆನಿಸುವನು. ಇಂತಹ ದಿವ್ಯವೈಭವವನ್ನು ಇಲ್ಲಿಯೇ ಸುಸಂಸ್ಕೃತವಾದ ದೇಹದಲ್ಲಿ ಪಡೆದು ಅನುಭವಿಸಲು ಯಾವನು ಇಚ್ಛಿಸುವನೋ ಅಂತವನೇ ಅದನ್ನು ಪಡೆಯಬಲ್ಲನು. ಇಚ್ಛಿಸಿ ಹುಡುಕುವವನಿಗೇ ಅದು ಸಿಕ್ಕುತ್ತದೆ. ಅಂತವನಿಗೆ ಪಾಶಗಳೆಲ್ಲವೂ ತೊಲಗುವುದರಿಂದ ಅವನು ಕೇವಲಾತ್ಮಸ್ವರೂಪದಲ್ಲಿಯೇ ನಿರ್ಲಿಪ್ತನಾಗಿ ನೆಲಸಿ ಲೋಕಕಲ್ಯಾಣಕ್ಕಾಗಿ ವ್ಯವಹರಿಸುವವನು. ಅವನು ಯಾವಾಗಲೂ ತನ್ನಲ್ಲಿಯೇ ರಮಿಸುತ್ತ ವಿಷಯಗಳಲ್ಲಿ ಉದಾಸೀನನಾಗಿದ್ದು ಎಲ್ಲರನ್ನೂ ಸಮದೃಷ್ಟಿಯಿಂದ ಪ್ರೀತಿಸುವನು. ಯಾವನು ಇಲ್ಲಿಯೇ ಕೈವಲ್ಯಾನಂದವನ್ನು ಅನುಭವಿಸುವನೋ ಅಂತವನು ಶರೀರವನ್ನು ತೊರೆದಮೇಲೆಯೂ ಪರಿಶುದ್ಧವಾದ ತನ್ನ ಸಹಜಾನಂದದಲ್ಲಿಯೇ ನಿತ್ಯನಾಗಿ ನೆಲಸುವನು. ಇಲ್ಲಿಯೇ ಯಾವನು ನಿರಾಕಾರಶಿವನೊಡನೆ ಐಕ್ಯಸ್ಥಿತಿಯನ್ನು ಪಡೆಯುವನೋ ಅವನು ಸುಟ್ಟಬಟ್ಟೆಯಂತೆದೇಹದಲ್ಲಿ ಕೇವಲನಾಗಿ ಇರುತ್ತಲೇ ದೇಹವು ಕೆಳಗೆ ಬಿದ್ದಮೇಲೆಯೂ ಅದೇ ಕೈವಲ್ಯಾನಂದವನ್ನು ಅನುಭವಿಸುತ್ತ ನಿತ್ಯಸುಖಿಯಾಗುವನು. ಇಂತಹ ಸುಖವನ್ನು ಭಕ್ತನು ಪರಶಿವಬ್ರಹ್ಮದ ಉಪಾಸನೆಯಿಂದಲೇ ಪಡೆಯಬೇಕೆಂದು ಈ ಮಂತ್ರವು ತಿಳಿಸುತ್ತದೆ.

ಹಿಂದೆ ಹೇಳಿದ ವಿಷಯವನ್ನು ಸಾಧಕರೆಲ್ಲರೂ ಅವಶ್ಯವಾಗಿ ತಿಳಿಯಬೇಕೆಂದು ಹೇಳಿ ಅದನ್ನು ಉಪಸಂಹಾರಮಾಡುತ್ತಾನೆ.

ಏತತ್ ಜ್ಞೇಯಂ ನಿತ್ಯಮೇವಾತ್ಮಸಂಸ್ಥಂ
ನಾತಃ ಪರಂ ವೇದಿತವ್ಯಂ ಹಿ ಕಿಂಚಿತ್ ।
ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ ಮತ್ವಾ
ಸರ್ವಂ ಪ್ರೋಕ್ತಂ ತ್ರಿವಿಧಂ ಬ್ರಹ್ಮಮೇತತ್ ॥೧೨॥

ಸರ್ವವ್ಯಾಪಕನೂ ಪ್ರಭುವೂ ಪರಂಜ್ಯೋತಿಯೂ ಆಗಿರುವ ಪರಶಿವಬ್ರಹ್ಮವು ತನ್ನಲ್ಲಿಯೇ ನೆಲಸಿರುವುದರಿಂದ ಅದಕ್ಕಾಗಿ ಬೇರೆ ಎಲ್ಲಿಯೂ ಹುಡುಕಬೇಕಾಗಿಲ್ಲ.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಜ್ಞಾನಿಗಳು ಶಿವನನ್ನು ತಮ್ಮಲ್ಲಿ ಕಾಣುವರೇ ಹೊರತು ವಿಗ್ರಹಗಳಲ್ಲಿ ಅವನನ್ನು ಹುಡುಕುವುದಿಲ್ಲ. ಸಾಮಾನ್ಯಜನರಿಗೆ ಶಿವನ ಬಗ್ಗೆ ನಂಬಿಕೆಯನ್ನು ಹುಟ್ಟಿಸಲಿಕ್ಕಾಗಿಯೇ ವಿಗ್ರಹಗಳು ನಿರ್ಮಿತವಾಗಿವೆ. ಅವರು ಅಲ್ಲಿ ಶಿವನನ್ನು ಕಾಣುವುದು ಸಹಜ ಯಾರು ತನ್ನೊಳಗೆ ನೆಲಸಿರುವ ಜ್ಯೋತಿಯನ್ನು ಕಾಣಲು ಬಯಸುವರೋ ಅವರು ಹೃದಯದಲ್ಲಿಯೇ ಪ್ರಾಣರೂಪದಿಂದ ಪ್ರಕಾಶಿಸುತ್ತಿರುವ ಪರಶಿವಲಿಂಗವನ್ನು ಕಾಣುವರು. ಅಂತವರಿಗೆ ಅಲ್ಲಿಯೇ ಪ್ರತಿಮೆಗಳ ಅರ್ಚನೆಯ ಫಲವು ಲಭಿಸಿದಂತಾಗುವುದೆಂದು ಹಾಗೆ ಹೇಳಿದೆ. ಹೀಗೆ ಜೀವರು ತನ್ನೊಳಗೆ ನೆಲಸಿರುವ ನಿರಾಕಾರ ಪರಶಿವ ಬ್ರಹ್ಮನನ್ನು ತಿಳಿಯಲು ನಿತ್ಯವೂ ಪ್ರಯತ್ನಮಾಡಬೇಕು. "ಬೀಜದೊಳಗೆ ಅಂಕುರವು ಅಡಗಿರುವಂತೆ ಜೀವನಲ್ಲಿ ಶಿವನು ನೆಲಸಿರುವನು" ಎಂದು ರೇಣುಕರು ಅಗಸ್ತ್ಯರಿಗೆ ಹೇಳಿದ್ದನ್ನು ಸಿದ್ಧಾಂತಶಿಖಾಮಣಿಯು ತಿಳಿಸಿದೆ. ಇಂತಹ ಶಿವನನ್ನು ತನ್ನಲ್ಲಿಯೇ ಕಂಡುಕೊಂಡರೆ ಇದಕ್ಕಿಂತ ಬೇರೆ ತಿಳಿಯಬೇಕಾದ್ದು ಏನೂ ಉಳಿದಿರುವುದಿಲ್ಲ. "ಯಾವುದನ್ನು ತಿಳಿದರೆ ಎಲ್ಲವೂ ತಿಳಿದಂತಾಗುವುದೋ" ಎಂದು ಏಕವಿಜ್ಞಾನೇನ ಸರ್ವವಿಜ್ಞಾನವೆಂಬ ಶ್ರುತಿಯು ತಿಳಿಸುತ್ತದೆ.

"ಯಾವುದನ್ನು ತಿಳಿದಮೇಲೆ ಮತ್ತೆ ತಿಳಿಯಬೇಕಾದ್ದು ಏನೂ ಉಳಿಯುವುದಿಲ್ಲವೋ" ಎಂದು ಭಗವದ್ಗೀತೆಯೂ ತಿಳಿಸಿದೆ. ಆದರೆ ಹಾಗೇ ಪರಶಿವನನ್ನು ತಿಳಿದ ಮೇಲೆ ತಿಳಿಯಬೇಕಾದ್ದು ಬೇರೆ ಏನೂ ಉಳಿಯುವುದಿಲ್ಲವೆಂಬ ಅಂಶವು ಹೇಗೆ ನಮಗೆ ಅನುಭವಕ್ಕೆ ಬರುತ್ತದೆ ಎಂದು ಕೇಳಿದರೆ ಅದಕ್ಕೆ ಸಮಾಧಾನವನ್ನು ಮುಂದೆ ತಿಳಿಸಲಾಗಿದೆ. ಈ ಪ್ರಪಂಚದಲ್ಲಿ ಫಲವನ್ನು ಭೋಗಿಸುವ ಜೀವನೊಬ್ಬನಿದ್ದಾನೆ. ಭೋಗ್ಯವೆನಿಸಿದ ಅಚೇತನವಸ್ತುಗಳಿವೆ. ಇವುಗಳ ಭೋಗಕ್ಕೆ ಜೀವನನ್ನು ಅವನ ಕರ್ಮದಂತೆ ಪ್ರೇರಣೆಮಾಡುವ ಈಶ್ವರನೊಬ್ಬನಿದ್ದಾನೆ. ಈ ಮೂವರನ್ನೂ ಒಬ್ಬ ಪರಶಿವಬ್ರಹ್ಮವೆಂದೇ ತಿಳಿಯಬೇಕೆಂದು ದಿವ್ಯಜ್ಞಾನಿಗಳು ತಿಳಿಸಿದ್ದಾರೆ. ಆದ್ದರಿಂದ ಒಬ್ಬ ಶಿವನೇ ಮೂರುಬಗೆಯಾಗಿ ಪ್ರಪಂಚವನ್ನು ವ್ಯಾಪಿಸಿರುವನೆಂಬುದನ್ನು ಸಾಧಕರೆಲ್ಲರೂ ಅವಶ್ಯವಾಗಿ ತಿಳಿಯಬೇಕು. ಬೇರೆಕಡೆಯಲ್ಲಿ ಶಾಂತಿಮಂತ್ರವು ಇದನ್ನೇ ತಿಳಿಸಿದೆ. "ಚಿತ್ರವಿಚಿತ್ರವಾದ ಪ್ರಪಂಚದಲ್ಲಿ ಹಿಂದೆ ಹುಟ್ಟಿದ್ದು, ಮುಂದೆ ಹುಟ್ಟುವಂತಹದು ಇದೆಲ್ಲವೂ ರುದ್ರನೇ." "ಇದೆಲ್ಲವೂ ಬ್ರಹ್ಮವೇ" ಹೀಗೆ ಜಗತ್ತೇ ಶಿವಮಯವೆನಿಸಿದೆ.

ಶಿವನು ಯಾವಾಗಲೂ ಜೀವನೊಳಗೆ ಇರುವನೆಂಬುದು ಹೇಗೆ ಹೊಂದಿಕೆಯಾದೀತು ? ಎಲ್ಲ ಜೀವರಲ್ಲಿಯೂ ಸಹಜವಾಗಿರುವ "ನಾನು" ಎಂಬ ಪ್ರತೀತಿಯಲ್ಲಿ ಆತ್ಮವೇ ವಿಷಯವೆನಿಸಿದೆ. "ನಾನು" ಎಂದು ವ್ಯವಹರಿಸುವಾಗ ಬ್ರಹ್ಮವನ್ನೇ ಯಾರೂ ಗಮನಿಸುವುದಿಲ್ಲ. ಆದ್ದರಿಂದ ಪರಬ್ರಹ್ಮವು ಜೀವರಲ್ಲಿ ಇರುತ್ತದೆ ಎಂದು ಹೇಳಲಿಕ್ಕೆ ಹೇಗೆ ಸಾಧ್ಯವಾದೀತು ? ಎಂಬ ಆಕ್ಷೇಪವನ್ನು ಅನೇಕ ದೃಷ್ಟಾಂತಗಳ ಮೂಲಕ ಇಲ್ಲಿ ಪರಿಹರಿಸಲಾಗಿದೆ.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ವಹ್ನೇರ್ಯಥಾ ಯೋನಿಗತಸ್ಯ ಮೂರ್ತಿಃ
ನ ದೃಶ್ಯತೇ ನೈವ ಚ ಲಿಂಗನಾಶಃ ।
ಸ ಭೂಯ ಏವೇಂಧನಯೋನಿಗೃಹ್ಯಃ
ತದ್ವೋಭಯಂ ವೈ ಪ್ರಣವೇನ ದೇಹೇ ॥ ೧೩ ॥

ಅರಣಿಯೊಳಗೆ ಅವ್ಯಕ್ತವಾಗಿ ನೆಲಸಿರುವ ಬೆಂಕಿಯ ಸ್ವರೂಪವು ಹೊರಗೆ ಕಾಣಬರುವುದಿಲ್ಲ. ಅರಣಿಯನ್ನು ಉಜ್ಜುವುದಕ್ಕೆ ಮೊದಲು ಅದರಲ್ಲಿ ಬೆಂಕಿಯೇ ಕಾಣುವುದಿಲ್ಲ. ಹಾಗಾದರೆ ಬೆಂಕಿಗೆ ಕಾರಣವೆನಿಸಿದ ಅರಣಿಯಲ್ಲಿ ಬೆಂಕಿಯೇ ಇಲ್ಲ ವೆಂದು ಹೇಳುವುದು ಸರಿಯೇ? ಇದು ಸರಿಯಲ್ಲ; ಯಾಕೆಂದರೆ ಬೆಂಕಿ ಹುಟ್ಟಲು ಕಾರಣವೆನಿಸಿದ ಅರಣಿಗಳೆರಡರಲ್ಲಿ ಬೆಂಕಿ ಕಾಣದಂತೆ ಇರುವುದರಿಂದ ಅವನ್ನು ಉಜ್ಜಿ ದಾಗ ಅಲ್ಲಿ ದಾಹವೇ ನಷ್ಟವಾಗಿದೆ ಎಂದು ಹೇಳುವುದು ಸರಿಯಲ್ಲ. ಒಂದು ಕಟ್ಟಿಗೆ ಯಲ್ಲಿರುವ ಬೆಂಕಿ ಮತ್ತೊಂದು ಕಟ್ಟಿಗೆಯ ಸಂಪರ್ಕದಿಂದ ಹೊರಗೆ ಬಂದೇ ಬರುತ್ತದೆ. ಬೆಂಕಿ ಕಟ್ಟಿಗೆಯಲ್ಲಿ ಮೊದಲು ಇದ್ದರೂ ಸಹ ಹೊರಗೆ ಕಾಣಿಸಿಕೊಳ್ಳದೆ ಮತ್ತೊಂದರೊಡನೆ ಉಜ್ಜುವುದರಿಂದ ಹೇಗೆ ಹೊರಗೆಬರುತ್ತದೆಯೋ ಹಾಗೆ ಆತ್ಮನಲ್ಲಿ ಪರಮಾತ್ಮನಿದ್ದರೂ ಸಹ ಪ್ರಣವದ ಜಪದಿಂದಲೇ ಅವನು ಅನುಭವಗೋಚರವಾಗು ವನು. 'ತದ್ವೋಭಯಂ' ಎಂಬಲ್ಲಿ ವಾ ಎಂಬುದಕ್ಕೆ ಇವ ಎಂಬಂತೆ ಸಾದೃಶ್ಯಾರ್ಥ ವನ್ನು ಹೇಳಬೇಕು. ಅಥವಾ ಅದನ್ನು ಮುಂದೆಯಾದರೂ ಅನ್ವಯಿಸಬಹುದು. ಆದರ ಪ್ರಕಾರ "ದೇಹದಲ್ಲಿ ಜೀವಪರಮರಿಬ್ಬರ ಇರುವಿಕೆಯನ್ನು ಪ್ರಣವದಿಂದಲೇ ತಿಳಿಯಬೇಕು. ಆದ್ದರಿಂದ ಆತ್ಮನೊಳಗೆ ಪರಮಾತ್ಮನಿದ್ದರೂ ಅನಾಯಾಸವಾಗಿ ತಿಳಿಯುವುದಿಲ್ಲ; ಆದರೆ ಪ್ರಣವದ ಜಪದಿಂದ ಅವನು ಇದೇ ದೇಹದಲ್ಲಿಯೇ ಜೀವ ನಿಗೆ ಅನುಭವಗೋಚರವಾಗುವನು." ಎಂದು ಅರ್ಥಮಾಡಬೇಕಾಗುತ್ತದೆ.

'ಪ್ರಣವೇನ ದೇಹೇ' ಎಂಬ ಮಂತ್ರದಲ್ಲಿ ಹಿಂದೆ ತಿಳಿಸಿದ್ದ ಅಭಿಪ್ರಾಯವನ್ನೇ ಮುಂದಿನ ಈ ಮಂತ್ರದಲ್ಲಿಯೂ ವಿಶದಪಡಿಸುತ್ತಾನೆ.

ಸ್ವದೇಹಮರಣಿಂ ಕೃತ್ವಾ ಪ್ರಣವಂ ಚೋತ್ತರಾರಣಿಂ ।
ಧ್ಯಾನನಿರ್ಮಥನಾಭ್ಯಾಸಾತ್ ದೇವಂ ಪಶ್ಯೇನ್ನಿಗೂಢವತ್ ॥೧೪॥

ತನ್ನ ಶರೀರವನ್ನು ಅಂದರೆ ಅದರಿಂದ ಸೂಚಿತವಾಗುವ ಹೃದಯ ಅಥವಾ ಜೀವ ನನ್ನು ಅರಣಿಯನ್ನಾಗಿ ಮಾಡಿಕೊಂಡು ಅದರಮೇಲೆ ಪ್ರಣವವನ್ನು ಅಗ್ನ್ಯುತ್ಪಾದಕ ಸಾಮಗ್ರಿಯಾಗಿ ಉಪಯೋಗಿಸಿ ಹೃದಯದಲ್ಲಿ ಪ್ರಣವವನ್ನು ನಿರಂತರವೂ ಧ್ಯಾನಿಸು ವುದರಿಂದಲೇ ತಿಳಿದುಬರುವ ಪರಮಾತ್ಮನನ್ನು ನಿರಂತರವೂ ಮನಸ್ಸಿನಲ್ಲಿ ಅನುಭವಿ ಸುತ್ತಲಿರಬೇಕು. ಒಂದು ಕಟ್ಟಿಗೆಯನ್ನು ಮತ್ತೊಂದರಿಂದ ಉಜ್ಜುವಾಗ ಕಟ್ಟಿಗೆಯಲ್ಲಿ ಬೆಂಕಿ ಹೊರಡುವಂತೆ ಜೀವನು ಯಾವಾಗಲೂ ಹೃದಯದಲ್ಲಿ ಶಿವನನ್ನು ಧ್ಯಾನಿಸುತ್ತ ಲಿದ್ದರೆ ತನ್ನಲ್ಲಿ ಗುಪ್ತವಾಗಿದ್ದ ಶಿವನು ಜೀವನಿಗೆ ಕಾಣಬರುವನು.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಹಿಂದೆ ಹೇಳಿದ ವಿಷಯವನ್ನು ಬಲಪಡಿಸಲು ಕೆಲವು ದೃಷ್ಟಾಂತಗಳನ್ನು ಸಾಧಕರಿಗೆ ಮನವರಿಕೆಯಾಗುವಂತೆ ಮುಂದಿನ ಮಂತ್ರದಲ್ಲಿ ತಿಳಿಸುತ್ತಾನೆ.

ತಿಲೇಷು ತೈಲಂ ದಧನೀವ ಸರ್ಪಿಃ
ಆಪಃ ಸ್ರೋತಸ್ಸ್ವರಣೀಷು ಚಾಗ್ನಿಃ ।
ಏವಮಾತ್ಮಾತ್ಮನಿ ಗೃಹ್ಯತೇಽಸೌ
ಸತ್ಯೇನೈನಂ ತಪಸಾ ಯೋಽನುಪಶ್ಯತಿ ॥ ೧೫ ॥

ಎಳ್ಳನ್ನು ಯಂತ್ರದಲ್ಲಿ ಹಾಕಿ ಅರೆಯುವುದರಿಂದಲೇ ಅದರಲ್ಲಿದ್ದ ಎಣ್ಣೆ ಹೊರಗೆ ಬರುತ್ತದೆ. ಮೊಸರಿನಲ್ಲಿರುವ ತುಪ್ಪವು ಮಂತಿನಿಂದ ಕಡೆದಾಗಲೇ ಹೊರಗೆ ಬರುತ್ತದೆ. ನೀರಿರುವ ಜಾಗಗಳಲ್ಲಿ ಕೊಂಚ ಅಗೆದರೂ ನೀರು ಸಿಕ್ಕುತ್ತದೆ. ಅರಣಿಗಳನ್ನು ಪರಸ್ಪರವಾಗಿ ಉಜ್ಜುವುದರಿಂದಲೇ ಬೆಂಕಿ ಹೊರಗೆ ಬರುತ್ತದೆ. ಹೀಗೆ ಪರಮಾತ್ಮನು ಜೀವನಲ್ಲಿಯೇ ಅನುಭವಗೋಚರವಾಗಬಲ್ಲನು. ಅವನು ಹೇಗೆ ಗೋಚರವಾಗುವನೆಂಬುದನ್ನು ಮುಂದೆ ತಿಳಿಸುತ್ತಾನೆ. ಯಾವನು ಸತ್ಯದಿಂದಲೂ, ತಪಸ್ಸಿನಿಂದಲೂ ನಿಂತರವೂ ತನ್ನೊಳಗೇ ಹುಡುಕುವನೋ ಅವನಿಗೆ ಮಾತ್ರವೇ ತನ್ನಲ್ಲಿ ಪರಮಾತ್ಮನು ಕಾಣಬರುವನು. ಇಲ್ಲಿ ಸರ್ವಭೂತಗಳ ಹಿತವನ್ನು ಬಯಸಿ ಆಚರಿಸುತ್ತಲಿರುವುದೇ ಸತ್ಯವೆನಿಸುತ್ತದೆ. ತಪಸ್ಸೆಂದರೆ ಚಿತ್ತೈಕಾಗ್ರತೆ. ಮನಸ್ಸು ಮತ್ತು ಇಂದ್ರಿಯಗಳ ಏಕಾಗ್ರತೆಯೇ ಉತ್ತಮವಾದ ತಪಸ್ಸೆನಿಸುತ್ತದೆ.

ಹೀಗೆ ತನ್ನಲ್ಲಿಯೇ ತಿಳಿದುಬರುವ ಆತ್ಮವು ಜೀವನಲ್ಲ; ಆದರೆ ಪರಮಾತ್ಮನೇ ಇರುವನೆಂಬುದನ್ನು ತಿಳಿಸಿ ಪ್ರಕೃತವಿಚಾರವನ್ನು ಕೊನೆಗಾಣಿಸುತ್ತಾನೆ.

ಸರ್ವವ್ಯಾಪಿನಮಾತ್ಮಾನಂ ಕ್ಷೀರೇ ಸರ್ಪಿರಿವಾರ್ಪಿತಮ್ ।
ಆತ್ಮವಿದ್ಯಾತಪೋಮೂಲಂ ತದ್ಬ್ರಹ್ಮೋಪನಿಷತ್ಪರಂ
ತದ್ಬ್ರಹ್ಮೋಪನಿಷತ್ಪರಂ ॥ ೧೬ ॥

ಹಾಲಿನಲ್ಲಿ ಗುಪ್ತವಾಗಿ ನೆಲಸಿರುವ ತುಪ್ಪದಂತೆ ಗೋಪ್ಯವಾಗಿ ವ್ಯಾಪಿಸಿರುವ ಪರಶಿವಬ್ರಹ್ಮವೇ ಆತ್ಮವಿದ್ಯೆಗೂ ತಪಸ್ಸಿಗೂ ಮೂಲಾಧಾರವೆನಿಸಿದೆ. "ಎಲ್ಲರ ಹೃದಯದಲ್ಲಿಯೂ ನಾನೇ ನೆಲಸಿದ್ದೇನೆ. "ನನ್ನಿಂದಲೇ ಜನರಿಗೆ ಅರಿವು ಮರವು ನೆನಹು ಇವೆಲ್ಲವೂ ಸಂಭವಿಸುತ್ತವೆ." "ಜೀವರೆಲ್ಲರಿಗೂ ನನ್ನಿಂದಲೇ ಅನೇಕಬಗೆಯ ಭಾವಗಳು ಹುಟ್ಟುತ್ತವೆ." ಈ ಪ್ರಮಾಣಗಳಿಂದ ವಿದ್ಯೆಗಳೆಲ್ಲಕ್ಕೂ ಪರಶಿವಬ್ರಹ್ಮವೇ ಮೂಲವೆನಿಸಿದೆ. ಹೇಗೆ ಎಲ್ಲರಲ್ಲೂ ನೆಲಸಿ ಸತ್ಯನಿಷ್ಠೆಯಿಂದಲೂ, ತಪಶ್ಶಕ್ತಿಯಿಂದಲೂ ತಿಳಿದುಬರುವ ವಸ್ತುವೆಂದರೆ ಪರಮಾತ್ಮನೇ ಹೊರತು ಜೀವನಲ್ಲವೆಂದು ಭಾವಿಸಬೇಕು. ಅಥವಾ ಆತ್ಮಜ್ಞಾನ ಮತ್ತು ತಪಸ್ಸು ಇವೆರಡು ಯಾವನಿಗೆ ಪ್ರಾಪ್ಯಸ್ಥಾನವೆನಿಸಿವೆಯೋ ಅಂತವನೇ ಪರಬ್ರಹ್ಮವೆನಿಸುವನು. ಹೀಗಾದರೂ ಇಲ್ಲಿ ಅರ್ಥಮಾಡಬಹುದು. ಹೀಗೆ ಉಪನಿಷತ್ತಿನಿಂದ ತಿಳಿದುಬರುವ ಪ್ರಯುಕ್ತ ಪರಶಿವಬ್ರಹ್ಮವೇ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಜೀವನೊಳಗೆ ನೆಲಸಿರುವ ವಸ್ತುವೇ ಹೊರತು ಬೇರೆಯಲ್ಲವೆಂಬುದು ಸ್ಪಷ್ಟವಾಗುತ್ತದೆ. ಪರಶಿವನು ಸತ್ಯದಿಂದಲೂ ತಪಸ್ಸಿನಿಂದಲೂ ಜೀವನಿಗೆ ದೊರಕುವನೆಂಬ ಅಂಶವನ್ನು "ಸತ್ಯೇನ ಲಭ್ಯಸ್ತಪಸಾ ಹ್ಯೇಷ ಆತ್ಮಾ" ಎಂದು ಬೇರೆ ಶ್ರುತಿಯಲ್ಲೂ ತಿಳಿಸಲಾಗಿದೆ. ಮಂತ್ರದ ಕೊನೆಯಲ್ಲಿ ದ್ವಿರುಕ್ತಿಯು ಅಧ್ಯಾಯದ ಸಮಾಪ್ತಿಗಾಗಿ ಬಂದಿದೆ.

ದ್ವಿತೀಯಾಧ್ಯಾಯ

"ಸಾಧಕನು ತನ್ನ ದೇಹವನ್ನು ಅರಣಿಯನ್ನಾಗಿಯೂ, ಅದರೊಳಗೆ ಮಥನ ಮಾಡಲಿಕ್ಕಾಗಿ ಪ್ರಣವವನ್ನು ಮೇಲಿನ ಅರಣಿಯನ್ನಾಗಿಯೂ ಮಾಡಿಕೊಂಡು ಧ್ಯಾನವೆಂಬ ಮಥನವನ್ನು ಮತ್ತೆ ಮತ್ತೆ ನಡೆಸುವುದರಿಂದ ದೇಹದೊಳಗೆ ಗಂಭೀರವಾಗಿ ಅಡಗಿರುವ ಭಾವಲಿಂಗವನ್ನು ನಿರ್ಮಲವಾದ ಮನಸ್ಸಿನಲ್ಲಿ ಅನುಭವಿಸಬಹುದು" ಎಂದು ಹಿಂದಿನ ಮಂತ್ರದಲ್ಲಿ ಪರಶಿವಬ್ರಹ್ಮದ ಸಾಕ್ಷಾತ್ಕಾರಕ್ಕೆ ಧ್ಯಾನವೇ ಮುಖ್ಯ ಸಾಧನವೆಂದು ತಿಳಿಸಲಾಗಿದೆ. ಒಂದು ವಸ್ತುವನ್ನು ಎಂದೆಂದಿಗೂ ಮರೆಯದೆ ಮತ್ತೆ ಮತ್ತೆ ಮನಸ್ಸಿನಲ್ಲಿ ಸ್ಮರಿಸಿಕೊಳ್ಳುವುದೇ ಧ್ಯಾನವೆಂದು ಲೋಕದಲ್ಲಿ ಪ್ರಸಿದ್ಧವಾಗಿದೆ. ಎಣ್ಣೆಯನ್ನು ಮೇಲಿಂದ ಕೆಳಕ್ಕೆ ಸುರಿಯುವಾಗ ಅದು ಒಂದೇಸಮನಾಗಿ ಬೀಳುವಂತೆ ಇಷ್ಟವಾದ ವಸ್ತುವನ್ನು ನಿರಂತರವೂ ನೆನೆಯುವುದೇ ಧ್ಯಾನವೆನಿಸಿದೆ. ಈ ಬಗೆಯ ಧ್ಯಾನವು ಚಂಚಲವಾದ ಚಿತ್ತವನ್ನು ವ್ಯವಸ್ಥಿತವಾಗಿ ಒಂದೆಡೆಗೆ ನಿಲ್ಲಿಸದೆ ಇದ್ದರೆ ಯಾರಿಗೂ ಎಂದಿಗೂ ಲಭಿಸಲಾರದು. ಚಿತ್ತೈಕಾಗ್ರತೆಯಾದರೋ ಈ ಚಿತ್ತವೃತ್ತಿಗಳನ್ನು ತಡೆಯುವುದರಿಂದಲೇ ದೊರೆಯಲಿದೆ. ಹೀಗೆ ಇವುಗಳ ನಿರೋಧವೇ ಯೋಗವೆಂದು ಪತಂಜಲಿಮಹರ್ಷಿಗಳು ತಿಳಿಸಿದ್ದಾರೆ. ಆದ್ದರಿಂದ ಧ್ಯಾನಕ್ಕೆ ಸಾಧಕವಾದ ಯೋಗಮಾರ್ಗವನ್ನು ಈ ಅಧ್ಯಾಯದಲ್ಲಿ ತಿಳಿಸಲಾಗಿದೆ. ಪ್ರೇರಕವೆನಿಸಿದ ಪವಿತ್ರಸ್ವರೂಪನಾದ ಪರಮಾತ್ಮನನ್ನು ಮೊದಲಿನ ಮಂತ್ರದಲ್ಲಿ ಪ್ರಶಂಸಿಸಲಾಗಿದೆ.

ಯುಂಜಾನಃ ಪ್ರಥಮಂ ಮನಃ ಸತ್ತ್ವಾಯ ಸವಿತಾ ಧಿಯಃ ।
ಅಗ್ನೇರ್ಜ್ಯೋತಿರ್ನಿಚಾಯ್ಯ ಪೃಥಿವ್ಯಾ ಅಧ್ಯಾಭರತ್ ॥ ೧ ॥

ಯೋಗದಲ್ಲಿ ಪ್ರವರ್ತಿಸುವ ಸಾಧಕನು ಆರಂಭದಲ್ಲಿ ಮನಸ್ಸನ್ನು ಪಳಗಿಸಿಕೊಳ್ಳಬೇಕು. ಇಲ್ಲಿ ಮನಶ್ಶಬ್ದದಿಂದ ಅದರ ವೃತ್ತಿಗಳನ್ನು ಪರಿಗ್ರಹಿಸಬೇಕು. ಇದರಿಂದ ಆ ಬಗೆಯ ಬುದ್ಧಿಗಳನ್ನೋ ಅಥವಾ ಎಲ್ಲ ವ್ಯವಹಾರಗಳಿಗೂ ಕಾರಣವೆನಿಸಿದ ಅಂತಃಕರಣವನ್ನೋ ಇಲ್ಲಿ ಗ್ರಹಿಸಲು ಅನುಕೂಲವಾಗುತ್ತದೆ. ಅದಕ್ಕಾಗಿಯೇ ಧಿಯಃ ಸವಿತಾ = ಸದ್ಬುದ್ಧಿಯನ್ನು ಹುಟ್ಟಿಸುವ ಪರಶಿವಬ್ರಹ್ಮವು ಸಾಧಕನಿಗೆ ತನ್ನ ಯಥಾರ್ಥತತ್ತ್ವವನ್ನು ತಿಳಿಯಪಡಿಸಲಿಕ್ಕಾಗಿ ಅಗ್ನೇರ್ಜ್ಯೋತಿಃ—ಅಗ್ನಿ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಯಂತೆ ತನ್ನನ್ನು ತಾನೇ ಪ್ರಕಾಶಪಡಿಸುವ ತನ್ನ ಬೆಳಕನ್ನು ಸಾಧಕನು ಕಂಡ್ರು ಅನುಭವಿಸಲೆಂದು ಅವನ ಮನಸ್ಸನ್ನು ಈ ಪಾರ್ಥಿವಶರೀರದಲ್ಲಿ ನೆಲೆಗೊಳಿಸಲಿ. ಹೀಗೆ ಇಲ್ಲಿ ಪ್ರಾರ್ಥಿಸಲಾಗಿದೆ. ಧ್ಯಾನದಲ್ಲಿ ತೊಡಗಿದವನಿಗೆ ಸ್ವಪ್ರಕಾಶವೂ, ಸರ್ವವ್ಯಾಪಕವೂ, ಆದ ಪರಮಾತ್ಮನನ್ನು ಈ ಶರೀರದಲ್ಲಿಯೇ ಪರಿಚಯಮಾಡಿಸಿಕೊಡಲಿಕ್ಕಾಗಿ ಆ ಪರಮಾತ್ಮನೇ ಸಾಧಕನ ಮನಸ್ಸನ್ನು ತನಗೆ ಅನುಗುಣವಾಗುವಂತೆ ಮಾಡಿಕೊಳ್ಳಲೆಂದು ಮಹರ್ಷಿಯು ಇಲ್ಲಿ ಪ್ರಾರ್ಥನೆಮಾಡಿದ್ದಾನೆ. ಹೀಗೆ ಪರಮಾತ್ಮನ ಅನುಭವವನ್ನು ಪಡೆಯಲು ಹೊರಡುವ ಈ ಸತ್ಕಾರ್ಯದಲ್ಲಿ ಆ ಪರಮಾತ್ಮನೇ ಜೀವನಿಗೆ ಸಹಾಯಕನಾಗುವನೆಂಬುದೇ ಇಲ್ಲಿಯ ತಾತ್ಪರ್ಯ.

ಹೀಗೆ ಪರಮಾತ್ಮನ ಅನುಭವವನ್ನು ಪಡೆಯಲು ಧ್ಯಾನವನ್ನಾಗಲೀ, ಅದಕ್ಕನುಗುಣವಾದ ಯೋಗವನ್ನಾಗಲೀ ಆಚರಿಸಬೇಕೆಂದು ಇಲ್ಲಿ ತಿಳಿಸಲಾಗಿದೆ.

ಯುಕ್ತೇನ ಮನಸಾ ವಯಂ ದೇವಸ್ಯ ಸವಿತುಃ ಸವೇ ।
ಸುವರ್ಗೇಯಾಯ ಶಕ್ತ್ಯಾ ॥ ೨ ॥

ಪರಶಿವಬ್ರಹ್ಮವೆನಿಸಿದ ಪ್ರಾಣಲಿಂಗದಲ್ಲಿ ಸಮಾವೇಶಗೊಳಿಸಿದ ಮನಸ್ಸಿನಿಂದ ನಾವೂ ಸಹ ಅಮೃತಸ್ಥಿತಿಯನ್ನು ಹೊಂದಲಿಕ್ಕಾಗಿ ಎಲ್ಲ ವಸ್ತುಗಳನ್ನೂ ಬೆಳಗುತ್ತಿರುವ ಪರಮಾತ್ಮನ ಧ್ಯಾನವೆಂಬ ಯಜ್ಞದಲ್ಲಿ ನಮ್ಮ ಶಕ್ತಿಗನುಗುಣವಾಗಿ ಪ್ರಯತ್ನಿಸೋಣವೆಂದು ಮಹರ್ಷಿಗಳು ತಮ್ಮ ದಿವ್ಯಸಂಕಲ್ಪವನ್ನು ಇಲ್ಲಿ ವ್ಯಕ್ತಪಡಿಸಿರುವರು. ಇದರಿಂದ ಸಾಧಕರಿಗೆ ಒಂದು ಮಾರ್ಗವನ್ನು ತೋರಿಸಿದಂತಾಯಿತು.

ಇದೇ ಅಭಿಪ್ರಾಯವನ್ನೇ ಮುಂದಿನಮಂತ್ರದಲ್ಲಿಯೂ ವಿವರಿಸಲಾಗಿದೆ.

ಯುಕ್ತ್ವಾಯ ಮನಸಾ ದೇವಾನ್ ಸುವರ್ಯತೋ ಧಿಯಾ ದಿವಃ ।
ಬೃಹಜ್ಜ್ಯೋತಿಃ ಕರಿಷ್ಯತಃ ಸವಿತಾ ಪ್ರಸುವಾತಿ ತಾನ್ ॥ ೩ ॥

ತಾನು ಬೆಳಗುತ್ತಲೇ ಎಲ್ಲ ವಸ್ತುಗಳನ್ನೂ ಬೆಳಗಿಸುತ್ತಿರುವ ಪರಮಾತ್ಮನು ಕಣ್ಣು ಮೊದಲಾದ ಜ್ಞಾನೇಂದ್ರಿಯಗಳನ್ನು ಮನಸ್ಸಿನಲ್ಲಿ ನೆಲೆಗೊಳಿಸಿ ಪೂರ್ಣಸುಖವೆನಿಸಿದ ತನ್ನ ಸಮೀಚೀನವಾದ ಜ್ಞಾನವನ್ನು ಜೀವನಿಗೆ ಪ್ರಕಾಶಪಡಿಸಲಿಕ್ಕಾಗಿ ಇಂದ್ರಿಯಗಳನ್ನು ತನಗೆ ಅನುಕೂಲವನ್ನಾಗಿ ಮಾಡಿಕೊಳ್ಳಲಿ. ಹೀಗೆ ಪರಮಾತ್ಮನ ಅನುಗ್ರಹದಿಂದ ಅಂಗೇಂದ್ರಿಯಗಳೆಲ್ಲವೂ ಲಿಂಗೇಂದ್ರಿಯಗಳಾಗಿ ಪರಿಣಮಿಸುತ್ತವೆ. ಅಂಗನೆಂದರೆ ಪರಮಾತ್ಮನ ಲೀಲೆಗೆ ವಿನೋದಭೂಮಿ ಎನಿಸಿದ ಸುಸಂಸ್ಕೃತಶುದ್ಧಜೀವ ಸಂದರ್ಭ. ಪರಮಾತ್ಮನನ್ನು ನಿರಂತರವೂ ಚಿಂತಿಸುವ ಜೀವನಿಗೆ ಮನಸ್ಸು ಬುದ್ಧಿ ಇಂದ್ರಿಯಗಳೆಲ್ಲವೂ ತನ್ನವೆಂಬ ಭಾವನೆಯು ತೊಲಗುವುದು. ಆಗ ಅವೆಲ್ಲವೂ ಪರಮಾತ್ಮನವೆಂದೂ, ತಾನೂ ಪರಮಾತ್ಮನ ಕಡೆಯ ಸೇವಕನೆಂದೂ ಅವನು ಭಾವಿಸತೊಡಗುವನು. ಈ ದೇಹದಲ್ಲಿ ಇಂದ್ರಿಯಗಳೊಡನೆ ತಾನೇ ವ್ಯವಹರಿಸುತ್ತಿರುವು

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ದಾಗಿ ಭಾವಿಸುವವನು ಕೇವಲ ಅಜ್ಞಾನಿ; ಆದರೆ ಸದ್ಭಕ್ತನು ಈ ದೇಹದ ಎಲ್ಲಾ ವ್ಯವಹಾರಗಳನ್ನೂ ಪರಮಾತ್ಮನೇ ತನ್ನ ಸಾಧನಗಳೆನಿಸಿದ ಇಂದ್ರಿಯಗಳ ಮೂಲಕ ತನ್ನ ಸೇವಕನ ಕಡೆಯಿಂದ ನಡೆಸಿಕೊಳ್ಳುತ್ತಿರುವನೆಂದು ಭಾವಿಸುವನು. ಹೀಗೆ ಸದ್ಬುದ್ಧಿಯನ್ನು ಹುಟ್ಟಿಸುತ್ತಿರುವ ಪರಮಾತ್ಮನು ನಮ್ಮ ಇಂದ್ರಿಯಗಳನ್ನು ಭೋಗ್ಯವಿಷಯಗಳ ಕಡೆಯಿಂದ ಹಿಂತಿರುಗಿಸಿ ಕ್ರಮವಾಗಿ ತನ್ನ ಕಡೆಗೆ ತಿರುಗಿಸಿ ಕೊಂಡು ನಮಗೆ ತನ್ನ ಅನುಭವವನ್ನು ದೊರಕಿಸುವನು. ತನ್ನ ಪರಿಚಯದಿಂದ ಸಾಧಕನಿಗೆ ತನ್ನೊಡನೆ ಸಮಾಗಮವನ್ನು ಪರಮಾತ್ಮನು ಆದಷ್ಟು ಸುಗಮಗೊಳಿಸುವ ನೆಂಬುದು ಇಲ್ಲಿಯ ಆಶಯ. ಆದ್ದರಿಂದ ಸಾಧಕರ್ಯಾರೂ ತಮ್ಮ ಯೋಗಮಾರ್ಗದಲ್ಲಿ ನಿರಾಶರಾಗಬೇಕಾಗಿಲ್ಲವೆಂದೂ, ಯೋಗವು ಎಲ್ಲರಿಗೂ ಸಾಧ್ಯವೆಂದೂ ಇಲ್ಲಿ ತಿಳಿಸಿದೆ.

ಯುಂಜತೇ ಮನ ಉತ ಯುಜ್ಯತೇ ಧಿಯಃ
ವಿಪ್ರಾ ವಿಪ್ರಸ್ಯ ಬೃಹತೋ ವಿಪಶ್ಚಿತಃ ।
ವಿ ಹೋತ್ರಾ ದಧೇ ವಯುನಾವಿದೇಕ ಇತ್
ಮಹೀ ದೇವಸ್ಯ ಸವಿತುಃ ಪರಿಷ್ಟುತಿಃ ॥ ೪ ॥

ವಿಪ್ರಾಃ—ಪರಶಿವಬ್ರಹ್ಮದ ಅನುಭವವನ್ನು ಪಡೆಯಲು ಉತ್ಕಟವಾದ ಇಚ್ಛೆ ಯುಳ್ಳವರು ಪರಶಿವಬ್ರಹ್ಮದಲ್ಲಿಯೇ ಮನಸ್ಸನ್ನು ನೆಲೆಗೊಳಿಸುತ್ತಾರೆ. ಅದರಂತೆಯೇ ಬುದ್ಧಿ ಮೊದಲಾದ ಸಾಧನಗಳೆಲ್ಲವನ್ನೂ ಅಲ್ಲಿಯೇ ಸೇರಿಸುತ್ತಾರೆ. ಅವರಿಗೆ ಎಲ್ಲಾ ವ್ಯವಹಾರಗಳೂ ಪರಶಿವನ ಸಂಕಲ್ಪದಂತೆ ಅವನ ಸಂತೋಷಕ್ಕಾಗಿಯೇ ನೆರವೇರು ತ್ತವೆ. ಮಂತ್ರದಲ್ಲಿ ಬುದ್ಧಿ ಮನಸ್ಸು ಎಂಬ ಪದಗಳಿಂದ ಎಲ್ಲಾ ಇಂದ್ರಿಯಗಳನ್ನೂ ಪರಿಗ್ರಹಿಸಬೇಕು. ಇಂದ್ರಿಯಗಳೇ ಈ ಪ್ರಪಂಚದ ವ್ಯವಹಾರಗಳನ್ನು ನಡೆಸುತ್ತ ಲಿವೆ. ಸಾಧಕನು ಇವೆಲ್ಲವನ್ನೂ ಪರಶಿವಬ್ರಹ್ಮದ ಇಚ್ಛೆ ಎಂದೇ ಭಾವಿಸಬೇಕು. ಹೀಗೆ ಅವನಿಗೆ ವ್ಯವಹಾರಗಳೆಲ್ಲವೂ ಸರ್ವವ್ಯಾಪಕನೂ ಸರ್ವಜ್ಞನೂ ಸರ್ವಶಕ್ತನೂ ಆದ ಪರಶಿವಬ್ರಹ್ಮದ ಆರಾಧನವೇ ಆಗಿ ಪರಿಣಮಿಸುತ್ತವೆ. ಹೀಗೆ ದೇಹದಲ್ಲಿ ಎಲ್ಲ ವ್ಯವಹಾರಗಳನ್ನು ಸ್ವಪ್ರಕಾಶದಿಂದ ನಿರ್ಲಿಪ್ತನಾಗಿ ನಡೆಸುತ್ತಿರುವ ಪರಮಾತ್ಮನನ್ನು ಶ್ವೇತಾಶ್ವತರಮಹರ್ಷಿಯು ಮತ್ತೆ ಭಕ್ತಿಯಿಂದ ಪ್ರಶಂಸಿಸುತ್ತಾನೆ. ಭಗವಂತನ ಆರಾಧನರೂಪವಾದ ಯಜ್ಞ; ಅವನ ಪ್ರೀತ್ಯರ್ಥವಾಗಿ ಮಾಡುವ ದಾನಾದಿಕ್ರಿಯೆ ಗಳು ಇವೆಲ್ಲವನ್ನೂ ನಡೆಸುತ್ತಿರುವ ಸಾಧಕನ ಅಂತರಂಗಿಕ ಅಭಿಪ್ರಾಯವನ್ನು ತಿಳಿ ಯಲಿಕ್ಕೆ ಸರ್ವವ್ಯಾಪಕನಾದ ಪರಮಾತ್ಮನೊಬ್ಬನೇ ಸಮರ್ಥನಿರುವನು. ಯಾವ ಕ್ರಿಯೆಯನ್ನಾಗಲೀ ಸಾಧಕನು ತನ್ನ ಸಂತೋಷಕ್ಕೆಂದು ಭಾವಿಸದೆ ತನ್ನೊಳಗೆ ನಿರ್ಲಿಪ್ತನಾಗಿ ನೆಲಸಿರುವ ಪರಮಾತ್ಮನ ಸಂತೋಷಕ್ಕೆಂದು ಭಾವಿಸಿದರೆ ಆಗ ಎಲ್ಲಾ ಕ್ರಿಯೆಗಳನ್ನೂ ಅವನೇ ಯುಕ್ತರೀತಿಯಲ್ಲಿ ನಡೆಸಿಕೊಂಡು ಸಾಧಕನಿಗೆ ತನ್ನ ಪ್ರಸಾದ ವನ್ನು ಕರುಣಿಸುವನು. ಹೀಗೆ ಸಾಧಕನು ಶಿವನ ಕೃಪಾದೃಷ್ಟಿಯನ್ನು ಪಡೆಯುವನು.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಯುಜೇ ವಾಂ ಬ್ರಹ್ಮ ಪೂರ್ವ್ಯಂ ನಮೋಭಿಃ
ವಿಶ್ಲೋಕ ಏತು ಪಥ್ಯೇವ ಸೂರೇಃ ।
ಶೃಣ್ವಂತು ವಿಶ್ವೇ ಅಮೃತಸ್ಯ ಪುತ್ರಾಃ
ಆ ಯೇ ಧಾಮಾನಿ ದಿವ್ಯಾನಿ ತಸ್ಥುಃ ॥ ೫ ॥

ಬ್ರಹ್ಮಚಿಂತಕರು ಪರಮಶಿವನನ್ನೇ ಮುಂದಿಟ್ಟುಕೊಂಡು ವ್ಯವಹರಿಸುವರು. ಸರ್ವವ್ಯಾಪಕವಾದ ಬ್ರಹ್ಮವನ್ನೇ ಒಳಗೂ ಹೊರಗೂ ಕಾಣುತ್ತ ಅದಕ್ಕೆ ಪೂರ್ಣವಾಗಿ ಅಧೀನರಾದ್ದರಿಂದ ಬ್ರಹ್ಮಚಿಂತಕರೆಲ್ಲರೂ ಬ್ರಾಹ್ಮಣರೆನಿಸುತ್ತಾರೆ. ಜಗತ್ತೇ ಅಖಂಡಲಿಂಗವೆನಿಸಿರುವುದರಿಂದ ಇಲ್ಲಿ ನಡೆಯುವ ಎಲ್ಲಾ ವ್ಯವಹಾರಗಳೂ ಲಿಂಗಕ್ಕೇ ಅಧೀನವಾಗಿರುವುವೆಂದು ಭಾವಿಸುವವರೇ ಲಿಂಗಾಯತರೆನಿಸುವರು. ಎಲ್ಲವನ್ನೂ ಶಿವಲಿಂಗದ ಸಂತೋಷಕ್ಕಾಗಿಯೇ ನಡೆಸಿಕೊಂಡು ಹೋಗಬೇಕೆಂಬ ವೀರವ್ರತವನ್ನು ಕೈಕೊಂಡಿರುವುದರಿಂದಲೇ ಬ್ರಹ್ಮಚಿಂತಕರಿಗೆ ವೀರಶೈವರೆಂಬ ಹೆಸರೂ ಸಲ್ಲುತ್ತದೆ. ಹೀಗೆ ಬ್ರಹ್ಮದಲ್ಲಿಯೇ ರಮಿಸುವವನು ಬ್ರಾಹ್ಮಣನೆನಿಸುವಂತೆ ಪರಬ್ರಹ್ಮವೆನಿಸಿದ ಅಖಂಡಲಿಂಗಕ್ಕೆ ಅಧೀನನಾಗಿ ಆ ಲಿಂಗದ ಇಚ್ಛೆಯಂತೆಯೇ ವ್ಯವಹರಿಸುವ ವೀರವ್ರತವನ್ನು ಕೈಗೊಂಡವನು ಲಿಂಗಾಯತ ಅಥವಾ ವೀರಶೈವನೆನಿಸುಸುವನು. ಹೀಗೆ ಬ್ರಾಹ್ಮಣ, ಲಿಂಗಾಯಿತ, ವೀರಶೈವ ಈ ಮೂರು ಪದಗಳೂ ಕೇವಲ ಒಂದು ಜಾತಿಗೆ ಅನ್ವಯಿಸದೆ ಶಿವನ ಕಡೆಗೆ ಮನೋವರ್ತನೆಯುಳ್ಳವರೆಲ್ಲರಿಗೂ ಅನ್ವಯಿಸುತ್ತದೆ ಎಂಬ ವಿಶಾಲಭಾವನೆಯನ್ನು “ ವಿಪ್ರಾಸ್ತಂ ಯುಂಜತೇ ” ಎಂಬ ಹಿಂದಿನ ಮಂತ್ರದಲ್ಲಿ ತಿಳಿಸಲಾಗಿದೆ. ಮತ್ತೆ ಇಲ್ಲಿಯೂ ಅದೇ ಅಭಿಪ್ರಾಯವನ್ನು ವಿಶಾಲಗೊಳಿಸಲಾಗುವುದು. ಪೂರ್ವ್ಯಂ–ಎಲ್ಲಕ್ಕೂ ಮೂಲಕಾರಣವೆನಿಸಿದ್ದು ಮೊದಲು ಆವಿರ್ಭವಿಸಿದ ಶಕ್ತಿ ಮತ್ತು ಶಕ್ತ ಎಂದು ಎರಡು ಬಗೆಯಾಗಿ ಶೋಭಿಸುತ್ತಿರುವ ವಾಂ–ನಿಮ್ಮನ್ನು ನಮಸ್ಕಾರಗಳಿಂದ ಸಂತೋಷಪಡಿಸುತ್ತೇನೆ. ಇಲ್ಲಿ “ಬ್ರಹ್ಮಸ್ವರೂಪರಾದ ನಿಮ್ಮನ್ನು ” ಎಂದು ಹೇಳಿರುವುದರಿಂದ ಶಕ್ತಿ–ಶಕ್ತಿಮಂತ ಪರಮಾತ್ಮ ಇಬ್ಬರನ್ನು ಬ್ರಹ್ಮಪದದಿಂದಲೇ ಕರೆಯಲಾಗಿದೆ. ಇದರಿಂದ ಪರಮಾತ್ಮನ ಪ್ರಾಣಸ್ವರೂಪವಾದ ಶಕ್ತಿ ಪರಮಾತ್ಮನಂತೆಯೇ ಸಚ್ಚಿದಾನಂದರೂಪವೆಂದೂ, ಅವನಿಂದ ಅದಕ್ಕೆ ಎಂದಿಗೂ ವಿಯೋಗವಿಲ್ಲದ್ದರಿಂದ ಅದು ಅವನಲ್ಲಿ ಸ್ವಾಭಾವಿಕವೆಂದೂ, ಅದು ಇಚ್ಛಾಜ್ಞಾನಕ್ರಿಯಾರೂಪವೆಂದೂ, ಆದ್ದರಿಂದಲೇ ಪರಮಾತ್ಮನು ಶಕ್ತಿವಿಶಿಷ್ಟನೆಂದೂ ಸ್ಪಷ್ಟವಾಗಿ ತಿಳಿಸಿದಂತಾಯಿತು. “ತದೀಯಾ ಪರಮಾ ಶಕ್ತಿಃ ಸಚ್ಚಿದಾನಂದಲಕ್ಷಣಾ ” ಎಂದು ರೇಣುಕಭಗವತ್ಪಾದರು ತಮ್ಮ ನಿಲುವನ್ನು ಈ ಬಗ್ಗೆ ಸ್ಪಷ್ಟಪಡಿಸಿದ್ದಾರೆ. “ ಪರಾಽಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ ” ಎಂದು ಇದೇ ಉಪನಿಷತ್ತಿನಲ್ಲಿ ಪರಾಶಕ್ತಿಯನ್ನು ಜ್ಞಾನಕ್ರಿಯಾರೂಪವೆಂದೂ, ಅದು ಪರಮಾತ್ಮನ ಸ್ವಭಾವವೆಂದೂ ಮತ್ತು ಅನಂತವಿಧವೆಂದೂ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ತಿಳಿಸಲಾಗಿದೆ. ಅಲ್ಲಿಗೆ ಶಕ್ತಿಯೊಂದೇ ಅಥವಾ ಶಕ್ತನೊಬ್ಬನೇ ಜಗತ್ಕಾರಣವೆನಿಸದೆ ಶಕ್ತಿವಿಶಿಷ್ಟಪರಶಿವಬ್ರಹ್ಮವೇ ಜಗತ್ಕಾರಣವೆನಿಸಿರುವ ಅಂಶವು ಇದರಿಂದ ತಿಳಿದು ಬರುತ್ತದೆ. ಮಂತ್ರದಲ್ಲಿ "ಪೂರ್ವ್ಯ" ಎಂಬ ಪದದಿಂದ ಪರಶಿವಬ್ರಹ್ಮವು ಸೃಷ್ಟಿಯ ಆರಂಭದಿಂದಲೂ ಅಂದರೆ ಪ್ರಳಯಕಾಲದಲ್ಲೂ ಶಕ್ತಿವಿಶಿಷ್ಟವೇ ಆಗಿತ್ತೆಂದು ತಿಳಿಸಿ ದಂತಾಯಿತು. ಇಂತಹ ಪರಶಿವಬ್ರಹ್ಮವು ಶಕ್ತಿಸಂಪನ್ನವೆನಿಸಿಯೇ ಭಕ್ತಾನುಗ್ರಹ ಲೀಲೆಯನ್ನು ನಡೆಸುತ್ತಿರುವುದರಿಂದ ಆ ಪರಂಜ್ಯೋತಿಯನ್ನು ನಮ್ಮ ಪಾಶವಿಮೋ ಚನೆಗಾಗಿಯೂ ನಾವು ನಮಸ್ಕರಿಸಬೇಕಾಗಿದೆ. ಹೀಗೆ ನಮಸ್ಕರಿಸುವವನಿಗೆ ತನ್ನ ಇಷ್ಟಾರ್ಥವು ಸಿದ್ಧಿಸುವುದರಲ್ಲಿ ಸಂದೇಹವಿಲ್ಲ. ಉತ್ತಮಸಾಧಕನಿಗಲ್ಲದೆ ಬೇರೆಯ ವರಿಗೆ ಅಮೃತಫಲವು ಲಭಿಸಲಾರದು. ಮೇಲೆಮೇಲೆ ವ್ಯವರಿಸುವವನಿಗೆ ಯಾವ ಫಲವೂ ದೊರಕುವುದಿಲ್ಲ. ಒಳಹೊಕ್ಕು ಪ್ರವೇಶಿಸುವವನೇ ಭಾಗ್ಯರತ್ನವನ್ನು ಪಡೆಯ ಬಲ್ಲನು. ಕವನಮಾಡುವ ಪಂಡಿತನಿಗಲ್ಲದೆ ಮೂರ್ಖನಿಗೆ ಕೀರ್ತಿ ದೊರಕಲಾರದು. ಹೀಗೆ ಬ್ರಹ್ಮಪ್ರಾಪ್ತಿಯ ವಿಜಯವು ಬ್ರಹ್ಮಚಿಂತಕನಿಗಲ್ಲದೆ ವ್ಯಾವಹಾರಿಕನಿಗೆ ಲಭಿಸ ಲಾರದು. ಹೀಗೆ ಶ್ವೇತಾಶ್ವರಮಹರ್ಷಿಯು ತನ್ನನ್ನು ಪರಶಿವಬ್ರಹ್ಮದ ಚಿಂತನೆಯಲ್ಲಿ ಪಳಗಿಸಿಕೊಂಡಂತೆ ಬೇರೆಯವರೂ ಹೀಗೆಯೇ ಪರಶಿವಬ್ರಹ್ಮಚಿಂತಕರಾಗಲೆಂದು ಹೃತ್ಪೂರ್ವಕವಾಗಿ ಬಯಸುತ್ತಾನೆ. "ಎಲ್ಲರೂ ಸುಖಿಗಳಾಗಲಿ" ಎಂಬುದೇ ಪ್ರತಿ ಯೊಬ್ಬನ ದೈನಂದಿನಪ್ರಾರ್ಥಯಾಗಬೇಕಾದ ಪ್ರಯುಕ್ತ ಮಹರ್ಷಿಯು ಲೋಕದ ಮಾನವರೆಲ್ಲರನ್ನೂ ಬ್ರಹ್ಮಚಿಂತನೆಯಕಡೆಗೆ ಪ್ರೇರಿಸುತ್ತಾನೆ. "ದಿವ್ಯವಸ್ತುವಿನೊಡನೆ ಸಮರಸವಾಗಿ ಬೆರೆಯಬೇಕೆಂಬ ಆಶೆಯುಳ್ಳ ನೀವೆಲ್ಲರೂ ಅಮೃತಸ್ವರೂಪನಾದ ಆ ಪರಮಾತ್ಮನ ಮಕ್ಕಳೇ ಆಗುವಿರಿ. ಹೀಗೆ ನೀವೆಲ್ಲರೂ ಭಗವಂತನ ಅಂಶವೆನಿಸಿ ಅವನೊಡನೆ ಬೆರೆಯಲು ಯೋಗ್ಯರೇ ಇರುವಿರಿ, ಆದ್ದರಿಂದ ನಾನು ಹೇಳಿರುವುದನ್ನು ಶ್ರದ್ಧೆಯಿಂದ ಕೇಳಿ ಯೋಗಮಾರ್ಗದಲ್ಲಿ ನಡೆದು ನೀವೆಲ್ಲರೂ ಈ ದೇಹದಲ್ಲಿರು ವಾಗಲೇ ಅಮೃತಫಲವನ್ನು ಸವಿಯಿರಿ" ಎಂದು ಮಹರ್ಷಿಯು ಮುಕ್ತಕಂಠದಿಂದ ಸಾಧಕರೆಲ್ಲರಿಗೂ ಮಾರ್ಗದರ್ಶನಮಾಡಿದ್ದಾನೆ.

ಹೀಗೆ ಪರಮಾತ್ಮನನ್ನು ಸ್ತುತಿಸುತ್ತ ಯಾರು ತಮ್ಮ ಪಾಶವಿಮೋಚನೆಯನ್ನು ಬಯಸುವರೋ ಅವರೇ ಪರಮಾತ್ಮನಲ್ಲಿ ಸಮರಸವಾಗಿ ಬೆರೆಯುವರೆಂದು ತಿಳಿಸಿ ಯಾರಿಗೆ ಇಂತಹ ಇಚ್ಛೆ ಇರುವುದಿಲ್ಲವೋ ಅವರು ಕೇವಲ ಕರ್ಮಗಳಲ್ಲಿಯೇ ನಿರತ ರಾಗಿ ದುಃಖಿಗಳಾಗುವರೆಂದು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಅಗ್ನಿರ್ಯತ್ರಾಭಿಮಥ್ಯತೇ ವಾಯುರ್ಯತ್ರಾಧಿರುಧ್ಯತೇ ।
ಸೋಮೋ ಯತ್ರಾತಿರಿಚ್ಯತೇ ತತ್ರ ಸಂಜಾಯತೇ ಮನಃ ॥ ೬ ॥

ವೈಶ್ವಾನರಾಗ್ನಿಯು ಪ್ರಜ್ವಲಿಸುವುದರಿಂದ ಸಾಧಕನಿಗೆ ಯಾವಕರ್ಮದಲ್ಲಿ ಅಗ್ನಿ ಮಾಂದ್ಯ ಮೊದಲಾದ ದೋಷಗಳು ಸಂಭವಿಸದೆ ಪರಮಾತ್ಮನ ಸೇವೆ ಸುಗಮವಾಗು

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ವುದೋ, ಪರಮಾತ್ಮನ ಸ್ತೋತ್ರರೂಪವಾದ ಮಂತ್ರಗಳನ್ನು ಉಚ್ಚರಿಸಲು ಯಾವ ಕರ್ಮದಿಂದ ಪ್ರಾಣವಾಯು ಅನುಕೂಲವಾಗುವುದೋ, ಯಾವುದರಿಂದ ಉಮಾಶಕ್ತಿ ವಿಶಿಷ್ಟನಾದ ಪರಮಾತ್ಮನ ಅನುಭವ ದೊರಕಬಲ್ಲದೋ ಅಂತಹ ಶಿವಯಜ್ಞರೂಪವಾದ ಸತ್ಕರ್ಮದಲ್ಲಿಯೇ ಮುಮುಕ್ಷುವಿನ ಮನಸ್ಸು ಸಂಬಂಧಿಸಿರುತ್ತದೆ. ಶಿವನ ಪ್ರೀತಿಯನ್ನು ಬಯಸದವರು ಮಾಡುವ ಯಜ್ಞಗಳಿಗೆ ಸ್ವರ್ಗಸುಖವೇ ಫಲವೆನಿಸುವುದಲ್ಲದೆ ಬ್ರಹ್ಮಪ್ರಾಪ್ತಿಗೆ ಅಲ್ಲಿ ಅವಕಾಶವನೇ ಇರುವುದಿಲ್ಲವೆಂದು ವ್ಯಂಗ್ಯವಾಗಿ ಸ್ವರ್ಗಾಪೇಕ್ಷಿಗಳನ್ನು ನಿಂದಿಸಿದ್ದರಿಂದ ಸಾಧಕನು ಸ್ವರ್ಗದ ವ್ಯಾಮೋಹವನ್ನು ತೊರೆಯಬೇಕು.

ಪರಶಿವಬ್ರಹ್ಮದ ಸಮಾಗಮವನ್ನು ಬಯಸುವವರೇ ಶ್ರೇಷ್ಠರೆಂದು ತಿಳಿಸುತ್ತಾನೆ.

ಸವಿತ್ರಾ ಪ್ರಸವೇನ ಜುಷೇತ ಬ್ರಹ್ಮ ಪೂರ್ವ್ಯಮ್ ।
ತತ್ರ ಯೋನಿಂ ಕೃಣ್ವಸೇ ನಹಿ ತೇ ಪೂರ್ವಮಕ್ಷಿಪತ್ ॥ ೭ ॥

ಸಾಧಕರು ತಮಗೆ ಇಷ್ಟಾರ್ಥಗಳೆಲ್ಲವನ್ನೂ ದೊರಕಿಸುವ ಪರಮಾತ್ಮನ ಅನುಗ್ರಹದಿಂದ ಸರ್ವಕಾರಣನಾದ ಆ ಪರಮಾತ್ಮನೊಡನೆಯೇ ಸಮಾನವಾಗಿ ಬೆರೆಯಲಿಕ್ಕಾಗಿ ಅವನನ್ನೇ ಆಶ್ರಯಿಸಬೇಕು. ಅವರು ಶಿವನಲ್ಲಿಯೇ ನಿಷ್ಠೆಯಿಂದ ಅಂಟಿಕೊಳ್ಳಬೇಕು. ಹೀಗೆ ಸ್ವರ್ಗಫಲವನ್ನು ಚಿಂತಿಸದೆ ಅದಕ್ಕಾಗಿಯೇ ನಡೆಸುವ ಯಜ್ಞಯಾಗಗಳಿಗೂ ಅಂಟಿಕೊಳ್ಳದೆ ಯಾವಾಗಲೂ ಪರಮಾತ್ಮನ ಚಿಂತನೆಯಲ್ಲಿಯೇ ಸಾಧಕನ್ನು ಶ್ರೌತಸ್ಮಾರ್ತಕರ್ಮಗಳನ್ನು ನಿತ್ಯಕರ್ಮವೆಂದು ಆಚರಿಸಿದರೂ ಅವು ಅವನನು ಸ್ವರ್ಗಾದಿಭೋಗದಲ್ಲಿ ಕೆಡಹದೆ ಮಲಪಾಶವನ್ನು ತೊಲಗಿಸುತ್ತವೆ. ಪರಶಿವಬ್ರಹ್ಮದೊಡನೆ ಸಮರಸಮವಾಗಿ ಬೆರೆಯುವ ಇಚ್ಛೆಯಿಂದ ಆಚರಿಸುವ ನಿತ್ಯನೈಮಿತ್ತಿಕ ಕರ್ಮಗಳು ಸಾಧಕನನ್ನು ಬಂಧಿಸಲಾರವು. "ಈ ಲೋಕದಲ್ಲಿ ಕರ್ಮಗಳನ್ನಾಚರಿಸುತ್ತಲೇ ಸಾಧಕನು ನೂರುವರ್ಷ ಬದುಕಬೇಕು. ಹೀಗೆ ಬಾಳುವವನಿಗೇ ಕರ್ಮವು ಅಂಟುವುದಿಲ್ಲ. ಅಂತವನೇ ಕರ್ಮದ ಸಂಕೋಲೆಯಿಂದ ಬಿಡಿಸಿಕೊಳ್ಳಬಲ್ಲನು" ಎಂದು ಈಶಾವಾಸ್ಯೋಪನಿಷತ್ತು ತಿಳಿಸಿದೆ. "ಶಿವಭಾವನೆಯಿಂದ ಶಿವಪ್ರೀತ್ಯರ್ಥವಾಗಿ ನಿತ್ಯನೈಮಿತ್ತಿಕಾದಿಕರ್ಮಗಳನ್ನು ಯೋಗಿಯು ಆಚರಿಸಿದರೂ ಅವನಿಗೆ ಆ ಕರ್ಮದ ಗುಣದೋಷಗಳು ಬಾಧಿಸಲಾರವು." ಹೀಗೆ ಸಾಧಕನು ಆಗಾಗ ಪಡೆಯುವ ಭೋಗ್ಯ ವಿಷಯುಗಳನ್ನು ಆಗಲೇ ತನ್ನ ಹೃದಯದಲ್ಲಿ ಪ್ರಕಾಶಿಸುತ್ತಿರುವ ಶಿವನಿಗೆ ಸಮರ್ಪಿಸುವುದೇ ಅವನ ಯಜ್ಞವೆನಿಸುತ್ತದೆ. ಹೀಗೆ ಯಜ್ಞವನ್ನು ಆಚರಿಸುವ ಯೋಗಿಗಳ ನಿತ್ಯನೈಮಿತ್ತಿಕಾದಿಕರ್ಮಗಳು ಅವರನ್ನು ಬಂಧಿಸುವುದಿಲ್ಲವೆಂದು ರೇಣುಕಗೀತೆಯು ತಿಳಿಸಿದೆ. ಅವೆಲ್ಲವನ್ನೂ ಪರಶಿವನ ಸಂತೋಷಕ್ಕಾಗಿಯೇ ಅವರು ನಡೆಸುವುದರಿಂದ ಅವನಿಗೆ ಕರ್ಮಲೋಪವಿಲ್ಲ. ಹೃದಯದ ಮಧ್ಯದಲ್ಲಿ ಪ್ರಕಾಶಿಸುವ ಜ್ಞಾನಸೂರ್ಯನನ್ನು ಯಾವಾಗಲೂ ಸ್ಮರಿಸುವುದೇ ಶಿವಯೋಗಿಗಳಿಂದ ನಡೆಯಬೇಕಾದ ಸಂಧ್ಯಾವಂದನವೆನಿಸುವುದೆಂದು ಶ್ರೀ ರೇಣುಕಭಗವತ್ಪಾದರು ಅಗಸ್ತ್ಯಮಹರ್ಷಿಗೆ ಬಹಳ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಹಿಂದೆಯೇ ಉಪದೇಶಿಸಿರುವರು. ಅದು ಈ ಕಾಲದಲ್ಲಿ ವ್ಯವಹಾರಮಗ್ನರಾದ ಯುವ ಯುವತಿಯರೆಲ್ಲರಿಗೂ ನೆನಪಿನಲ್ಲಿರಬೇಕು. ಶ್ರುತಿಸ್ಮೃತಿಗಳೆಲ್ಲವೂ ಈಶ್ವರನಿಂದಲೇ ಬಂದಿರುವುದರಿಂದ ಅಲ್ಲಿ ಹೇಳಿರುವ ಕರ್ಮಗಳನ್ನು ಸಾಧಕರು ನಡೆಸಲೇಬೇಕು. ಆಗಾಗ ವ್ಯವಹಾರಕಾಲದಲ್ಲಿ ಒದಗುವ ಸುಖದುಃಖಗಳನ್ನೂ, ಸ್ತುತಿನಿಂದೆಗಳನ್ನೂ ಆಗಲೇ ಸಾಧಕನು ತನ್ನೊಳಗೆ ನಿರ್ಲಿಪ್ತನಾಗಿ ನೆಲಸಿರುವ ಪರಶಿವನೆಂಬ ಅಗ್ನಿಯಲ್ಲಿ ಭಕ್ತಿಯಿಂದ ಸಮರ್ಪಿಸುವುದೇ ಅವನು ನಡೆಸುವ ಹೋಮವೆನಿಸುತ್ತದೆ ಎಂದು ಅವರು ತಿಳಿಸಿರುವ ಮಾರ್ಗವು ಸಾಧಕರೆಲ್ಲರಿಗೂ ಆದರಣೀಯವಾಗಿದೆ. ಆದರೆ ಪೂಜ್ಯ ಪಾದರು ತಿಳಿಸಿರುವ ಹೋಮುವಾದರೋ ದೇವತೆಗಳ ಪ್ರೀತಿಗಾಗಿ ನಡೆಸುವ ಪ್ರಾಕೃತ ಯಜ್ಞವೆನಿಸದೆ ಶಿವಯಜ್ಞವೆನಿಸುತ್ತದೆ. ರೇಣುಕಗೀತೆ ಎನಿಸಿರುವ ಸಿದ್ಧಾಂತ ಶಿಖಾಮಣಿಯಲ್ಲಿ ಶಿವಯಜ್ಞದ ವಿವರವನ್ನು ಕಾಣಬಹುದಾಗಿದೆ. ಇದು ತಪಸ್ಸು, ಕರ್ಮ, ಜಪ, ಧ್ಯಾನ, ಜ್ಞಾನ ಎಂದು ಐದುಬಗೆಯಾಗಿದೆ. ತಪಸ್ಸೆಂದರೆ ಶಿವನಿಗಾಗಿ ದೇಹವನ್ನು ಒಣಗಿಸುವುದು. ಶಿವಲಿಂಗಕ್ಕೂ ಶಿವಸ್ವರೂಪರಾದ ಗುರುಜಂಗಮರಿಗೂ ಮಾಡುವ ಸೇವೆಯೇ ಕರ್ಮ. ಪ್ರಣವವನ್ನಾಗಲೀ ಪಂಚಾಕ್ಷರೀಮಂತ್ರವನ್ನಾಗಲೀ ಶ್ರೀ ರುದ್ರವನ್ನಾಗಲೀ ಜಪಿಸುವುದೇ ಜಪ. ನಿತ್ಯವೂ ಶಿವನನ್ನು ನೆನೆಯುವುದೇ ಧ್ಯಾನ. ಶಿವಾಗಮಗಳ ಅರ್ಥವನ್ನು ತಿಳಿಯುವುದೇ ಜ್ಞಾನ. ಈ ಐದುಬಗೆಯ ಯಜ್ಞವನ್ನು ಭಕ್ತಿಯಿಂದ ಆಚರಿಸುವವನೇ ಸದ್ಭಕ್ತನೆನಿಸುವನು. ಅವನೇ ಶಿವನಿಗೆ ಪ್ರಿಯನಾಗುವನು. ಹೀಗೆ ಜ್ಞಾನಿಯೂ ಕರ್ಮವನ್ನು ತೊರೆಯದೆ ಎಲ್ಲವನ್ನು ಶಿವ ಭಾವನೆಯಿಂದ ನಡೆಸಬೇಕೆಂದು ಇಲ್ಲಿ ನಿರ್ಣಯಿಸಲಾಗಿದೆ.

"ಯೋನಿಂ ಕೃಣ್ವಸೇ" ಎಂಬಲ್ಲಿ ಬ್ರಹ್ಮಪ್ರಾಪ್ತಿಗೆ ಸಾಧನವನ್ನಾಚರಿಸಬೇಕೆಂದು ತಿಳಿಸಿದೆ. ಆ ಸಾಧನವೇ ಯೋಗವೆನಿಸಿದೆ. ಅದರ ರೀತಿಯು ಹೀಗಿದೆ.

ತ್ರಿರುನ್ನತಂ ಸ್ಥಾಪ್ಯ ಸಮಂ ಶರೀರಂ
ಹೃದೀಂದ್ರಿಯಾಣಿ ಮನಸಾ ಸನ್ನಿವೇಶ್ಯ ।
ಬ್ರಹ್ಮೋಡುಪೇನ ಪ್ರತರೇತ ವಿದ್ವಾನ್
ಸ್ರೋತಾಂಸಿ ಸರ್ವಾಣಿ ಭಯಾವಹಾನಿ ॥ ೮ ॥

ವಕ್ಷಸ್ಸ್ಥಳ, ಕುತ್ತಿಗೆ, ಶಿರಸ್ಸು ಈ ಮೂರುಭಾಗಗಳನ್ನು ಕೆಳಕ್ಕೆ ಬಗ್ಗಿಸದಂತೆ ದೇಹವನ್ನು ಋಜುವಾಗಿ ಮಾಡಿಕೊಂಡು ಮನಸ್ಸಿನೊಡನೆ ಸರ್ವೇಂದ್ರಿಯಗಳನ್ನು ಹೃದಯದಲ್ಲಿ ನೆಲೆಗೊಳಿಸಿ ಯೋಗಮಾರ್ಗದ ರಹಸ್ಯವನ್ನರಿತು ಸಾಧಕನು ನಿತ್ಯವೂ ಆಚರಿಸುತ್ತ ಬಂದರೆ ಅವನು ಜನ್ಮಜರಾಮರಣಗಳೆಂಬ ಅಲೆಗಳಿಂದ ಕೂಡಿರುವ ಸಂಸಾರಪ್ರವಾಹಗಳನ್ನು ಪ್ರಣವವೆಂಬ ದೋಣಿಯಿಂದ ಕ್ರಮವಾಗಿ ದಾಟಿಕೊಂಡು ಹೋಗಬಲ್ಲನು. ಬ್ರಹ್ಮೋಡುಪವೆಂಬಲ್ಲಿ ಬ್ರಹ್ಮಪದದಿಂದ ಬ್ರಹ್ಮಸಾಧಕವಾದ ಪ್ರಣವ ಮಂತ್ರವನ್ನೇ ಗ್ರಹಿಸಬೇಕು. 'ಪ್ರಣವಂ ಚೋತ್ತರಾರಣಿಂ' ಎಂದು ಹಿಂದೆಯೇ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ತಿಳಿಸಿದೆ. ಸಂಸಾರಸಾಗರದಿಂದ ಸಾಧಕನು ಪಾರಾಗಲು ಪ್ರಣವವೇ ಸಾಧನವೆನಿಸಿದೆ. ಸಂಸಾರದಿಂದ ಬಿಡುಗಡೆಗೂ, ಅಲ್ಲಿ ನಡೆಯಬೇಕಾಗಿರುವ ರಕ್ಷಣೆಗೂ, ಅಲ್ಲಿ ಆಗುತ್ತಿರುವ ಪಾಶಬಂಧಕ್ಕೂ ಪರಮಾತ್ಮನೇ ಕಾರಣನೆನಿಸಿರುವನೆಂದು ಶ್ರುತಿಯು ತಿಳಿಸಿದೆ.

ಪ್ರಾಣಾಯಾಮದಿಂದ ಮಲಪಾಶವನ್ನು ತೊಳೆದುಕೊಂಡವನೇ ಚಿತ್ತಶುದ್ಧಿಯಿಂದ ಯೋಗಮಾರ್ಗವನ್ನು ಆಚರಿಸಲು ಸಮರ್ಥನಾಗುವುದರಿಂದ ಪ್ರಾಣಾಯಾಮವನ್ನು ಇಲ್ಲಿ ಉಪದೇಶಿಸಲಾಗಿದೆ.

ಪ್ರಾಣಾನ್ ಪ್ರಪೀಡ್ಯೇಹ ಸಂಯುಕ್ತಚೇಷ್ಟಃ
ಕ್ಷೀಣೇ ಪ್ರಾಣೇ ನಾಸಿಕಯೋಚ್ಛ್ವಸೀತ ।
ದುಷ್ಟಾಶ್ವಯುಕ್ತಮಿವ ವಾಹಮೇನಂ
ವಿದ್ವಾನ್ಮನೋ ಧಾರಯೇತಾಪ್ರಮತ್ತಃ ॥ ೯ ॥

"ಆಹಾರವಿಹಾರಗಳಲ್ಲಿ ವ್ಯವಸ್ಥೆಯಿಂದಿದ್ದು, ವ್ಯವಹಾರಗಳನ್ನು ವಿವೇಚನೆಯಿಂದ ನಡೆಸುತ್ತ, ಸ್ವಪ್ನದಲ್ಲಿ ಕಂಡದ್ದನ್ನು ಎಚ್ಚರದಲ್ಲಿ ಬಯಸದೆ ಇರುವ ಸಾಧಕನಿಗೆ ಮಾತ್ರವೇ ಯೋಗಾಭ್ಯಾಸವು ಎಲ್ಲಾ ಬಗೆಯ ದುಃಖಗಳನ್ನು ಪರಿಹರಿಸುತ್ತದೆ." ಹೀಗೆ ಗೀತೆಯ ಬೋಧದಂತೆ ವ್ಯವಹಾರಗಳನ್ನು ಈಶ್ವರಪ್ರೀತ್ಯರ್ಥವಾಗಿಯೇ ನಡೆಸುವ ಸಾಧಕನು ಇಂದ್ರಿಯಗಳನ್ನು ವಿಷಯಗಳಕಡೆಗೆ ಹರಿಯದಂತೆ ಯೋಗಮಾರ್ಗದಿಂದ ತಡೆಯಬೇಕು. ಇದರ ಮರ್ಮವನ್ನು ಯೋಗಸಿದ್ಧನಾದ ಗುರುವಿನಿಂದಲೇ ತಿಳಿಯಬೇಕು. ಹೀಗೆ ಇಂದ್ರಿಯಗಳನ್ನು ವ್ಯವಸ್ಥೆಯಿಂದ ಮಿತವಾಗಿ ಉಪಯೋಗಿಸುವುದೇ ಅವುಗಳ ನಿರೋಧವೆನಿಸುತ್ತದೆ. ಇದರಿಂದ ಮುಂದೆ ಪ್ರಾಣವಾಯುವಿನ ಸಂಚಾರದ ವೇಗವು ಕಡಮೆಯಾಗುವುದು. ಈ ಸ್ಥಿತಿಯಲ್ಲಿ ವಾಯುವನ್ನು ವೇಗವಾಗಿ ಬಾಯಿಂದ ಹೊರಗೆ ಬಿಡದೆ ಮೂಗಿನಿಂದ ನಿಧಾನವಾಗಿ ಹೊರಗೆಡಹಬೇಕು. ಪಳಗದ ಕುದುರೆಗಳನ್ನು ಬಂಡಿಗೆ ಕಟ್ಟಿದರೆ ಅದರಿಂದ ಪ್ರಯಾಣವು ಸುಗಮವಾಗುವುದಿಲ್ಲವೆಂಬುದು ಲೋಕದಲ್ಲಿ ಎಲ್ಲರಿಗೂ ತಿಳಿದಿದೆ. ಹಾಗೆ ಇಂದ್ರಿಯಗಳೆಂಬ ಕುದುರೆಗಳು ಚೆನ್ನಾಗಿ ಪಳಗದೆಇದ್ದರೆ ಅಂತವುಗಳೊಡನೆ ನಡೆಸುವ ವ್ಯವಹಾರವು ಸಾಧಕನಿಗೆ ಹಿಂಸೆಯನ್ನು ಕೊಡುತ್ತದೆ. ಆದ್ದರಿಂದ ಸಾಧಕನು ಬಹಳ ಎಚ್ಚರಿಕೆಯಿಂದ ಮನಸ್ಸನ್ನು ತನಗೆ ವಶಪಡಿಸಿಕೊಳ್ಳಬೇಕು.

ಯೋಗಾಭ್ಯಾಸಕ್ಕೆ ಅನುಕೂಲವಾದ ಪ್ರದೇಶವನ್ನು ಮುಂದೆ ತಿಳಿಸುತ್ತಾನೆ.

ಸಮೇ ಶುಚೌ ಶರ್ಕರಾವಹ್ನಿವಾಲುಕಾ-
ವಿವರ್ಜಿತೇ ಶಬ್ದಜಲಾಶ್ರಯಾದಿಭಿಃ ।
ಮನೋಽನುಕೂಲೇ ನತು ಚಕ್ಷುಪೀಡನೇ
ಗುಹಾನಿವಾತಾಶ್ರಯಣೇ ಪ್ರಯೋಜಯೇತ್ ॥ ೧೦ ॥

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಹಳ್ಳದಿಣ್ಣೆಗಳಿಲ್ಲದೆಯೂ, ಸಣ್ಣಕಲ್ಲು ಬೆಂಕಿ ಮರಗಳಿಲ್ಲದೆಯೂ, ಕಲಹ ಮೊದಲಾದ ಶಬ್ದಗಳಿಲ್ಲದೆಯೂ, ನೀರಿಗಾಶ್ರಯವಾದ ಕೆರೆಕಾಲುವೆ ಮೊದಲಾದವು ಗಳಿಲ್ಲದೆಯೂ, ವಾಸಮಾಡಲು ನಿರ್ಮಲವಾದ ಮಂಟಪ ಮೊದಲಾದವುಗಳಿಲ್ಲದೆಯೂ ಪರಿಶುದ್ಧವಾಗಿರುವ ನಿರ್ಜನಪ್ರದೇಶದಲ್ಲಿ ಸಾಧಕನು ಯೋಗವನ್ನು ಅಭ್ಯಾಸಮಾಡ ಬೇಕು. ಕೆರೆಕಾಲುವೆಗಳಿರುವಕಡೆ ನೀರಿಗಾಗಿ ಅನೇಕ ಜನರು ಬರುವುದರಿಂದಲೂ, ಮಂಟಪ ಮೊದಲಾದಕಡೆ ಜನರು ವಿಶ್ರಾಂತಿಗಾಗಿ ಬರುವುದರಿಂದಲೂ ಅವುಗಳಿಂದ ಯೋಗಾಭ್ಯಾಸಕ್ಕೆ ಆತಂಕವುಂಟಾಗುತ್ತದೆ. ಸಾಧಕನು ಇಂತಹ ನಿರ್ಜನಪ್ರದೇಶ ವನ್ನೇ ಆರಿಸಬೇಕೆಂದು ತಿಳಿಸಿದ್ದಕ್ಕೆ ಫಲವನ್ನು ಮುಂದೆ ವಿವರಿಸಲಾಗಿದೆ. ಇಂತಹ ಪ್ರದೇಶವೇ ಯೋಗವನ್ನು ಅಭ್ಯಾಸಮಾಡುವವನ ಮನಸ್ಸಿಗೆ ಅನುಕೂಲವಾಗುತ್ತದೆ. ಎಲ್ಲಿ ಕುಳಿತರೆ ಮನಸ್ಸು ಪ್ರಸನ್ನವಾಗುವುದೋ ಅಂತಹ ಸ್ಥಳವನ್ನೇ ಸಾಧಕನು ಹುಡುಕಬೇಕು. ಇಲ್ಲಿ ಮನಸ್ಸೆಂದರೆ ಅಂತಃಕರಣ. ಅದೊಂದು ಅನುಕೂಲವಾದರೆ ಸಾಲದು; ಆದರೆ ಕಣ್ಣು ಮೊದಲಾದ ಇಂದ್ರಿಯಗಳಿಗೆ ತೊಂದರೆಯನ್ನು ಕೊಡುವ ಸನ್ನಿವೇಶವೂ ಅಲ್ಲಿ ಇರಬಾರದು. ಇದರಿಂದ ಆ ಪ್ರದೇಶವು ಪ್ರಕೃತಿಸೌಂದರ್ಯದಿಂದ ಕೂಡಿರಬೇಕೆಂದು ತಿಳಿಸಿದಂತಾಯಿತು. ಚಕ್ಷುಪೀಡನೇ ಎಂಬಲ್ಲಿ ವಿಸರ್ಗಲೋಪವು ವೈದಿಕಪ್ರಯೋಗವಾದ್ದರಿಂದ ಅದರಲ್ಲಿ ದೋಷವಿಲ್ಲ. ಅದರಂತೆಯೇ ಗಾಳಿಯಿಲ್ಲ ದೆಯೂ, ವಸತಿಗೆ ಆಶ್ರಯವಾಗಿಯೂ ಇರುವ ಗವಿ ಮೊದಲಾದ ನಿರ್ಜನ ಪ್ರದೇಶವೂ ಯೋಗಕ್ಕೆ ಅನುಕೂಲವೆನಿಸುತ್ತದೆ. ಇಂತಹ ಏಕಾಂತಪ್ರದೇಶದಲ್ಲಿ ಕುಳಿತರೆ ಸಾಧಕನು ಚಿತ್ತವನ್ನು ಪರಮಾತ್ಮನಲ್ಲಿಯೇ ಬೆರೆಸಲು ಅನುಕೂಲವಾಗು ವುದು. ಈ ರೀತಿಯಲ್ಲಿ ಸಾವಧಾನದಿಂದ ಚಿತ್ತೈಕಾಗ್ರತೆಯೊಡನೆ ಸಾಧಕನು ಪರಮಾತ್ಮನನ್ನು ಧ್ಯಾನಿಸಬೇಕು.

ಯೋಗಾಭ್ಯಾಸಿಯ ಆರಂಭದ ಅನುಭವವನ್ನು ಮುಂದೆ ತಿಳಿಸುತ್ತಾನೆ.

ನೀಹಾರಧೂಮಾರ್ಕಾನಿಲಾನಲಾನಾಂ
ಖದ್ಯೋತವಿದ್ಯುತ್ಸ್ಫಟಿಕಾಶಶೀನಾಮ್ ।
ಏತಾನಿ ರೂಪಾಣಿ ಪುರಸ್ಸರಾಣಿ
ಬ್ರಹ್ಮಣ್ಯಭಿವ್ಯಕ್ತಿಕರಾಣಿ ಯೋಗೇ ॥೧೧॥

ಶೀತಕಾಲದಲ್ಲಿ ಬೀಳುವ ಬಿಳಿಯಬಣ್ಣದ ಮಂಜಿನ ಹನಿ, ಕಪ್ಪುಬಣ್ಣದ ಹೊಗೆ, ಹೊಂಬಣ್ಣದ ಸೂರ್ಯ, ಗಾಳಿ, ಮಾಸಲುಗೆಂಪಿನ ಬೆಂಕಿ, ರಾತ್ರಿವೇಳೆ ಬೆಂಕಿಯಂತೆ ಹೊಳೆಯುವ ಹುಳ, ಮಿಂಚು, ಬಿಳಿಬಣ್ಣದ ಸ್ಫಟಿಕಶಿಲೆ, ಚಂದ್ರ ಈ ಬಗೆಯ ವಸ್ತುಗಳ ರೂಪಗಳು ಯೋಗಾಭ್ಯಾಸಿಗೆ ಮೊದಲು ಕಾಣಿಸಿಕೊಂಡು, ಅವನಲ್ಲಿ ಪರಮಾತ್ಮನ ಚಿತ್ರವಿಚಿತ್ರವೂ ಅನಂತವೂ ಪ್ರಕಾಶಮಾನವೂ ಆದ ಆಕಾರ ವನ್ನು ವ್ಯಕ್ತಪಡಿಸುತ್ತವೆ. ಇಲ್ಲಿ ತಿಳಿಸಿರುವ ಒಂಭತ್ತು ಬಗೆಯ ವಸ್ತುಗಳುಳ್ಳದ್ದೇ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಈ ಪ್ರಪಂಚ. ಇವೆಲ್ಲವೂ ನಿರಾಕಾರಪರಶಿವನ ಪರಿಣಾಮವೇ ಆಗಿರುವುದರಿಂದ ಯೋಗಾಭ್ಯಾಸಿಗೆ ಇವು ಹಾಗೆಯೇ ಅಂದರೆ ಶಿವಮಯವಾಗಿಯೇ ಕಾಣಿಸುತ್ತವೆ. ಆರಂಭದಲ್ಲಿ ಯೋಗಿಗೆ ಪ್ರಪಂಚವು ಕಾಣುವ ಬಗೆ ಹೀಗಿರುತ್ತದೆ.

ಹೀಗೆ ಯೋಗವನ್ನು ಅಭ್ಯಾಸಮಾಡುವವನಲ್ಲಿ ಸಿದ್ಧಿಯ ಸೂಚನೆಗಳನ್ನು ತಿಳಿಸಿ ಮುಂದೆ ಅವನು ಪಡೆಯುವ ಸಾಮಾನ್ಯಸಿದ್ಧಿಗಳನ್ನು ಇಲ್ಲಿ ತಿಳಿಸುತ್ತಾನೆ.

ಪೃಥಿವ್ಯಪ್ತೇಜೋಽನಿಲಖೇ ಸಮುತ್ಥಿತೇ
ಪಂಚಾತ್ಮಕೇ ಯೋಗಗುಣೇ ಪ್ರವೃತ್ತೇ ।
ನ ತಸ್ಯ ರೋಗೋ ನ ಜರಾ ನ ಮೃತ್ಯುಃ
ಪ್ರಾಪ್ತಸ್ಯ ಯೋಗಾಗ್ನಿಮಯಂ ಶರೀರಮ್ ॥೧೨॥

ಇಲ್ಲಿ ಇವನಿಗೆ ಎರಡು ಬಗೆಯ ಅವಸ್ಥೆಗಳು ಲಭಿಸುತ್ತವೆ. ಮೊದಲನೆಯದು ಅವ್ಯುತ್ಥಿತಸ್ಥಿತಿ. ಆಗ ನೆಲ, ನೀರು, ಬೆಂಕಿ, ಗಾಳಿ, ಬಯಲು ಈ ಐದು ಭೂತಗಳ ಕಾರ್ಯಗಳೆನಿಸಿದ ಗಂಧ, ರಸ, ರೂಪ, ಸ್ಪರ್ಶ, ಶಬ್ದಗಳೆಲ್ಲವೂ ಯೋಗದ ಪ್ರಭಾವ ದಿಂದ ಯೋಗಿಯಲ್ಲಿ ಸಹಜವಾಗಿ ಸಂಭವಿಸುತ್ತವೆ. ಹೀಗೆ ಪಂಚಭೂತಗಳ ಐದು ಗುಣಗಳೂ ಯೋಗಿಯಲ್ಲಿ ಇರುವುದಾಗಿಯೇ ಕಂಡು ಬರುತ್ತವೆ. ರೂಪ ರಸ ಸ್ಪರ್ಶಗಂಧಗಳುಳ್ಳದ್ದು ಪೃಥವಿ. ಇದರಲ್ಲಿ ಈ ನಾಲ್ಕು ಬಗೆಯ ಪ್ರವೃತ್ತಿಗಳಿವೆ. ಈ ನಾಲ್ಕರಲ್ಲಿ ಯಾವುದೊಂದರ ಪ್ರವೃತ್ತಿಯು ಯೋಗಿಗೆ ಉಂಟಾದರೂ ಆಗ ಅವನಲ್ಲಿ ಯೋಗವು ನೆಲಸಿರುವುದಾಗಿ ಭಾವಿಸಬೇಕೆಂದು ಯೋಗಶಾಸ್ತ್ರಜ್ಞರು ಹೇಳುತ್ತಾರೆ. ಯೋಗಿಯು ಚಿದಾಕಾಶದಲ್ಲಿ ಅಂದರೆ ಬಯಲಲ್ಲಿ ಬಯಲಾಗಿರುವುದರಿಂದಲೂ, ನಾಲ್ಕು ಭೂತಗಳ ಗುಣಗಳಲ್ಲಿ ಒಂದೊಂದೂ ಅವನಲ್ಲಿ ಸಹಜವಾಗಿ ನೆಲಸಿರುವುದರಿಂದಲೂ ಅವನಿಗೆ ಹೊರಗಿನ ಐದು ಭೂತಗಳೂ ತನ್ನಲ್ಲಿಯೇ ಇರುವುದಾಗಿ ತೋರುತ್ತವೆ. ಹೀಗೆ ಯೋಗಸಿದ್ಧನಾದ ಯೋಗಿಗೆ ಒಳಗೆ ಹೊರಗೆ ಏಕಭಾವನೆಯುಂಟಾಗುವುದ ರಿಂದ ಭೇದದೃಷ್ಟಿಯು ಸಹಜವಾಗಿ ತೊಲಗುತ್ತದೆ. ಹೊರಗಿನ ಗಂಧರೂಪರಸ ಸ್ಪರ್ಶಗಳು ಚಿದಾಕಾಶನೆನಿಸಿದ ಯೋಗಿಯಲ್ಲಿ ತನ್ನೊಳಗೇ ಇರುವುದಾಗಿ ಅನುಭವ ವುಂಟಾಗುವುದರಿಂದ ಹೊರಗಿನ ಪಂಚತತ್ತ್ವಮಯವಾದ ಪ್ರಪಂಚವು ತನ್ನಲ್ಲಿಯೇ ಶಿವಮಯವಾಗಿ ನೆಲಸಿರುವುದೆಂಬ ಅದ್ಭುತಭಾವನೆ ಅವನಲ್ಲಿ ದೃಢವಾಗಿ ನೆಲಸಿರು ವುದು. ಆದ್ದರಿಂದಲೇ ಅವನಿಗೆ ರೋಗವಾಗಲೀ ಮುಪ್ಪಾಗಲೀ ಸಂಭವಿಸುವುದಿಲ್ಲ ; ಆಗ ಮೃತ್ಯುವಿನ ಭಯವೂ ಅವನಿಗೆ ಇರುವುದಿಲ್ಲ. ಹೀಗೆ ಏಕೆ ಆಗುತ್ತದೆ ಅಂದರೆ ಇದು ಯೋಗದ ಪರಿಣಾಮವೆಂದು ಇಲ್ಲಿ ತಿಳಿಸುತ್ತಾನೆ. ಯೋಗವೆಂಬ ಬೆಂಕಿಯಲ್ಲಿ ಯಾವನ ಶರೀರವು ಬೆಂದು ನಿರ್ಮಲವಾಗಿರುವುದೋ ಅದಕ್ಕೆ ಮುಪ್ಪು ಮೊದಲಾದ ದೋಷಗಳು ಅಂಟಲಾರವು. ಆದರೆ ಯೋಗಿಗೂ ಶರೀರದಲ್ಲಿ ಮುಪ್ಪು ಮೊದಲಾದವು ಸಂಭವಿಸುವುದನ್ನೂ, ಕೊನೆಗೆ ಮರಣವು ಸಂಭವಿಸುವುದನ್ನೂ ನಾವು ಕಾಣುತ್ತೇವೆ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಎಂದು ಕೆಲವರು ಆಕ್ಷೇಪಿಸಬಹುದು. ಆದರೆ ಎಲ್ಲರಂತೆ ಅವರಿಗೂ ರೋಗ ರುಜಿನಗಳು ಬರುವುದಾಗಿ ಕಂಡರೂ ಅವರು ಯೋಗದಿಂದ ಪಡೆದಿರುವ ದಿವ್ಯದೇಹಕ್ಕೆ ಇವು ಅಂಟುವುದಿಲ್ಲವೆಂದೇ ತಿಳಿಯಬೇಕು. ಪ್ರಕೃತಿಗೆ ವಶನಾದ ಜೀವನಿಗೆ ಅವು ಅಂಟುವುವೇ ಹೊರತು ಅಗ್ನಿಮಯವಾದ ಯೋಗಿಯ ಶರೀರಕ್ಕೆ ಅವು ತಗಲುವುದಿಲ್ಲ.

ಯೋಗಾಭ್ಯಾಸಿಯು ತನ್ನ ಮನೋವೃತ್ತಿಗಳನ್ನು ತಡೆದು ಹೃದಯದ ಪರಂಜ್ಯೋತಿಪ್ರಕಾಶದಲ್ಲಿಯೇ ನೆಲೆಗೊಳಿಸುವಸ್ಥಿತಿ ಅವ್ಯುತ್ಥಿತ ಸ್ಥಿತಿ ಎನಿಸುತ್ತದೆ. ಇಲ್ಲಿಂದ ಮುಂದೆ ಅವನು ಪ್ರಪಂಚವೆಲ್ಲವನ್ನೂ ಶಿವಮಯವಾಗಿಯೇ ಕಾಣುವನು. ಆಗ ಅವನಿಗೆ ಪಂಚಭೂತಗಳು ಮತ್ತು ಅಂತಃಕರಣಚತುಷ್ಟಯ ಈ ಒಂಭತ್ತೂ ಸಹ ಶಿವಸ್ವರೂಪವೇ ಆಗಿ ಮಾರ್ಪಡುವುವು. ಅಲ್ಲಿಂದ ಮುಂದೆ ಅವನಿಗೆ ಹೊರಗಿನ ಪ್ರಪಂಚವೂ ಶಿವನ ವಿಭೂತಿಯಾಗಿಯೇ ಕಾಣಬರುವುವು. ಇದು ಯೋಗಿಯ ವ್ಯುತ್ಥಿತದಶೆ ಎನಿಸುತ್ತದೆ. ಈ ಕಾಲದಲ್ಲಿ ಅವನಿಗೆ ಪ್ರಪಂಚವು ಕಾಣಿಸುವ ಬಗೆಯನ್ನು ಇಲ್ಲಿ ತಿಳಿಸುತ್ತಾನೆ. ಒಳಗೆ ಹೊರಗೆ ಏಕಭಾವನೆಯುಂಟಾಗುವುದರಿಂದ ಭೇದದೃಷ್ಟಿಯೇ ತೊಲಗುತ್ತದೆ. ಹೊರಗಿನ ಗಂಧರೂಪ ರಸಸ್ಪರ್ಶಗಳು ಚಿದಾಕಾಶನೆನಿಸಿದ ಯೋಗಿಯಲ್ಲಿ ತನ್ನೊಳಗೇ ಇರುವುದಾಗಿ ಅನುಭವವುಂಟಾಗುವುದರಿಂದ ಹೊರಗಿನ ತತ್ತ್ವಮಯವಾದ ಪ್ರಪಂಚವು ತನ್ನಲ್ಲಿಯೇ ಶಿವಮಯವಾಗಿ ನೆಲಸಿರುವುದೆಂಬ ಅದ್ವೈತಭಾವನೆ ಅವನಲ್ಲಿ ದೃಢವಾಗಿ ನೆಲಸುವುದು.

ಹೀಗೆ ತಿಳಿಸಿ ಮತ್ತೆ ಯೋಗಸಿದ್ಧನ ಗುರುತುಗಳನ್ನು ತಿಳಿಸುತ್ತಾನೆ.

ಲಘುತ್ವಮಾರೋಗ್ಯಮಲೋಲುಪತ್ವಂ
ವರ್ಣಪ್ರಸಾದಂ ಸ್ವರಸೌಷ್ಠವಂ ಚ ।
ಗಂಧಃ ಶುಭೋ ಮೂತ್ರಪುರೀಷಮಲ್ಪಂ
ಯೋಗಪ್ರವೃತ್ತಿಂ ಪ್ರಥಮಾಂ ವದಂತಿ ॥೧೩॥

ಯೋಗಸಿದ್ಧನಿಗೆ ಶರೀರವು ಲಘುವಾಗಿಯೂ, ಆರೋಗ್ಯವಾಗಿಯೂ ಇದ್ದು ಚಟುವಟಿಕೆಯಿಂದ ಕೂಡಿರುವುದು. ಅವನಿಗೆ ಭೋಜ್ಯವಿಷಯಗಳನ್ನು ಹುಡುಕಿಕೊಂಡು ಹೋಗುವ ಚಾಪಲ್ಯವು ತೊಲಗಿರುತ್ತದೆ. ಅವನ ಶರೀರದ ಬಣ್ಣವು ಇತರರ ಕಣ್ಣುಗಳಿಗೆ ಸಮಾಧಾನವನ್ನು ಹುಟ್ಟಿಸುವಷ್ಟು ಪ್ರಸನ್ನವಾಗಿರುವುದು. ಅವನ ಕಂಠಧ್ವನಿಯು ಸುಶ್ರಾವ್ಯವಾಗಿರುತ್ತದೆ. ಶರೀರದ ವಾಸನೆಯೂ ಮನೋಹರವಾಗಿರುವುದು. ಮೂತ್ರಪುರೀಷಗಳು ಅಲ್ಪಪ್ರಮಾಣದಲ್ಲಿಯೇ ನಡೆಯುತ್ತವೆ. ಅವನು ಎಷ್ಟು ಹೆಚ್ಚು ನೀರನ್ನು ಕುಡಿದು ಆಹಾರವನ್ನು ಸೇವಿಸಿದರೂ ಅದಕ್ಕಿಂತಲೂ ಕಡಮೆಪ್ರಮಾಣದಲ್ಲಿ ಜಲಮಲವಿಸರ್ಜನೆಯಾಗುತ್ತಿರುವುದು. ಇದು ಆರೋಗ್ಯವಂತನ ಲಕ್ಷಣ. ಹೀಗೆ ದೇಹದಲ್ಲಿ ಆಗುವ ಬದಲಾವಣೆಯು ಯೋಗದ ಆರಂಭವನ್ನು ಸೂಚಿಸುತ್ತದೆ ಎಂದು ಹಿರಿಯರು ಹೇಳುತ್ತಾರೆ. ಯೋಗದಲ್ಲಿ ನಿರತನಾದವನಿಗೆ ಸಿದ್ಧಿಯನ್ನು ಸೂಚಿಸಲು ಮೊದಲಿಗೆ ಕಾಣಿಸುವ ಗುರುತುಗಳಿವು. ॥೧೩॥

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಯೋಗದಿಂದುಂಟಾಗುವ ಕೊನೆಯ ಸಿದ್ಧಿಯನ್ನು ಈಗ ತಿಳಿಸುತ್ತಾನೆ.

ಯಥೈವ ಬಿಂಬಂ ಮೃದಯೋಪಲಿಪ್ತಂ
ತೇಜೋಮಯಂ ಭ್ರಾಜತೇ ತತ್ಸುಧಾಂತಮ್ ।
ತದಾತ್ಮತತ್ತ್ವಂ ಪ್ರಸಮೀಕ್ಷ್ಯ ದೇಹೀ
ಏಕಃ ಕೃತಾರ್ಥೋ ಭವತೇ ವೀತಶೋಕಃ ||೧೪||

ಅರ್ಚನೆಗಾಗಿ ಸಿದ್ಧಪಡಿಸಿದ್ದು ಸ್ವತಃ ಶುದ್ಧವಾದ ಭಂಗಾರದ ಅಥವಾ ಬೆಳ್ಳಿಯ ಪ್ರತಿಮೆಯನ್ನು ಮಣ್ಣಿನಿಂದ ಉಜ್ಜುವಾಗ ಅದು ಬಹಳ ಮಲಿನವಾಗಿದ್ದರೂ ಮೆರಗನ್ನು ಕೊಟ್ಟು ಶುದ್ಧಿಮಾಡಿದ ಮೇಲೆ ಹೇಗೆ ಪ್ರಕಾಶಮಾನವಾಗುತ್ತದೆಯೋ ಹಾಗೆಯೇ ಶುದ್ಧವಾದ ಪರಶಿವತತ್ತ್ವವನ್ನು ಯಾವನೋ ಒಬ್ಬ ಜೀವನ್ಮುಕ್ತನೇ ನಿರ್ಮಲವಾದ ಮನಸ್ಸಿನಲ್ಲಿ ಅನುಭವಿಸಿ ಸಾಂಸಾರಿಕಕ್ಲೇಶವನ್ನು ತೊರೆದು ಬಾಳಿನಲ್ಲಿ ಧನ್ಯನಾಗಬಲ್ಲನು. ಪರಮಾತ್ಮನ ಅಂಶನೆನಿಸಿದ ಜೀವನು ಸ್ವತಃ ಸ್ವಪ್ರಕಾಶನಾಗಿದ್ದರೂ ಅನಾದಿಕರ್ಮದ ದುಷ್ಪರಿಣಾಮದಿಂದ ತನ್ನ ಸ್ವರೂಪವನ್ನು ತಿಳಿಯದೆ ತನ್ನನ್ನು ದುಃಖಸ್ವರೂಪನೆಂದು ಭಾವಿಸಿ ಸಂಸಾರದಶೆಯಲ್ಲಿ ಕಲುಷಿತನಾಗಿರುವನು. ತನ್ನೊಳಗಿನ ಶಿವತತ್ತ್ವದ ಮತ್ತು ತನ್ನ ಯಥಾರ್ಥಸ್ಥಿತಿಯ ಪರಿಚಯವಾದಮೇಲೆ ಅನಾದಿಯಾದ ಕರ್ಮದ ವಾಸನೆಯು ತೊಲಗಲು ಆಗ ಯೋಗದಶೆಯಲ್ಲಿ ತನ್ನ ಮತ್ತು ತನ್ನೊಳಗಿನ ಪರತತ್ತ್ವದ ನಿಜಸ್ಥಿತಿ ತನ್ನಲ್ಲಿ ಹೊಳೆಯುವುದು. ಹೀಗೆ ಸ್ವತಃ ಆನಂದಮಯವಾಗಿರುವ ಆತ್ಮತತ್ತ್ವವನ್ನು ಯಾವನು ನಿರ್ಮಲವಾದ ಮನದಲ್ಲಿ ಅನುಭವಿಸುವನೋ ಅವನೇ ಸಂಸಾರದಲ್ಲಿ ಇದ್ದರೂ ಅಲ್ಲಿ ಸಂಭವಿಸುವ ದುಃಖಗಳಿಗೆ ಅಂಟದೆ ನಿತ್ಯಸುಖಿಯಾಗಬಲ್ಲನು. ತಾನು ಈ ದೇಹಕ್ಕೆ ಬಂದದ್ದು ಆಗ ಅವನಿಗೆ ಸಫಲವಾಗುತ್ತದೆ. ಹೀಗೆ ಆತ್ಮತತ್ತ್ವವನ್ನು ಮಾನವನು ಈ ದೇಹದಲ್ಲಿ ಇದ್ದು ಕೊಂಡೇ ಯೋಗಾಭ್ಯಾಸದಿಂದ ತಿಳಿಯಬೇಕು.

ಯದಾತ್ಮತತ್ತ್ವೇನ ತು ಬ್ರಹ್ಮತತ್ತ್ವಂ
ದೀಪೋಪಮೇನೇಹ ಯುಕ್ತಃ ಪ್ರಪಶ್ಯೇತ್ ।
ಅಜಂ ಧ್ರುವಂ ಸರ್ವತತ್ತ್ವೈರ್ವಿಶುದ್ಧಂ
ಜ್ಞಾತ್ವಾ ದೇವಂ ಮುಚ್ಯತೇ ಸರ್ವಪಾಶೈಃ ||೧೫||

ಯೋಗಿಯ ವರ್ತನೆಯನ್ನು ಇಲ್ಲಿ ವಿಶದಪಡಿಸುತ್ತಾನೆ. ಯೋಗಿಯು ಯಾವಾಗ ತನ್ನನ್ನು ಶುದ್ಧಗೊಳಿಸಿಕೊಂಡು ತನ್ನ ಮೂಲಕ ತನ್ನೊಳಗೆ ಅಡಗಿರುವ ಭಾವಪ್ರಾಣೇಷ್ಟರೂಪವಾದ ಚಿತ್ಪ್ರಕಾಶವನ್ನು ಈ ಜನ್ಮದಲ್ಲಿಯೇ ಈ ಶರೀರದಲ್ಲಿಯೇ ಇಲ್ಲಿಯೇ ನಿರ್ಮಲವಾದ ಮನಸ್ಸಿನಲ್ಲಿ ಅನುಭವಿಸುವನೋ ಆಗಲೇ ಅವನಿಗೆ ಪಾಶಗಳೆಲ್ಲವೂ ತೊಲಗುವುವು. ದೇಹದೊಳಗೆ ಶಿರಸ್ಸಿನಲ್ಲೂ ಹೃದಯದಲ್ಲೂ ಭ್ರೂಮಧ್ಯದಲ್ಲೂ ಗೋಪ್ಯವಾಗಿ ಅಡಗಿರುವ ಚಿತ್ಪ್ರಕಾಶವು ಸುಲಭವಾಗಿ ಗೋಚರವಾಗುವು

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ದಿಲ್ಲ ಆದರೆ; ಅದರ ಪರಿಚಯಕ್ಕೆ ಯೋಗಿಯು ತನ್ನನ್ನೇ ಮುಖ್ಯಸಾಧನವನ್ನಾಗಿ ಉಪಯೋಗಿಸಬೇಕು. ತನ್ನೊಳಗಿರುವ ದೇವನನ್ನು ಅನುಭವಿಸಲು ತಾನೇ ತನ್ನ ಮೂಲಕವೇ ಪ್ರಯತ್ನಿಸಬೇಕು. ದೀಪವು ಹೇಗೆ ತನ್ನನ್ನು ಪ್ರಕಾಶಪಡಿಸಿಕೊಂಡೇ ತನ್ನ ಸುತ್ತಲಿನ ಪದಾರ್ಥಗಳನ್ನು ಪ್ರಕಾಶಪಡಿಸುವುದೋ ಹಾಗೆ ಜೀವನು ತಾನು ಯಾರೆಂಬುದನ್ನು ಮೊದಲು ತಿಳಿದು ಆ ಮೂಲಕವೇ ತನ್ನೊಳಗಿನ ಅವ್ಯಕ್ತವಾದ ಶಿವತತ್ತ್ವವನ್ನು ತಿಳಿಯಬೇಕು. ಅವನು ತಿಳಿಯುವ ಶಿವತತ್ತ್ವವಾದರೋ ಹೇಗೆ ಇರುತ್ತದೆ ಎಂದರೆ ಆ ಶಿವನು ಅಜ=ಉತ್ಪತ್ತಿ ಇಲ್ಲದ್ದವನು. ಧ್ರುವಂ=ಹಿಂದೆ ಮುಂದೆ ಈಗ ಹೀಗೆ ಯಾವಾಗಲೂ ಇರುವಂತವನು ; ಪಂಚತತ್ತ್ವಮಯವಾದ ಈ ದೇಹದೊಳಗೆ ಇದ್ದರೂ ಅದರ ವಿಕಾರಗಳಿಗೆ ಅಂಟದೇ ಇರುವವನು. ಈ ದೇಹದಲ್ಲಿ ಜೀವನೇ ಪಂಚತತ್ತ್ವಗಳೊಳಗೆ ಬೆರೆತಿರುವನು; ಪರಮಾತ್ಮನಾದರೂ ಯಾವುದಕ್ಕೂ ಅಂಟಿಕೊಂಡಿಲ್ಲ. ಆದ್ದರಿಂದ ಆವನು ಪೂರ್ಣಶುದ್ಧನಿರುವನು. ಇಂತಹ ಪರಶಿವತತ್ತ್ವವನ್ನು ಅನುಭವಿಸಿದವನಿಗೇ ಬಂಧನವು ತೊಲಗುವುದು. ಸ್ವಾರ್ಥತೆ, ವ್ಯಾಮೋಹ, ಅಹಂಕಾರಗಳನ್ನು ಅವನಲ್ಲಿ ಹುಟ್ಟಿಸಿದ್ದ ಮೂರು ಮಲಗಳೂ ಆಗ ತೊಲಗುತ್ತವೆ. ಆತ್ಮ, ಬ್ರಹ್ಮ ಎರಡು ಕಡೆಗಳಲ್ಲೂ ತತ್ತ್ವಪದವನ್ನು ಇಲ್ಲಿ ಉಪಯೋಗಿಸಿರುವುದರಿಂದ ಅವರಿಬ್ಬರನ್ನು ಸನಾತನರು ಮತ್ತು ಸತ್ಯರೆಂದು ಹೇಳಿದಂತಾಯಿತು. ಇವರಲ್ಲಿ ಜೀವನು ಅಲ್ಪಪ್ರಕಾಶಕನಾಗಿ ಉಪಾಸಕನೆನಿಸಿರುವನು. ಶಿವನು ಮಹಾಪ್ರಕಾಶನೇ ಆಗಿ ಉಪಾಸ್ಯನೆನಿಸಿರುವನು. ಆದರೆ ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶ ಒಂದಿದೆ. ಇಬ್ಬರೂ ದೇಹದಲ್ಲಿ ಉಪಾಸಕೋಪಾಸ್ಯಲೀಲೆಯನ್ನು ನಡೆಸುತ್ತಿರುವುದರಿಂದ ಜೀವನನ್ನು ಸಾಕ್ಷಾದ್ಬ್ರಹ್ಮವಲ್ಲವೆ ಬೇರೆಯಲ್ಲವೆಂದು ಹೇಳುವ ಅದ್ವೈತವಾದವು ನಿರಾಕೃತವಾಯಿತು. ಜೀವನು ಸಹಜವಾಗಿ ಶಿವನಿಂದ ಭಿನ್ನನಾಗಿರುವುದರಿಂದಲೇ ತನ್ನನ್ನಾವರಿಸಿರುವ ಪಾಶದ ಬಿಡುಗಡೆಗಾಗಿ ಶಿವನನ್ನು ಉಪಾಸನಮಾಡುತ್ತಿರುವನು. ಆದ್ದರಿಂದ ಜೀವಶಿವರಿಗೆ ಸಂಸಾರದಶೆಯಲ್ಲಿ ಭೇದವು ಸ್ವಾಭಾವಿಕವೇ ಆಗಿದ್ದು ಮುಕ್ತಿದಶೆಯಲ್ಲಿ ಅದು ತೊಲಗಿ ಅಭೇದವು ಸಹಜವಾಗಿ ಸಂಭವಿಸುತ್ತದೆ. ಇವೆಲ್ಲವನ್ನೂ ಶಕ್ತಿವಿಶಿಷ್ಟಾದ್ವೈತದರ್ಶನದಲ್ಲಿ ವಿಶದಪಡಿಸಲಾಗಿದೆ.

ಹೀಗೆ ಬಂಧವಿಮೋಚನೆಯ ಮಾರ್ಗವನ್ನು ತಿಳಿಸಿ ಅಂತಹ ವಿಮೋಚನೆಯು ಪರಮೇಶ್ವರನ ಅನುಗ್ರಹ ಒಂದರಿಂದಲೇ ಆಗಬೇಕಾದ್ದರಿಂದ ಆ ಪರಮಾತ್ಮನಿಗೆ ನಮಸ್ಕರಿಸುವ ಮೂಲಕ ಪ್ರಕೃತವಿಷಯವನ್ನು ಕೊನೆಗಾಣಿಸುತ್ತಾನೆ.

ಏಷ ಹಿ ದೇವಃ ಪ್ರದಿಶೋ ನು ಸರ್ವಾಃ
ಪೂರ್ವೋ ಹಿ ಜಾತಸ್ಸ ಉ ಗರ್ಭೇ ಅಂತಃ ।
ಸ ಏವ ಜಾತಸ್ಸ ಜನಿಷ್ಯಮಾಣಃ
ಪ್ರತ್ಯಙ ಜನಾಂಸ್ತಿಷ್ಠತಿ ಸರ್ವತೋಮುಖಃ ॥೧೬॥

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಈ ಪರಮಾತ್ಮನೇ ವಿಶ್ವದ ಪ್ರತಿಯೊಂದು ಮೂಲೆಯಲ್ಲೂ ತುಂಬಿಕೊಂಡಿರುವನು. ಅವನು ಹೇಗೆ ಪೂರ್ಣನಾಗಿರುವನೋ ಅವನಿಂದ ತುಂಬಿರುವ ಪ್ರಪಂಚವೆಲ್ಲವೂ ಹಾಗೆಯೇ ಪೂರ್ಣವಾಗಿರುವುದು. ಈ ದಿಕ್ಕುಗಳೆಲ್ಲವೂ ಅವನೇ ಆಗಿರುವುವು. ಅವನೇ ಮೊದಲನೆಯ ಹಿರಣ್ಯಗರ್ಭನಾಗಿ ಮೊದಲೇ ಹುಟ್ಟಿ ಅವನೊಳಗೆ ಅಂತರ್ನಿಯಾಮಕನಾಗಿಯೂ ನೆಲಸಿದನು. "ನಾನೇ ಎಲ್ಲದರೊಳಗೂ ಬೀಜರೂಪನಾಗಿ ಹಿಂದಿನಿಂದಲೂ ನೆಲಸಿರುವೆನು" ಎಂದು ಗೀತೆಯಲ್ಲಿ ಕೃಷ್ಣನ ಮೂಲಕ ಪರಶಿವನೇ ಹೇಳಿಸಿರುವನು. ಹೀಗೆ ಹಿಂದೆ ಹುಟ್ಟಿದ ಶಿಶುವೂ, ಅವನಲ್ಲಿ—ಮುಂದೆ ಹುಟ್ಟುವವನೂ ಹೀಗೆ ಎಲ್ಲರೂ ಒಬ್ಬ ಶಿವನೇ ಆದ್ದರಿಂದ ಶಿವನೇ ಸರ್ವತೋಮುಖನಾಗಿ ಜಗತ್ತಿನಲ್ಲಿ ಎಲ್ಲೆಲ್ಲಿಯೂ ನೆಲಸಿರುವನು.

ಯೋ ದೇವೋ ಅಗ್ನೌ ಯೋ ಅಪ್ಸು ಯೋ ವಿಶ್ವಂ ಭುವನಮಾವಿವೇಶ ।
ಯ ಓಷಧೀಷು ಯೋ ವನಸ್ಪತಿಷು ತಸ್ಮೈ ದೇವಾಯ ನಮೋ ನಮಃ ॥೧೭॥

ಸರ್ವವ್ಯಾಪಕನಾದ್ದರಿಂದಲೇ ಪರಶಿವನು ಬೆಂಕಿಯಲ್ಲೂ, ನೀರಿನಲ್ಲೂ, ಸಮಸ್ತ ಪ್ರಪಂಚಗಳಲ್ಲೂ ಅಶ್ವತ್ಥ ಮೊದಲಾದ ವೃಕ್ಷಗಳಲ್ಲೂ ನೆಲಸಿದ್ದಾನೆ. ಹೀಗೆ ಅವನು ವಿಶ್ವದ ಪ್ರತಿಯೊಂದು ವಸ್ತುವಿನಲ್ಲೂ ಅಂತರ್ಯಾಮಿಯಾಗಿ ನೆಲಸಿರುವನು. ಇಂತಹ ಸರ್ವಾತ್ಮಕನಾದ ಪರಶಿವಬ್ರಹ್ಮಕ್ಕೆ ನಮಸ್ಕಾರವು ಸಲ್ಲಲಿ. ನಮೋ ನಮಃ ಎಂದು ದ್ವಿವಚನವು ಶ್ವೇತಾಶ್ವತರಮಹರ್ಷಿಗೆ ಪರಶಿವಬ್ರಹ್ಮದಲ್ಲಿರುವ ಭಕ್ತ್ಯತಿರೇಕವನ್ನು ತಿಳಿಸುವುದಲ್ಲದೆ ಅಧ್ಯಾಯದ ಕೊನೆಯನ್ನು ಸೂಚಿಸುತ್ತದೆ.

ತೃತೀಯಾಧ್ಯಾಯ

ಹಿಂದಿನ ಅಧ್ಯಾಯದಲ್ಲಿ ಪರಮಾತ್ಮನು ಎಲ್ಲಾ ಕಡೆಗಳಲ್ಲೂ ಇರುವುದರಿಂದಲೇ ಅವನು ಸರ್ವಾತ್ಮಕನೆಂಬುದನ್ನು ವಿಶದವಾಗಿ ತಿಳಿಸಿಯಾಯಿತು. ಹೀಗೆ ಅವನು ಒಬ್ಬನೇ ಇದ್ದರೂ ಅವನಿಗೆ ಸರ್ವವ್ಯಾಪ್ತಿ ಹೇಗೆ ಸಂಭವಿಸಿತೆಂಬ ಆಕ್ಷೇಪವನ್ನು ದೃಷ್ಟಾಂತಗಳಿಂದ ಸಮಾಧಾನಮಾಡುತ್ತಾನೆ.

ಯ ಏಕೋ ಜಾಲವಾನೀಶತ ಈಶನೀಭಿಃ
ಸರ್ವಾನ್ ಲೋಕಾನೀಶತ ಈಶನೀಭಿಃ ॥
ಯ ಏವೈಕ ಉದ್ಭವೇ ಸಂಭವೇ ಚ
ಯ ಏತದ್ವಿದುರಮೃತಾ ಭವಂತಿ ॥೧॥

ಇಲ್ಲಿ ಪರಮೇಶ್ವರನನ್ನು ಜಾಲವಾನ್ ಎಂದು ಹೇಳಿದ್ದರಿಂದ ಊರ್ಣನಾಭಿಯ ದೃಷ್ಟಾಂತವನ್ನು ಸೂಚಿಸಲಾಗಿದೆ. ರೇಷ್ಮೆಹುಳವು ತಿನ್ನುವ ಸೊಪ್ಪಿನ ರಸವೇ ಅದರ ಬಾಯಿಂದ ನೂಲಾಗಿ ಹೊರಹೊಮ್ಮಿ ಅದರ ಗೂಡಿನೊಳಗೆ ತಾನೇ ಸಿಕ್ಕಿಕೊಳ್ಳುವಂತೆ ಪರಮಾತ್ಮನಿಗೆ ವಿಶ್ವದ ಸೃಷ್ಟಿಗೆ ತನ್ನಿಂದ ಹೊರಹೊಮ್ಮಿದ ಮಾಯಾಶಕ್ತಿಯೇ ಬಲೆ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಎನಿಸಿ ಅದರೊಳಗೆ ಅವನೇ ಜೀವನೆನಿಸಿ ನೆಲಸಿರುವನು. ಹಾಗೆ ಸಿಕ್ಕಿಕೊಂಡ ಜೀವರೊಳಗೆ ಶಿವನೇ ಅಂತರ್ಯಾಮಿ ಎನಿಸಿರುವನು. ಅಲ್ಲಿಗೆ ಹುಳದಿಂದ ಹೊರಹೊಮ್ಮಿದ ದಾರವೇ ಹುಳಕ್ಕೆ ಬಲೆಯಾದಂತೆ ಶಿವನಿಂದ ಹೊರಹೊಮ್ಮಿದ ಮಾಯಾಶಕ್ತಿಯೇ ಶಿವನಿಗೆ ಜೀವರಾಗಲಿಕ್ಕೂ, ಅವರೊಳಗೆ ಅಂತರ್ಯಾಮಿಯಾಗಿ ನೆಲಸಲಿಕ್ಕೂ ಬಲೆಯಾಗಿ ಪರಿಣಮಿಸಿತು. ಹೀಗೆ ಶಿವನು ತನ್ನ ಅಸಾಧಾರಣಶಕ್ತಿಗಳಿಂದಲೇ ಜಗದ್ವ್ಯಾಪಾರವನ್ನು ನಡೆಸುತ್ತ ಪ್ರಭುವೆನಿಸಿರುವನು. ಈರೀತಿಯಲ್ಲಿ ಶಿವನೊಬ್ಬನೇ ಇದ್ದುಕೊಂಡು ತನ್ನ ಶಕ್ತಿಗಳಿಂದ ವಿಶ್ವವನ್ನು ಸೃಷ್ಟಿಸಿ ರಕ್ಷಿಸುತ್ತ ನಿಗ್ರಹಿಸುತ್ತಿರುವನು. ಹೀಗೆ ಒಬ್ಬನೆ ವಿಸ್ತಾರವಾಗಿ ಪರಿಣಮಿಸಿ ವೈಭವದಿಂದ ಮೆರೆಯಲಿಕ್ಕೂ, ಆ ವಿಸ್ತಾರವಾದ ಪ್ರಪಂಚದಲ್ಲಿ ಅಂತರ್ಯಾಮಿಯಾಗಿ ನೆಲಸಲಿಕ್ಕೂ ಸಮರ್ಥನಾಗಿದ್ದಾನೆ. ಶಿವನ ಇಂತಹ ಜಗದ್ವ್ಯಾಪಾರದ ಲೀಲಾವೈಭವಕ್ಕೆ ಅದರೊಳಗೆ ಅವನೇ ಜೀವರಿಗೆ ಅವರವರ ಕರ್ಮಾನುಗುಣವಾಗಿ ಫಲವನ್ನು ಕೊಡಲು ಅಂತಾರ್ಯಾಮಿಯಾಗಿ ನೆಲಸಲಿಕ್ಕೆ ಸಮರ್ಥನಾಗಿರುವುದನ್ನ ಯಾರು ತಿಳಿಯುವರೋ ಅವರೇ ಅಮೃತರಾಗುವರು. ಅವರಿಗೆ ಮಾತ್ರ ಮರಣಭಯವು ತೊಲಗುವುದು. ಈ ಜಗತ್ತೆಲ್ಲವೂ ಶಿವನಿಂದಲೇ ಉದ್ಭವಿಸಿದ್ದು ಮತ್ತು ಅವನ ವಿಲಾಸರೂಪವಾದ್ದು ಎಂದು ಯಾರು ಕೇವಲ ಶಾಸ್ತ್ರದಲ್ಲಿ ತಿಳಿದಿದ್ದಷ್ಟೇ ಅಲ್ಲದೆ ಮನಸ್ಸಿನಲ್ಲಿ ಭಾವಿಸಿ ತಿಳಿದು ಮಥಿಸಿ ಅನೇಕ ಪ್ರಯೋಗಗಳಿಂದ ಅನುಭವಕ್ಕೆ ತಂದುಕೊಳ್ಳುವರೋ ಅವರೇ ಮುಕ್ತರಾಗುವರು.

ಏಕೋ ಹಿ ರುದ್ರೋ ನ ದ್ವಿತೀಯಾಯ ತಸ್ಥುಃ
ಯ ಇಮಾನ್ ಲೋಕಾನೀಶತ ಈಶನೀಭಿಃ ।
ಪ್ರತ್ಯಙ ಜನಾಂಸ್ತಿಷ್ಠತಿ ಸಂಚುಕೋಪ
ಅಂತಕಾಲೇ ಸಂಸೃಜ್ಯ ವಿಶ್ವಾ ಭುವನಾನಿ ಗೋಪಾಃ ॥ ॥೨॥

ಒಬ್ಬ ಪರಶಿವನೇ ಜೀವರಿಗೆ ಸಂಸಾರದುಃಖವನ್ನು ತೊಲಗಿಸುವುದರಿಂದ ರುದ್ರನೆನಿಸಿರುವನು. ಇಲ್ಲಿ ಏಕಪದದಿಂದ ಶಿವನು ಒಬ್ಬನೇ ಇರುವನೇ ಹೊರತು ಇಬ್ಬರಿಲ್ಲವೆಂಬುದನ್ನು ತಿಳಿಸಲಾಗಿದೆ. "ಏಕಮೇವಾದ್ವಿತೀಯಂ ಬ್ರಹ್ಮ" ಎಂದು ಮುಂತಾಗಿ ಶ್ರುತಿಯಲ್ಲಿ ಎರಡನೆಯ ವಸ್ತುವಿಲ್ಲದೆ ಒಂದೇ ಪರವಸ್ತು ತಾನೂ ತಾನಾಗಿಯೇ ಎಲ್ಲಕ್ಕೂ ಕಾರಣನಾಗಿ ಶೋಭಿಸುತ್ತಿರುವುದೆಂದು ತಿಳಿಸಿದೆ. ಆದ್ದರಿಂದ ಜೀವರನ್ನು ಸಂಸಾರದ ಪಾಶದಿಂದ ಬಿಡುಗಡೆ ಮಾಡುವ ಪ್ರಭು ಒಬ್ಬನೇ ಇರುವನೆಂಬುದು ಸ್ಪಷ್ಟವಾಯಿತು. ಹೀಗೆ ಬ್ರಹ್ಮವಾದಿಗಳು ಜಗದ್ರಕ್ಷಕವಾದ ಬೇರೊಂದು ವಸ್ತುವನ್ನೇ ಕಾಣಲಿಲ್ಲ. ಅಂತವನು ಬೇರೆ ಇದ್ದಿದ್ದರೆ ಅವರು ಅವಶ್ಯವಾಗಿ ಅನುಭವಿಸುತ್ತಿದ್ದರು. ತಸ್ಥೆ ಎಂಬ ಪಾಠವನ್ನು ಉಪಯೋಗಿಸಿದ್ದರೆ ಬೇರೆ ರೀತಿಯಲ್ಲಿ ವ್ಯಾಖ್ಯಾನ ಮಾಡಬೇಕು. ರುದ್ರನು ಜಗದ್ವ್ಯಾಪಾರನಿರ್ವಾಹಕ್ಕೆ ತನ್ನನ್ನು ಬಿಟ್ಟು ಬೇರೆ ಯಾವೊಂದು ಸಾಧನವನ್ನು ನಿರೀಕ್ಷಿಸದೇ ಇದ್ದುದರಿಂದ ಅವನು ಒಬ್ಬನೇ ಇರುವನು.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಅವನಿಗೆ ತಾನಲ್ಲದೆ ಬೇರೆ ಯಾವ ವಸ್ತುವಿನ ಅಪೇಕ್ಷೆಯೂ ಇಲ್ಲವಾದ್ದರಿಂದಲೇ "ಉಪಸಂಹಾರದರ್ಶನಾನ್ನೇತಿ ಚೇನ್ನ ಕ್ಷೀರವದ್ಧಿ" "ವಿಕರಣತ್ವಾನ್ನೇತಿ ಚೇತ್ತ-ದುಕ್ತಮ್" ಎಂಬ ಸೂತ್ರಗಳಲ್ಲಿ ಪರಶಿವನು ಎರಡನೆಯ ವಸ್ತುವನ್ನು ಅವಲಂಬಿಸದೆಯೇ ಎಲ್ಲವನ್ನೂ ಸೃಷ್ಟಿಸುವನೆಂಬ ಅಂಶವನ್ನು ಸ್ಪಷ್ಟಪಡಿಸಿದೆ. ಯಾವ ರುದ್ರನು ಈ ಲೋಕಗಳೆಲ್ಲವನ್ನು ರಕ್ಷಿಸಲು ಸಮರ್ಥವಾದ ತನ್ನ ಶಕ್ತಿಗಳಿಂದಲೇ ಅನಾಯಾಸವಾಗಿ ಈ ಕಾರ್ಯವನ್ನು ನಡೆಸುತ್ತಿರುವನೋ ಆದ್ದರಿಂದಲೇ ಅವನು ಸಹಜವಾಗಿ ಲೋಕಕ್ಕೆ ನಿಯಾಮಕನಾಗಿ ನೆಲಸಿದ್ದಾನೆ. ಇದನ್ನೇ "ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ" ಎಂಬ ಶ್ರುತಿಯು ತಿಳಿಸುತ್ತಿದೆ. "ಆ ಈಶ್ವರನೇ ತನ್ನ ಅಸಾಧಾರಣಶಕ್ತಿಯ ಪ್ರಭಾವದಿಂದಲೇ ಪ್ರಾಣಿಗಳೆಲ್ಲರಲ್ಲೂ ಅಂತರ್ಯಾಮಿಯಾಗಿಯೂ ನೆಲಸಿದ್ದು ಅವರನ್ನು ಅವರವರ ಕರ್ಮಗಳಿಗನುಗುಣವಾಗಿ ಪ್ರೇರಿಸುತ್ತಲಿರುವನು." ಹೀಗೆ ಸಮಸ್ತಲೋಕಗಳನ್ನು ಅವನೇ ಬ್ರಹ್ಮನಾಗಿ ಸೃಷ್ಟಿಸುತ್ತಲೂ, ವಿಷ್ಣುವಾಗಿ ರಕ್ಷಿಸುತ್ತಲೂ, ಕೊನೆಗೆ ರುದ್ರನಾಗಿ ಸಂಹರಿಸುತ್ತಲೂ ಪ್ರಳಯದಲ್ಲಿ ಅವೆಲ್ಲವನ್ನು ತನ್ನಲ್ಲಿಯೇ ಸೇರಿಸಿಕೊಳ್ಳುತ್ತಲೂ ಅವನೊಬ್ಬನೇ ನಿರಾಕಾರವಾದ ಅಖಂಡಲಿಂಗವೆನಿಸಿದ್ದು ಜಗದ್ವ್ಯಾಪಾರಲೀಲೆಯನ್ನು ನಡೆಸುತ್ತಿರುವನು.

ಹೀಗೆ ಅಂತರ್ಯಾಮಿಯಾದ ಶಿವನೇ ಸರ್ವವ್ಯಾಪಕನೆಂದುತಿಳಿಸುತ್ತಾನೆ.

ವಿಶ್ವತಶ್ಚಕ್ಷುರುತ ವಿಶ್ವತೋಮುಖೋ
ವಿಶ್ವತೋ ಬಾಹುರುತ ವಿಶ್ವತಸ್ಪಾತ್ ।
ಸಂ ಬಾಹುಭ್ಯಾಂ ಧಮತಿ ಸಂಪತತ್ರೈ
ರ್ದ್ಯಾವಾ ಭೂಮೀ ಜನಯನ್ದೇವ ಏಕಃ ॥೩॥

ಅವನ ದೃಷ್ಟಿ ವಿಶ್ವದ ಎಲ್ಲಾ ಕಡೆಗಳಲ್ಲೂ ವ್ಯಾಪಿಸಿದೆ. ಅವನು ಯಾವಾಗಲೂ ಎಲ್ಲವನ್ನು ಕಾಣುತ್ತಿರುವನೆಂದರ್ಥ. ಇದೂ ಅಲ್ಲದೆ ಅವನ ದೃಷ್ಟಿ ಸರ್ವತೋಮುಖವಾಗಿರುವುದು. ಹಾಗೆಯೇ ಅವನ ಬಾಹುಗಳು ಎಲ್ಲೆಲ್ಲೂ ತುಂಬಿಕೊಂಡಿವೆ. ಅವನ ಪಾದಗಳು ಎಲ್ಲಾ ಕಡೆಗಳಲ್ಲೂ ವ್ಯಾಪಿಸಿವೆ. ಆದ್ದರಿಂದಲೇ ಅವನನ್ನು ಸರ್ವವ್ಯಾಪಕನೆಂದೂ, ಸರ್ವತೋಮುಖನೆಂದೂ ಶ್ರುತಿ ತಿಳಿಸಿದೆ. ಹೀಗೆ ಅವನ ರಕ್ಷಣೆಯ ಅಭಯಹಸ್ತಗಳು ಎಲ್ಲಾ ಕಡೆಯಲ್ಲೂ ವ್ಯಾಪಿಸಿರುವುದರಿಂದ ಎಲ್ಲವನ್ನು ಅವನು ತನ್ನ ಭುಜಗಳಿಂದಲೇ ಹೊಂದಿಸುತ್ತಾನೆ. ಉಪಸರ್ಗಬಲದಿಂದ ಧಮ್‌ಧಾತುವು ಈ ಅರ್ಥವನ್ನು ಕೊಡುವುದಾಗಿ ಶಂಕರಾಚಾರ್ಯರೇ ಮೊದಲಾದವರು ಒಪ್ಪಿಕೊಂಡಿದ್ದಾರೆ. ಅವನು ಸರ್ವತೋಮುಖನಾದ್ದರಿಂದಲೇ ತನ್ನ ನೇತ್ರವೆಂಬ ರೆಕ್ಕೆಗಳಿಂದ ಎಲ್ಲವನ್ನೂ ಎಲ್ಲಾ ಕಡೆಗಳಲ್ಲೂ ವ್ಯವಸ್ಥೆಯಿಂದ ಸೇರಿಸುತ್ತಾನೆ. ಹೀಗೆ ಎಲ್ಲೆಲ್ಲೂ ಅವನಿಗೆ ಯಾವ ತಡೆಯೂ ಇಲ್ಲದ್ದರಿಂದಲೇ ಅವನು ಒಬ್ಬನೇ ಇದ್ದುಕೊಂಡು ವಿಶ್ವ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ವೆಲ್ಲವನ್ನು ಸೃಷ್ಟಿಸುತ್ತ ಆತ್ಮರಾಮನಾಗಿ ಶೋಭಿಸುತ್ತಿರುವನು. ಇದರಿಂದ ಅವನೊಬ್ಬನೇ ಜಗತ್ತೆಲ್ಲವನ್ನು ಸೃಷ್ಟಿಸುತ್ತಿರುವನೆಂದು ಹೇಳಿದಂತಾಯಿತು.

ಹೀಗೆ ಅವನಿಂದ ಅಚೇತನವಾದ ಜಗತ್ತಿನ ಮತ್ತು ಚತುರ್ಮುಖಬ್ರಹ್ಮನೇ ಮೊದಲಾದ ಚೇತನರ ಸೃಷ್ಟಿಯನ್ನು ತಿಳಿಸಿ ಅಂತಹ ಲೀಲೆಯನ್ನು ಅನಾಯಾಸವಾಗಿ ನಡೆಸುತ್ತಿರುವ ಪರಮಾತ್ಮನು ತನಗೆ ಒಳ್ಳೆಯ ಬುದ್ಧಿಯನ್ನು ಕೊಡಲೆಂದು ಇಲ್ಲಿ ಶ್ವೇತಾಶ್ವತರಮಹರ್ಷಿಯು ಭಕ್ತಿಗೌರವಗಳಿಂದ ಪ್ರಾರ್ಥಿಸುತ್ತಾನೆ.

ಯೋ ದೇವಾನಾಂ ಪ್ರಭವಶ್ಚೋದ್ಭವಶ್ಚ
ವಿಶ್ವಾಧಿಪೋ ರುದ್ರೋ ಮಹರ್ಷಿಃ ।
ಹಿರಣ್ಯಗರ್ಭಂ ಜನಯಾಮಾಸ ಪೂರ್ವಂ
ಸ ನೋ ಬುದ್ಧ್ಯಾ ಶುಭಯಾ ಸಂಯುನಕ್ತು ॥೪॥

ಸಂಸಾರದುಃಖವನ್ನು ಪರಿಹರಿಸುತ್ತ ರುದ್ರನೆನಿಸಿದ ಯಾವ ಪರಮಾತ್ಮನು ಇಂದ್ರನೇ ಮೊದಲಾದ ದೇವತೆಗಳ ಉತ್ಪತ್ತಿಗೆ ಕಾರಣನೆನಿಸಿದನೋ ಹಾಗೆಯೇ ಅವರೆಲ್ಲರಲ್ಲೂ ನಿರ್ಲಿಪ್ತತೆಯಿಂದ ಅಂತರ್ಯಾಮಿಯಾಗಿ ನೆಲಸಿ ಪ್ರೇರಿಸುವ ಮೂಲಕ ವೈಭವದಿಂದ ಶೋಭಿಸುತ್ತಿರುವನು. ಆದರಿಂದಲೇ ಅವನು ಎಲ್ಲರಿಗೂ ಉತ್ಕೃಷ್ಟನೆನಿಸಿ ಪರಿಪೂರ್ಣನೂ ಸರ್ವಜ್ಞನೂ ಆಗಿರುವನು. ಇಂತಹ ಪರಮಾತ್ಮನು ಪ್ರಪಂಚಸೃಷ್ಟಿಗೆ ಮೊದಲು ಚತುರ್ಮುಖಬ್ರಹ್ಮನನ್ನು ಸೃಷ್ಟಿಸಿದನು. ಅವನು ನಮ್ಮೆಲ್ಲರಿಗೂ ಮಂಗಳಕರವಾದ ಬುದ್ಧಿಯನ್ನೇ ಯಾವಾಗಲೂ ಕೊಡಲಿ. ಇಂತಹ ಪರಮೇಶ್ವರನೇ ಎಲ್ಲಕ್ಕೂ ಕಾರಣನೆಂಬುದನ್ನು ಮುಂದೆ ತಿಳಿಸುತ್ತಾನೆ. ಅವನೇ ವಿಶ್ವವನ್ನು ಸೃಷ್ಟಿಸುವವನು ಮತ್ತು ಎಲ್ಲವನ್ನು ತಿಳಿಯುವವನು. ಅವನಿಗೆ ತಾನಲ್ಲದೆ ಬೇರೆ ಯಾವ ಕಾರಣವೂ ಇಲ್ಲ. ಹೀಗೆ ಸರ್ವಜ್ಞನಾದ ಪರಶಿವನು ಸರ್ವನಾಶಕನಾದ ಯಮನಿಗೂ ನಾಶಕನಾಗಿರುವನು. ಷಡ್ಗುಣೈಶ್ವರ್ಯಸಂಪನ್ನನು; ಸರ್ವಜ್ಞತ್ವ, ತೃಪ್ತಿ, ಅನಾದಿಬೋಧ, ನಿತ್ಯತ್ವ, ಅಲುಪ್ತಶಕ್ತಿಮತ್ವ, ಅನಂತಶಕ್ತಿಮತ್ವ ಎಂಬ ಆರುಗುಣಗಳಿಂದ ಶೋಭಿಸುತ್ತಿರುವವನು ; ಎಲ್ಲ ವಿದ್ಯೆಗಳಿಗೂ ಆಶ್ರಯನು. ಪ್ರಕೃತಿ ಜೀವ ಇವರಿಗೆ ನಿಯಾಮಕನು; ತ್ರಿಗುಣಗಳಿಗೆ ವ್ಯವಸ್ಥಾಪಕನು. "ಜೀವನನ್ನು ಸಂಸಾರದಿಂದ ಬಿಡಿಸಲಿಕ್ಕೂ ಅವನನ್ನು ರಕ್ಷಿಸಲಿಕ್ಕೂ, ಬಂಧಿಸಲಿಕ್ಕೂ ಕಾರಣನು." ಹೀಗೆ ಇದೇ ಶ್ರುತಿಯಲ್ಲಿಯೇ ಮುಂದೆ ತಿಳಿಸಲಾಗಿದೆ. ಗೀತೆಯಲ್ಲೂ ಸಹ "ಯಾವಾಗಲೂ ನನ್ನಲ್ಲಿಯೇ ಮನಸ್ಸನ್ನು ಸೇರಿಸಿ ಭಕ್ತಿಯಿಂದ ನನ್ನನ್ನು ಆರಾಧಿಸುವವರಿಗೆ ಸದ್ಬುದ್ಧಿಯನ್ನು ಅನುಗ್ರಹಿಸುವೆನು. ಆದರಿಂದ ಅವರು ನನ್ನಲ್ಲಿ ಸಮಾನವಾಗಿ ಬೆರೆಯಲು ಅವಕಾಶವಾಗುವುದು." ಹೀಗೆ ತನ್ನನ್ನಾಶ್ರಯಿಸಿದವರನ್ನು ತನ್ನಲ್ಲಿಯೇ ಸೇರಿಸಲು ಅನುಕೂಲವಾಗಿ ಅವನೇ ಅನುಗ್ರಹಿಸುವನೆಂದು ಸ್ಪಷ್ಟವಾಗಿ ತಿಳಿಸಿದೆ. ಹೀಗೆ ಅಮೂರ್ತಪರಶಿವನನ್ನು ಪ್ರಾರ್ಥಿಸಿಯಾದಮೇಲೆ ಮೂರ್ತಶಿವನನ್ನು ಸ್ತುತಿಸಿ ಪ್ರಾರ್ಥಿಸುತ್ತಾನೆ.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಯಾ ತೇ ರುದ್ರ ಶಿವಾ ತನೂರಘೋರಾಪಾಪಕಾಶಿನೀ ।
ತಯಾ ನಸ್ತನುವಾ ಶಂತಮಯಾ ಗಿರಿಶಂತಾಭಿಚಾಕಶೀಹಿ ॥ ॥೫॥

ಹೇ ರುದ್ರ–ಸಂಸಾರಪಾಶವನ್ನು ತೊಲಗಿಸುವ ಭವರೋಗವೈದ್ಯನೇ ನಿನ್ನ ಯಾವ ಪಾವನವಾದ ಶರೀರವುಂಟೋ ಅದು ನಮ್ಮ ಪಾಪವೆಲ್ಲವನ್ನು ಪರಿಹರಿಸಿ ಮೋಕ್ಷವನ್ನು ದೊರಕಿಸುವಂತಹದು. "ನಿರಾಕಾರಪರಶಿವನಿಗೆ ಎರಡು ಶರೀರಗಳಿವೆ. ಅವುಗಳಲ್ಲಿ ಒಂದು ಪ್ರಶಾಂತವೂ ಮತ್ತೊಂದು ಭೀಕರವೂ ಆಗಿವೆ." ಎಂದು ಶ್ರುತಿಯಲ್ಲಿ ಬೇರೆ ಕಡೆಯೂ ಹೇಳಿದೆ. ಇವುಗಳಲ್ಲಿ ಘೋರಮೂರ್ತಿಯೇ ಕಾಲರುದ್ರನೆಂದೂ, ಅಘೋರ (ಪ್ರಸನ್ನ) ಮೂರ್ತಿಯೇ ನಿರಾಕಾರಶಿವನೆಂದೂ ಭಾವಿಸಲಾಗಿದೆ. ನಮಗೆ ಅತ್ಯಂತವಾಗಿ ಸುಖಶಾಂತಿಗಳನ್ನು ಕೊಡುವಂತಹ ಪ್ರಸನ್ನವಾದ ಶಿವರೂಪದಿಂದಲೇ ನೀನು ಕೈಲಾಸವಾಸಿಯಾಗಿರುವೆ. ಈ ರೂಪದಿಂದಲೇ ನೀನು ನಮ್ಮನ್ನು ಚೆನ್ನಾಗಿ ಎಲ್ಲಾ ಕಡೆಗಳಿಂದಲೂ ನೋಡಿ ಅನುಗ್ರಹಿಸು. ನಿನ್ನ ಕ್ರೂರರೂಪವೇ ಕಾಲರುದ್ರನೆನಿಸಿ ಸ್ಮಶಾನದಲ್ಲಿ ತಾಂಡವವಾಡುತ್ತಿರುವುದು. ಆ ರೂಪದಿಂದ ನೀನು ನಮಗೆ ಕಾಣಿಸಿಕೊಳ್ಳಬೇಡ. ಇಷ್ಟೇ ನಮ್ಮ ದೈನಂದಿನ ಪ್ರಾರ್ಥನೆ.

ಯಾಮಿಷುಂ ಗಿರಿಶಂತ ಹಸ್ತೇ ಬಿಭರ್ಷ್ಯಸ್ತವೇ
ಶಿವಾಂ ಗಿರಿತ್ರ ತಾಂ ಕುರು ಮಾ ಹಿಂಸೀಃ ಪುರುಷಂ ಜಗತ್ ॥೬॥

"ಬೆಟ್ಟದಲ್ಲಿ ನೆಲಸಿದ್ದು ಎಲ್ಲರನ್ನು ಸುಖಪಡಿಸುವರುದ್ರನೇ, ದುಷ್ಟರೂ ಭಕ್ತರಲ್ಲದವರೂ ಆದವರಲ್ಲಿ ಪ್ರಯೋಗಿಸಲಿಕ್ಕಾಗಿ ಯಾವ ಬಾಣವನ್ನು ನೀನು ಕೈಯಲ್ಲಿ ಹಿಡಿದಿರುವೆಯೋ, ಗಿರಿಯಲ್ಲಿ ನೆಲಸಿ ರಕ್ಷಣೆ ಮಾಡುವ ಪ್ರಭುವೇ, ದಯೆಯಿಟ್ಟು ಆ ಶಸ್ತ್ರವನ್ನು ಮಂಗಳಕರವನ್ನಾಗಿ ಮಾಡಿಕೋ. ನೀನು ಅದರಿಂದ ಚೇತನರನ್ನೂ ಜಡವಸ್ತುಗಳನ್ನೂ ಹಿಂಸಿಸಬೇಡ. ನಿನ್ನ ಕ್ರೂರಶಕ್ತಿಯನ್ನು ಭಕ್ತರಾದ ನಮ್ಮಲ್ಲಿ ಪ್ರಯೋಗಿಸದೆ ವಾತ್ಸಲ್ಯದಿಂದ ನಮ್ಮನ್ನು ರಕ್ಷಿಸು" ಎಂದು ಭಕ್ತಿಯಿಂದ ಪ್ರಾರ್ಥಿಸಲಾಗಿದೆ. ಇದರಿಂದ ಈಶ್ವರನು ಪಾಪಿಗಳಿಗೆ ಮಾತ್ರ ಭೀಕರನಾಗಿರುವನೆಂದೂ ಭಕ್ತರಿಗೂ ಆಶ್ರಿತರಿಗೂ ಅಭಯಹಸ್ತವನ್ನು ಯಾವಾಗಲೂ ನೀಡುತ್ತಿರುವನೆಂದೂ, ಇಲ್ಲಿ ಹೇಳಿದಂತಾಯಿತು.

ಹೀಗೆ ಪರಮೇಶ್ವರನನ್ನು ಸ್ತುತಿಸಿ ಅವನ ಜ್ಞಾನದಿಂದಲೇ ಅವನನ್ನು ತನ್ನೊಳಗೆ ಅನುಭವಿಸುವುದರಿಂದಲೇ ಮುಕ್ತಿಯಾಗುವುದೆಂದು ತಿಳಿಸುತ್ತಾನೆ.

ತತಃ ಪರಂ ಬ್ರಹ್ಮಪರಂ ಬೃಹಂತಂ ಯಥಾ
ನಿಕಾಯಂ ಸರ್ವಭೂತೇಷು ಗೂಢಮ್ ।
ವಿಶ್ವಸ್ಯೈಕಂ ಪರಿವೇಷ್ಟಿತಾರಮೀಶಂ
ತಂ ಜ್ಞಾತ್ವಾಽಮೃತಾ ಭವಂತಿ ॥೭॥

ಚೇತನಾಚೇತನರೂಪವಾದ ಜಗತ್ತೆಲ್ಲಕ್ಕೂ ಉತ್ಕೃಷ್ಟನೂ, ವಿಶ್ವವೆಲ್ಲಕ್ಕೂ ಕಾರಣನಾದ್ದರಿಂದ ಚತುರ್ಮುಖಬ್ರಹ್ಮನಿಗೂ ಕಾರಣನೆಂದು ಪ್ರಸಿದ್ಧನೂ ಆದ ಪರ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಶಿವಬ್ರಹ್ಮವು ಪ್ರಾಣಿಗಳೆಲ್ಲರ ಶರೀರದಲ್ಲಿಯೂ ಗೋಪ್ಯವಾಗಿ ನೆಲಸಿದೆ. ವಿಶ್ವವೆಲ್ಲವನ್ನೂ ತನ್ನೊಳಗೆ ಅಡಗಿಸಿಕೊಂಡು ನಿಂತಿರುವ ಈ ಪರಮೇಶ್ವರನನ್ನು ಅನುಭವಿಸಿದವರು ಮಾತ್ರವೇ ಅಮೃತರಾಗಬಲ್ಲರು. ಅವನ ದರ್ಶನದಿಂದಲೇ ಜೀವರಿಗೆ ಮುಕ್ತಿ ದೊರಕುವುದಲ್ಲದೆ ಹೊರಗಿನ ಆಡಂಬರದಿಂದ ಅದು ದೊರಕಲಾರದು.

ವೇದಾಹಮೇತಂ ಪುರುಷಂ ಮಹಾಂತಂ
ಆದಿತ್ಯವರ್ಣಂ ತಮಸಃ ಪರಸ್ತಾತ್ ।
ತಮೇವ ವಿದಿತ್ವಾಽತಿಮೃತ್ಯುಮೇತಿ
ನಾನ್ಯಃ ಪಂಥಾ ವಿದ್ಯತೇಽಯನಾಯ ॥೮॥

ಹಿಂದಿನ ಮಂತ್ರಗಳಲ್ಲಿ ವರ್ಣಿಸಿದಂತೆ ಪರಮಾತ್ಮನ ಸ್ವರೂಪವನ್ನು ತಿಳಿದು ಶ್ವೇತಾಶ್ವತರಮಹರ್ಷಿಯು ಇತರರಿಗೆ ಮನವರಿಕೆಯಾಗುವಂತೆ ಅದನ್ನೇ ಇಲ್ಲಿ ಸಂಗ್ರಹಿಸಿ ತಿಳಿಸುತ್ತಾನೆ. ಆ ಪರಮಾತ್ಮನು ಜಗತ್ತಿನ ಎಲ್ಲ ವಸ್ತುಗಳಿಗಿಂತಲೂ ದೊಡ್ಡವನೂ ಸ್ವಪ್ರಕಾಶಸ್ವರೂಪನೂ ಆದ ಚೇತನನಿರುವನು. ಸರ್ವ ಪ್ರಾಣಿಗಳ ದೇಹದಲ್ಲೂ ನೆಲಸಿರುವುದರಿಂದ ಪುರುಷನೆನಿಸಿರುವನು. ಕತ್ತಲೆ ಎನಿಸದೆ ತ್ರಿಗುಣಗಳಿಂದ ಆಚೆಗೆ ಇರುವವನಾದ್ದರಿಂದ ಅವನು ಪರಂಜ್ಯೋತಿ ಎನಿಸಿರುವನು. ಹೀಗೆ ತ್ರಿಗುಣಾತೀತನೂ ಚೇತನಸ್ವರೂಪನೂ ಆದ ಪರಶಿವಬ್ರಹ್ಮವನ್ನು ಮಹರ್ಷಿಯು ತಿಳಿದು ಅಷ್ಟಕ್ಕೆ ತೃಪ್ತನಾಗದೆ ಇತರರೂ ತಿಳಿದು ಸಂಸಾರಪಾಶದಿಂದ ಬಿಡುಗಡೆಯಾಗಲೆಂದು ಇಲ್ಲಿ ತಿಳಿಸುತ್ತಾನೆ. ಜೀವರೆಲ್ಲರೂ ಅವನನ್ನು ತಿಳಿದೇ ಭವಬಂಧದಿಂದ ಪಾರಾಗಬೇಕು. ಇದಲ್ಲದೆ ಮುಕ್ತಿಗೆ ಬೇರೆ ಮಾರ್ಗವೇ ಇರುವುದಿಲ್ಲ. "ಮಾನವನಿಗೆ ಚರ್ಮದಂತೆ ಆಕಾಶವೇ ಹೊದಿಕೆಯಾದರೆ ಆಗ ಅವನಿಗೆ ಈಶ್ವರನನ್ನು ತಿಳಿಯದೆಯೇ ದುಃಖದಿಂದ ಬಿಡುಗಡೆಯಾಗುತ್ತದೆ" ಎಂದು ಮುಂದೆ ತಿಳಿಸಲಾಗುವುದು. ಆಕಾಶವೇ ಹೊದಿಕೆಯಾಗಬೇಕಾದರೆ ಆಕಾಶದಂತಹ ಪರಮಾತ್ಮನ ಜ್ಞಾನವಾಗಲೇಬೇಕೆಂದರ್ಥ. ಆದ್ದರಿಂದ ಅವನ ಸಾಕ್ಷಾತ್ಕಾರವೇ ಮುಕ್ತಿಗೆ ಹೇತುವೆಂದು ಸಿದ್ಧವಾಯಿತು.

ಪರಮಾತ್ಮನ ಜ್ಞಾನವಲ್ಲದೆ ಬೇರೆ ಯಾವ ಮಾರ್ಗದಿಂದಲೂ ಮುಕ್ತಿ ಇಲ್ಲವೆಂದು ಹೇಳಲಿಕ್ಕೆ ಸಮಾಧಾನವನ್ನು ತಿಳಿಸುತ್ತಾನೆ.

ಯಸ್ಮಾತ್ಪರಂ ನಾಪರಮಸ್ತಿ ಕಿಂಚಿದ್ಯಸ್ಮಾ
ನ್ನಾಣೀಯೋ ನ ಜ್ಯಾಯೋಽಸ್ತಿ ಕಶ್ಚಿತ್ ।
ವೃಕ್ಷ ಇವ ಸ್ತಬ್ಧೋ ದಿವಿ ತಿಷ್ಠತ್ಯೇಕ
ಸ್ತೇನೇದಂ ಪೂರ್ಣಂ ಪುರುಷೇಣ ಸರ್ವಮ್ ॥೯॥

ಪರಶಿವಬ್ರಹ್ಮಕ್ಕಿಂತಲೂ ಬೇರೆ ಉತ್ಕೃಷ್ಟವಾದ ಯಾವ ವಸ್ತುವೂ ಜಗತ್ತಿನಲ್ಲಿ ಎಲ್ಲಿಯೂ ಇಲ್ಲ. ವಿಶ್ವದಲ್ಲಿರುವ ಚರ–ಅಚರ ವಸ್ತುಗಳೆಲ್ಲವೂ ಪರಶಿವನಿಂದಲೇ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಹುಟ್ಟಿಬಂದಿರುವುದರಿಂದಲೂ ಅವನನ್ನೇ ಅನುಸರಿಸಿಕೊಂಡು ಬದುಕಿರುವುದರಿಂದಲೂ ಕೊನೆಗೆ ಅವನಲ್ಲಿಯೇ ಸೇರುವುದರಿಂದಲೂ ಅವನೇ ಎಲ್ಲರಿಗೂ ಆಶ್ರಯಸ್ಥಾನವೂ, ರಕ್ಷಕನೂ, ವಿಶ್ರಾಂತಿಸ್ಥಲವೂ ಆಗಿರುವನೆಂದು ನಿಶ್ಚಯಿಸಲಾಗಿದೆ. ಹೀಗೆ ಎಲ್ಲಕ್ಕೂ ಆಧಾರವಾದ್ದರಿಂದಲೇ ಅವನನ್ನು ಲಿಂಗವೆಂದು ಕರೆಯಲಾಗಿದೆ. "ಎಲ್ಲವೂ ಎಲ್ಲಿ ಹೋಗಿ ಸೇರಿದ್ದು ಮತ್ತೆ ಹಿಂತಿರುಗಿ ಬರುವವೋ ಹೀಗೆ ಲಯಗಮನಗಳಿಗಾಶ್ರಯ ವಾದ ವಸ್ತುವೇ ಲಿಂಗವೆನಿಸುತ್ತದೆ" ಎಂದೂ "ಈ ಲಿಂಗದೊಳಗೆ ಎಲ್ಲವೂ ಅಡಗಿರು ವುದರಿಂದ ಇದಕ್ಕಿಂತ ಬೇರೆಯಾವುದೂ ಇಲ್ಲ" ವೆಂದೂ ಸಿದ್ಧಾಂತಶಿಖಾಮಣಿಯು ತಿಳಿಸಿದೆ. ಆದ್ದರಿಂದ ಜಗತ್ತಿನ ಎಲ್ಲ ವಸ್ತುಗಳೂ ಪರಶಿವಮಯವೆನಿಸಿವೆ. ಆದರೂ ಅವನು ಎಲ್ಲಕ್ಕೂ ನಿಯಾಮಕನಾಗಿ ಎಲ್ಲದರೊಳಗೂ ಅಂತರ್ಯಾಮಿಯಾಗಿ ಇರುವು ದರಿಂದ ಅವನಿಗಿಂತಲೂ ಉತ್ಕೃಷ್ಟವಸ್ತುವೇ ಎಲ್ಲಿಯೂ ಇಲ್ಲ. ಚೇತನರಲ್ಲಿ ಸಚ್ಚಿದಾನಂದರೂಪದಿಂದಲೂ, ಜಡವಸ್ತುಗಳಲ್ಲಿ ಚಿದಾನಂದಗಳನ್ನು ತಮಸ್ಸು ಮುಚ್ಚಿರುವುದರಿಂದ ಸದ್ರೂಪದಿಂದಲೂ ಪರಮಾತ್ಮನು ಎಲ್ಲರಲ್ಲೂ ಅವ್ಯಕ್ತವಾಗಿ ನೆಲಸಿದ್ದು ಎಲ್ಲಕ್ಕೂ ಹೆಚ್ಚಿನವನೆನಿಸಿರುವುದರಲ್ಲಿ ಯಾವ ಸಂಶಯವೂ ಇಲ್ಲ. ಈ ಪರಶಿವಲಿಂಗಕ್ಕಿಂತಲೂ ಅತ್ಯಂತಸೂಕ್ಷ್ಮವಾದ ವಸ್ತುವೇ ಇಲ್ಲ. "ಅವನು ಅಣುವಿಗಿಂತ ಅಣುವೂ ಮಹದ್ವಸ್ತುವಿಗಿಂತ ಮಹತ್ತರವೂ ಆಗಿರುವನು" ಎಂದು ಶ್ರುತಿಯೇ ತಿಳಿಸಿದೆ. ಆದ್ದರಿಂದಲೇ ಅವನು ಅತಿಸೂಕ್ಷ್ಮವೂ ಅತಿವಿಸ್ತಾರವೂ ಆಗಿ ಜಗತ್ತಿನಲ್ಲಿ ಎಲ್ಲವನ್ನೂ ಅದರದರ ಅಂತಸ್ತಿಗನುಗುಣವಾಗಿ ತುಂಬಿಕೊಂಡಿದ್ದಾನೆ. ಅವನು ವೃಕ್ಷದಂತೆ ನಿಶ್ಚಲನಾಗಿ ನಿರಾಧಾರವಾದ ಚಿದಾಕಾಶದಲ್ಲಿ ತಡೆಯಿಲ್ಲದ ಪ್ರಾಣ ಶಕ್ತಿಯೊಡಗೂಡಿ ತಾನೊಬ್ಬನೇ ನಿರಾಕಾರನೂ ಸಾಕಾರನೂ ಆಗಿ ಶೋಭಿಸುತ್ತಿರು ವನು. ಹೀಗೆ ಅವನು ಅಮೂರ್ತಸ್ಥಿತಿಯಲ್ಲಿದ್ದುಕೊಂಡೇ ಮೂರ್ತರೂಪನೂ ಆಗಿರು ವುದರಿಂದ ಇಂತಹ ಅಖಂಡತೇಜೋಮಯವೆನಿಸಿದ ಪರಮಾತ್ಮನೆ ಜಗತ್ತಿನಲ್ಲಿ ಪೂರ್ಣವಾಗಿ ವ್ಯಾಪಿಸಿ ಶೋಭಿಸುತ್ತಲಿರುವುದು ಸಹಜವಾಗಿದೆ. "ಅವನು ಪೂರ್ಣ ನಾಗಿದ್ದು ಅವನ ಪರಿಣಾಮವೆನಿಸಿರುವ ಈ ಜಗತ್ತು ಅವನಿಂದ ತುಂಬಿಕೊಂಡೇ ಪೂರ್ಣವೆನಿಸಿದೆ. ಪೂರ್ಣವಸ್ತುವಿನಿಂದ ಬಂದದ್ದು ಪೂರ್ಣವೇ ಆಗಿದೆ. ಪೂರ್ಣ ದೊಳಗಿಂದ ಪೂರ್ಣವೇ ಹೊರಬಿದ್ದರೂ ಮೂಲಾಧಾರವೆನಿಸಿದ ಪೂರ್ಣವಸ್ತುವು ಪೂರ್ಣವಾಗಿಯೇ ಉಳಿದಿದೆ" ಹೀಗೆ ಶ್ರುತಿಯೇ ಪರಮಾತ್ಮನ ಮತ್ತು ವಿಶ್ವದ ಪೂರ್ಣತೆಯನ್ನು ತಿಳಿಸಿರುವುದರಿಂದ ಪೂರ್ಣದ ನಿತ್ಯಸಂಪರ್ಕವಿರುವ ವಿಶ್ವವನ್ನು ಮಿಥ್ಯೆ ಎಂದು ಭಾವಿಸುವ ಪ್ರಸಂಗವೇ ಒದಗುವುದಿಲ್ಲ.

ತತೋ ಯದುತ್ತರತರಂ ತದರೂಪಮನಾಮಯಮ್ ।
ಯ ಏತದ್ವಿದುರಮೃತಾಸ್ತೇ ಭವಂತ್ಯಥೇತರೇ
ದುಃಖಮೇವಾಪಿ ಯಂತಿ ॥೧೦॥

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಎಲ್ಲರಿಗೂ ಅನುಭವಗೋಚರವಾಗಿರುವ ಶಿವಮಯವಾದ ಜಗತ್ತಿಗಿಂತ ಉತ್ಕೃಷ್ಟವೂ ಸರ್ವಕಾರಣವೂ ಸಾಕ್ಷಿಯೂ ಪರಂಜ್ಯೋತಿಯೂ ಆದ ಪರಶಿವಬ್ರಹ್ಮವು ವಾಸ್ತವವಾಗಿ ನಿರ್ಮಲವೂ ಆಗಿದೆ. ಆದರಲ್ಲಿ ರೂಪವಾಗಲೀ ಆಣವಾದಿಮಲ ಸಂಬಂಧವಾಗಲೀ ಇಲ್ಲವೆಂದು ಇಲ್ಲಿ ತಿಳಿಸಿದಂತಾಯಿತು. ಇಂತಹ ದಿವ್ಯತೇಜಸ್ಸನ್ನು ಅನುಭವಿಸಿದವರೇ ಅಮೃತರಾಗುತ್ತಾರೆ. ಅವರೇ ಮೃತ್ಯುವನ್ನು ಜಯಿಸಬಲ್ಲರು. ಯಾರು ತಮ್ಮೊಳಗೆ ತಮಗಾಗಿ ಶಿರಸ್ಸಿನಲ್ಲಿ ಭಾವರೂಪದಿಂದಲೂ ಹೃದಯದಲ್ಲಿ ಪ್ರಾಣರೂಪದಿಂದಲೂ, ಭ್ರೂಮಧ್ಯದಲ್ಲಿ ಇಷ್ಟರೂಪದಿಂದಲೂ ನೆಲಸಿರುವ ಪರಶಿವಲಿಂಗವನ್ನು ತಿಳಿಯಲಾರರೋ ಅವರು ಯಾವಾಗಲೂ ದುಃಖದಿಂದಲೇ ನರಳುತ್ತಿರುವರು. ಹೀಗೆ ದುಃಖವಿಮೋಚನೆಗೆ ಮಾನವರು ತಮ್ಮೊಳಗಿನ ಶಿವತತ್ತ್ವವನ್ನೇ ತಿಳಿಯಬೇಕೆಂಬುದು ಇದರಿಂದ ಸ್ಪಷ್ಟವಾಯಿತು.

ಸರ್ವಾನನಶಿರೋಗ್ರೀವಃ ಸರ್ವಭೂತಗುಹಾಶಯಃ ।
ಸರ್ವವ್ಯಾಪೀ ಚ ಭಗವಾನ್ ತಸ್ಮಾತ್ಸರ್ವಗತಃ ಶಿವಃ ॥೧೧॥

ಪರಮಾತ್ಮನೇ ಜೀವರೆಲ್ಲರಲ್ಲೂ ಪ್ರಧಾನವೆನಿಸಿರುವ ಮುಖ, ಶಿರಸ್ಸು, ಕಂಠ ಈ ಸ್ಥಾನಗಳಾಗಿ ಪರಿಣಮಿಸಿರುವನಲ್ಲದೆ ಅಲ್ಲಿಯೇ ಅವಕ್ಕಾಶ್ರಯನಾಗಿಯೂ ಇರುವನು. ಅವನು ಎಲ್ಲರ ಶರೀರೇಂದ್ರಿಯಗಳೂ ಆಗಿರುವಂತೆ ಎಲ್ಲರೊಳಗೆ ಚೇತನನಾಗಿಯೂ ಪ್ರವೇಶಿಸಿರುವನು. ಇದು ಅವನ ವಿಚಿತ್ರಶಕ್ತಿಯೋಗವೆನಿಸಿದೆ. "ಅವನೇ ಅದನ್ನು ಸೃಷ್ಟಿಸಿ ಅದರೊಳಗೆ ಪ್ರವೇಶಿಸಿದನು" ಎಂದು ಶ್ರುತಿಯೇ ಪರಮಾತ್ಮನ ಪರಿಣಾಮವನ್ನೂ, ಅದರೊಳಗೆ ಅವನ ಪ್ರವೇಶವನ್ನೂ ಸ್ಪಷ್ಟವಾಗಿ ತಿಳಿಸಿದೆ. ಹೀಗೆ ಎಲ್ಲಾ ಬಗೆಯ ಕಾರ್ಯಗಳನ್ನು ನಡೆಸಲು ಸಮರ್ಥನೆನಿಸಿದ ಪರಮಾತ್ಮನೇ ಎಲ್ಲ ಪ್ರಾಣಿಗಳ ಎದೆ ಗುಹೆಯಲ್ಲೂ ಅಂತರಾತ್ಮನಾಗಿ ನೆಲಸಿರುವುದರಿಂದ ಪ್ರಾಣಲಿಂಗವೆನಿಸಿದ್ದಾನೆ. ಗೀತೆಯಲ್ಲೂ ಸಹ "ನಾನೇ ಎಲ್ಲರ ಹೃದಯದಲ್ಲೂ ನೆಲಸಿರುವೆನು" ಎಂದು ತಿಳಿಸಲಾಗಿದೆ.. ಆದ್ದರಿಂದಲೇ ಸರ್ವವ್ಯಾಪಿಯಾದ ಪರಶಿವನು ಷಡ್ಗುಣೈಶ್ವರ್ಯಸಂಪನ್ನನಾಗಿ ಎಲ್ಲರಿಗೂ ಮಂಗಳಕರನಾಗಿ ಎಲ್ಲರಲ್ಲೂ ಯಾವಾಗಲೂ ನೆಲಸಿರುವನು. ಅವನಿಲ್ಲದೆ ಬೇರೆ ಯಾವುದೂ ಇರುವಂತೆಯೇ ಇಲ್ಲ. "ಅವನಿಲ್ಲದೆ ಒಂದು ಹುಲ್ಲುಕಡ್ಡಿಯೂ ಅಲ್ಲಾಡುವುದಿಲ್ಲ. ಅವನ ಪ್ರಕಾಶದಿಂದಲೇ ಇದೆಲ್ಲವೂ ಶೋಭಿಸುತ್ತಿದೆ" ಎಂದು ಶ್ರುತಿಯೇ ಪರಶಿವನ ವ್ಯಾಪ್ತಿ ಮತ್ತು ನಿರ್ಲಿಪ್ತಸ್ಥಿತಿಗಳನ್ನು ತಿಳಿಸಿದೆ. "ನಾನಿಲ್ಲದೆ ಬೇರೆ ಯಾವ ವಸ್ತುವೂ ಇರುವಂತೆಯೇ ಇಲ್ಲ" ಎಂದು ಗೀತೆಯೂ ತಿಳಿದೆ. "ನೀನೇ ಎಲ್ಲವನ್ನೂ ವ್ಯಾಪಿಸಿರುವುದರಿಂದ ನಿನ್ನನ್ನು ಸರ್ವ ಎಂದು ಕರೆಯಲಾಗಿದೆ" ಎಂದು ಗೀತೆಯಲ್ಲಿ ಪರಮಾತ್ಮನೇ ಸರ್ವ ರೂಪದಿಂದಲೂ ಪರಿಣಮಿಸಿದ್ದರಿಂದ ಅಖಂಡಲಿಂಗವೆನಿಸಿರುವನೆಂದು ತಿಳಿಸಿದ್ದು ಸಾರ್ಥಕವೆನಿಸಿದೆ.

ಮಹಾನ್ ಪ್ರಭುರ್ವೈ ಪುರುಷಃ ಸತ್ತ್ವಸ್ಯೈಷ ಪ್ರವರ್ತಕಃ ।
ಸುನಿರ್ಮಲಾಮಿಮಾಂ ಶಾಂತಿಂ ಈಶಾನೋ ಜ್ಯೋತಿರವ್ಯಯಃ ॥೧೨॥

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಪರಶಿವನು ವಿಶ್ವವೆಲ್ಲಕ್ಕೂ ಅಧಿಪತಿಯಾದ್ದರಿಂದ ಮಹಾದೇವನೂ ಪ್ರಭುವೂ ಸಮರ್ಥನೂ ಆಗಿ ಪುರುಷನೆನಿಸಿದ್ದಾನೆ. "ವಿಶ್ವದ ವ್ಯವಸ್ಥಾಪಕರಾದ ತ್ರಿಮೂರ್ತಿಗಳಿಗೂ ಇಂದ್ರ ಮೊದಲಾದ ದೇವತೆಗಳಿಗೂ ಅವನೇ ಪತಿ ಎನಿಸಿದ್ದಾನೆ" ಎಂದು ಮುಂದೆ ಈ ಶ್ರುತಿಯೇ ತಿಳಿಸುತ್ತದೆ. ಹೀಗೆಯೇ ಪರಶಿವನು ಸತ್ತ್ವಗುಣದ ಪ್ರತಿಬಂಧಕವೆನಿಸಿದ ತಮಸ್ಸನ್ನು ಮುಚ್ಚುವ ಮೂಲಕ ಸತ್ತ್ವವನ್ನು ವಿಕಾಸಗೊಳಿಸಲಿರುವನು. ಅಥವಾ ಸತ್ತ್ವವೆನಿಸಿದ ಸಕಲ ವಸ್ತುಗಳಿಗೂ ಅವನೇ ಕಾರಣವೆನಿಸಿರುವನೆಂಬ ಅರ್ಥವನ್ನೂ ಇಲ್ಲಿ ಹೇಳಬಹುದು. "ಕಿಂಕಾರಣಂ ಬ್ರಹ್ಮ" ಎಂದೇ ಈ ಶ್ರುತಿಯನ್ನು ಆರಂಭಿಸಲಾಗಿದೆ. ಅವನೇ ಎಲ್ಲಕ್ಕೂ ಕಾರಣನಾಗಿರುವಂತೆ ಸಂಹಾರಕನೂ ಆಗಿರುವನು. ಅವನ ಘೋರರೂಪವೇ ಕಾಲರುದ್ರನೆನಿಸಿದಂತೆ ಅಘೋರರೂಪವೇ ಶಿವನೆಂದು ಪ್ರಸಿದ್ಧವಾಗಿದೆ. ಹೀಗೆ ಜೀವರ ಬಂಧನಕ್ಕೂ ರಕ್ಷಣಕ್ಕೂ ಪಾಶವಿಮೋಚನೆಗೂ ಕಾರಣನಾದ್ದರಿಂದಲೇ ಪರಶಿವನನ್ನು ಸತ್ತ್ವಗುಣಕ್ಕೆ ಪ್ರವರ್ತಕನೆಂದು ಕರೆಯಲಾಗಿದೆ. ರುದ್ರನಲ್ಲಿ ತಮೋಗುಣವೇ ವಿಶೇಷವಾಗಿದೆ ಎಂದು ಕೆಲವು ಪುರಾಣಗಳಲ್ಲಿ ಹೇಳಿದ್ದು ಯುಕ್ತವಲ್ಲವೆಂಬುದು ಇದರಿಂದ ಸ್ಪಷ್ಟವಾಯಿತು. ಅಮೂರ್ತಪರಶಿವನ ಘೋರರೂಪವೆನಿಸಿದ ಕಾಲರುದ್ರನಲ್ಲೂ ಜ್ಞಾನ ಕ್ರಿಯೆಗಳ ಸಮನ್ವಯದೃಷ್ಟಿ ಇರುವುದರಿಂದ ತಮೋಗುಣದ ಸಂಬಂಧವೇ ಇಲ್ಲ. ಪ್ರಳಯಾಧಿಕಾರಿಯಾದ ಕಾಲರುದ್ರನು ಯಾವ ಜೀವಕ್ಕೆ ಅವಸಾನಕಾಲ ಒದಗಿದೆ ಎಂಬುದನ್ನು ತಿಳಿದೇ ಅಲ್ಲಿಗೆ ತನ್ನ ಸೇವಕನಾದ ಯಮನನ್ನು ಕಳುಹಿಸಲಿರುವನು. ಹೀಗೆ ಚೆನ್ನಾಗಿ ತಿಳಿದು ಕಾರ್ಯವನ್ನು ಜಾಗರೂಕತೆಯಿಂದ ನಡೆಸುತ್ತಿರುವುದರಿಂದ ಕಾಲರುದ್ರನು ಹೇಗೆ ತಾಮಸನೆನಿಸಿಯಾನು? ಅಮೂರ್ತಪರಶಿವನ ಅಘೋರಮೂರ್ತಿ ಎನಿಸಿ ದಿವ್ಯಮಂಗಳವಿಗ್ರಹನೆನಿಸಿದ ಶಿವನನ್ನು ಸತ್ತ್ವಗುಣಕ್ಕೆ ಪ್ರವರ್ತಕನೆಂದು ತಿಳಿಸಿದ್ದರಿಂದ ಅವನಲ್ಲಿ ತಮಸ್ಸಿನ ಸಂಬಂಧವೇ ಇಲ್ಲ. ಕಾಲರುದ್ರನು ಪ್ರಳಯಾಧಿಕಾರಿಯಾದ್ದರಿಂದ ಅವನ ಪ್ರಕೃತಿಯನ್ನು ತಾಮಸವೆಂದು ಜನರು ಭ್ರಾಂತಿಗೊಂಡಿರುವರು. ಅವನನ್ನೇ ಮೂರ್ತಶಿವನೆಂದು ಭಾವಿಸಿದ ಮೂಢರು ದಿವ್ಯಮೂರ್ತನೆನಿಸಿ ಕೈಲಾಸದಲ್ಲಿರುವ ಶಿವನಲ್ಲಿಯೂ ತಾಮಸಪ್ರಕೃತಿಯನ್ನು ಆರೋಪಿಸುತ್ತಾರೆ. ಅದು ಯುಕ್ತವಲ್ಲವೆಂಬುದು ಈ ಶ್ರುತಿವಾಕ್ಯದಿಂದ ಸ್ಪಷ್ಟವಾಗುತ್ತದೆ. ಹೀಗೆ ತಿಳಿಸಿದ್ದರಿಂದ ಏನು ಹೇಳಿದಂತಾಯಿತೆಂಬುದನ್ನು ಈಗ ತಿಳಿಸುತ್ತಾನೆ. ಪರಶಿವನು ಹೀಗೆ ಸಾತ್ತ್ವಿಕನಾದ್ದರಿಂದಲೇ ಯಾವೊಂದು ದೋಷದ ಸಂಪರ್ಕವೂ ಇಲ್ಲದ ಬ್ರಹ್ಮಾನಂದವನ್ನು ಸಾಧಕರಿಗೆ ದೊರಕಿಸುತ್ತಿರುವನು. ಹೀಗೆ ಸತ್ತ್ವಗುಣದ ವಿಕಾಸದಿಂದ ದೊರಕುವ ಶಾಶ್ವತಶಾಂತಿಯೇ ಬ್ರಹ್ಮಜಿಜ್ಞಾಸೆಯ ಫಲವೆನಿಸಿದೆ. ಆದ್ದರಿಂದ ಶಿವನೇ ಮೋಕ್ಷದಾತನೆಂದು ತಿಳಿಸಿದಂತಾಯಿತು. ಹೀಗೆ ಅವನು ನಾಶವಿಲ್ಲದ ಪರಂಜ್ಯೋತಿ ಎಂದು ಪ್ರಸಿದ್ಧನಾಗಿದ್ದಾನೆ. ಇಂತಹ ಸ್ವಪ್ರಕಾಶಶಿವನು ದಿವ್ಯಮೂರ್ತರೂಪದಿಂದ ನಮ್ಮನ್ನು ನೋಡಿ ನಮಗೆ ಶಿವಯೋಗಿಗಳು

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ತನ್ನ ದೇಹದಲ್ಲಿ ಅನುಭವಿಸುವ ಶಿವಲೀಲಾವೈಭವವನ್ನು ತಿಳಿಯಪಡಿಸಿ ಅದರಿಂದ ಪರಮಶಾಂತಿಯನ್ನು ದಯೆಯಿಂದ ಅನುಗ್ರಹಿಸಲೆಂದು ಮಹರ್ಷಿಯು ಅನನ್ಯಭಕ್ತಿಯಿಂದ ಪ್ರಾರ್ಥಿಸುತ್ತಾನೆ.

ಅಂಗುಷ್ಠಮಾತ್ರಃ ಪುರುಷೋಽಂತರಾತ್ಮಾ
ಸದಾ ಜನಾನಾಂ ಹೃದಯೇ ಸನ್ನಿವಿಷ್ಟಃ ।
ಹೃದಾ ಮನೀಷಾ ಮನಸಾಽಭಿಕ್ಲ್ಪೃಪ್ತೋ
ಯ ಏತದ್ವಿದುರಮೃತಾಸ್ತೇ ಭವಂತಿ ॥೧೩॥

ಪರಶಿವಲಿಂಗವು ಹೃದಯದಲ್ಲಿ ಅಂಗುಷ್ಠಪ್ರಮಾಣದಲ್ಲಿ ನೆಲಸಿರುವುದಾಗಿ ಹೇಳಿದ್ದರಿಂದ ಅದು ಪರಿಮಿತವಾಯಿತೆಂಬ ಭ್ರಾಂತಿಯುಂಟಾಗುವುದು. ಇದನ್ನು ತೊಲಗಿಸಲಿಕ್ಕಾಗಿ ಅದು ಸರ್ವಕ್ಕೂ ಆಧಾರವಾದ್ದರಿಂದ ಆಕಾಶದಂತೆ ವ್ಯಾಪಕವಾಗಿದೆ ಎಂದು ಈಗ ತಿಳಿಸುತ್ತಾನೆ. ಹೀಗೆ ಸರ್ವವ್ಯಾಪಕನಾದರೂ ಲೋಕರಕ್ಷಕನಾದ ಪ್ರಭುವು ಮಾನವರನ್ನು ಅನುಗ್ರಹಿಸಲಿಕ್ಕಾಗಿ ಅವರ ಹೃದಯದಲ್ಲಿ ಅಂಗುಷ್ಠಮಾಣದಲ್ಲಿ ನೆಲಸಿರುವನು. "ಸಮಸ್ತಜಗದಾತ್ಮಾಪಿ ಶಂಕರಃ ಪರಮೇಶ್ವರಃ । ಭಕ್ತಸ್ಯ ಹೃದಯಾಂಭೋಜೇ ವಿಶೇಷೇಣ ವಿರಾಜತೇ ॥" ಎಂದು ಸಿದ್ಧಾಂತಶಿಖಾಮಣಿಯಲ್ಲಿ ಪರಮಾತ್ಮನು ವಿಶ್ವಕ್ಕಾಶ್ರಯನಾಗಿದ್ದರೂ ಭಕ್ತರ ಹೃದಯದಲ್ಲಿ ವಿಶೇಷವಾಗಿ ನೆಲಸಿರುವುದನ್ನು ತಿಳಿಸಲಾಗಿದೆ. ಹೀಗೆ ಎಲ್ಲರ ಹೃದಯದೊಳಗೆ ಅವನು ನೆಲಸಿದ್ದರೂ ನಿರ್ಮಲಹೃದಯರಾದ ಸಾಧಕರಿಗೆ ಮಾತ್ರವೇ ಅನುಭವಗೋಚರವಾಗುವನು.

ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಸ್ಸಹಸ್ರಪಾತ್ ।
ಸ ಭೂಮಿಂ ವಿಶ್ವತೋ ವೃತ್ವಾಽತ್ಯತಿಷ್ಠದ್ದಶಾಂಗುಲಮ್ ॥೧೪॥

'ವಿಶ್ವತಶ್ಚಕ್ಷುಃ' ಎಂಬ ಮಂತ್ರದಲ್ಲಿ ಅಖಂಡಲಿಂಗವೆನಿಸಿದ ಪರಶಿವಬ್ರಹ್ಮವನ್ನು ಸಹಸ್ರಶೀರ್ಷ ಮೊದಲಾಗಿ ತಿಳಿಸಿದ್ದರಿಂದ ಅದು ಎಲ್ಲೆಡೆಯಲ್ಲಿಯೂ ವ್ಯಾಪಿಸಿದೆ ಎಂದು ತಿಳಿದುಬರುತ್ತದೆ. ಹಾಗೆ ಸಾವಿರತಲೆಗಳು ಸಾವಿರಕಣ್ಣುಗಳು ಮತ್ತು ಸಾವಿರಪಾದಗಳು ಇಷ್ಟೆಲ್ಲ ವಿಶಾಲವಾದ ರೂಪವಿರುವ ಪರಮಾತ್ಮನು ಸಮಸ್ತ ಜಗತ್ತನ್ನು ಅತಿಕ್ರಮಿಸಿ ಎಲ್ಲ ದಿಕ್ಕುಗಳಲ್ಲಿಯೂ ಆವರಿಸಿದ್ದರೂ ಹತ್ತು ಅಂಗುಲಗಳಷ್ಟು ಪ್ರಮಾಣದ ಹೃದಯದಲ್ಲಿ ನೆಲಸಿರುವನು.

ಹೀಗೆ ಪರಮಾತ್ಮನು ಸರ್ವವ್ಯಾಪಕನಾದ್ದರಿಂದ ಸರ್ವಾತ್ಮಕನೂ ಆಗಿರುವನೆಂಬುದನ್ನು ತಿಳಿಸಲಾಯಿತು. ಗೀತೆಯಲ್ಲಿ "ನೀನು ಎಲ್ಲವನ್ನೂ ವ್ಯಾಪಿಸಿಕೊಂಡು ಎಲ್ಲೆಡೆಯಲ್ಲೂ ನೆಲಸಿರುವುದರಿಂದ ನಿನಗೆ ಸರ್ವ ಎಂಬ ಹೆಸರು ಅನ್ವರ್ಥವೆನಿಸಿದೆ" ಎಂದು ತಿಳಿಸಲಾಗಿದೆ. ಅದೂ ಸಹ ಪರಮೇಶ್ವರನ ವಾಕ್ಯವೇ ಆದ್ದರಿಂದ ಪ್ರಮಾಣವೆನಿಸಿದೆ. ಅದರಂತೆ ಅವನ ಜಗದ್ವ್ಯಾಪ್ತಿಗೆ ಇಲ್ಲಿಯೂ ಪ್ರಮಾಣವನ್ನು ತಿಳಿಸುತ್ತಾನೆ.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಪುರುಷ ಏವೇದಂ ಸರ್ವಂ ಯದ್ಭೂತಂ ಯಚ್ಚ ಭವ್ಯಮ್ ||
ಉತಾಮೃತತ್ವಸ್ಯೇಶಾನಃ ಯದನ್ನೇನಾತಿರೋಹತಿ ||೧೫||

ಹಿಂದೆ ಕಳೆದದ್ದು, ಮುಂದೆ ಆಗುವಂತಹದು ಹಾಗೆಯೇ ಈಗ ಇರುವಂತಹದು, ಹೀಗೆ ಮೂರು ಕಾಲಗಳಲ್ಲಿ ಇರುವಂತಹದೆಲ್ಲವೂ ಅಖಂಡಲಿಂಗವೆನಿಸಿ ಶೋಭಿಸುತ್ತಲಿರುವುದು. ಪಂಚಭೂತಾತ್ಮಕವಾದ ವಸ್ತುಗಳೆಲ್ಲದರಲ್ಲೂ ನೆಲಸಿರುವ ಪ್ರಕಾಶಮಯವಾದ ಚೈತನ್ಯವೇ ಲಿಂಗವೆನಿಸಿದೆ. ಅದನ್ನು ಇಲ್ಲಿ 'ಪುರುಷ' ಎಂದು ಕರೆಯಲಾಗಿದೆ. "ಇಲ್ಲಿ ಕಾಣುತ್ತಿರುವುದೆಲ್ಲವೂ ಬ್ರಹ್ಮವೇ" ಎಂದು ಶ್ರುತಿಯಲ್ಲಿ ಪರಬ್ರಹ್ಮಕ್ಕೂ ಜಗತ್ತಿಗೂ ಅಭೇದವನ್ನು ತಿಳಿಸಲಾಗಿದೆ. ಈ ಅಭೇದವನ್ನು ಶಿವಗೀತೆಯಲ್ಲಿಯೂ ಶಿವನು ದಂಡಕಾರಣ್ಯದಲ್ಲಿ ಸೀತೆಯ ವಿಯೋಗದಿಂದ ನರಳುತ್ತಿದ್ದ ರಾಮನಿಗೆ ಉಪದೇಶಿಸಿರುವನು. "ನೆಲ, ನೀರು, ಬೆಂಕಿ, ಗಾಳಿ, ಬಯಲು ಇವೆಲ್ಲದರ ಸಂಯೋಗದಿಂದ ರೂಪಗೊಂಡಿರುವ ಪ್ರಪಂಚವೆಲ್ಲವೂ ಪ್ರಕಾಶದ ಸಂಪರ್ಕದಿಂದಲೇ ಜೀವಿಸುತ್ತಲಿದೆ. ಈ ಪ್ರಕಾಶವೇ ಇದೆಲ್ಲಕ್ಕೂ ಮೂಲಾಧಾರವೆನಿಸಿದ್ದರಿಂದ ಇದನ್ನು ಪ್ರತಿಯೊಬ್ಬರೂ ಗಮನಿಸಬೇಕು. ಇಲ್ಲಿ ಹಿಂದೆ ಇದ್ದದ್ದು ಮುಂದೆ ಹುಟ್ಟುವಂತಹದು, ಈಗ ಇರುವಂತಹದು ಇದೆಲ್ಲವೂ ರುದ್ರನೆನಿಸಿದೆ" ಎಂದು ಶಿವಗೀತೆಯಲ್ಲಿ ರುದ್ರನೆನಿಸಿ ಸರ್ವರಿಗೂ ಮಂಗಳಕರನಾದ ಶಿವನಿಗೂ ಅವನ ಪರಿಣಾಮವೆನಿಸಿದ ಜಗತ್ತಿಗೂ ಅಭೇದವನ್ನು ತಿಳಿಸಲಾಗಿದೆ. ಪರಮಾತ್ಮನು ಜಗತ್ತನ್ನು ತನ್ನ ಮಾಯಾಶಕ್ತಿಯ ಮೂಲಕ ಸೃಷ್ಟಿಸಿ ಅದರಲ್ಲಿ ತಾನೇ ಪ್ರವೇಶಿಸಿದ್ದರಿಂದ ತನಗೂ ತನ್ನ ಪರಿಣಾಮವೆನಿಸಿದ ಜಗತ್ತಿಗೂ ಶರೀರಶರೀರಿಭಾವದಿಂದ ಭೇದವಿದ್ದರೂ ಅಭೇದವೂ ಉಂಟೆಂಬುದನ್ನು ಶಕ್ತಿವಿಶಿಷ್ಟಾದ್ವೈತದರ್ಶನದಲ್ಲಿ ವಿಶದವಾಗಿ ನಿರೂಪಿಸಲಾಗಿದೆ. "ತರಂಗಾದಿರ್ಯಥಾ ಸಿಂಧೋಃ ಸ್ವರೂಪಾನ್ನಾತಿರಿಚ್ಯತೇ | ತಥಾ ಶಿವಾತ್ಪರಾಕಾಶಾದ್ವಿಶ್ವಮೇತನ್ನ ಭಿದ್ಯತೇ || ಪತ್ರಪುಷ್ಪಫಲಾಶಾದಿರ್ವೃಕ್ಷರೂಪಾನ್ನ ಭಿದ್ಯತೇ | ತಥಾ ಶಿವಾತ್ಪರಾಕಾಶಾಜ್ಜಗತೋ ನಾಸ್ತಿ ಭಿನ್ನತಾ || ಆತ್ಮಶಕ್ತಿವಿಕಾಸೇನ ಶಿವೋ ವಿಶ್ವಾತ್ಮನಾ ಸ್ಥಿತಃ | ಕುಟೀಭಾವಾದ್ಯಥಾ ಭಾತಿ ಪಟಃ ಸ್ವಸ್ಯ ಪ್ರಸಾರಣಾತ್ ||" ಹೀಗೆ ಮಹಾಕಾಶಸ್ಥಲದಲ್ಲೂ ಶಿವಜಗನ್ಮಯಸ್ಥಲದಲ್ಲೂ ಶ್ರೀ ರೇಣುಕಾಚಾರ್ಯರು ಶಿವನಿಗೂ ಜಗತ್ತಿಗೂ ವಾಸ್ತವವಾಗಿರುವ ಅಭೇದವನ್ನು ತಿಳಿಸಿದ್ದಾರೆ. ಸಮುದ್ರದಲ್ಲಿರುವ ನೊರೆತೆರೆಗಳು ಅದಕ್ಕಿಂತ ಬೇರೆಯಾಗಲಾರವು. ಹಾಗೆ ಬಯಲಿನಲ್ಲಿಯೇ ವಿಶ್ವವು ನೆಲಸಿರುವುದರಿಂದ ಮಹಾಬಯಲೆನಿಸಿದ ಶಿವನಿಗಿಂತ ಈ ವಿಶ್ವವು ಬೇರೆಯಾಗಲಾರದು. ಮರದ ಎಲೆ ಚಿಗುರು ಹೂವು ಮೊದಲಾದವು ಮರಕ್ಕಿಂತ ಬೇರೆಯಾಗಲಾರವು. ಹಾಗೆಯೇ ಶಿವಜಗತ್ತುಗಳಿಗೆ ಭೇದವಿರಲಾರದು. ಬಟ್ಟೆಯೇ ವಿಸ್ತಾರಗೊಂಡು ಬೇರೆ ಎನಿಸುವಂತೆ ಶಿವನೇ ತನ್ನ ಶಕ್ತಿಯ ವಿಕಾಸದಿಂದ ವಿಶ್ವವೆನಿಸಿ ಶೋಭಿಸುತ್ತಿರುವನು. ಹೀಗೆ ಶಿವಜಗತ್ತುಗಳಿಗೆ ಪ್ರಕಾಶಮಯವಾದ ಚೈತನ್ಯವೇ ಸಮಾನಾಧಿಕರಣವೆನಿಸಿರುವುದರಿಂದ ಅಭೇದವುಂಟೆಂದು ಆಚಾರ್ಯರು ತಿಳಿಸಿ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ದ್ದಾರೆ. ಹಾಗೆಯೇ ಅಷ್ಟಮೂರ್ತಿನಿರಸನಸ್ಥಲದಲ್ಲಿ "ಶರೀರವೆನಿಸಿದ ಪ್ರಪಂಚಕ್ಕೂ ಪ್ರಾಣವೆನಿಸಿದ ಪರಮಾತ್ಮನಿಗೂ ಪೂರ್ಣಅಭೇದವಾಗಲೀ ಪೂರ್ಣಭೇದವಾಗಲೀ ಹೊಂದುವುದಿಲ್ಲ. ಪ್ರಪಂಚವು ಅಚೇತನವೂ ಜ್ಞಾನಹೀನವೂ ಆಗಿದ್ದು ಪರಮೇಶ್ವರನು ಚೇತನನೂ ಸರ್ವಜ್ಞನೂ ಆದ್ದರಿಂದ ಅವನಿಗೂ ಪ್ರಪಂಚಕ್ಕೂ ಏಕರೂಪತೆಯನ್ನು ಹೇಳಲಿಕ್ಕಾಗುವುದಿಲ್ಲ"ವೆಂದು ಅವರೇ ಹೇಳಿದ್ದಾರೆ. ಹೀಗೆ ಜಗತ್ತು ಶಕ್ತಿವಿಶಿಷ್ಟಪರಮಾತ್ಮನ ಪರಿಣಾಮವೇ ಆದ್ದರಿಂದ ಅವನಿಗೂ ಜಗತ್ತಿಗೂ ಪೂರ್ಣವಾಗಿ ಅಭೇದವನ್ನಾಗಲೀ ಅಥವಾ ಭೇದವನ್ನಾಗಲೀ ಹೇಳಲಿಕ್ಕಾಗದ್ದರಿಂದ ಭೇದಾಭೇದವನ್ನೇ ಹೇಳಬೇಕೆಂದು ಆಚಾರ್ಯರು ತಿಳಿಸಿರುತ್ತಾರೆ. ಹೀಗೆ ಜಗತ್ತಿಗೂ ಬ್ರಹ್ಮಕ್ಕೂ ಪೂರ್ಣಭೇದವು ಹೊಂದದೇ ಇರುವುದರಿಂದಲೇ ಶ್ರುತಿಯಲ್ಲಿ ಚೇತನಪರಮಾತ್ಮನಿಗೂ ಅವನ ಶರೀರವೆನಿಸಿದ ಪ್ರಪಂಚಕ್ಕೂ ಶರೀರಿಶರೀರಭಾವದ ಆಧಾರದಿಂದ "ಇದೆಲ್ಲವೂ ಪುರುಷನೇ" ಎಂದು ತಿಳಿಸಲಾಗಿದೆ. ಅವನು ಈ ಜಗತ್ತಾಗಿ ಪರಿಣಮಿಸಿರುವುದಷ್ಟೇ ಅಲ್ಲದೆ ಇದರ ಬಂಧವಿಮೋಚನೆಗೂ ನಿಯಾಮಕನಾಗಿರುವನು. ಹೀಗೆ ಪರಮಾತ್ಮನು ವಿಶ್ವವಾಗಿ ಪರಿಣಮಿಸಿ ವಿಶ್ವದ ಭೋಗಕ್ಕಾಶ್ರಯನೂ ಆಗಿರುವುದರಿಂದ ಆನಂದಮಯನೆನಿಸಿರುವನು. ಆದ್ದರಿಂದಲೇ ಅವನ ಅನುಭವಕ್ಕಿಂತ ಹೆಚ್ಚಿನ ಸುಖವೇ ಎಲ್ಲಿಯೂ ಗೀರೆಯಲಾರದು. "ಶಿವನೇ ಜಗತ್ತೆನಿಸಿರುವಂತೆಯೇ ತನ್ನನ್ನು ಶಿವನೆಂದು ಭಾವಿಸಿದ ಯೋಗಿಯೇ ನಿತ್ಯನಂದವನ್ನು ಅನುಭವಿಸುತ್ತಾನೆ." ಎಂದು ಸಿದ್ಧಾಂತಶಿಖಾಮಣಿಯು ತಿಳಿಸಿದೆ. ಹೀಗೆ ಶಿವಸ್ವರೂಪನಾದ ಯೋಗಿಯು ಜಗತ್ತನ್ನು ಶಿವನೆಂದು ಕಾಣುತ್ತ ಸಂಸಾರದಲ್ಲಿದ್ದರೂ ಅದರ ದೋಷಕ್ಕೆ ಸಿಲುಕದೆ ತನ್ನೊಳಗೆ ಹೆಚ್ಚಿನ ಸಂತೋಷವನ್ನು ಅನುಭವಿಸುವನು. ಹೀಗೆ ಪರಮಾತ್ಮನು ನಿರತಿಶಯವಾದ ಸುಖಕ್ಕಾಶ್ರಯನಾದ್ದರಿಂದ ಅವನನ್ನೇ ಎಲ್ಲರೂ ಹುಡುಕಿ ತಿಳಿಯಬೇಕೆಂದು ಇಲ್ಲಿ ತಿಳಿಸಲಾಗಿದೆ.

ಸರ್ವತಃ ಪಾಣಿಪಾದಂ ತತ್ಸರ್ವತೋಽಕ್ಷಿಶಿರೋಮುಖಮ್ ।
ಸರ್ವತಃ ಶ್ರುತಿಮಲ್ಲೋಕೇ ಸರ್ವಮಾವೃತ್ಯ ತಿಷ್ಠತಿ ॥೧೬॥

ಮತ್ತೆ ಅಮೂರ್ತಪರಶಿವನ ಸ್ವರೂಪವನ್ನು ತಿಳಿಸುತ್ತಾನೆ. ಅವನ ಹಸ್ತ ಪಾದಗಳು ಎಲ್ಲೆಡೆಗಳಲ್ಲೂ ವ್ಯಾಪಿಸಿವೆ. ಹಾಗೆಯೇ ಅವನ ಶಿರಸ್ಸು ನೇತ್ರಮುಖ ಇವೆಲ್ಲವೂ ವಿಶ್ವವನ್ನು ಆವರಿಸಿವೆ. ಹೀಗೆ ಸಮಸ್ತಜಗತ್ತಿಗೂ ಆಶ್ರಯನಾದ್ದರಿಂದ ಪರಮಾತ್ಮನನ್ನು ಲಿಂಗ ಸ್ಥಲ ಎಂಬ ಹೆಸರುಗಳಿಂದ ಅನುಭವಿಗಳು ಕರೆದಿದ್ದಾರೆ. "ಲೀಯತೇ ಗಮ್ಯತೇ ಯತ್ರ ಜಗದೇತಚ್ಚರಾಚರಮ್ । ತಸ್ಮಾಲ್ಲಿಂಗಮಿತಿ ಪ್ರೋಕ್ತಂ ಲಿಂಗಂ ಬ್ರಹ್ಮ ಕೇವಲಮ್ ॥ ಎಂದು ಸಿದ್ಧಾಂತಶಿಖಾಮಣಿಯಲ್ಲಿ ಪರಶಿವಬ್ರಹ್ಮವನ್ನು ವಿಶ್ವವೆಲ್ಲದರ ವಿಶ್ರಾಂತಿಗೆ ಆಶ್ರಯವಾದ್ದರಿಂದ ಅಖಂಡಲಿಂಗವೆಂದು ಕರೆಯಲಾಗಿದೆ. ಇದಾದರೋ ನಿರಾಕಾರವೆನಿಸಿ ಎಲ್ಲಾ ಕಡೆಯೂ ವ್ಯಾಪಿಸಿದೆ. ವಿಶ್ವ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ವೆಲ್ಲವೂ ಅದರ ಅವಯವಗಳೇ ಆಗಿವೆ. ಪ್ರಕಾಶಮಯವಾದ ಈ ಲಿಂಗವು ಅಮೂರ್ತ ನೆನಿಸಿದ್ದರಿಂದ ನಮ್ಮ ಪ್ರಕೃತಿಮಯವಾದ ಇಂದ್ರಿಯಗಳಿಗೆ ಗೋಚರವಾಗುವುದಿಲ್ಲ. ಒಟ್ಟಿನಲ್ಲಿ ಈ ಜಗತ್ತಿನಲ್ಲಿ ಲಿಂಗಕ್ಕಿಂತ ಬೇರೆ ಯಾವ ವಸ್ತುವೂ ಕಾಣದು.

ಸರ್ವೇಂದ್ರಿಯಗುಣಾಭಾಸಂ ಸರ್ವೇಂದ್ರಿಯವಿವರ್ಜಿತವ್ |
ಸರ್ವಸ್ಯ ಪ್ರಭುಮೀಶಾನಂ ಸರ್ವಸ್ಯ ಶರಣಂ ಬೃಹತ್ ||೧೭ ||

ಕಣ್ಣು ಮೊದಲಾದ ಇಂದ್ರಿಯಗಳು, ರೂಪ ಮೊದಲಾದ ಅವುಗಳ ಗುಣಗಳು ಇವುಗಳೆಲ್ಲದರಲ್ಲೂ ಸೇರಿದ್ದರೂ ಇವುಗಳಿಗೆ ಅಂಟದೇ ಇರುವ ಚೈತನ್ಯವೇ ಲಿಂಗ ವೆನಿಸಿದೆ. "ಕೈಕಾಲುಗಳಿಲ್ಲದಿದ್ದರೂ ವೇಗವಾಗಿ ಓಡುತ್ತ ಎಲ್ಲವನ್ನೂ ಹಿಡಿಯ ಬಲ್ಲದು" ಎಂದು ಅಮೂರ್ತಪರಶಿವಲಿಂಗವನ್ನು ಶ್ರುತಿಯು ವರ್ಣಿಸಿದೆ. ಹೀಗೆ ಜಗತ್ತೆಲ್ಲವನ್ನೂ ನಿಯಮನಮಾಡುತ್ತಿರುವುದರಿಂದಲೇ ಶಿವನು ಎಲ್ಲಕ್ಕೂ ಹಿರಿಯ ರಕ್ಷಕನಾಗಿರುವನು. ಹೀಗೆ ಶಿವನು ಸರ್ವರಿಗೂ ಆಶ್ರಯಾರ್ಹನಾಗಿರುವನು.

ನವದ್ವಾರೇ ಪುರೇ ದೇಹೀ ಹಂಸೋ ಲೇಲಾಯತೇ ಬಹಿಃ |
ವಶೀ ಸರ್ವಸ್ಯ ಲೋಕಸ್ಯ ಸ್ಥಾವರಸ್ಯ ಚರಸ್ಯ ಚ ||೧೮||

ಶಿರಸ್ಸಿನಲ್ಲಿ ಕಣ್ಣುಗಳೆರಡು, ಕಿವಿಗಳರಡು, ಮೂಗಿನ ಹೊಳ್ಳೆಗಳೆರಡು, ಬಾಯಿ ಹೀಗೆ ಏಳು ಬಾಗಿಲುಗಳಿವೆ. ಕೆಳಗೆ ಪಾಯು, ಉಪಸ್ಥ ಎಂಬವು ಎರಡಿವೆ. ಒಟ್ಟು ಒಂಭತ್ತು ಬಾಗಿಲುಗಳಿರುವ ಈ ದೇಹದಲ್ಲಿ ಇಂದ್ರಿಯಗಳೊಡನೆ ವ್ಯವಹರಿಸುತ್ತಿರುವ ಜೀವನು ಪರಮಾತ್ಮನ ಚೇತನಾಂಶನೇ ಇರುವನು. ಈ ಜೀವನು 'ಅಹಂ ಸಃ' 'ನಾನೂ ಅವನೇ ಇರುವೆನು' ಎಂದು ನಿರಂತರವೂ ಭಾವಿಸುವುದರಿಂದ ಹಂಸನೆನಿಸಿ ದ್ದಾನೆ. ಅವನು ತನ್ನೊಳಗೇ ಗೋಪ್ಯವಾಗಿ ನೆಲಸಿರುವ ಶಿವನೊಡನೆ ಸಮರಸವಾಗಿ ಬೆರೆತಾಗ ಪರಮಹಂಸನಾಗುವನು. ಆದರೆ ಸಂಸಾರದಶೆಯಲ್ಲಿ ಅವನು ಹೊರಗೆ ವಿಷ ಯಗಳ ಭೋಗದಲ್ಲಿಯೇ ನಿರತನಾಗಿ ಒಳಗೆ ಮಹಾವಿಷಯವೆನಿಸಿದ ಶಿವನೊಡನೆ ಬೆರೆಯದೆ ಅಲೆಯುತ್ತಿರುವನು. ಈ ಸ್ಥಿತಿಯಲ್ಲಿ ಅವನು ಸಹಜವಾಗಿ ಶಿವನಿಂದ ಭಿನ್ನನೇ ಆಗಿರುವನು. ಪರಶಿವನ ಕಡೆಗೆ ಸಂಪೂರ್ಣವಾಗಿ ಗಮನಿಸದೇ ಇರುವ ಜೀವನು ದೇಹಸುಖವನ್ನು ಅನುಭವಿಸುತ್ತಲೇ ತಾನು ಶಿವಾಂಶನೆಂಬ ತನ್ನ ವಾಸ್ತವ ಸ್ಥಿತಿಯನ್ನು ಮರೆತಿರುವನು. ವಾಸ್ತವವಾಗಿ ಅವನು ದೇಹೇಂದ್ರಿಯಗಳಾದಿಯಾಗಿ ಜಾಗ್ರತ್ಪ್ರಪಂಚವೆಲ್ಲಕ್ಕೂ ನಿಯಮಕನೇ ಇರುವನು. ಅಂತಹ ಸಾಮರ್ಥ್ಯ ಅವನಲ್ಲಿ ಅಡಗಿದೆ. ಆದರೆ ಆ ಶಕ್ತಿ ಬದ್ಧಾವಸ್ಥೆಯಲ್ಲಿ ಸಂಕುಚಿತವಾಗಿರುವುದರಿಂದ ಅವನು ಐದು ಇಂದ್ರಿಯಗಳಿಗೂ ಗುಲಾಮನಾಗಿರುವನು. ಈ ಐದರ ಮೇಲೆ ಅಧಿಕಾರವನ್ನು ನಡೆಸುವವನು ಈ ಐದಕ್ಕೂ ಅಧೀನನಾಗಿರುವುದು ಶೋಚನೀಯ. ಇದೆಲ್ಲವೂ ಶಕ್ತಿ ಸಂಕೋಚದ ದುಷ್ಪರಿಣಾಮ. ಶಕ್ತಿವಿಕಾಸವಾದರೆ ಅವನು ತನ್ನಲ್ಲಿರುವ ಶಿವನನ್ನು ಅನುಭವಿಸಲು ಸಮರ್ಥನಾಗುವನು ಹೀಗೆ ಶಿವಾಂಶನಾದ ಜೀವನಿಗೂ ಶಿವನಿಗೂ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಕಾಲಭೇದದಿಂದಲೂ, ಅವಸ್ಥಾ ಭೇದದಿಂದಲೂ ಭೇದ ಅಭೇದ ಇವೆರಡೂ ಅನ್ವಯಿಸುತ್ತವೆ. ಲೌಕಿಕವಿಷಯಗಳನ್ನು ಅನುಭವಿಸುವಾಗ ಇಬ್ಬರಿಗೂ ಭೇದವು ಸ್ವಾಭಾವಿಕವಾಗಿರುವುದು. ಜೀವನು ಪರಶಿವನೊಡನೆ ಸಮರಸವಾಗಿ ಬೆರೆತಾಗ ಐಕ್ಯಾನಂದವನ್ನು ಅನುಭವಿಸುವನು.

ಹೀಗೆ ಶಿವ ಜೀವರಿಬ್ಬರೂ ದೇಹದಲ್ಲಿ ಇದ್ದರೂ ಜೀವನು ದೇಹಸಂಬಂಧದಿಂದ ಅದಕ್ಕೆ ಅಧೀನನಾಗಿ ಶಿವನಿಂದ ಭಿನ್ನನಾಗಿರುವುದನ್ನು ತಿಳಿಸುತ್ತಾನೆ.

ಅಪಾಣಿಪಾದೋ ಜವನೋ ಗ್ರಹೀತಾ
ಪಶ್ಯತ್ಯಚಕ್ಷುಃ ಸ ಶೃಣೋತ್ಯಕರ್ಣಃ ।
ಸ ವೇತ್ತಿ ವೇದ್ಯಂ ನ ಚ ತಸ್ಯಾಸ್ತಿ ವೇತ್ತಾ
ತಮಾಹುರಗ್ರ್ಯಂ ಪುರುಷಂ ಮಹಾಂತಮ್ ॥೧೯॥

ಹಸ್ತ ಪಾದ ಮೊದಲಾದ ಅವಯವಗಳಿಲ್ಲದಿದ್ದರೂ ಅವನು ಸರ್ವಶಕ್ತನಾದ್ದರಿಂದ ಕೈಯಿಂದಾಗುವ ಗ್ರಹಣವನ್ನೂ, ಕಾಲುಗಳಿಂದಾಗುವ ಗಮನವನ್ನೂ ಅನಾಯಾಸವಾಗಿ ನಡೆಸುವನು ; ಹಾಗೆಯೇ ವೇಗವಾಗಿ ಹೋಗಬಲ್ಲನು. ಕಣ್ಣುಗಳಿಲ್ಲದಿದ್ದರೂ ತಾನಾಗಿಯೇ ಎಲ್ಲವನ್ನು ನೋಡಬಲ್ಲನು. ಮಾನವರೆಲ್ಲರ ದೇಹದಲ್ಲಿದ್ದರೂ ಅವನು ಎಲ್ಲವನ್ನು ನೋಡುತ್ತಿರುವನು ; ಕಿವಿಗಳಿಲ್ಲದಿದ್ದರೂ ಎಲ್ಲವನ್ನು ಕೇಳುತ್ತಿರುವನು. ಲೋಕದಲ್ಲಿ ತಿಳಿಯಬೇಕಾದ್ದೆಲ್ಲವನ್ನೂ ಅವನು ತಿಳಿಯಬಲ್ಲನು. ಅವನನ್ನು ತಿಳಿದರೆ ಎಲ್ಲವೂ ತಿಳಿಯಬಲ್ಲದೆಂದು ಮಹರ್ಷಿಗಳೇ ಪ್ರತಿಜ್ಞೆಮಾಡಿರುವರು. ಹೀಗೆ ಸರ್ವಾತ್ಮಕನೂ ಸರ್ವಜ್ಞನೂ ಆದ್ದರಿಂದಲೇ ಅವನನ್ನು ತಿಳಿಯಲು ಬೇರೆ ಯಾವ ಶಕ್ತಿಯೂ ಎಲ್ಲಿಯೂ ಇಲ್ಲವೆಂಬುದು ಸ್ಪಷ್ಟವಾಗಿದೆ. "ಹಿಂದೆ ಆದದ್ದನ್ನೂ, ಈಗ ನಡೆಯುತ್ತಿರುವುದನ್ನೂ, ಮುಂದೆ ಆಗಬೇಕಾದ್ದನ್ನೂ ನಾನು ತಿಳಿಯಬಲ್ಲೆನು ; ಆದರೆ ನನ್ನ ಸ್ವರೂಪವು ಯಾರಿಗೂ ಸುಲಭವಾಗಿ ತಿಳಿಯಲಾರದು." ಹೀಗೆ ಗೀತೆಯಲ್ಲಿ ಭಗವಂತನು ಎಲ್ಲರಿಗೂ ಅದೃಶ್ಯನಾಗಿದ್ದು ಎಲ್ಲವನ್ನೂ ನೋಡುತ್ತಿರುವನೆಂದು ತಿಳಿಸಿದೆ. "ಅದೃಷ್ಟಂ ದ್ರಷ್ಟೃ" ಎಂದು ಶ್ರುತಿಯೂ ಪರಮಾತ್ಮನ ಬಗ್ಗೆ ಸ್ಪಷ್ಟಪಡಿಸಿದೆ. ಹೀಗೆ ಪರಮಾತ್ಮನು ಎಲ್ಲರಿಗೂ ಆದಿಕಾರಣನೂ ಹಿರಿಯನೂ ಆಗಿರುವನೆಂದು ಅನುಭವಿಗಳು ಹೇಳುತ್ತಾರೆ. ॥೧೯॥

ಅವನನ್ನು ತಿಳಿಯಲಿಕ್ಕೇ ಯಾರಿಗೂ ಆಗದಿದ್ದರೆ ಉಪಾಸನಮಾಡಲು ಹೇಗೆ ಸಾಧ್ಯವಾದೀತೆಂಬ ಆಕ್ಷೇಪಕ್ಕೆ ಸಮಾಧಾನವನ್ನು ಇಲ್ಲಿ ತಿಳಿಸುತ್ತಾನೆ.

ಅಣೋರಣೀಯಾನ್ ಮಹತೋ ಮಹೀಯಾನ್
ಆತ್ಮಾ ಗುಹಾಯಾಂ ನಿಹಿತೋಽಸ್ಯ ಜಂತೋಃ ।
ತಮಕ್ರತುಂ ಪಶ್ಯತಿ ವೀತಶೋಕೋ
ಧಾತುಃ ಪ್ರಸಾದಾನ್ಮಹಿಮಾನಮೀಶಮ್ ॥೨೦॥

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಪರಮಾತ್ಮನು ಸೂಕ್ಷ್ಮವಸ್ತುವಿಗಿಂತ ಅತಿಸೂಕ್ಷ್ಮನಿರುವನು ; ಹಾಗೆಯೇ ದೊಡ್ಡದಾದ ವಸ್ತುವಿಗಿಂತಲೂ ದೊಡ್ಡದಾಗಿರುವನು. ಹೀಗೆ ಅಖಂಡಲಿಂಗ ಸ್ವರೂಪನಾದ ಪರಮಾತ್ಮನು ಅವ್ಯಾಜಪ್ರೇಮದಿಂದ ಪ್ರಾಣಿಗಳ ಹೃದಯದಲ್ಲಿ ನೆಲಸಿರುವನು. ಯಾವ ಫಲಾಭಿಸಂಧಿಯೂ ಇಲ್ಲದೆ ಲೋಕಕಲ್ಯಾಣಕ್ಕಾಗಿಯೇ ದೇಹದಲ್ಲಿ ನೆಲಸಿರುವ ಪರಮೇಶ್ವರನನ್ನು ಅವನ ಅನುಗ್ರಹದಿಂದಲೇ ಯಾವನು ಕಾಣುವನೋ ಅವನೇ ದುಃಖದಿಂದ ಬಿಡುಗಡೆಹೊಂದುವನು. ||೨೦||

ಇಂತಹ ಪರಶಿವನನ್ನು ಅವನ ಅನುಗ್ರಹದಿಂದಲೇ ತಿಳಿಯಬೇಕೆಂಬಲ್ಲಿ ಮಹರ್ಷಿಯು ತನ್ನ ಅನುಭವವನ್ನೇ ಪ್ರಮಾಣವಾಗಿ ತಿಳಿಸುತ್ತಾನೆ.

ವೇದಾಹಮೇತಮಜರಂ ಪುರಾಣಂ
ಸರ್ವಾತ್ಮಾನಂ ಸರ್ವಗತಂ ವಿಭುತ್ವಾತ್ |
ಜನ್ಮನಿರೋಧಂ ಪ್ರವದಂತಿ ಯಸ್ಯ
ಬ್ರಹ್ಮವಾದಿನೋ ಹಿ ಪ್ರವದಂತಿ ನಿತ್ಯಮ್ ||೨೧||

ಹೀಗೆ ಸನಾತನನೂ ಸರ್ವಾತ್ಮಕನೂ ಸರ್ವಾಂತರ್ಯಾಮಿಯೂ ಸರ್ವವ್ಯಾಪಕನೂ ಆದ ಪರಮಾತ್ಮನನ್ನು ತಾನು ತಿಳಿದಿರುವೆನೆಂಬಲ್ಲಿ ಅವನವನ ಅನುಭವವೇ ಪ್ರಮಾಣವೆನಿಸಿದೆ. ಈ ಬಗ್ಗೆ ಅನುಭವಿಗಳ ಮಾತನ್ನು ಪ್ರಮಾಣವಾಗಿ ಈಗ ತಿಳಿಸುತ್ತಾನೆ. ಪರಶಿವಲಿಂಗಕ್ಕೆ ಉತ್ಪತ್ತಿ ವಿನಾಶಗಳಿಲ್ಲವೆಂದೂ, ಅದು ಶಾಶ್ವತಸತ್ಯವೆಂದೂ ಅದರ ಸ್ವರೂಪವನ್ನು ಬ್ರಹ್ಮಜ್ಞರಾದ ಯೋಗೀಶ್ವರರು ತಿಳಿಸಿದ್ದಾರೆ. ಹೀಗೆ ಶ್ವೇತಾಶ್ವತರಮಹರ್ಷಿಯು ಶಿವಲಿಂಗದ ಅಖಂಡಸ್ವರೂಪದ ಬಗ್ಗೆ ತನ್ನ ಅನುಭವವಷ್ಟೇ ಅಲ್ಲದೆ ಇತರ ಮಹರ್ಷಿಗಳ ಅನುಭವವನ್ನೂ ಪ್ರಮಾಣವಾಗಿ ಕೊಟ್ಟಿದ್ದಾನೆ. ಹೀಗೆ ಮಹರ್ಷಿಗಳ ಮಾತಿನ ಆಧಾರದಿಂದ ಅಖಂಡಲಿಂಗದ ಸ್ವರೂಪವನ್ನು ಸಾಧಕರು ತಮ್ಮ ಹೃದಯದಲ್ಲಿ ವಿಶ್ವಾಸವಿಟ್ಟು ಹುಡುಕಿ ತಿಳಿಯಬೇಕು. ಯಾವನು ಹೃದಯದಲ್ಲಿ ವಿಶ್ವಾಸವಿಡುವನೋ ಅವನು ಮಹಾತ್ಮರ ಮಾತನ್ನು ಗೌರವಿಸಬಲ್ಲನು. ಅವನೊಬ್ಬನೇ ಪ್ರಕಾಶಮಯವಾದ ಪ್ರಾಣಲಿಂಗವನ್ನು ತನ್ನಲ್ಲಿ ಅನುಭವಿಸಬಲ್ಲನು. ಅವನಿಗೇ ಪರಮಶಾಂತಿಯು ದೊರೆತೀತು. ಅವನಿಗೇ ಅಹಂಕಾರಮಮಕಾರಗಳು ತೊಲಗಬಲ್ಲವು. ಅವನೇ ಎಲ್ಲರಲ್ಲೂ ನಿರ್ಲಿಪ್ತವಾಗಿರುವ ಶಿವನನ್ನು ಕಾಣಬಲ್ಲನು.

ಚತುರ್ಥಾಧ್ಯಾಯ

" ಯಾವ ಬಗೆಯ ಸಂಕಲ್ಪವೂ ಇಲ್ಲದೆ ಲೀಲೆಯಿಂದ ಜಗದ್ವ್ಯಾಪಾರವನ್ನು ನಡೆಸುತ್ತಿರುವ ಪರಮೇಶ್ವರನನ್ನು ಅವನ ಅನುಗ್ರಹದಿಂದಲೇ ಕಂಡವನಿಗೆ ದುಃಖವು ಪೂರ್ತಿಯಾಗಿ ತೊಲಗುವುದು " ಎಂದು ಹಿಂದೆ ಹೇಳಿದಂತೆ ಪರಮೇಶ್ವರನ ಅನುಗ್ರಹ ಹೇಗೆ ದೊರಕುವುದೆಂದು ಆಕ್ಷೇಪಿಸಿ ಮಹಾಮಹಿಮಶಾಲಿಯಾದ ಅವನನ್ನು

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಸ್ತುತಿಸಿ ಭಕ್ತಿಯಿಂದ ಆಶ್ರಯಿಸಿ ಪ್ರಾರ್ಥಿಸುವುದೊಂದೇ ಅವನ ಅನುಗ್ರಹವನ್ನು ಪಡೆಯಲು ಉಳಿದಿರುವ ಸೂಕ್ತವಾದ ಉಪಾಯವೆಂದು ತನ್ನ ಆಚರಣದಮೂಲಕ ಶ್ವೇತಾಶ್ವತರಮಹರ್ಷಿಯು ಉಪದೇಶಿಸುತ್ತಾನೆ.

ಸ ಏಕೋಽವರ್ಣೋ ಬಹುಧಾ ಶಕ್ತಿಯೋಗಾತ್
ವರ್ಣಾನನೇಕಾನ್ನಿಹಿತಾರ್ಥೋ ದಧಾತಿ ।
ವಿ ಚೈತಿ ಚಾಂತೇ ವಿಶ್ವಮಾದೌ ಸ ದೇವಃ
ಸ ನೋ ಬುದ್ಧ್ಯಾ ಶುಭಯಾ ಸಂಯುನಕ್ತು ॥೧॥

'ಅಶಬ್ದಮಸ್ಪರ್ಶಮರೂಪಮವ್ಯಯಂ' ಎಂಬಲ್ಲಿ ತಿಳಿಸಿದಂತೆ ಪರಮಾತ್ಮನು ಯಾವ ಬಗೆಯ ವರ್ಣ ಜಾತಿ ಮೊದಲಾದ ವೈವಿಧ್ಯಗಳಿಲ್ಲದೆ ಸಮನೆನಿಸಿರುವನು. ಅವನಿಗೆ ಸಮಾನವಾದ ವಸ್ತುವೇ ಎಲ್ಲಿಯೂ ಇಲ್ಲದೆ ಅವನು ಅದ್ವಿತೀಯನೆನಿಸಿದ್ದರಿಂದ ತಾನೊಬ್ಬನೇ ಸ್ವಪ್ರಕಾಶದಿಂದ ಶೋಭಿಸುತ್ತಿರುವನು. ಇಂತಹ ಪ್ರಭುವು ತನ್ನಲ್ಲಿರುವ ವಿಚಿತ್ರವೂ ಅನಂತವೂ ಆದ ಶಕ್ತಿಯ ಪ್ರಭಾವದಿಂದ ಅನೇಕ ಬಗೆಯ ಪದಾರ್ಥಗಳನ್ನು ಯಾವ ಬಗೆಯ ಫಲದ ಬಯಕೆಯೂ ಇಲ್ಲದೆ ಅನೇಕ ಪ್ರಕಾರವಾಗಿ ಮೊದಲಿಗೆ ಸೃಷ್ಟಿಸಿದನು. "ಅನೇಕ ಬಗೆಯ ಶಕ್ತಿಯ ಸಂಪರ್ಕದಿಂದ ಸೃಷ್ಟಿಕಾರ್ಯವನ್ನು ನಡೆಸಿದನು" ಎಂಬುದಾಗಿಯಾದರೂ ಇಲ್ಲಿ ಅನ್ವಯಿಸಬಹುದು. "ಪರಮಾತ್ಮನ ಶಕ್ತಿಯು ಅನೇಕಬಗೆಯಾಗಿದೆ ಎಂದು ಅನುಭವಿಗಳು ಹೇಳುತ್ತಾರೆ" ಎಂದು ಇದೇ ಶ್ರುತಿಯೇ ಮುಂದೆ ತಿಳಿಸುತ್ತದೆ. ಹೀಗೆ ಶಕ್ತಿಯ ಸಹಕಾರದಿಂದ ಸೃಷ್ಟಿಸಿದ ಪ್ರಪಂಚವನ್ನು ಕೊನೆಗೆ ಅವನೇ ತನ್ನಲ್ಲಿ ಸೇರಿಸಿಕೊಳ್ಳುತ್ತಾನೆ. ಹೀಗೆ ಸೃಷ್ಟಿಸಿ ಕೊನೆಗೆ ಸಂಹರಿಸುತ್ತಾನೆ ಎಂದು ಹೇಳಿದ್ದರಿಂದ ಮಧ್ಯಕಾಲದಲ್ಲಿ ರಕ್ಷಿಸುವ ಹೊರೆಯನ್ನೂ ಅವನೇ ಹೊತ್ತಿರುವನೆಂಬ ಅಂಶ ತಾನಾಗಿಯೇ ತಿಳಿದುಬರುತ್ತದೆ. ಇಂತಹ ಮಹಾದೇವನು ಇಷ್ಟೆಲ್ಲ ಕಾರ್ಯವನ್ನೂ ತನ್ನ ವಿನೋದಕ್ಕಾಗಿ ಅನಾಯಾಸವಾಗಿ ನಡಿಸುತ್ತಿರುವನು. ಇಷ್ಟೊಂದು ದಯೆಯುಳ್ಳ ಸ್ವಾಮಿಯು ನಮಗೆ ತನ್ನ ಅನುಗ್ರಹವನ್ನು ದೊರಕಿಸುವಂತಹ ಸದ್ಬುದ್ಧಿಯನ್ನು ಕೊಡಲೆಂದು ಪ್ರಾರ್ಥಿಸಲಾಗಿದೆ. ನಮ್ಮ ಮನಸ್ಸು ಬುದ್ಧಿ ಇವೆರಡೂ ಅವನ ಕಡೆಗೆ ತಿರುಗುವಂತೆ ಅವನೇ ನಮಗೆ ಅನುಗ್ರಹಿಸಲೆಂದು ಮಹರ್ಷಿಯು ಸಾರ್ವಜನಿಕ ಹಿತದೃಷ್ಟಿಯಿಂದ ಪರಮೇಶ್ವರನಲ್ಲಿ ಮೊರೆ ಇಟ್ಟಿದ್ದಾನೆ.

ಪರಮೇಶ್ವರನೇ ವಿಶ್ವವಾಗಿ ಪರಿಣಮಿಸಿರುವುದರಿಂದ ಎಲ್ಲಕ್ಕೂ ತಾನೇ ಉಪಾದಾನನೆನಿಸಿದ್ದಾನೆ. ಅಲ್ಲಿ ಅವನೇ ನೆಲಸಿ ನಡೆಸುತ್ತಿರುವ ಅವನ ವಿಶ್ವರೂಪದ ಮಹಿಮಾತಿಶಯವನ್ನು ಮುಂದೆ ತಿಳಿಸುತ್ತಾನೆ.

ತದೇವಾಗ್ನಿಸ್ತದಾದಿತ್ಯಸ್ತದ್ವಾಯುಸ್ತದು ಚಂದ್ರಮಾಃ ।
ತದೇವ ಶುಕ್ರಂ ತದ್ಬ್ರಹ್ಮ ತದಾಪಸ್ತತ್ಪ್ರಜಾಪತಿಃ ॥೨॥

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಸರ್ವಾಧಾರನಾದ ಪರಮೇಶ್ವರನೇ ಪರಬ್ರಹ್ಮವೆಂದು ತಿಳಿಸಲಿಕ್ಕಾಗಿ ಮೊದಲು ಅವನನ್ನು ಪುಲ್ಲಿಂಗದ ಯಚ್ಛಬ್ದದಿಂದ ತಿಳಿಸಿ ಇಲ್ಲಿ ನಪುಂಸಕಲಿಂಗದ ತಚ್ಛಬ್ದದಿಂದ ತಿಳಿಸಿದಪ್ರಯುಕ್ತ ಅವನೇ ಚೇತನಪ್ರಾಣಿಗಳಾಗಿರುವಂತೆ ಜಡವಸ್ತುಗಳೂ ಆಗಿರುವ ನೆಂಬ ಅಂಶವು ತಿಳಿದುಬರುತ್ತದೆ. ಚೇತನವರ್ಗವನ್ನು ಪುಲ್ಲಿಂಗದಿಂದಲೂ ಜಡ ವಸ್ತುಗಳನ್ನು ನಪುಂಸಕಲಿಂಗದಿಂದಲೂ ತಿಳಿಸುವುದೊಂದು ಸಾಮಾನ್ಯವಾಡಿಕೆ. ಮೊದಲಿಗೆ ಪರಮಾತ್ಮನು ತನ್ನ ವಿನೋದಕ್ಕಾಗಿಯೇ ಹೀಗೆಲ್ಲ ಪರಿಣಮಿಸಬೇಕಾ ಯಿತು. ಅವನೊಬ್ಬನೇ ಪ್ರಳಯಕಾಲದಲ್ಲಿ ಆತ್ಮಾರಾಮನಾಗಿದ್ದು ಕೊಂಚ ಬೇಸರ ಗೊಂಡದ್ದರಿಂದ ಹೀಗೆ ಚಿತ್ರವಿಚಿತ್ರರೀತಿಯಲ್ಲಿ ತಾನೇ ಪರಿಣಮಿಸಿ ಎಲ್ಲರೊಳಗೂ ಉದಾಸೀನನಾಗಿ ನೆಲಸಿ ಎಲ್ಲವನ್ನೂ ನಿರೀಕ್ಷಿಸುವ ಲೀಲೆಯನ್ನು ಅವನು ಸೃಷ್ಟಿ ಕಾಲದಲ್ಲಿ ನಡೆಸತೊಡಗಿದನು. ಆದ್ದರಿಂದಲೇ ಅನುಭವಿಗಳು ಅವನ ಪರಿಣಾಮ ವನ್ನು ಮೂರು ಲಿಂಗಗಳಲ್ಲಿಯೂ ಅನ್ವಯಿಸುವುದಾಗಿ ಭಾವಿಸುತ್ತಾರೆ. ಪರಶಿವ ನೆನಿಸಿದ ಆ ಪರಬ್ರಹ್ಮವೇ ಅಗ್ನಿಯಾಗಿಯೂ, ಆದಿತ್ಯನಾಗಿಯೂ, ವಾಯು ವಾಗಿಯೂ, ಚಂದ್ರನಾಗಿಯೂ ಪರಿಣಮಿಸಿತು. ಅಷ್ಟೇ ಅಲ್ಲದೆ ಪರಿಶುದ್ಧವಾದ ವಸ್ತು ಯಾವ್ಯಾವುದೆಯೋ ಅದೆಲ್ಲವೂ ಪರಬ್ರಹ್ಮವೇ. ಅವನು ತೋರಿಸಿದಂತೆ ಮುಂದೆ ಸೃಷ್ಟಿಕಾರ್ಯವನ್ನು ನಡೆಸಿದ ಚತುರ್ಮುಖಬ್ರಹ್ಮನೂ ಆ ಪರಬ್ರಹ್ಮವೇ. ಹೀಗೆ ವಿರಾಟ್ರೂಪನೆನಿಸಿ ಪರಮೇಶ್ವರನು ವಿನೋದಪಡುತ್ತಿರುವನು. ಹೀಗೆ ಅವನು ಸ್ವತಃ ಅಮೂರ್ತ (ನಿರಾಕಾರ) ನಾಗಿದ್ದರೂ ಭಕ್ತಾನುಗ್ರಹಲೀಲೆಗಾಗಿ ಅಗ್ನಿ, ವಾಯು, ಸೂರ್ಯ, ಚಂದ್ರ ಮೊದಲಾದ ಮೂರ್ತರೂಪಗಳನ್ನು ಪರಿಗ್ರಹಿ ಸಿದ್ದರಿಂದ ಅವನು ಮೂರ್ತಾಮೂರ್ತನೆಂದು ಪ್ರಸಿದ್ಧನೆನಿಸಿದ್ದಾನೆ. ಪಂಚತತ್ತ್ವ ಗಳ ವಿಸ್ತಾರವೆನಿಸಿದ ಪ್ರಪಂಚವು ಅವನ ಪ್ರಾಕೃತ (ಪ್ರಕೃತಿಗೆ ಸಂಬಂಧಿಸಿದ) ಮೂರ್ತರೂಪವಲ್ಲದೆ ಬೇರೆಯಲ್ಲ. ಬ್ರಹ್ಮ ವಿಷ್ಣು ಮೊದಲಾದ ಚೇತನರು ಅವನ ದಿವ್ಯಮೂರ್ತರೂಪದ ಅಂಶರಲ್ಲದೆ ಬೇರೆಯಲ್ಲ. ಕೈಲಾಸದಲ್ಲಿರುವ ಪಾರ್ವತೀಪತಿ ಶಿವನು ಅಮೂರ್ತಪರಶಿವನ ಸಮಗ್ರಮೂರ್ತರೂಪನೆನಿಸಿದ್ದಾನೆ. ಗಟ್ಟಿತುಪ್ಪವೇ ಭೋಜನಸೌಕರ್ಯಕ್ಕಾಗಿ ನೀರಾಗುವಂತೆ ಅಮೂರ್ತಪರಶಿವನೇ ಭಕ್ತರನ್ನು ಅನು ಗ್ರಹಿಸಲಿಕ್ಕಾಗಿ ದಿವ್ಯಮಂಗಳವಿಗ್ರಹಧಾರಿಯಾಗಿ ಶಿವನೆನಿಸುತ್ತಾನೆ. ಅಮೂರ್ತ ಪರಶಿವನಿಗೂ ಮೂರ್ತಶಿವನಿಗೂ ಭೇದವಿಲ್ಲ. ಸಾಕಾರಶಿವನು ಭಕ್ತರಿಗೆ ಉಪಾಸ ನಕ್ಕೆ ದೊರೆತರೆ ನಿರಾಕಾರಶಿವನು ಮುಕ್ತರಿಗೆ ಗಮ್ಯನಾಗಿ ದೊರಕುವನು. ಸಾಕಾರ ಶಿವನ ನಿರಂತರೋಪಾಸನದಿಂದ ಅವನ ಅನುಗ್ರಹವನ್ನು ಪಡೆದು ಆ ಮೂಲಕ ಭಕ್ತನು ತನ್ನ ಮಲಪಾಶವನ್ನು ಅಂದರೆ ತನ್ನ ದೇಹಾಭಿಮಾನವನ್ನು ಕಳೆದುಕೊಂಡು ತಾನೂ ನಿರಾಕಾರಸ್ಥಿತಿಯಲ್ಲಿ ನಿಂತು ನಿರಾಕಾರಪರಮಶಿವನಲ್ಲಿ ಸಮರಸವಾಗಿ ಬೆರೆಯಬೇಕು. ಇದೇ ಅಭಿಪ್ರಾಯವನ್ನು ಕೈವಲ್ಯ ಶ್ರುತಿಯೂ ಸ್ಪಷ್ಟಪಡಿಸಿದೆ. "ಉಮಾಸಹಾಯಂ ಪರಮೇಶ್ವರಂ ಪ್ರಭುಂ ತ್ರಿಲೋಚನಂ ನೀಲಕಂಠಂ.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಪ್ರಶಾಂತಂ, ಧ್ಯಾತ್ವಾ ಮುನಿರ್ಗಚ್ಛತಿ ಭೂತಯೋನಿಂ ಸಮಸ್ತಸಾಕ್ಷಿಂ ತಮಸಃ ಪರಸ್ತಾತ್" ಎಂದು ಶ್ರುತಿಯಲ್ಲಿ ಪರಮೇಶ್ವರನ ಸಾಕಾರನಿರಾಕಾರಸ್ಥಿತಿಗಳೆರಡನ್ನೂ ತಿಳಿಸಲಾಗಿದೆ. ಇಲ್ಲಿ ಮುನಿ ಎಂದರೆ ಸಾಧಕನು. ಇವನು ಮೊದಲು ಉಮಾಶಕ್ತಿವಿಶಿಷ್ಟನೂ ಪ್ರಶಾಂತನೂ ಆದ ಪರಮೇಶ್ವರನನ್ನು ಧ್ಯಾನಿಸಬೇಕು. ಆವನನ್ನು ತ್ರಿಲೋಚನ–ನೀಲಕಂಠ ಎಂದು ಮುಂತಾಗಿ ಭಾವಿಸಬೇಕು. ಹೀಗೆ ಧ್ಯಾನಿಸಿದರೆ ಅವನು ಸರ್ವಜಗತ್ಕಾರಣನೂ, ಸರ್ವಸಾಕ್ಷಿಯೂ, ಪರಂಜ್ಯೋತಿಸ್ವರೂಪನು ಆದ ಅಮೂರ್ತಪರಶಿವನಲ್ಲಿ ಸೇರುತ್ತಾನೆ. ಆದ್ದರಿಂದ ಧ್ಯಾನಕ್ಕೆ ಸಾಕಾರಮೂರ್ತಿಯನ್ನು ಶ್ರುತಿಯೇ ನಿರ್ದೇಶಿಸಿದೆ. ಈ ಧ್ಯಾನದಿಂದಲೇ ಜೀವನಿಗೆ ತನ್ನ ಪಾಶದ ವಿಮೋಚನೆಯಾಗಬೇಕು. ಅನಂತರ ಅವನಿಗೆ ತನ್ನ ನಿರಾಕಾರಸ್ಥಿತಿಯ ಅನುಭವವುಂಟಾಗಿ ಅದರಿಂದ ನಿರಾಕಾರಪರಮಶಿವನಲ್ಲಿ ಸೇರುವ ಯೋಗವು ಲಭಿಸುತ್ತದೆ. ಅವನಿಗೆ ದೇಹೇಂದ್ರಿಯಗಳೆಂಬ ಆಕಾರವು ದೊರೆತಿರುವುದೂ ಸಹ ಸಾಕಾರಶಿವನ ಅರ್ಚನೆಗಲ್ಲದೆ ಕೇವಲ ಭೋಗವಿಲಾಸಕ್ಕಲ್ಲ. ಆದ್ದರಿಂದ ಆಕಾರದ ಸಹಕಾರದಿಂದ ಜೀವನು ಸಾಕಾರಶಿವನ ಅನುಗ್ರಹವನ್ನು ಪಡೆದು ನಿರಾಕಾರಸ್ಥಿತಿಯನ್ನು ಅನುಭವಿಸಿ ಅದೇಸ್ಥಿತಿಯ ಪರಶಿವನೊಡನೆ ಬೆರೆತು ನಿತ್ಯಸುಖಿಯಾಗಬೇಕು. ಇದರಿಂದಲೇ ಅವನಿಗೆ ಮತ್ತೆ ಹುಟ್ಟದ ಸ್ಥಿತಿ ದೊರಕುತ್ತದೆ. ಇದನ್ನೇ ಮಹಾತ್ಮ ಬಸವಣ್ಣನು ಸ್ಪಷ್ಟಪಡಿಸಿದ್ದಾನೆ. "ಹಿಂದಣ ಜನ್ಮದಲ್ಲಿ ಲಿಂಗದ ನಿಜತತ್ತ್ವವನ್ನು ನಾನು ಅರಿತಿದ್ದರೆ ನನಗೆ ಈ ಭವಪಾಶವೇ ಬರುತ್ತಿರಲಿಲ್ಲ. ಜಗದಗಲವಾದ ಅಖಂಡಲಿಂಗದ ಮಹತ್ತ್ವವನ್ನು ತಿಳಿಯದ ಅಪರಾಧಕ್ಕಾಗಿ ನನಗೆ ಈ ಪಾಶವು ಬಂದಿದೆ. ದೇಹ, ಮನಸ್ಸು, ಬುದ್ಧಿ ಇವೆಲ್ಲದರ ಸಹಕಾರದಿಂಲೂ ನಿನ್ನ ದಿವ್ಯ ಮೂರ್ತರೂಪವನ್ನು ಅರ್ಚಿಸುತ್ತಲೇ ಅಮೂರ್ತಸ್ಥಿತಿಯನ್ನು ಹಿಂದೆ ಅರಿತಿದ್ದರೆ ಈ ಭವಬೀಜವೇ ನನ್ನಲ್ಲಿ ಅಂಕುರಿಸುತ್ತಿರಲಿಲ್ಲ"ವೆಂದು ಸ್ಪಷ್ಟವಾಗಿ ತನ್ನ ಆತ್ಮಪರೀಕ್ಷೆಯ ವಿಧಾನದಲ್ಲಿ ತಿಳಿಸಿ ಲೋಕವನ್ನು ಎಚ್ಚರಿಸಿದ್ದಾನೆ. ಹೀಗೆ ಪರಮಾತ್ಮನು ನಿರಾಕಾರನಾಗಿದ್ದುಕೊಂಡೇ ಸಾಕಾರಶಿವನೆನಿಸಿರುವಂತೆಯೇ ತನ್ನ ಸಂಬಂಧಿಗಳಾದ ಜೀವರನ್ನು ಉದ್ಧರಿಸಲಿಕ್ಕಾಗಿ ಪಂಚತತ್ತ್ವಮಯವಾದ ಪ್ರಪಂಚವಾಗಿಯೂ ಪರಿಣಮಿಸಿದ್ದಾನೆ. ಕಾಂಚೀಪುರದಲ್ಲಿ ಪಾರ್ಥಿವಲಿಂಗ, ಜಂಬೂಕ್ಷೇತ್ರದಲ್ಲಿ ಅಪ್‌ಲಿಂಗ, ತಿರುವಣ್ಣಾಮಲೆಯಲ್ಲಿ ತೇಜೋಲಿಂಗ, ಕಾಳಹಸ್ತಿಯಲ್ಲಿ ವಾಯುಲಿಂಗ, ಚಿದಂಬರದಲ್ಲಿ ಆಕಾಶಲಿಂಗ ಹೀಗೆ ಈ ಪಂಚತತ್ತ್ವಗಳೂ ಪಂಚಲಿಂಗಗಳೆನಿಸಿ ಭಕ್ತರಿಂದ ಉಪಾಸನವನ್ನು ಸ್ವೀಕರಿಸುತ್ತಿರುವುದು ಜಗತ್ಪ್ರಸಿದ್ಧವೆನಿಸಿದೆ. ಹೀಗೆ ಸರ್ವವ್ಯಾಪಕನಾದ್ದರಿಂದಲೇ ಈ ಮಂತ್ರದಲ್ಲಿ ಪರಮಾತ್ಮನನ್ನು ಪುಂ ಸ್ತ್ರೀಲಿಂಗಗಳಂತೆ ನಪುಂಸಕಲಿಂಗದಲ್ಲಿಯೂ ನಿರ್ದೇಶಿಸಿದ್ದು ಯುಕ್ತವೆನಿಸಿದೆ.

ಇಲ್ಲಿ ತಚ್ಛಬ್ದದಿಂದ ತಿಳಿಸಿದ ಪರಮಾತ್ಮನು ಹೇಗೆ ಜಗತ್ತಿನ ಜೀವರಾಗಿ ಪರಿಣಮಿಸಿರುವನೆಂಬುದನ್ನು ಲೋಕದೃಷ್ಟಾಂತಗಳಿಂದ ತಿಳಿಸುತ್ತಾನೆ.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ತ್ವಂ ಸ್ತ್ರೀ ತ್ವಂ ಪುಮಾನಸಿ
ತ್ವಂ ಕುಮಾರ ಉತ ವಾ ಕುಮಾರೀ ।
ತ್ವಂ ಜೀರ್ಣೋ ದಂಡೇನ ವಂಚಸಿ ತ್ವಂ
ಜಾತೋ ಭವಸಿ ವಿಶ್ವತೋಮುಖಃ ॥೩॥

ಅಮೂರ್ತಪರಮಶಿವನೇ ಸ್ತ್ರೀ, ಪುರುಷ, ಕುಮಾರ ಮೊದಲಾದ ಜೀವ ವರ್ಗವೆನಿಸಿರುವನು. ಅದೇ ಅಂಶವನ್ನು ಇಲ್ಲಿ ಪ್ರಾರ್ಥನೆಯ ಮೂಲಕ ವಿವರಿಸ ಲಾಗಿದೆ. ಪ್ರಭು, ವಿಶ್ವವ್ಯಾಪಕನಾದ ನೀನೇಯೇ ಸ್ತ್ರೀರೂಪದಿಂದಲೂ, ಪುರುಷರೂಪ ದಿಂದಲೂ ಶೋಭಿಸುತ್ತಿರುವೆ. ನೀನೆಯೇ ಕುಮಾರನೂ ಕುಮಾರಿಯೂ ಆಗಿರುವೆ. ನೀನೇ ಯುವಕನೂ ವೃದ್ಧನೂ ಆಗಿರುವೆ. ಕೋಲನ್ನು ಹಿಡಿದು ತಿರುಗುವವನೂ ನೀನೆ. ದೇಹಪುಷ್ಟಿಯ ಉತ್ಸಾಹದ ಆವೇಶದಲ್ಲಿ ಮೆರೆಯುವ ಯುವಕನೂ ನೀನೆ. ವಿಶ್ವರೂಪನೆನಿಸಿದ ನೀನೆಯೇ ಎಲ್ಲಾ ಕಡೆಗಳಲ್ಲೂ ಜೀವರೆನಿಸಿ ಬಾಳುತ್ತಿರುವೆ. ಹೀಗೆ ಆ ಪರಶಿವಬ್ರಹ್ಮವೇ ವಿಚಿತ್ರಶಕ್ತಿಯ ಸಂಪರ್ಕದಿಂದ ಅನೇಕ ಬಗೆಯ ಆಕಾರ ಗಳನ್ನು ಸ್ವೀಕರಿಸಿ ಲೋಕದಲ್ಲಿ ವ್ಯಾಪಿಸಿರುವುದೆಂಬ ಅನುಭವವನ್ನು ಪ್ರಾರ್ಥನದ ಮೂಲಕ ಮಹರ್ಷಿಯು ತಿಳಿಸಿದ್ದಾನೆ.

ನೀಲಃ ಪತಂಗೋ ಹರಿತೋ ಲೋಹಿತಾಕ್ಷಃ
ತಡಿದ್ಗರ್ಭ ಋತವಸ್ಸಮುದ್ರಾಃ ।
ಅನಾದಿಮತ್ತ್ವಂ ವಿಭುತ್ವೇನ ವರ್ತಸೇ
ಯತೋ ಜಾತಾನಿ ಭುವನಾನಿ ವಿಶ್ವಾ ॥೪॥

ಹಿಂದೆ ಹೇಳಿದಂತೆ ಸ್ತ್ರೀಪುರುಷರ ರೂಪಗಳನ್ನು ಸ್ವೀಕರಿಸಿರುವುದಷ್ಟೇ ಅಲ್ಲದೆ ಜಗದ್ರೂಪವನ್ನು ಹೊಂದಿರುವುದೂ ಸಹ ಅಮೂರ್ತಪರಶಿವನ ಭಕ್ತಾನುಗ್ರಹ ಲೀಲಾವಿನೋದವೇ ಆಗಿದೆ ಎಂಬ ಅಭಿಪ್ರಾಯವನ್ನು ಇಲ್ಲಿ ವಿವರಿಸಲಾಗಿದೆ. ಸರ್ವ ವ್ಯಾಪಕನಾದ ಅಮೂರ್ತಪರಶಿವನೇ, ನೀನೇ ನೀಲವರ್ಣದ ದುಂಬಿಯಾಗಿರುವೆ. ಹಸುರು ಬಣ್ಣದ ಗಿಳಿಯೂ ನೀನೇ ಆಗಿರುವೆ. ಮಿಂಚುಗಳಿಂದ ಕೂಡಿರುವ ಮೇಘವೂ ನೀನೇ. ಆರು ಋತುಗಳಾಗಿರುವವನೂ ನೀನೇ. ಸಮುದ್ರಗಳಾಗಿರು ವವನೂ ನೀನೆಯೇ. ಹೀಗೆ ಎಲ್ಲಾ ಬಗೆಗಳಲ್ಲಿ ನೀನೇ ಆಗಿದ್ದರೂ ನಿನಗೆ ಆದಿ ಎಂಬುದೇ ಇಲ್ಲ. ಜಗತ್ತಿನಲ್ಲಿರುವ ವಸ್ತುಗಳೆಲ್ಲವೂ ನಿನ್ನಿಂದಲೇ ಹುಟ್ಟಿಬಂದಿರು ವುದರಿಂದಲೂ ನೀನು ಯಾರಿಂದಲೂ ಹುಟ್ಟದೆ ತಾನಾಗಿಯೇ ಇರುವುದರಿಂದಲೂ ನೀನು ಅನಾದಿ ಎಂಬುದು ಸ್ವತಸ್ಸಿದ್ಧವಾಯಿತು. ಆದ್ದರಿಂದಲೇ ನೀನು ವಿಭುವೆನಿಸಿರುವೆ. ಸರ್ವವ್ಯಾಪಕವಾದ ಆಕಾಶಕ್ಕೆ ಕೊನೆ ಮೊದಲೆಂಬುದೇ ಇಲ್ಲ. ಹಾಗೆ ನೀನೂ ಆದಿ ಅಂತ್ಯಗಳಿಲ್ಲದೆ ಶೋಭಿಸುತ್ತಿರುವೆ. ಇಂತಹ ನಿನ್ನಿಂದಲೇ ಸಮಸ್ತ ಜಗತ್ತೂ ಹುಟ್ಟಿ ಬಂದಿದೆ. ಜಗತ್ತೆಲ್ಲಕ್ಕೂ ಕಾರಣವೆನಿಸಿದ ನಿನಗೆ ಬೇರೆ ಯಾವ ಕಾರಣವೂ ಸಂಭವಿ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಸುವಂತಿಲ್ಲ. ಹಾಗೆಯೇ ನಿನ್ನನ್ನು ಕೊನೆಗಾಣಿಸುವ ಯಾವ ವಸ್ತುವೂ ಎಲ್ಲಿಯೂ ಕಾಣುವಂತಿಲ್ಲ. ಇದನ್ನೇ ಭಕ್ತಿಭಂಡಾರಿ ಬಸವಣ್ಣನು ಸೊಗಸಾಗಿ ಹೇಳಿದ್ದಾನೆ. "ಜಗದಗಲ, ಮುಗಿಲಗಲ ಮಿಗೆಯಗಲ ನಿಮ್ಮಗಲ ; ಪಾತಾಳದಿಂದ ಅತ್ತತ್ತ ನಿಮ್ಮ ಶ್ರೀ ಚರಣ ; ಬ್ರಹ್ಮಾಂಡದಿಂದ ಅತ್ತತ್ತ ನಿಮ್ಮ ಶ್ರೀಮುಕುಟ. ಅಗಮ್ಯ, ಅಪ್ರಮಾಣ ಅಗೋಚರ" ಹೀಗೆ ಪರಮಾತ್ಮನು ಎಲ್ಲಕ್ಕೂ ಪ್ರಮಾಣನೆನಿಸಿದ್ದರೂ ಅವನಿಗೆ ಯಾವ ಪ್ರಮಾಣವೂ ಇಲ್ಲ. ಇಂತವನು ತಾನಾಗಿಯೇ ಯಾರಿಗೆ ಒಲಿಯುವನೋ ಅವನೇ ಪರಮಾತ್ಮಸ್ವರೂಪವನ್ನು ಅರಿಯಬಲ್ಲನು. ಇತರರಿಗೆ ಇದು ಸಾಧ್ಯವಾಗಲಾರದು.

ಎಲ್ಲಕ್ಕೂ ಪರಶಿವನೇ ಉಪಾದಾನವಾಗಿರುವುದರಿಂದ ಎಲ್ಲವೂ ಪರಶಿವನೇ ಆದ ಮೇಲೆ ಇಲ್ಲಿರುವ ಪದಾರ್ಥಗಳಲ್ಲಿ ತರತಮಭಾವವೂ, ಬಂಧಮೋಕ್ಷಗಳ ವ್ಯವಸ್ಥೆಯೂ ಏತಕ್ಕೆ ಸಂಭವಿಸಿದವು ? ಎಂದು ಆಶಂಕಿಸಿ ಪರಮಾತ್ಮನಂತೆಯೇ ಸನಾತನ ಎನಿಸಿದ ಪ್ರಕೃತಿ (ಜಡಶಕ್ತಿ)ಯೇ ಈ ವೈಚಿತ್ರ್ಯವೆಲ್ಲಕ್ಕೂ ಕಾರಣವೆಂದು ತಿಳಿಸುತ್ತಾನೆ.

ಅಜಾಮೇಕಾಂ ಲೋಹಿತಶುಕ್ಲಕೃಷ್ಣಾಂ
ಬಹ್ವೀಃ ಪ್ರಜಾಸ್ಸೃಜಮಾನಾಂ ಸರೂಪಾಃ ।
ಅಜೋ ಹ್ಯೇಕೋ ಜುಷಮಾಣೋಽನುಶೇತೇ
ಜಹಾತ್ಯೇನಾಂ ಭುಕ್ತಭೋಗಾಮಜೋಽನ್ಯಃ ॥೫॥

ಜಗತ್ತು ಹೇಗೆ ಹುಟ್ಟಿತು ? ಅದರ ಸ್ವರೂಪವೇನು ? ಎಂಬ ಅಂಶವನ್ನು ಇಲ್ಲಿ ವಿಶದಗೊಳಿಸುತ್ತಾನೆ. ಸತ್ತ್ವರಜಸ್ತಮೋಗುಣಗಳುಳ್ಳ ಪ್ರಕೃತಿಯೇ ಈ ಜಗತ್ತಿನ ಮೂಲವೆಂದು ತಿಳಿಸುತ್ತಾನೆ. ಇಲ್ಲಿ ಬಿಳಿಬಣ್ಣವನ್ನು ತಿಳಿಸುವ ಶುಕ್ಲಪದದಿಂದ ಸತ್ತ್ವಗುಣವನ್ನೂ, ಕೆಂಪುಬಣ್ಣವನ್ನು ತಿಳಿಸುವ ಲೋಹಿತಪದದಿಂದ ರಜೋಗುಣವನ್ನೂ, ಕಪ್ಪುಬಣ್ಣವನ್ನು ತಿಳಿಸುವ ಕೃಷ್ಣಪದದಿಂದ ತಮೋಗುಣವನ್ನೂ ಪ್ರತಿಪಾದಿಸಲಾಗಿದೆ. ಈ ಮೂರು ಗುಣಗಳೇ ಪ್ರಕೃತಿ ಎನಿಸುತ್ತವೆ. ಈ ಪ್ರಕೃತಿಯೂ ತನ್ನಂತೆಯೇ ತ್ರಿಗುಣಾತ್ಮಕವಾದ ಅನೇಕ ಬಗೆಯ ಕಾರ್ಯಗಳನ್ನು ಸೃಷ್ಟಿಸುತ್ತದೆ. ಇದು ಜಗದ್ರೂಪವಾಗಿ ಪರಿಣಮಿಸುವಾಗ ಇದರಲ್ಲಿ ವಿಕಾರಗಳು ಉಂಟಾದರೂ ಇದು ಸ್ವಾಭಾವಿಕವಾಗಿ ಒಂದೇ ಬಗೆಯಾಗಿ ಸನಾತನಕಾಲದಿಂದಲೂ ಶೋಭಿಸುತ್ತಿರುವುದರಿಂದ ಅಜೆ ಎನಿಸಿದೆ. ಇಂತಹ ಪ್ರಕೃತಿಯನ್ನು ಸಂಸಾರಿಜೀವನೊಬ್ಬನು ಆಶ್ರಯಿಸಿಕೊಂಡು ಭೋಗಿಸುತ್ತಿರುವನು. ಇವನು ಭೋಗಾಸಕ್ತನೂ ಪಾಶಬದ್ಧನೂ ಆಗಿರುವನು. ಆದರೆ ಮತ್ತೊಬ್ಬ ಜೀವನು ಸಂಸಾರದಲ್ಲಿ ಇದನ್ನು ಭೋಗಿಸಿ ನಿಸ್ಸಾರವೆಂದು ತೊರೆದಿರುವನು. ಅವನು ಪ್ರಕೃತಿಯ ಭೋಗಗಳನ್ನು ಭೋಗಿಸಿ ವಿರಕ್ತನಾಗಿರುವುದರಿಂದಲೂ ಅವನಿಗೆ ಮತ್ತೆ ಭೋಗದ ಬಯಕೆ ಇಲ್ಲದ್ದರಿಂದಲೂ ಅವನು ಮುಮುಕ್ಷುವೆನಿಸುತ್ತಾನೆ. ಹೀಗೆ ಜಗತ್ತಿನಲ್ಲಿ ಲೌಕಿಕವಿಷಯಗಳಲ್ಲಾಸಕ್ತರಾದವರು ಭೋಗವನ್ನೇ ತಮ್ಮ ಬಾಳಿನ ಗುರಿ ಎಂದು ತಿಳಿದು ಅಲ್ಲಿಯೇ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಮೋಹದಿಂದ ಹೊರಳಾಡುತ್ತ ಸಂಸಾರಿಗಳೆನಿಸುತ್ತಾರೆ. ಆದರೆ ವಿವೇಕಿಜೀವರು ಪ್ರಕೃತಿಯ ಭೋಗಗಳೆಲ್ಲವನ್ನೂ ಶಿವನ ಪ್ರಸಾದವೆಂದು ಅನುಭವಿಸುತ್ತ ಭೋಗದ ವ್ಯಾಮೋಹವನ್ನು ತೊರೆದಿರುವರು. ಆದ್ದರಿಂದ ಲೋಕದಲ್ಲಿ ಭೋಗಸಾಮಗ್ರಿ ಎನಿಸಿದ ಪ್ರಕೃತಿ, ಭೋಗಾಸಕ್ತರಾದ ಪಶುಜೀವರು, ಭೋಗಾಸಕ್ತಿಯನ್ನು ತೊರೆದ ಮುಮುಕ್ಷುಗಳು ಹೀಗೆ ಮೂರು ಬಗೆಯ ಪದಾರ್ಥಗಳು ಕಂಡುಬರುತ್ತವೆ. ಪ್ರಕೃತಿ ಎಲ್ಲರಿಗೂ ಆಕರ್ಷಕವಾದ್ದರಿಂದ ಜೀವರೆಲ್ಲರನ್ನೂ ಆಯಾ ಗುಣಗಳಿಂದ ಬಂಧಿಸುತ್ತ ತನಗೆ ಅಧೀನರಾದವರನ್ನು ರೂಪರಸಗಂಧಸ್ಪರ್ಶಶಬ್ದಗಳಿಂದ ಮೋಹಗೊಳಿಸುತ್ತಲಿದೆ. ಅದಕ್ಕಧೀನರಾದ ಬದ್ಧಜೀವರು ಪ್ರಾಕೃತಿಕಭೋಗಗಳನ್ನು ಅನುಭವಿಸುತ್ತ ಆತ್ಮಕಲ್ಯಾಣದಲ್ಲಿ ಆಸಕ್ತಿಯಿಲ್ಲದೆ ಕಾಲವನ್ನು ಕಳೆಯುತ್ತಾರೆ. ಇದೆಲ್ಲವನ್ನೂ ಅನುಭವಿಸಿ ವೈರಾಗ್ಯವನ್ನು ಹೊಂದಿ ತತ್ತ್ವಜ್ಞಾನವನ್ನು ಪಡೆದಿರುವ ಬುದ್ಧಜೀವರಾದರೋ ಆತ್ಮದಲ್ಲಿಯೇ ರಮಿಸುತ್ತ ತೃಪ್ತರಾಗಿರುವರು. ಹೀಗೆ ಜಗತ್ತು ಸಹಜವಾಗಿ ಎರಡು ಬಗೆಯ ಜೀವರಿಂದೊಡಗೂಡಿ ಭೋಗಕ್ಕೂ ತ್ಯಾಗಕ್ಕೂ ಆಶ್ರಯವಾದ ಕ್ಷೇತ್ರವೆನಿಸಿದೆ. ಈ ಜಗತ್ತಿನಲ್ಲಿ ಜೀವರಲ್ಲಿರುವ ತಾರತಮ್ಯಕ್ಕೆ ಪ್ರಕೃತಿಯೇ ಕಾರಣವೆಂದು ವ್ಯವಸ್ಥಿತವಾಗಿದೆ. ಜಗತ್ತಿನಲ್ಲಿರುವ ವೈವಿಧ್ಯವೆಲ್ಲವೂ ಪ್ರಕೃತಿಯಿಂದಲೇ ಉಂಟಾಗಿದೆ. ಯಾರು ಪ್ರಕೃತಿಯನ್ನು ವಿಶ್ರಾಂತಿಸ್ಥಾನವನ್ನಾಗಿ ಆಶ್ರಯಿಸಿರುವರೋ ಅವರೆಲ್ಲರೂ ದುಃಖಭಾಗಿಗಳೇ ಆಗುತ್ತಾರೆ. ಪ್ರಕೃತಿಯ ಭೋಗವು ಆ ಕಾಲದಲ್ಲಿ ಸುಖಮಯವಾಗಿದ್ದರೂ ಕೊನೆಗೆ ದುಃಖವನ್ನೇ ಕೊಡುವಂತಹದು. "ಮುಟ್ಟಿ ನೋಡಿ ಕೇಳಿ ಪಡೆಯುವ ಸುಖಗಳೆಲ್ಲಕ್ಕೂ ದುಃಖವೇ ತೌರೂರೆನಿಸಿದೆ. ಅವಕ್ಕೆ ಕೊನೆ ಮೊದಲಿರುವುದರಿಂದ ಅವುಗಳಲ್ಲಿ ವಿದ್ವಾಂಸನು ರಮಿಸುವುದಿಲ್ಲ" ಹೀಗೆ ಗೀತೆಯು ಪ್ರಾಕೃತಿಕಭೋಗಗಳೆಲ್ಲವನ್ನೂ ದುಃಖಮೂಲವೆಂದು ಚೆನ್ನಾಗಿ ತಿಳಿಸಿದೆ. ಆದ್ದರಿಂದಲೇ ಜಗತ್ತೆಲ್ಲವೂ ಬ್ರಹ್ಮಾತ್ಮಕವಾದರೂ, ಅಲ್ಲಿರುವ ತಾರತಮ್ಯವೆಲ್ಲವೂ ಪ್ರಕೃತಿಯಿಂದಲೇ ಆಗಿದೆ ಎಂದು ಭಾವಿಸಬೇಕು.

ಹೀಗೆ ಸಾಮಾನ್ಯವಾಗಿ ಜಗತ್ತಿನ ವೈವಿಧ್ಯಕ್ಕೆ ಕಾರಣವನ್ನು ತಿಳಿಸಿ ಜೀವಪರಮರಿಬ್ಬರನ್ನು ಪಕ್ಷಿಗಳೆಂದು ರೂಪಿಸುವ ಮೂಲಕ ಜೀವೇಶ್ವರರ ತಾರತಮ್ಯಕ್ಕೆ ಕಾರಣವನ್ನೂ, ಅದು ತೊಲಗಲು ಉಪಾಯವನ್ನೂ ಮುಂದೆ ತಿಳಿಸುತ್ತಾನೆ.

ದ್ವಾ ಸುಪರ್ಣಾ ಸಯುಜಾ ಸಖಾಯಾ
ಸಮಾನಂ ವೃಕ್ಷಂ ಪರಿಷಸ್ವಜಾತೇ ।
ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯ—
ನಶ್ನನ್ನನ್ಯೋ ಅಭಿಚಾಕಶೀತಿ ॥೬॥

ಯಾವಾಗಲೂ ಜೊತೆಯಲ್ಲಿಯೇ ಕೂಡಿಕೊಂಡು, ಒಂದೇ ಜಾತಿಗೆ ಸೇರಿ ಸಂಬಂಧಪಟ್ಟಿರುವ ಎರಡು ಸಮಾನಾಕಾರದ ಜೀವಪರಮರೆಂಬ ಪಕ್ಷಿಗಳು ಫಲಭೋಗ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಕ್ಕಾಶ್ರಯವಾದ ಶರೀರವೆಂಬ ವೃಕ್ಷದಲ್ಲಿ ನೆಲಸಿವೆ. ಅವರಿಬ್ಬರಲ್ಲಿ ಒಂದಾದ ಜೀವ ಪಕ್ಷಿಯು ಸಿಹಿ ಕಹಿ ಫಲಗಳೆರಡನ್ನೂ ಭೋಗಿಸುತ್ತದೆ. ಅದು ಶರೀರದ ಸಂಬಂಧದಿಂದ ದೊರಕುವ ಇಂದ್ರಿಯಸುಖವನ್ನೇ ಭೋಗ್ಯವೆಂದು ಭಾವಿಸಿ ಅಷ್ಟನ್ನೇ ಅನುಭವಿಸುತ್ತಲಿದೆ. ಪರಮಾತ್ಮಪಕ್ಷಿಯಾದರೋ ಕರ್ಮಫಲವನ್ನು ಅನುಭವಿಸದೆಯೇ ನಿರ್ಲಿಪ್ತತೆಯಿಂದ ಜೀವನ ಕರ್ಮಗಳಿಗೆ ಸಾಕ್ಷಿಯಾಗಿ ಎಲ್ಲವನ್ನೂ ನೋಡುತ್ತಲೇ ಯಾವಾಗಲೂ ಒಂದೇ ಬಗೆಯಾದ ವರ್ತನೆಯಿಂದ ಶೋಭಿಸುತ್ತಲಿದೆ. 'ಗುಹಾಂ ಪ್ರವಿಷ್ಟಾವಾತ್ಮಾನೌ ಹಿ ತದ್ದರ್ಶನಾತ್' ಎಂಬ ಬ್ರಹ್ಮಸೂತ್ರವು ಒಂದೇ ಶರೀರದಲ್ಲಿಯೇ ಎದೆಗುಹೆಯಲ್ಲಿ ಕರ್ಮಫಲವನ್ನು ಭೋಗಿಸುವ ಜೀವನೂ, ಅವನೊಳಗೆ ಅಂತರ್ಯಾಮಿಯಾಗಿದ್ದುಕೊಂಡು ಅವನ ಕರ್ಮಗಳಿಗೆ ಪ್ರೇರಕನಾದ ಈಶ್ವರನೂ ನೆಲಸಿರುವರೆಂದು ತಿಳಿಸುತ್ತದೆ.

ಹೀಗೆ ಇಬ್ಬರೂ ಒಂದೇ ಶರೀರದಲ್ಲಿಯೇ ನೆಲಸಿರುವುದಾದರೆ ಒಬ್ಬನು ಕರ್ಮಫಲವನ್ನು ಭೋಗಿಸಲಿಕ್ಕೂ, ಮತ್ತೊಬ್ಬನು ಭೋಗಿಸದಿರಲಿಕ್ಕೂ ಕಾರಣವೇನು? ಆ ಬಗ್ಗೆ ಪ್ರಮಾಣವೇನು? ಎಂದು ಆಶಂಕಿಸಿ ಸಮಾಧಾನಮಾಡುತ್ತಾನೆ.

ಸಮಾನೇ ವೃಕ್ಷೇ ಪುರುಷೋ ನಿಮಗ್ನೋಽನೀಶಯಾ ಶೋಚತಿ ಮುಹ್ಯಮಾನಃ।
ಜುಷ್ಟಂ ಯದಾ ಪಶ್ಯತ್ಯನ್ಯಮೀಶಮಸ್ಯ ಮಹಿಮಾನಮಿತಿ ವೀತಶೋಕಃ ॥೭॥

ಶರೀರವೆಂಬ ಒಂದೇ ವೃಕ್ಷದಲ್ಲಿ ಕರ್ಮಫಲವನ್ನು ಭೋಗಿಸುವ ಜೀವನು ತನ್ನ ಹಿಂದಿನ ಕರ್ಮದ ಫಲವಾಗಿ ಬಂದಿರುವ ಶರೀರವೆಂಬ ಪ್ರಕೃತಿಗೆ ಅಧೀನನಾಗಿ ಭೋಗಾಸಕ್ತನಾಗಿ ಕಾಲವನ್ನು ಕಳೆಯುತ್ತಿರುವನು. ಹೀಗೆ ಕರ್ಮಾಧೀನನಾದ್ದರಿಂದಲೇ ಜೀವನು ಅಶಕ್ತತೆಯಿಂದ ಮೋಹಗೊಂಡು ಶರೀರದ ಬಗ್ಗೆ ಅಭಿಮಾನಪಡುತ್ತಲೂ, ಸ್ವರೂಪಜ್ಞಾನವಿಲ್ಲದೆಯೂ, ಧರ್ಮ ಅಧರ್ಮಗಳ ವಿವೇಚನೆ ಇಲ್ಲದೆಯೂ ಗೋಳಾಡುತ್ತಿರುವನು. ಅವನು ಸುಖಪಡುವ ಕಾಲದಲ್ಲಿಯೂ ಅದರೊಡನೆ ಸೆರಿರುವ ದುಃಖವನ್ನು ನಿರೀಕ್ಷಿಸುತ್ತ ಆಗಲೂ ದುಃಖಿಯೇ ಆಗಿರುವನು. "ಇಂದ್ರಿಯಗಳ ಮೂಲಕ ಬರುವ ಸುಖವೆಲ್ಲಕ್ಕೂ ದುಖವೇ ಮೂಲ"ವೆಂದು ಪರಮಾತ್ಮನೇ ಸ್ಪಷ್ಟವಾಗಿ ತಿಳಿಸಿದ್ದಾನೆ. ಆದ್ದರಿಂದಲೇ 'ಜೀವತ್ವಂ ದುಃಖಸರ್ವಸ್ವಂ' ಎಂದು "ದುಃಖಸಾಗರದಲ್ಲಿ ಮುಳುಗಿರುವಿಕೆಯೇ ಜೀವನ ಲಕ್ಷಣ" ವೆಂದು ತಿಳಿಸಿದ್ದು ಯುಕ್ತವಾಗಿದೆ. ಇದರಿಂದ ದೇಹದಲ್ಲಿ ಜೀವಪರಮರಿಬ್ಬರಿದ್ದರೂ ಜೀವನು ತನ್ನ ಹಿಂದಿನ ಕರ್ಮಕ್ಕೆ ಅಧೀನನಾಗಿ ದುಃಖಪಡುತ್ತಿರುವನೆಂದೂ, ಶಿವನಿಗೆ ಕರ್ಮದ ಸೋಂಕಿಲ್ಲದ್ದರಿಂದ ಶರೀರದ ಸಂಬಂಧದಿಂದುಂಟಾಗುವ ದುಃಖದ ಅನುಭವವಿಲ್ಲವೆಂದೂ ತಿಳಿಸಿದಂತಾಯಿತು. ಹಾಗಾದರೆ ಈ ದುಃಖದಿಂದ ಜೀವನಿಗೆ ಬಿಡುಗಡೆ ಹೇಗೆ, ಯಾವಾಗ ಆದೀತು ಎಂಬ ಆಶಂಕೆಗೆ ಸಮಾಧಾನವನ್ನು ಈಗ ತಿಳಿಸುತ್ತಾನೆ. ಈ ಜೀವನು ತನ್ನೊಡನೆ ಬೇರೆಯಾಗಿ ನೆಲಸಿ ಎಲ್ಲರಂತೆ ತನ್ನನ್ನು ಪ್ರೇರಣಮಾಡುತ್ತಿ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ರುವ ಪರಮಾತ್ಮನನ್ನು ತನ್ನ ಕರ್ಮದಿಂದ ಮೆಚ್ಚಿಸಬೇಕು. ಹಿಂದೆ ಎಷ್ಟೋ ಜನ್ಮಗಳಲ್ಲಿ ಮಾಡಿದ ಪುಣ್ಯದಿಂದ ದಯಾಳುವೂ ತತ್ತ್ವಜ್ಞಾನಿಯೂ ಆದ ಗುರುಒಬ್ಬನು ದೊರೆತು ಕೃಪೆಮಾಡಿ ತೋರಿಸಿಕೊಟ್ಟ ಯೋಗಮಾರ್ಗದಿಂದಲೂ ಈಶ್ವರನ ಅನುಗ್ರಹದಿಂದ ದೊರೆತ ಭಕ್ತಿಯಿಂದಲೂ ಪ್ರಸನ್ನನಾದ ಆ ಪರಮೇಶ್ವರನನ್ನು ಯಾವ ಜೀವನು ಸಾಕ್ಷಾತ್ಕರಿಸುವನೋ ಆಗಲೇ ಇವನಿಗೆ ದುಃಖಗಳೆಲ್ಲವೂ ತೊಲಗುತ್ತವೆ. ಪರಮೇಶ್ವರನು ಕರ್ಮಕ್ಕೆ ವಶನಾಗದೆ ಜಗತ್ತಿನ ಕೆಲಸಗಳೆಲ್ಲವನ್ನೂ ನಡೆಸುತ್ತಿರುವನು ; ಎಲ್ಲಕ್ಕೂ ಸಾಕ್ಷಿಯಾಗಿರುವನು ಅವನೇ ಸಮಸ್ತಪ್ರಾಣಿಗಳಿಗೂ ಮೂಲಾಧಾರನೆನಿಸಿರುವನು ; ಎಲ್ಲರನ್ನೂ ನಿಷ್ಪಕ್ಷಪಾತದೃಷ್ಟಿಯಿಂದ ರಕ್ಷಿಸಬಲ್ಲನು. ಇಷ್ಟೆಲ್ಲ ಮಹಿಮೆಗಳನ್ನೊಳಗೊಂಡ ಪರಮೇಶ್ವರನ ದಿವ್ಯದರ್ಶನವೆಂದರೆ ವಿಶ್ವಾಸಪೂರ್ವಕವಾಗಿ ಮನದಲ್ಲಿ ಭಾವಿಸುವುದೇ ಆಗಿದೆ. ಈ ದೃಢಭಾವನೆಯಿಂದ ಅವನನ್ನು ಸೇವೆ ಮಾಡುವುದರಿಂದ ಜೀವನಿಗೆ ಈಶ್ವರದರ್ಶನವು ದೊರೆತು ಅದರಿಂದ ದುಃಖದ ಬಿಡುಗಡೆಯಾಗುವುದು.

ಇದರಿಂದ ಸವಿಶೇಷಬ್ರಹ್ಮದ ಜ್ಞಾನವೇ ಮುಕ್ತಿಗೆ ಸಾಧನವೆಂಬುದು ಸ್ಪಷ್ಟಪಡುತ್ತದೆ. ಜಗದ್ವ್ಯಾಪಾರವನ್ನು ನಡೆಸುವಿಕೆ, ವಿಕಾರಗಳಿಲ್ಲದಿರುವಿಕೆ, ಎಲ್ಲಕ್ಕೂ ವಿಶ್ರಾಂತಿಸ್ಥಲವಾಗಿರುವಿಕೆ, ಆತ್ಮಾನಂದದಲ್ಲಿ ವಿಹರಿಸುವಿಕೆ ಈ ಬಗೆಯ ಧರ್ಮಗಳೆಲ್ಲವೂ ವಿಶೇಷಬ್ರಹ್ಮದಲ್ಲಿ ಸಂಭವಿಸುತ್ತವೆಯೇ ಹೊರತು ನಿರ್ವಿಶೇಷಬ್ರಹ್ಮದಲ್ಲಿ ಸಂಭವಿಸಲಾರವು. ಈ ಧರ್ಮಗಳಾದರೋ ಪರಮಾತ್ಮನಲ್ಲಿ ಪ್ರಾಣರೂಪವಾದ ಶಕ್ತಿವಿಶೇಷದ ಸಾನ್ನಿಧ್ಯದಿಂದಲೇ ನೆಲಸಬಲ್ಲವು. ಆದ್ದರಿಂದಲೇ ಶ್ರುತಿ ಬ್ರಹ್ಮವನ್ನು "ಸತ್ಯಾತ್ಮ, ಪ್ರಾಣಾರಾಮಂ" ಎಂದು ಕರೆದಿದೆ. ಹೀಗೆ ಪ್ರಾಣಶಕ್ತಿಯೊಡನೆ ಆನಂದವನ್ನು ಅನುಭವಿಸುತ್ತಲೇ ಭಕ್ತಾನುಗ್ರಹಲೀಲಾವೈಭವವನ್ನೂ ನಡೆಸುತ್ತಿರುವ ಪರಶಿವಬ್ರಹ್ಮವನ್ನು ಯೋಗದಿಂದಲೂ ಭಕ್ತಿಯಿಂದಲೂ ಯಾವನು ಸಾಕ್ಷಾತ್ಕರಿಸುವನೋ ಅವನು ದುಃಖವನ್ನು ಕಳೆದುಕೊಂಡು ಇಲ್ಲಿಯೇ ನಿತ್ಯಸುಖಿಯಾಗುವನು. ಹೀಗೆ ದಯಾಳುವಾದ ಗುರುವಿನಿಂದ ಉಪದಿಷ್ಟವಾದ ಯೋಗಮಾರ್ಗವನ್ನು ಭಕ್ತನು ಆಚರಿಸಿದರೆ ಅದರಿಂದ ಪರಮಾತ್ಮನು ಸಂತುಷ್ಟನಾಗುವನು. ಇದರಿಂದಲೇ ಅವನು ಭಕ್ತನಿಗೆ ಪ್ರಸನ್ನನಾಗುವನು. ಹೀಗೆ ಪರಮಾತ್ಮನ ಸಾಕ್ಷಾತ್ಕಾರವಾದಲ್ಲದೆ ಜೀವನಿಗೆ ಪಾಶವಿಮೋಚನೆಯಾಗಲಾರದೆಂದು ಹೇಳಿದಂತಾಯಿತು. ಇದನ್ನೇ ಮುಂದೆ "ಅವನನ್ನು ತಿಳಿದವನೇ ಮೃತ್ಯುವನ್ನು ದಾಟುತ್ತಾನೆ. ಮುಕ್ತಿಗೆ ಬೇರೆ ದಾರಿಯಿಲ್ಲ" ಎಂದು ವಿಶದಪಡಿಸಲಾಗಿದೆ. ಹೀಗೆ ಪಿಂಡಾಂಡದಲ್ಲೂ ಬ್ರಹ್ಮಾಂಡದಲ್ಲೂ ಜೀವ ಪರಮರಿಬ್ಬರೂ ಕೂಡಿಯೇ ನೆಲೆಸಿರುವುದನ್ನೂ, ಈ ಎರಡು ಸ್ಥಿತಿಗಳನ್ನೂ ಮೀರಿ ಅಮೂರ್ತಪರಮಾತ್ಮನು ನೆಲೆಸಿರುವುದನ್ನೂ ಭಗವದ್ಗೀತೆಯು ಸ್ಪಷ್ಟಪಡಿಸಿದೆ. 'ಲೋಕದಲ್ಲಿ ಕ್ಷರ, ಅಕ್ಷರ ಎಂಬ ಎರಡು ಚೇತನರಿದ್ದಾರೆ. ಸಮಸ್ತ ಜೀವರೂ ಕ್ಷರವೆನಿಸಿದ್ದಾರೆ. ನಿರ್ಲಿಪ್ತನೂ ನಿರ್ವಿಕಾರನೂ ಆದ ಅಂತರ್ಯಾಮಿಯೇ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಅಕ್ಷರವೆನಿಸಿದೆ. ಇವರಿಬ್ಬರಿಗಿಂತಲೂ ಬೇರೆಯಾದ ಚೇತನನಿಗೆ ಪರಮಾತ್ಮನೆಂಬ ಹೆಸರಿದೆ. ಇವನು ಮೂರು ಲೋಕಗಳನ್ನೂ ವ್ಯಾಪಿಸಿ ಪೋಷಿಸುತ್ತ ಸ್ವತಂತ್ರನೂ ಪರಿಪೂರ್ಣನೂ ಆಗಿ ಪ್ರಭುವೆನಿಸಿದ್ದಾನೆ. ಕ್ಷರ-ಅಕ್ಷರ ಇವರಿಬ್ಬರೂ ಅಂಗ ಲಿಂಗ ಎನಿಸಿ ದೇಹದಲ್ಲಿ ನೆಲಸಿ ಇಂದ್ರಿಯಗಳ ಮೂಲಕ ವ್ಯವಹರಿಸುತ್ತಿರುವರು. ಇವರಿಬ್ಬರಿಗಿಂತ ಆಚಿನ ದಿವ್ಯತೇಜಸ್ಸೇ ಪುರುಷೋತ್ತಮವೆನಿಸಿದೆ. ಇಂತಹ ಅಮೂರ್ತ ಪರಂಜ್ಯೋತಿಯನ್ನು ವೇದವು ಸರ್ವಾಧಾರವೆಂದು ಪ್ರಶಂಸಿಸಿದೆ. ಹೀಗೆ ಗೀತೆಯು ಅಂಗಲಿಂಗಸ್ವರೂಪರೆನಿಸಿದ ಜೀವ ಪರಮಾತ್ಮರನ್ನು ಕ್ಷರ ಅಕ್ಷರ ಎಂದೂ, ಸರ್ವವ್ಯಾಪಕವಾದ ಅಮೂರ್ತಪ್ರಕಾಶವನ್ನು ಪರಮಾತ್ಮನೆಂದೂ ಕರೆದಿದೆ. ವ್ಯವಹಾರಗಳಲ್ಲಿಯೇ ಮುಳುಗಿ ಸಂಸಾರಚಕ್ರದ ಸುಳಿಯಲ್ಲಿ ಸುತ್ತುತ್ತಿರುವ ಜೀವನನ್ನು ಇಲ್ಲಿ ಕ್ಷರ ಎಂದು ಕರೆದಿದ್ದು ಯುಕ್ತವೇ ಆಗಿದೆ. ಈ ಬಗೆಯ ಅಲೆದಾಟವಿಲ್ಲದೆ, ಮಾಯೆಯನ್ನು ತನ್ನ ಅಧೀನದಲ್ಲಿಟ್ಟುಕೊಂಡು, ಜೀವರ ಕರ್ಮಗಳಿಗೆ ಸಾಕ್ಷಿಯಾಗಿ ದೇಹದಲ್ಲಿ ಇದ್ದರೂ ನಿರ್ವಿಕಾರನಾಗಿರುವುದರಿಂದ ಈಶ್ವರನು ಅಕ್ಷರನೆನಿಸಿದ್ದಾನೆ. ಇವರಿಗಿಂತ ಬೇರೆಯಾದ ಪರಮಾತ್ಮನು ಲೋಕವನ್ನಾವರಿಸಿದ್ದರೂ ಲೋಕಧರ್ಮಗಳಿಗಂಟದಂತೆ ಸರ್ವರಿಗೂ ಮುಕ್ತಿಗಾಶ್ರಯಸ್ಥಲನೆನಿಸಿ "ಪ್ರಪಂಚೋಪಶಮಂ ಶಾಂತಂ ಶಿವಮದ್ವೈತಂ ಚತುರ್ಥಂ ಮನ್ಯಂತೇ" ಎಂಬ ಶ್ರುತಿಯಲ್ಲಿ ಹೇಳಿರುವ ತ್ರಿಮೂರ್ತ್ಯತೀತ ಪರಶಿವನೆಂಬ ಹೆಸರಿನಿಂದ ಅಮೂರ್ತಸ್ಥಿತಿಯಲ್ಲಿ ಶೋಭಿಸುತ್ತ ಅಖಂಡಲಿಂಗ, ಸ್ಥಲ ಎಂಬ ವ್ಯವಹಾರಕ್ಕೆ ಯೋಗ್ಯನೆನಿಸಿದ್ದಾನೆ. ಸರ್ವವ್ಯಾಪಕವಾದ ಚೈತನ್ಯವೇ ಇಂತಹ ಲಿಂಗವೆನಿಸಿದೆ. ಈ ಅಖಂಡ ಲಿಂಗದ ಚಿತ್‌ಶಕ್ತಿಯ ಒಂದಿಷ್ಟು ಅಂಶದಲ್ಲಿಯೇ ವಿಶ್ವದ ಸಮಸ್ತ ಕ್ಷರಜೀವರೂ, ಅಕ್ಷರವೆನಿಸಿದ ಈಶ್ವರರೂ ಸೇರಿರುವರು. "ಯಸ್ಯೈಕಶಕ್ತಿಶಕಲೇ ಸಕಲಸ್ಸಮಾಪ್ತಃ? ಎಂಬಸ್ಸಲ್ಲಿ ವಿಶ್ವದ ಅಂಗಲಿಂಗಗಳೆಲ್ಲರೂ ಅಖಂಡ ಲಿಂಗದ ಅತ್ಯಲ್ಪಾಂಶವೆಂದು ಅನುಭವಿಗಳು ತಿಳಿಸಿದ್ದಾರೆ. ದೇಹದೊಳಗೂ ಹೊರಗೂ ನಡೆಯುತ್ತಿರುವ ವ್ಯವಹಾರವೆಲ್ಲವೂ ಅಮೂರ್ತಲಿಂಗದ ಶಕ್ತಿವೈಭವದಲ್ಲಿ ಒಂದು ಸಾಸಿವೆಕಾಳಿನಷ್ಟು ಅಂಶಕ್ಕೆ ಮಾತ್ರವೇ ಸೇರಿದ್ದೆಂದು ಹಿರಿಯರು ಭಾವಿಸಿದ್ದಾರೆ. ಹೀಗೆ ಪಿಂಡಾಂಡದಲ್ಲೂ ಬ್ರಹ್ಮಾಂಡದಲ್ಲೂ ಪರಮಾತ್ಮನು ಲಿಂಗರೂಪದಿಂದ ನೆಲಸಿರುವುದರಿಂದ ಇವನ ಅನುಭವವನ್ನು ಪಡೆಯಬೇಕಾದ್ದು ಜೀವನ ಕರ್ತವ್ಯವೆನಿಸಿದೆ. ಇಲ್ಲದೇ ಹೋದರೆ ಕರ್ತವ್ಯಲೋಪ ಉಂಟಾಗುವುದು. ಆದ್ದರಿಂದಲೇ ಸಿದ್ಧಾಂತಶಿಖಾಮಣಿಯು ಜೀವದುಃಖವನ್ನು "ನಿರಸ್ಯತೇ ಗುರೋರ್ಭೋಧಾತ್" ಎಂದು ಉಪದೇಶಿಸಿದ್ದು ಯುಕ್ತವಾಗಿದೆ. ಧರ್ಮಸ್ವರೂಪನಾದ ಲಿಂಗವನ್ನು ಸಾಕ್ಷಾತ್ಕರಿಸಿದವನೇ ಗುರು. ಅವನ ಬೋಧದಿಂದಲೇ ಜೀವನಿಗೆ ಮಲಪಾಶದ ದುಃಖವು ತೊಲಗಲಿದೆ. ಇವನಿಗೆ ದುಃಖವಾದರೋ ಆಣವಮಲದ ಆವರಣದಿಂದಲೇ ಬಂದಿದೆ. ಇದರಿಂದುಂಟಾಗಿದ್ದ ದುಃಖವನ್ನು ಗುರುವೇ ತನ್ನ ದಿವ್ಯೋಪದೇಶದಿಂದ ಪರಿಹರಿಸಬಲ್ಲನು. ಇದೇ ಅಂಶವನ್ನು ಮಹಾತ್ಮ ಬಸವನು ಸ್ಪಷ್ಟಪಡಿಸಿ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ದ್ದಾನೆ. "ಎನಗೆ ಭವಪಾಶ ಭವಬಂಧ ಬಂದ ಕಾರಣವೇನಯ್ಯ? ಹಿಂದಣ ಜನ್ಮದಲ್ಲಿ ಲಿಂಗವ ಮರೆದೆನಾಗಿ, ಹಿಂದಣ ಸಿರಿಯೆಲ್ಲ ಜಂಗಮವ ಜರಿದೆನಾಗಿ ನನಗೀ ಭವಪಾಶ ಬಂದಿಹುದು. ಅರಿದೊಡೆ ಹೊದ್ದಲೀವೆನೆ ಸಂಸಾರವ?" ಹೀಗೆ ಸರ್ವವ್ಯಾಪಕನಾದ ಲಿಂಗವನ್ನು ತಿಳಿಯದೆ ಲಿಂಗಜ್ಞನಾದ ಜಂಗಮನನ್ನು ನಿಂದಿಸಿದ್ದರಿಂದಲೇ ತನಗೆ ಭವಪಾಶ ಬಂದಿತೆಂದು ಅವನು ತಿಳಿಸಿರುವುದು ತನ್ನ ಆತ್ಮಪರೀಕ್ಷೆಯ ಮಹತ್ತ್ವವನ್ನು ವ್ಯಕ್ತಪಡಿಸುತ್ತದೆ. ಹಿಂದಣ ಜನ್ಮದಲ್ಲಿ ಪರಶಿವನನ್ನು ತಿಳಿದಿದ್ದರೆ ನನ್ನಲ್ಲಿ ಭವಬೀಜವೇ ಅಂಕುರಿಸುತ್ತಿರಲಿಲ್ಲವೆಂದು ಅವನು ಹೇಳಿದ ಮಾತು ವಿಶ್ವದ ಮಾನವರೆಲ್ಲರನ್ನೂ ಎಚ್ಚರಗೊಳಿಸುತ್ತಲಿದೆ. ಹೀಗೆ ಪರಮೇಶ್ವರನ ಅನುಭವದಿಂದ ಜೀವನ ದುಃಖವು ಪರಿಹರವಾಗುತ್ತದೆ ಎಂದು ತಿಳಿಸಿದ ಸಿದ್ಧಾಂತಶಿಖಾಮಣಿಯೇ ಅಂತಹ ಬುದ್ಧಜೀವನು ಜ್ಞಾನಸ್ವರೂಪನಾಗಿ ನಿರ್ಲಿಪ್ತತೆಯಿಂದ ಲೋಕಕಲ್ಯಾಣಕ್ಕಾಗಿ ಬಾಳುವನೆಂಬುದನ್ನು "ಜ್ಞಾನಶಕ್ತಿಃ ಪ್ರಕಾಶತೇ" ಎಂಬಲ್ಲಿ ಸ್ಪಷ್ಟಪಡಿಸಿದೆ.

ಹೀಗೆ ಶಿವನ ಜ್ಞಾನವೇ ಮುಕ್ತಿಗೆ ಹೇತುವೆಂದು ಹೇಳಿ ಆ ಬಗೆಯ ಜ್ಞಾನವುಳ್ಳವನನ್ನು ಇಲ್ಲಿ ಸ್ತುತಿಸಲಾಗಿದೆ.

ಋಚೋ ಅಕ್ಷರೇ ಪರಮೇ ವ್ಯೋಮನ್
ಯಸ್ಮಿನ್ ದೇವಾ ಅಧಿ ವಿಶ್ವೇ ನಿಷೇದುಃ ।
ಯಸ್ತಂ ನ ವೇದ ಕಿಮೃಚಾ ಕರಿಷ್ಯತಿ
ಯ ಇತ್ತದ್ವಿದುಸ್ತ ಇಮೇ ಸಮಾಸತೇ ॥೮॥

ಮೂರು ವೇದಗಳೂ ಯಾವನ ಸ್ವರೂಪವನ್ನು ವಿವರಿಸುತ್ತವೆಯೋ ಅಂತಹ ನಾಶರಹಿತನೂ ಪರಮಾಕಾಶಸ್ವರೂಪನೂ ಆದ ಪರಶಿವಬ್ರಹ್ಮವನ್ನೇ ಸಮಸ್ತ ದೇವತೆಗಳೂ ಆಶ್ರಯಿಸಿಕೊಂಡು ನಿಂತಿವೆ. ಎಲ್ಲರಿಗೂ ಸಮಾನವಾಗಿ ವಿಶ್ರಾಂತಿ ಸ್ಥಲವೆನಿಸಿರುವುದರಿಂದ ಪರಶಿವಬ್ರಹ್ಮವನ್ನು ಸ್ಥಲವೆಂದು ಕರೆದಿರುವುದು ಯುಕ್ತವೆನಿಸಿದೆ. ಪಂಚಭೂತಗಳಾದಿಯಾಗಿ ಎಲ್ಲ ವಸ್ತುಗಳಿಗೂ ಹೋಗಿ ಸೇರಲಿಕ್ಕೂ ಮತ್ತೆ ಹೊರಗೆ ಬರಲಿಕ್ಕೂ ಸದವಕಾಶವನ್ನು ಕಲ್ಪಿಸಿರುವುದರಿಂದಲೇ ಪರಮಾತ್ಮನಿಗೆ ಲಿಂಗವೆಂಬ ಹೆಸರು ಹೊಂದಿಕೆಯಾಗುತ್ತದೆ. ಹೀಗೆ ಲಿಂಗ, ಸ್ಥಲ ಎನಿಸಿದ ಪರಮಾತ್ಮನು ಮಾನವನ ಕಲ್ಯಾಣಕ್ಕಾಗಿ ಅವನೊಡನೆ ಹೃದಯದಲ್ಲೂ ಶಿರಸ್ಸಿನಲ್ಲೂ ಭ್ರೂಮಧ್ಯದಲ್ಲೂ ನೆಲಸಿರುವಾಗ ಅವನನ್ನು ಯಾವನು ತಿಳಿಯುವುದಿಲ್ಲವೋ ಅವನು ವೇದಗಳೆಲ್ಲವನ್ನೂ ಓದಿದರೆ ಆಗುವ ಫಲವಾದರೂ ಏನು? ಪರಮಾತ್ಮನ ಜ್ಞಾನವಿಲ್ಲದವನಿಗೆ ವೇದಾಧ್ಯಯನವೇ ವ್ಯರ್ಥವೆನಿಸುತ್ತದೆ. "ಹಲವನೋದಿದೊಡೇನು? ಹಲವ ಕೇಳಿದೊಡೇನು? ಹಲವನೆಣಿಸಿದೊಡೇನು? ಹಲವ ಗುಣಿಸಿದೊಡೇನು? ದೆಸೆದೆಸೆಗೆ ಹರಿದು ಹಂಬಲಿಸಿದೊಡೇನು? ಮುಂದು ಹಿಂದೆನ್ನದೆ ಸಂದು ಸಂದೇಹಿಸದೆ ನಂಬು ನಂಬೆಲೆ ಮನವೇ. ನಂಬಿದ ಭಕ್ತಂಗೆ ತನ್ನನಿತ್ತ ಕೂಡಲಸಂಗಯ್ಯ"

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಹೀಗೆ ಪರಮೇಶ್ವರನಲ್ಲಿ ದೃಢವಾದ ನಂಬಿಕೆಯನ್ನು ಬೆಳೆಸಿಕೊಳ್ಳದೆ ಎಷ್ಟು ಶಾಸ್ತ್ರಗಳನ್ನು ಓದಿದರೂ ಮಾನವನಿಗೆ ಆತ್ಮಕಲ್ಯಾಣ ಸಾಧನೆಯಾಗದು. "ವೇದವನ್ನು ಓದಿದರೂ ಅದರ ಅರ್ಥವನ್ನು ತಿಳಿಯದವನು ಕೊಳಕು ಬಟ್ಟೆಗಳ ಭಾರವನ್ನು ಹೊರುವ ಕತ್ತೆಯಂತಾಗುವನು" ಎಂದು ಜನರು ಹೇಳುತ್ತಾರೆ. ಆದ್ದರಿಂದ ಪರಮಾತ್ಮತತ್ತ್ವವನ್ನು ತಿಳಿಯಲಿಕ್ಕಾಗಿ ಯಾರು ಶಾಸ್ತ್ರಗಳನ್ನು ಉಪಯೋಗಿಸಿಕೊಳ್ಳುವರೋ ಅವರೇ ಬಾಳಿನಲ್ಲಿ ಕೃತಕೃತ್ಯರೆನಿಸಿ ನೆಮ್ಮದಿಯಿಂದ ಬಾಳಬಲ್ಲರು.

ಗಾಯಿತ್ರಿ ಮೊದಲಾದ ಛಂದಸ್ಸುಗಳು, ದೇವಯಜ್ಞ ಜ್ಯೋತಿಷ್ಟೋಮ ಮೊದಲಾದ ಯಜ್ಞಗಳು, ಚಾಂದ್ರಾಯಣ ಮೊದಲಾದ ವ್ರತಗಳು ಇವಿಷ್ಟೇ ಅಲ್ಲದೆ ವೇದದಲ್ಲಿ ಹರಡಿರುವ ಬೇರೆ ಎಲ್ಲಾ ಕರ್ಮಗಳನ್ನೂ, ಅದರಂತೆಯೇ ಹಿಂದೆ ಎಲ್ಲರೂ ಆಚರಿಸಿದ ಮತ್ತು ಮುಂದೆ ಆಚರಿಸಬಹುದಾದ ಕರ್ಮಗಳನ್ನೂ ಪರಮಾತ್ಮನು ತನ್ನ ಮಾಯಾ ಶಕ್ತಿಯ ಮೂಲಕ ಜನರ ಶ್ರೇಯಸ್ಸಿಗಾಗಿ ಏರ್ಪಡಿಸಿರುವನು. ಇವೆಲ್ಲವನ್ನೂ ನಡೆಸುತ್ತಿರುವ ಜೀವನು ಸ್ವತಂತ್ರನಾಗಿ ಪ್ರವರ್ತಿಸುತ್ತ ಮಾಯೆಯು ತಂದೊಡ್ಡುವ ವಿಷಯಸುಖಗಳಲ್ಲಿಯೇ ಮಗ್ನನಾಗಿ ಪರಮಾತ್ಮನನ್ನು ಮರೆತು ಭೋಗದ ಮಡಲಿನಲ್ಲಿ ಸಿಲುಕಿ ನರಳುತ್ತಿರುವನು.

ಇಷ್ಟೆಲ್ಲ ಅನರ್ಥಕ್ಕೆ ಕಾರಣವಾದ ಮಾಯೆಯ ಮತ್ತು ಮಾಯಾಪತಿ ಎನಿಸಿದ ಮಹೇಶ್ವರನ ಸ್ವರೂಪವನ್ನು ಮುಂದೆ ತಿಳಿಸುತ್ತಾನೆ.

ಮಾಯಾಂ ತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಂ ।
ತಸ್ಯಾವಯವಭೂತೈಸ್ತು ವ್ಯಾಪ್ತಂ ಸರ್ವಮಿದಂ ಜಗತ್ ॥೧೦॥

ಪರಮಾತ್ಮನಿಂದಲೇ ಬಂದು ಅವನನ್ನು ಸಂತೋಷಪಡಿಸಿ ಕೊನೆಗೆ ಅವನಲ್ಲಿಯೇ ಸೇರುವಂತಹ ಮಾಯಾಶಕ್ತಿಯನ್ನು ಅದ್ಭುತರಚನೆ ಎನಿಸಿದ ಪ್ರಕೃತಿದ್ರವ್ಯವೆಂದು ತಿಳಿಯಬೇಕು. ಇದರಿಂದಲೇ ಜಗದ್ರಚನೆಯಾಗಬೇಕಾದ್ದರಿಂದ ಸತ್ತ್ವ ರಜಸ್ಸು ತಮಸ್ಸು ಎಂಬ ಮೂರು ಬಗೆಯ ಸಾಧನಗಳು ಇದರಲ್ಲಿ ಇರಲೇಬೇಕು. ಇವುಗಳ ಮೂಲಕವೇ ಮಾಯೆ ಜಗತ್ತಿನ ಕೆಲಸಗಳನ್ನು ನಡೆಸುತ್ತಿರುವುದು. ಆದರೆ ಇಷ್ಟೆಲ್ಲವೂ ಮಾಯಾಪತಿ ಎನಿಸಿದ ಈಶ್ವರನ ಸಾನ್ನಿಧ್ಯದಿಂದಲೇ ನಡೆಯುತ್ತಿರುವುದು. ಮನೆಯಲ್ಲಿ ಪತಿ ಇದ್ದರೆ ಹೆಂಡತಿ ಎಲ್ಲವನ್ನೂ ಅನಾಯಾಸವಾಗಿ ನಡೆಸಬಲ್ಲಳು. ಪತಿ ಇಲ್ಲದ ವಿಧವೆ ನಿರಾಶಳಾಗಿ ಏನನ್ನೂ ಮಾಡಲಾರಳು. ಹಾಗೆ ಮಾಯೆ ತನ್ನ ಪತಿಯ ಸಾನ್ನಿಧ್ಯದಿಂದ ಎಲ್ಲವನ್ನೂ ಪತಿಯ ಸಂತೋಷಕ್ಕಾಗಿ ನಡೆಸುತ್ತಿರುವುದು. ಆ ಪತಿಯ ಅಂಶರೆನಿಸಿದ ತ್ರಿಮೂರ್ತಿಗಳೇ ಜಗತ್ತಿನ ವ್ಯಾಪಾರಗಳನ್ನು ನಡೆಸುತ್ತಿರುವುದರಿಂದ ಈ ಜಗತ್ತು ಆ ಮೂವರಿಂದ ತುಂಬಿಕೊಂಡಿದೆ. ಪರಮಾತ್ಮನೇ ತನ್ನ ಅತ್ಯಲ್ಪಾಂಶರೆನಿಸಿದ ತ್ರಿಮೂರ್ತಿಗಳ ಕಡೆಯಿಂದ ಜಗದ್ವ್ಯಾಪಾರವನ್ನು ನಡೆಸುತ್ತಿರುವನಾದ್ದರಿಂದ ಈ ಜಗತ್ತು ಅವನ ದಿವ್ಯತೇಜಸ್ಸಿನಿಂದಲೇ ಕೂಡಿಕೊಂಡು

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಶೋಭಿಸುತ್ತಲಿರುವುದು. ಆದ್ದರಿಂದಲೇ ಈ ಜಗತ್ತನ್ನು ಪೂರ್ಣವೆಂದು ಶ್ರುತಿ ಸಾರುತ್ತಿದೆ. ಪರಮಾತ್ಮನೂ ಪೂರ್ಣನೇ ಇದ್ದು ಅವನಿಂದ ತುಂಬಿರುವ ಈ ಜಗತ್ತೂ ಪೂರ್ಣವೇ ಆಗಿದೆ. ಗಡಿಗೆ ಮಾಡುವವನು ಶ್ರದ್ಧೆಯಿಂದಲೂ, ಆತ್ಮೀಯತೆಯಿಂದಲೂ ಮಾಡಿದರೆಯೇ ಆ ಗಡಿಗೆ ಚೆನ್ನಾಗಿ ಆಗಬಲ್ಲದು. ಮನಸ್ಸಿಲ್ಲದೆ ಮಾಡುವ ಕೆಲಸ ವೆಲ್ಲವೂ ಕೆಟ್ಟುಹೋಗುವುದು. ಶಿವಾಂಶರಾದ ತ್ರಿಮೂರ್ತಿಗಳು ಸೃಷ್ಟಿ ಸ್ಥಿತಿ ಸಂಹಾರಗಳನ್ನು ನಡೆಸಬೇಕಾದರೆ ಇವೆಲ್ಲವನ್ನೂ ಶಿವಪೂಜೆ ಎಂದು ಭಾವಿಸಿ ಅದೃಶ್ಯ ರಾಗಿಯಾದರೂ ಈ ಜಗತ್ತಿನಲ್ಲಿ ನೆಲಸಿದರೆಯೇ ಈ ಕಾರ್ಯಗಳು ಸಮರಸವಾಗಿ ನೆರವೇರಬಲ್ಲವು. ಮಾಡುವವನೇ ಇಲ್ಲದಿದ್ದರೆ ಆ ಕೆಲಸವಾದರೂ ಹೇಗೆ ನಡೆದೀತು? ಹೀಗೆ ಕೆಲಸ ಮತ್ತು ಯಜಮಾನ ಇಬ್ಬರೂ ಸತ್ಯವಾಗಿ ಇರುವುದರಿಂದಲೇ "ಪೂರ್ಣ ಮದಃ ಪೂರ್ಣಮಿದಂ" ಎಂದು ಶ್ರುತಿ ಸಾರುತ್ತಿದೆ. ಇಂತಹ ಪರಿಪೂರ್ಣಜಗತ್ತಿ ನಲ್ಲಿ ಜೀವನು ಮಾಯೆಯ ಹೊರಗಿನ ಆಕರ್ಷಣಗಳಿಗೆ ಬಲಿಯಾಗದೆ ಒಳಗೆ ಗೋಪ್ಯವಾಗಿ ನೆಲಸಿರುವ ಪರಮಾತ್ಮನ ಪರಿಚಯವನ್ನು ಪಡೆದು ತೃಪ್ತಿ ಶಾಂತಿ ಗಳನ್ನು ಬಾಳಿನಲ್ಲಿ ಅಳವಡಿಸಿಕೊಳ್ಳಲೆಂದು ಶ್ವೇತಾಶ್ವತರಮಹರ್ಷಿಯು ಅವ್ಯಾಜ ಪ್ರೇಮದಿಂದ ಬಯಸುತ್ತಾನೆ.

ಲೋಕದಲ್ಲಿ ಉಪಾದಾನವೆನಿಸಿದ ಪ್ರತಿಯೊಂದು ವಸ್ತುವಿನಲ್ಲೂ ಪರಮಾತ್ಮನೇ ಇರುವುದರಿಂದ ಅವನೇ ಎಲ್ಲಕ್ಕೂ ಉಪಾದಾನವೆನಿಸಿದ್ದರಿಂದ ಅವನು ನಡೆಸುತ್ತಿರುವ ಣಿಕ್ಷಾನುಗ್ರಹಲೀಲಾವೈಭವವನ್ನು ಇಲ್ಲಿ ತಿಳಿಸುತ್ತಾನೆ.

> ಯೋ ಯೋನಿಂ ಯೋನಿಮಧಿತಿಷ್ಠತ್ಯೇಕೋ
> ಯಸ್ಮಿನ್ನಿದಂ ಸ ಚ ವಿ ಚೈತಿ ಸರ್ವಮ್ ।
> ತಮೀಶಾನಂ ವರದಂ ದೇವಮೀಡ್ಯಂ
> ನಿಚಾಯ್ಯೇಮಾಂ ಶಾಂತಿಮತ್ಯಂತಮೇತಿ ॥೧೧॥

ಮಾಯಾಪತಿ ಎನಿಸಿದ ಈಶ್ವರನೊಬ್ಬನೇ ಜಗತ್ತಿಗೆ ಉಪಾದಾನಕಾರಣವೆನಿ ಸಿದ ಪ್ರತಿಯೊಂದು ವಸ್ತುವಿನಲ್ಲಿಯೂ ಅಂತರ್ಯಾಮಿಯಾಗಿ ನೆಲಸಿದ್ದಾನೆ. ಜೀವರ ಕರ್ಮಾನುಗುಣವಾಗಿ ಅವರನ್ನು ಆಯಾಯ ಕರ್ಮಗಳಲ್ಲಿ ಪ್ರೇರಿಸುತ್ತ ಅವನೇ ಎಲ್ಲವನ್ನೂ ನಡೆಸುತ್ತಲಿರುವನು. 'ಈಶ್ವರಸ್ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ । ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ' ಎಂದು ಗೀತೆಯಲ್ಲಿ ಈಶ್ವರನು ಮಾಯೆಯ ಕಡೆಯಿಂದ ಜೀವರಿಗೆ ದೇಹಯಂತ್ರದಲ್ಲಿ ಭ್ರಮೆಗೊಳಿಸುತ್ತಿರುವುದನ್ನು ಸ್ಪಷ್ಟವಾಗಿ ತಿಳಿಸಲಾಗಿದೆ. ಹೀಗೆ ಪರಮೇಶ್ವರನೇ ಪಂಚಭೂತಾತ್ಮಕವಾದ ಪ್ರಪಂಚವನ್ನು ಸೃಷ್ಟಿಸಿ ಕೊನೆಗೆ ತನ್ನಲ್ಲಿಯೇ ಸೇರಿಸಿ ಕೊಳ್ಳುತ್ತಿರುವನು. ಇದೆಲ್ಲವೂ ಅವನಿಗೆ ಒಂದು ಬಗೆಯ ಲೀಲೆ ಎನಿಸಿದೆ. ಸೃಷ್ಟಿ ಪ್ರಳಯಗಳೇ ಅವನಿಂದ ಆಗುತ್ತಲಿವೆ ಎಂದಮೇಲೆ ರಕ್ಷಣವೂ ಅವನಿಂದಲೇ ನಡೆದು

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಸೃಷ್ಟಿಗಾಗಿ ಮೊದಲು ಚತುರ್ಮುಖಬ್ರಹ್ಮನನ್ನು ಸೃಷ್ಟಿಸಿದನು) ಎಂದು ಹೇಳಿತ್ತು. ಈಗ ಅದರ ಬದಲಾಗಿ "ಹಿರಣ್ಯಗರ್ಭಂ ಪಶ್ಯತ ಜಾಯಮಾನಂ" ಎಂದು ಹೇಳಿದೆ. ಸೃಷ್ಟಿಕರ್ತ ಬ್ರಹ್ಮನ ಸೃಷ್ಟಿಯನ್ನು ಮೊದಲು ತಿಳಿಸಿ ಇಲ್ಲಿ ಅವನನ್ನು ಅನುಗ್ರಹಿಸುವ ಸದಿಚ್ಛೆಯಿಂದ ಪರಮೇಶ್ವರನು ಕೃಪಾದೃಷ್ಟಿಯಿಂದ ನೋಡಿದನೆಂದು ತಿಳಿಸಲಾಗಿದೆ. ಲೋಕದಲ್ಲಿಯೂ ಯಜಮಾನನು ಒಬ್ಬ ಅಧಿಕಾರಿಯನ್ನು ಒಂದು ಕೆಲಸಕ್ಕೆ ನೇಮಕ ಮಾಡುವಾಗ, ಅವನಿಗೆ ಒಂದು ಗುರುತರನಾದ ಹೊರೆಯನ್ನು ಹೊರಿಸುವಾಗ ಅವನನ್ನು ಪ್ರೇಮದೃಷ್ಟಿಯಿಂದ ನೋಡುವ ವಾಡಿಕೆ ಇದೆ. ಹಾಗೆ ನೋಡುವುದರಿಂದ ಇವನಲ್ಲಿರುವ ದಿವ್ಯಶಕ್ತಿ ಆ ಅಧಿಕಾರಿಯಲ್ಲಿ ನೆಲೆಗೊಳ್ಳುವುದು. ಅದರಿಂದ ಅವನಿಗೆ ತನ್ನ ಕೆಲಸವನ್ನು ನಡೆಸುವ ಚಾತುರ್ಯವು ಬರುವುದು. ಹೀಗೆಯೇ ಪರಮೇಶ್ವರನು ಜಗತ್ಸೃಷ್ಟಿಯನ್ನು ಬ್ರಹ್ಮನ ಕಡೆಯಿಂದ ನಡೆಸಲಿಕ್ಕಾಗಿ ಪ್ರೇಮದಿಂದ ಅವನನು ನೋಡಿ ಅನುಗ್ರಹಿಸಿದನೆಂದು ಈ ಮಂತ್ರದಲ್ಲಿ ತಿಳಿಸಲಾಗಿದೆ. ॥ ೧೨ ॥

ಹೀಗೆ ಬ್ರಹ್ಮಾದಿದೇವತೆಗಳಿಗೆ ಅಧಿಪತಿಯೂ, ಲೋಕಗಳೆಲ್ಲಕ್ಕೆ ಆಧಾರನೂ, ಸರ್ವರಿಗೂ ಪ್ರೇರಕನೂ ಆದ ಶಿವನ ಸೇವೆ ತನಗೆ ದೊರಕಲೆಂದು ಪ್ರಾರ್ಥಿಸುತ್ತಾನೆ.

ಯೋ ದೇವಾನಾಮಧಿಪೋ ಯಸ್ಮಿನ್ ಲೋಕಾ ಅಧಿಶ್ರಿತಾಃ ।
ಯ ಈಶೇ ಅಸ್ಯ ದ್ವಿಪದಶ್ಚತುಷ್ಪದಃ ಕಸ್ಮೈ ದೇವಾಯ ಹವಿಷಾ ವಿಧೇಮ ॥

ಯಾವ ಪರಮೇಶ್ವರನೇ ಚತುರ್ಮುಖ ಮೊದಲಾದ ದೇವತೆಗಳೆಲ್ಲರಿಗೂ ಸ್ವಾಮಿ ಎನಿಸಿರುವನೋ, ಯಾವನನ್ನು ಲೋಕಗಳೆಲ್ಲವೂ ಆಶ್ರಯಿಸಿವೆಯೋ, ಯಾವನು ನಾಲ್ಕು ಪಾದಗಳಿರುವ ಪಶುಗಳಿಗೂ, ಎರಡು ಪಾದಗಳಿರುವ ಮನುಷ್ಯ ಮೊದಲಾದ ಜೀವರೆಲ್ಲರಿಗೂ ನಿಯಾಮಕನಾಗಿರುವನೋ ಇಂತಹ ಆನಂದಮಯನಾದ ಪರಮಾತ್ಮನನ್ನು ಹವಿಸ್ಸು, ಪತ್ರ, ಪುಷ್ಪಗಳಿಂದ ಅರ್ಚಿಸಿ ಸಂತೋಷಪಡಿಸುವುದು ಮಾನವನ ಕರ್ತವ್ಯವೆನಿಸಿದೆ. ಅವನ ಸೇವೆಗೆ ದೇಹವನ್ನು ದಂಡಿಸುವುದೇ ತಪಸ್ಸೆನಿಸುತ್ತದೆ. ಇದೇ ಮುಖ್ಯವಾದ ಅರ್ಚನೆ. "ತನು ನಿಮ್ಮ ಪೂಜಿಸುವ ಕೃಪೆಗೆ ಸಂದುದು. ಮನ ನಿಮ್ಮ ನೆನೆವ ಧ್ಯಾನಕ್ಕೆ ಸಂದುದು." ಹೀಗೆ ಅಲ್ಲಮದೇವನು ಮಾನವನಿಗೆ ತನು ಮನ ಪ್ರಾಣಗಳನ್ನು ಪರಮಾತ್ಮನ ಸೇವೆಗೆ ವಿನಿಯೋಗಿಸುವ ದಿವ್ಯ ಆದರ್ಶವನ್ನು ನೀಡಿರುವ ಮಾನವನು ಭೋಗಿಸುವ ಪದಾರ್ಥಗಳೆಲ್ಲವನ್ನೂ ಭಕ್ತಿಯಿಂದ ಪರಮಾತ್ಮನಿಗೆ ಅರ್ಪಿಸುವುದನ್ನು ಎಷ್ಟು ಚೆನ್ನಾಗಿ ಕಲಿತರೆ ಅಷ್ಟು ಹೆಚ್ಚಾಗಿ ತೃಪ್ತಿ ಶಾಂತಿಗಳು ಅವನಲ್ಲಿ ನೆಲಸುತ್ತವೆ. ಪ್ರತಿಯೊಂದು ಭೋಗ್ಯವಸ್ತುವಿನಲ್ಲೂ ಇರುವ ರೂಪ, ರುಚಿ, ತೃಪ್ತಿ ಎಂಬುವನ್ನು ಕ್ರಮವಾಗಿ ಇಷ್ಟಪ್ರಾಣಭಾವಲಿಂಗಗಳಿಗೆ ಅರ್ಪಿಸಿ ಅವನ್ನು ಭೋಗಿಸುವುದರಿಂದ ಮಾನವನು ಪ್ರಸಾದಜೀವಿ ಎನಿಸುವನು. ಹೀಗೆ ಮಾನವರೆಲ್ಲರೂ ಪದಾರ್ಥಜೀವಿಗಳೆನಿಸದೆ ಪ್ರಸಾದಜೀವಿಗಳಾಗಿ ನೆಮ್ಮದಿಯಿಂದ ಬಾಳಲೆಂಬುದೆ ಶ್ವೇತಾಶ್ವತರಮಹರ್ಷಿಯ ಬಯಕೆಯಾಗಿದೆ. ॥೧೩॥

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

**ಸೂಕ್ಷ್ಮಾತಿಸೂಕ್ಷ್ಮಂ ಕಲಿಲಸ್ಯ ಮಧ್ಯೇ ವಿಶ್ವಸ್ಯ ಸ್ರಷ್ಟಾರಮನೇಕರೂಪಂ ।
ವಿಶ್ವಸ್ಯೈಕಂ ಪರಿವೇಷ್ಟಿತಾರಂ ಜ್ಞಾತ್ವಾ ಶಿವಂ ಶಾಂತಿಮತ್ಯಂತಮೇತಿ ॥**

ಪರಮಾತ್ಮಜ್ಞಾನವೇ ಮುಕ್ತಿಗೆ ಹೇತುವೆಂದು ಮತ್ತೆ ತಿಳಿಸುತ್ತಾನೆ.

ಪರಮಾತ್ಮನು ಸೂಕ್ಷ್ಮವಸ್ತುಗಳೆಲ್ಲಕ್ಕೂ ಸೂಕ್ಷ್ಮನಾಗಿರುವನು. 'ಅಣೋರಣೀಯಾನ್' ಎಂದು ಪರಮಾತ್ಮನನ್ನು ಶ್ರುತಿಯು ವರ್ಣಿಸಿದೆ. ಅವನೇ ಕಾರಣನೂ ಕಾರ್ಯವೂ ಆಗಿರುವನು. ಅದರಂತೆಯೇ ಕಾರಣವು ಕಾರ್ಯವಾಗಿ ಪರಿಣಮಿಸಲು ಮಧ್ಯದ ಅವಸ್ಥೆಯೂ ಅವನೇ ಆಗಿರುವನು. ಅವನೇ ಜಗತ್ತನ್ನು ಸೃಷ್ಟಿಸಿ ಅದರೊಳಗೆ ತಾನೇ ಪ್ರವೇಶಿಸಿರುವುದರಿಂದ ಅನೇಕ ಬಗೆಯಾಗಿದ್ದರೂ ತನಗೆ ಸಮಾನವಾದ ಬೇರೆ ವಸ್ತುವೇ ಇಲ್ಲದ್ದರಿಂದ ತಾನು ಒಬ್ಬನೇ ಇರುವನು. 'ಏಕೋ ಹಿ ದೇವಃ ಖಲು ನಾಮ ನಾನಾ' ಎಂದು ಮಹಾತ್ಮ ಬಸವಣ್ಣನು ಏಕದೇವವಾದವನ್ನು ಜಗತ್ತಿಗೆ ಸಾರಿರುವನು. 'ಏಕಂ ಸದ್ವಿಪ್ರಾ ಬಹುಧಾ ವದಂತಿ' ಎಂದು ಶ್ರುತಿಯೇ ಪರಮಾತ್ಮನೊಬ್ಬನೇ ಇರುವನೆಂಬುದನ್ನು ಮುಕ್ತಕಂಠದಿಂದ ಜಗತ್ತಿಗೆ ಸಾರುತ್ತಿದೆ. ಹೀಗೆ ಪರಮಾತ್ಮನೇ ಜಗತ್ತನ್ನಾವರಿಸಿದ್ದರೂ ತಾನೊಬ್ಬನೇ ಆತ್ಮಾರಾಮನಾಗಿ ಶೋಭಿಸುತ್ತಿರುವುದರಿಂದ ಇಂತಹ ಮೂರ್ತಾಮೂರ್ತಸ್ವರೂಪದ ಪರಮಶಿವನನ್ನು ಕಂಡವನೇ ಮತ್ತೆ ಹುಟ್ಟದಂತೆಯೂ, ದುಃಖದ ಸೋಂಕಿಲ್ಲದೆಯೂ ಇರುವ ಶಾಂತಿರೂಪವಾದ ಮೋಕ್ಷಸುಖವನ್ನು ಪಡೆದು ಅನುಭವಿಸಬಲ್ಲನು. ॥ ೧೪ ॥

ಹೀಗೆ ಶಿವನೇ ಕಾರಣವೂ ಕಾರ್ಯವೂ ಮಧ್ಯದ ಅವಸ್ಥೆಯೂ ಆಗಿರುವನೆಂದು ತಿಳಿಸಿ ಮಧ್ಯಕಾಲದಲ್ಲಿ ಎಲ್ಲರನ್ನೂ ಅವನೇ ರಕ್ಷಿಸುವನೆಂಬುದನ್ನು ಈಗ ತಿಳಿಸುತ್ತಾನೆ.

**ಸ ಏವ ಕಾಲೇ ಭುವನಸ್ಯ ಗೋಪ್ತಾ ವಿಶ್ವಾಧಿಪಃ ಸರ್ವಭೂತೇಷು ಗೂಢಃ।
ಯಸ್ಮಿನ್ಯುಕ್ತಾ ಬ್ರಹ್ಮರ್ಷಯೋ ದೇವತಾಶ್ಚ ತಮೇವಂ ಜ್ಞಾತ್ವಾ ಮೃತ್ಯು-
ಪಾಶಾಂಶ್ಛಿನತ್ತಿ ॥೧೫॥**

ಆಯಾಯಕಾಲದಲ್ಲಿ ಜಗತ್ತೆಲ್ಲವನ್ನೂ ಪರಮಾತ್ಮನೇ ರಕ್ಷಿಸುತ್ತಿರುವುದರಿಂದ ಪತಿ ಎನಿಸಿರುವನು. ಆದರೆ ಶಕ್ತಿ ಇಲ್ಲದವನು ಎಂದಿಗೂ ಪತಿ ಎನಿಸಲಾರನು. ಹಾಗೆ ರಕ್ಷಣಸಾಮರ್ಥ್ಯವಿರುವುದರಿಂದಲೇ ಅವನು ಎಲ್ಲರಿಗೂ ಸ್ವಾಮಿ ಎನಿಸಿರುವನು. ಆದರೂ ಅವನು ಯಾರಿಗೂ ಪ್ರತ್ಯಕ್ಷಗೋಚರನಾಗುವಂತಿಲ್ಲ. ಅವನ ಕಾರ್ಯದಿಂದ ಅವನನ್ನು ತಿಳಿಯಬೇಕೇ ಹೊರತು ಬೇರೆ ಯಾವ ರೀತಿಯಲ್ಲೂ ಅವನು ಅನುಭವಗೋಚರನಾಗುವಂತಿಲ್ಲ. ಅವನು ಎಲ್ಲ ಪ್ರಾಣಿಗಳಲ್ಲೂ ಗೋಪ್ಯವಾಗಿ ನೆಲಸಿರುವುದರಿಂದ ಅವನನ್ನು ತಿಳಿಯಲು ಎಲ್ಲರಿಗೂ ಸಾಧ್ಯವಿಲ್ಲ. ಇಂತಹ ಪರಶಿವಬ್ರಹ್ಮದಲ್ಲಿ ಸನಕಾದಿಮಹರ್ಷಿಗಳೂ, ಚತುರ್ಮುಖಬ್ರಹ್ಮನೇ ಮೊದಲಾದ ದೇವತೆಗಳೂ ಸಮರಸವಾಗಿ ಬೆರೆತು ಯೋಗಾನಂದವನ್ನು ಅನುಭವಿಸುತ್ತಿರುವರು. ಇಷ್ಟೊಂದು ಅದ್ಭುತವಾದ ಮಹಿಮೆಯುಳ್ಳ ಪರಮಾತ್ಮನನ್ನು ನಿರ್ಮಲವಾದ ಭಾವನೆಯಿವದ ಪವಿತ್ರವು ನಿರ್ಮಲವು ಆದ ಮನಸ್ಸಿನಲ್ಲಿ ಅನುಭವಿಸಿದ ಸಾಧಕನಿಗೆ ಮಾತ್ರವೇ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಆಣವ ಮಾಯೇಯ ಕಾರ್ಮಿಕವೆಂಬ ಮಲಪಾಶಗಳು ತೊಲಗುತ್ತವೆ. ಹೀಗೆ ಇಲ್ಲಿ ಮಹಿಮಾಶಾಲಿಯಾದ ಪರಮಾತ್ಮನ ಜ್ಞಾನವೇ ಮಲಪಾಶವನ್ನು ಪರಿಹರಿಸಬಲ್ಲದೆಂದು ಹೇಳಿದ್ದರಿಂದ ಸವಿಶೇಷಬ್ರಹ್ಮದ ಜ್ಞಾನವೇ ಮುಕ್ತಿಗೆ ಸಾಧನವೆಂಬುದು ಸ್ಪಷ್ಟವಾಯಿತು. ಇದರಿಂದ ಪರಶಿವಬ್ರಹ್ಮವನ್ನು ನಿರ್ವಿಶೇಷವೆಂದು ವಾದಿಸುವ ಮತವು ತಿರಸ್ಕೃತವಾಯಿತು. ||೧೫||

ಪರಮಾತ್ಮನನ್ನು ತಿಳಿಯುವುದು ಕಷ್ಟವೆಂದೂ ಆದರೂ ಅವನ ಜ್ಞಾನದಿಂದಲೇ ಪಾಶ ವಿಮೋಚನವಾಗುವುದೆಂದೂ ಹೇಳಿದ್ದರಿಂದ ಬ್ರಹ್ಮಜ್ಞಾನಕ್ಕಾಗಿ ಪ್ರವೃತ್ತಿ ಹುಟ್ಟಬೇಕಾದರೆ ಮುಮುಕ್ಷುವಿನ ಬಹಳ ಜಾಗರೂಕತೆಯನ್ನು ಇಲ್ಲಿ ತಿಳಿಸುತ್ತಾನೆ.

ಘೃತಾತ್ಪರಂ ಮಂಡಮಿವಾತಿಸೂಕ್ಷ್ಮಂ ಜ್ಞಾತ್ವಾ ಸರ್ವಭೂತೇಷು ಗೂಢಮ್
ವಿಶ್ವಸ್ಯೈಕಂ ಪರಿವೇಷ್ಟಿತಾರಂ ಜ್ಞಾತ್ವಾ ದೇವಂ ಮುಚ್ಯತೇ ಸರ್ವಪಾಶೈಃ ||

ತುಪ್ಪದ ಮೇಲಿರುವ ಸಾರದಂತೆ ಅತಿಸೂಕ್ಷ್ಮವಾಗಿ ಪರಮಾತ್ಮನು ಎಲ್ಲಾ ಪ್ರಾಣಿಗಳಲ್ಲಿಯೂ ಗೋಪ್ಯವಾಗಿ ನೆಲಸಿರುವನು. ಎಲ್ಲ ಕಡೆಗಳಲ್ಲಿ ಇದ್ದರೂ ಅವನನ್ನು ತಿಳಿಯುವುದು ಕಷ್ಟವಾಗಿದೆ. ಅವನ ಬಗ್ಗೆ ಇದೊಂದು ವೈಚಿತ್ರ್ಯವೆನಿಸಿದೆ. ಹೀಗೆ ವಿಶ್ವವನ್ನೇ ವ್ಯಾಪಿಸಿರುವ ಪರಮಾತ್ಮನನ್ನು ಸಾಕ್ಷಾತ್ಕರಿಸಿದವನೇ ಎಲ್ಲಾ ಪಾಶಗಳಿಂದಲೂ ಬಿಡುಗಡೆಯಾಗುವನು. ಪರಮಾತ್ಮಜ್ಞಾನದಿಂದಲೇ ಅವನು ಮೃತ್ಯುವೆಂಬ ಪಾಶವನ್ನು ಪರಿಹರಿಸಿಕೊಳ್ಳುತ್ತಾನೆ. ಇಲ್ಲಿ ಮೃತ್ಯುವನ್ನು ಪಾಶವೆಂದು ತಿಳಿಸಿದ್ದರಿಂದ "ಭಿನತ್ತಿ" ಎಂದು ಪ್ರಯೋಗಿಸಲಾಗಿದೆ. ಮಲವೆಂಬ ಮೃತ್ಯುವನ್ನು ಭೇದಿಸಲು ಶಿವಜ್ಞಾನವೇ ಶಸ್ತ್ರವೆನಿಸಿದೆ. ಇಂತಹ ಅದ್ಭುತವಾದ ತೇಜೋವಿಶೇಷವುಳ್ಳ ಪರಶಿವಬ್ರಹ್ಮದ ಜ್ಞಾನವೇ ಮಾನವನ ಅವಿದ್ಯಾರೂಪವಾದ ಮಲವನ್ನು ಪರಿಹರಿಸಬಲ್ಲದೆಂದು ಹೇಳಿದ್ದರಿಂದ ಸವಿಶೇಷಬ್ರಹ್ಮದ ಜ್ಞಾನವೇ ಮುಕ್ತಿಗೆ ಹೇತುವೆಂಬುದು ಸ್ಪಷ್ಟವಾಯಿತು. ಪರಮಾತ್ಮನ ಚಿತ್‌ಶಕ್ತಿಯೇ ಸಂಕುಚಿತವಾಗಿ ಚಿತ್ತವೆನಿಸಿ ಮೂರು ಬಗೆಯ ಮಲಗಳಾಗಿ ಪರಿಣಮಿಸಿತ್ತು. ಇಷ್ಟ ಪ್ರಾಣ ಭಾವಾತ್ಮಕನಾದ ಪರಶಿವನ ನಿತ್ಯಸಂಪರ್ಕದಿಂದ ಈ ಮೂರು ಮಲಗಳೂ ತೊಲಗಿ ಮಾನವನು ಮುಕ್ತನಾಗುವ ಪ್ರಯುಕ್ತ ಆ ಪರಶಿವಬ್ರಹ್ಮವು ನಿರ್ವಿಶೇಷವೆನಿಸಲಾರದು. ಶಕ್ತಿ ಸಂಕೋಚವು ವಿಕಾಸಗೊಳ್ಳುವುದೇ ಮಾನವಜೀವನದ ಗುರಿಯಾಗಿರುವುದರಿಂದ ಸಂಕೋಚವಿಕಾಸಗಳು ನಿರ್ವಿಶೇಷಬ್ರಹ್ಮದಲ್ಲಿ ಹೊಂದಿಕೆಯಾಗುವಂತಿಲ್ಲ. ಪರಮಾತ್ಮನೇ ಶಕ್ತಿಸಂಕೋಚದಿಂದ ಜೀವನಾಗಿದ್ದು ಶಕ್ತಿವಿಕಾಸದಿಂದ ಮತ್ತೆ ಪರಮಾತ್ಮನೇ ಆಗಬೇಕಾಗಿರುವುದರಿಂದ ಅವನಲ್ಲಿ ಶಕ್ತಿ ಎಂಬ ವಿಶೇಷವನ್ನು ಅವಶ್ಯವಾಗಿ ಒಪ್ಪಲೇಬೇಕಾದ ಪ್ರಯುಕ್ತ ನಿರ್ವಿಶೇಷಬ್ರಹ್ಮವಾದವು ಅನುಭವಕ್ಕೆ ಹೊಂದುವುದಿಲ್ಲ. ಪರಮಾತ್ಮನಲ್ಲಿರುವ ಆ ಶಕ್ತಿಯೂ ಪ್ರಾಣರೂಪದಿಂದ ಎಡೆಬಿಡದಂತೆ ಬೆರೆತಿರುವುದರಿಂದ ಅದಕ್ಕೂ ಅವನಿಗೂ ಎಂದೆಂದಿಗೂ ವಿಯೋಗವು ಸಂಭವಿಸುವಂತಿಲ್ಲ.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಈ ಶಕ್ತಿವೈಶಿಷ್ಟ್ಯದಿಂದಲೇ ಶಿವನಿಗೂ ಶಿವಾಂಶನಾದ ಜೀವನಿಗೂ ಸಹಜವಾಗಿ ಭೇದವು ಸಂಭವಿಸಿದೆ. ಶಿವನು ಚಿಚ್ಛಕ್ತಿವಿಶಿಷ್ಟನಾದರೆ ಜೀವನು ಚಿತ್ತಶಕ್ತಿವಿಶಿಷ್ಟನಾಗಿರುವನು. ಹೀಗೆ ಶಕ್ತಿಸಂಬಂಧದಿಂದ ಭಿನ್ನರಾಗಿರುವ ಶಿವ ಜೀವರಿಗೆ ಅದ್ವೈತವು ಹೊಂದುವುದೇ ಹೊರತು ಪೂರ್ತಿ ಭಿನ್ನರಾದವರಿಗೂ, ಪೂರ್ತಿ ಅಭಿನ್ನರಾದವರಿಗೂ ಅದು ಎಂದಿಗೂ ಹೊಂದುವುದಿಲ್ಲ. ಶಿವ ಜೀವರು ಪೂರ್ತಿ ಅಭಿನ್ನರೇ ಆಗಿದ್ದರೆ ಅವರಿಗೆ ಅದ್ವೈತವನ್ನು ಹೇಳಲೇಬೇಕಾಗಿರಲಿಲ್ಲ. ಪೂರ್ತಿ ಭಿನ್ನರೇ ಆಗಿದ್ದರೆ ಅವರಿಗೆ ಅದ್ವೈತವು ಸಂಭವಿಸುವುದೇ ಇಲ್ಲ. ಆದರೆ ಜೀವನು ಶಿವನ ಅಂಶವೇ ಆಗಿದ್ದು ಶಕ್ತಿಸಂಕೋಚದಿಂದ ಭಿನ್ನನಾಗಿರುವ ಪ್ರಯುಕ್ತ ನಿರಂತರೋಪಾಸನದಿಂದ ಅವನು ಶಕ್ತಿವಿಕಾಸದ ಮೂಲಕ ಶಿವನೇ ಆಗುವುದರಲ್ಲಿ ಆಶ್ಚರ್ಯವಿಲ್ಲ. ಹೀಗೆ ಶಿವಜೀವರಿಗೆ ಭೇದವಿದ್ದು ಆ ಭೇದವು ಕ್ರಮವಾಗಿ ತೊಲಗಿ ಅಭೇದವುಂಟಾಗಬೇಕಾದರೆ ಪರಮಶಿವನಲ್ಲಿ ಶಕ್ತಿವಿಶೇಷವನ್ನು ಒಪ್ಪಲೇಬೇಕು. ||೧೬||

ಏಷ ದೇವೋ ವಿಶ್ವಕರ್ಮಾ ಮಹಾತ್ಮಾ ಸದಾ ಜನಾನಾಂ ಹೃದಯೇ ಸನ್ನಿವಿಷ್ಟಃ |
ಹೃದಾ ಮನೀಷಾ ಮನಸಾಭಿಕ್ಲ್ಪ್ತೋ ಯ ಏತದ್ವಿದುರಮೃತಾಸ್ತೇ ಭವಂತಿ||

ಪರಮಾತ್ಮನು ಎಲ್ಲರಲ್ಲೂ ಗೋಪ್ಯವಾಗಿರುವನೆಂಬ ಅಂಶವನ್ನೇ ವಿಶದಪಡಿಸುತ್ತಾನೆ. ಜಗತ್ತಿನ ಸೃಷ್ಟಿ ಸ್ಥಿತಿ ಪ್ರಳಯಗಳೆಂಬ ಸಮಸ್ತಕಾರ್ಯಗಳನ್ನು ನಡೆಸುತ್ತ ವಿಶ್ವಕ್ಕೂ ಕಾರಣನೆನಿಸಿ ಅನಿರ್ವಚನೀಯವೂ ಅದ್ಭುತವೂ ಆದ ಮಹಾಮಹಿಮೆಯುಳ್ಳ ಮಹಾದೇವನು ನಮ್ಮೆಲ್ಲರ ಎದೆಗುಹೆಯಲ್ಲಿ ಯಾವಾಗಲೂ ಅಂದರೆ ಒಂದು ಕ್ಷಣಕಾಲವೂ ಅಗಲದಂತೆ ನೆಲಸಿರುವನು. ಇಂತಹ ಪರಮಾತ್ಮನ ಸಂಸಾರದ ಪಾಶವನ್ನು ಪರಿಹರಿಸಲು ಸಮರ್ಥನೆನಿಸಿ ವಿಷಯಗಳಿಂದ ದೂರವಾಗಿರುವ ಮನಸ್ಸಿನಿಂದಲೂ ಅದೇ ಬಗೆಯ ಬುದ್ಧಿಯಿಂದಲೂ ಸಾಧಕರಿಗೆ ಅನುಭವಗೋಚರವಾಗಬಲ್ಲನು. ಮನಸ್ಸೇ ಮನುಷ್ಯರ ಬಂಧನಕ್ಕೂ ಪಾಶವಿಮೋಚನೆಗೂ ಕಾರಣವೆಂದು ಅನುಭವಿಗಳು ಹೇಳುತ್ತಾರೆ. "ಮನಸ್ಸು ವಿಷಯಗಳಲ್ಲಾಸಕ್ತವಾದರೆ ಜೀವನಿಗೆ ಬಂಧನವುಂಟಾಗುತ್ತದೆ. ಅದು ನಿರ್ವಿಷಯವೆನಿಸಿದರೆ ಆಗಲೇ ಬಂಧವು ತೊಲಗುತ್ತದೆ" ಎಂದು ಅನುಭವಿಗಳು ಹೇಳುತ್ತಾರೆ. ಯಾವನಿಗೆ ಮನಸ್ಸು ಮತ್ತು ಬುದ್ಧಿ ಇವೆರಡೂ ವಿಷಯಚಿಂತನೆಯಿಲ್ಲದೆ ಪ್ರಶಾಂತವಾಗಿರುತ್ತವೆಯೋ ಅಂತವನಿಗೆ ಮಾತ್ರವೇ ಪರಮಾತ್ಮನು ಸುಲಭನಾಗುವನು. ಮನಸ್ಸಿನಲ್ಲಿ ವಿಷಯಗಳನ್ನು ಚಿಂತಿಸುವವನಿಗೆ ಪರಮಾತ್ಮನ ಪ್ರಕಾಶವು ಎಂದೆಂದಿಗೂ ಪರಿಚಿತವಾಗುವಂತಿಲ್ಲ. ಯಾರು ಈ ರಹಸ್ಯವನ್ನು ಅರಿಯುವರೋ ಅವರೂ ಸಹ ಕ್ರಮವಾಗಿ ಪರಮಾತ್ಮನ ಉಪಾಸನವೇ ಮೊದಲಾದ ಉಪಾಯಗಳಲ್ಲಿ ತೊಡಗಿ ಅವನ ಸಾಕ್ಷಾತ್ಕಾರದಿಂದ ಅಮೃತರಾಗುತ್ತಾರೆ. ಹೀಗೆ ನಿರ್ಮಲಹೃದಯರಾದ ಸಾಧಕರೆಲ್ಲರಿಗೂ ಪರಮಾತ್ಮನ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಪರಿಚಯವನ್ನು ಪಡೆಯಲು ಪ್ರವೃತ್ತಿ ಹುಟ್ಟಲೆಂಬ ಸದಾಶಯದಿಂದ ಉಪಾಸನ ಮಾರ್ಗದ ಬಗ್ಗೆ ಆಗಾಗ್ಗೆ ತಿಳಿಸಲಾಗಿದೆ. ಇದನ್ನು ತಿಳಿದು ಸಾಧಕರು ತಮ್ಮ ಹೃದಯದಲ್ಲಿಯೇ ಸಹಜವಾಗಿ ಶೋಭಿಸುತ್ತಿರುವ ಮಹಾಲಿಂಗಸ್ವರೂಪನಾದ ಪರ ಮಾತ್ಮನನ್ನು ತಿಳಿದು ಅವನೊಡಗೂಡಿ ತೃಪ್ತಿಯಿಂದ ಲೋಕದಲ್ಲಿ ವ್ಯವಹರಿಸುತ್ತ ಸುಖವಾಗಿ ಬಾಳಲೆಂದು ಮಹರ್ಷಿಯು ನಿರೀಕ್ಷಿಸುತ್ತಾನೆ. ||೧೭||

ಯದಾ ತಮಸ್ತನ್ನ ದಿವಾ ನ ರಾತ್ರಿರ್ನ ಸನ್ನ ಚಾಸಚ್ಛಿವ ಏವ ಕೇವಲಃ
ತದಕ್ಷರಂ ತತ್ಸವಿತುರ್ವರೇಣ್ಯಂ ಪ್ರಜ್ಞಾ ಚ ತಸ್ಮಾತ್ಪ್ರಸೃತಾ ಪುರಾಣೀ ||

ಜಗತ್ತಿಲ್ಲಕ್ಕೂ ಕಾರಣನೆನಿಸಿದ ಅಮೂರ್ತಪರಮೇಶ್ವರನು ಆದಿಯಲ್ಲಿಯೇ ಇದ್ದನೆಂದು ಹೇಳಿದ್ದರಿಂದ ಅವನು ಸನಾತನನೆನಿಸಿ ಯಾವಾಗಲೂ ಯಾವ ವಿಕಾರ ಗಳಿಗೂ ಸಿಕ್ಕದೆ ಇರುವನೆಂಬುದನ್ನು ಇಲ್ಲಿ ತಿಳಿಸುತ್ತಾನೆ. ಯಾವ ಪ್ರಳಯದಲ್ಲಿ ಯಾವೊಂದು ವಸ್ತುವಿನ ವಿವೇಚನೆಯೂ ಆಗದಷ್ಟು ಗಾಢವಾಗಿ ಅಂಧಕಾರವು ವ್ಯಾಪಿಸಿತ್ತೋ ಆಗ ಹಗಲು ರಾತ್ರಿಗಳೆಂಬ ಭೇದವಾಗಲೀ, ಸತ್ ಅಸತ್ ಎಂಬ ವಿವೇಚನೆಯಾಗಲೀ ಉಂಟಾಗಲು ಅವಕಾಶವೇ ಇರಲಿಲ್ಲ. ಸೂರ್ಯನೂ ಸಹ ಸೂಕ್ಷ್ಮ ಸ್ಥಿತಿಯಲ್ಲಿದ್ದುದರಿಂದ ಅವನ ಚಲನ ವಲನಗಳಿಗ ಎಡೆಯೇ ಇರಲಿಲ್ಲ. ಆದ್ದರಿಂದ ಆಗ ತಮಸ್ಸೇ ಎಲ್ಲಾ ಕಡೆಯಲ್ಲೂ ವ್ಯಾಪಿಸಿತ್ತು. ಇಂತಹ ಮಹಾ ಪ್ರಳಯಾವಸ್ಥೆಯಲ್ಲಿ ಹಗಲು ರಾತ್ರಿಗಳ ವಿಭಾಗವೇ ಇಲ್ಲದ್ದರಿಂದ ಆ ಕಾಲದಲ್ಲಿ ಸದಸದ್ವಸ್ತುಗಳ ವ್ಯವಹಾರವೂ ಇರಲಿಲ್ಲ. ಈ ಬಗೆಯ ವ್ಯವಹಾರವೆಲ್ಲವೂ ಸೃಷ್ಟಿಯ ಅನಂತರವೇ ಸಂಭವಿಸಿತು. ಆದ್ದರಿಂದ ಇದು ಯಾವುದೂ ಆಗ ಇರಲಿಲ್ಲ. ಅಂತಹ ಕಾಲದಲ್ಲೂ ಸದಸದ್ವಸ್ತುಗಳೆಲ್ಲಕ್ಕೂ ವಿಶ್ರಾಂತಿಸ್ಥಳವೆನಿಸಿದ ಪರಮಾತ್ಮನೊಬ್ಬನೇ ಆತ್ಮಾರಾಮನಾಗಿ ನಿತ್ಯಾನಂದವನ್ನು ಅನುಭವಿಸುತ್ತ ಶಾಂತನಾಗಿದ್ದನು. ಅವನಲ್ಲಿ ಸದಸದ್ವಸ್ತುಗಳೆರಡೂ ಅವ್ಯಕ್ತವಾಗಿ ನೆಲಸಿದ್ದುದರಿಂದ ಆಗಲೂ ಅವಕ್ಕಾಶ್ರಯವನ್ನು ನೀಡಿದ ಪರಮಾತ್ಮನು ಸರ್ವರಿಗೂ ಶಿವ= ಮಂಗಳಕರನೆನಿಸಿದ್ದು ಸಾರ್ಥಕವಾಗಿದೆ. ಆ ಪ್ರಳಯದಲ್ಲೂ ಅವನೊಬ್ಬನೇ ಅದ್ವಿತೀಯನೆನಿಸಿದ್ದು ವಿಶ್ವವೆಲ್ಲಕ್ಕೂ ವಿಶ್ರಾಂತಿ ಸ್ಥಲವೆನಿಸಿದ್ದು ಅವನ ಅವ್ಯಾಜಪ್ರೇಮವನ್ನು ವ್ಯಕ್ತಪಡಿಸುತ್ತದೆ.

ಇಂತಹ ಪರಮಶಿವನನ್ನು ಸಿದ್ಧಾಂತಶಿಖಾಮಣಿಯು ಹೀಗೆ ತಿಳಿಸಿದೆ. "ಯಾವೊಂದು ಗುರುತಿಗಾಗಲೀ, ಸ್ಥಾನಕ್ಕಾಗಲೀ ಅವಕಾಶವಿಲ್ಲದೆ, ಯಾವ ವಿಕಲ್ಪ ವಿಕಾರಗಳಿಗೂ ಎಡೆ ಇಲ್ಲದೆ, ಯಾವ ಬಗೆಯ ಹಾನಿಗೂ ಅಂಟದೆ ನಿರಾಕಾರವೆನಿಸಿ ಸತ್ಯ ಜ್ಞಾನ ಆನಂದ ಸ್ವರೂಪದ ಪರವಸ್ತು ಒಂದಿದೆ. ಆ ಪರಶಿವಬ್ರಹ್ಮವನ್ನು ಶಿವ, ರುದ್ರ, ಮಹಾದೇವ, ಭವ ಎಂಬ ಪದಗಳಿಂದ ಅನುಭವಿಗಳು ವ್ಯವಹರಿಸಿದ್ದಾರೆ. ಇಂತಹ ಸನಾತನವೂ ಅದ್ವಿತೀಯವೂ ಆದ ವಸ್ತುವನ್ನು ಹೀಗೆಯೇ ಇದೆ ಎಂದು ತಿಳಿಯಲು ಯಾರಿಗೂ ಸಾಧ್ಯವಿಲ್ಲ" ಹೀಗೆ ಸಿದ್ಧಾಂತಶಿಖಾಮಣಿಯು ಸರ್ವ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಧಾರವೂ ಸರ್ವವ್ಯಾಪಕವೂ ಆದ ಪರಬ್ರಹ್ಮವನ್ನು ಶಿವನೆಂಬ ಹೆಸರಿನಿಂದ ಕರೆದಿದೆ. ಈ ಬಗೆಯ ಪರಶಿವಬ್ರಹ್ಮವೇ ನಾಶರಹಿತವಾದ್ದರಿಂದ ಅಕ್ಷರವೆನಿಸಿದೆ. ಇದನ್ನು ಕೋಟಿಸೂರ್ಯರಿಗಿಂತಲೂ ಹೆಚ್ಚಿನ ಪ್ರಕಾಶವೆಂದು ಅನುಭವಿಗಳು ಹೇಳುತ್ತಾರೆ. ಅಂತಹ ಅನೇಕ ಸೂರ್ಯರಿಗೂ ಪ್ರಕಾಶವನ್ನು ಕೊಡುತ್ತ ಪರಶಿವನು ಎಲ್ಲಕ್ಕೂ ಆದರ್ಶವೆನಿಸಿರುವನು. "ಜಗತ್ತೆಲ್ಲವನ್ನೂ ಪ್ರಕಾಶಿಸುತ್ತಿರುವ ಸೂರ್ಯನ ತೇಜಸ್ಸು, ಜಗತ್ತನ್ನು ಸಂತೋಷಪಡಿಸುವ ಚಂದ್ರನ ಪ್ರಕಾಶ, ಸರ್ವವನ್ನೂ ಸುಡುತ್ತಿರುವ ಅಗ್ನಿಯ ತೇಜಸ್ಸು ಇದೆಲ್ಲವನ್ನೂ ನನ್ನದೆಂದು ತಿಳಿ" ಹೀಗೆ ಗೀತೆಯಲ್ಲಿ ಆದಿತ್ಯನ ತೇಜಸ್ಸನ್ನು ಪರಮಾತ್ಮನದೆಂದು ತಿಳಿಸಲಾಗಿದೆ. "ಪರಮಾತ್ಮ ಪ್ರಕಾಶವು ಕೋಟಿ ಸೂರ್ಯರು ಏಕಕಾಲದಲ್ಲಿ ಉದಯಿಸಿದರೆ ಆಗುವಷ್ಟು ಪ್ರಕಾಶಕ್ಕಿಂತಲೂ ಹೆಚ್ಚಿನದಿರುವುದು. ಹಾಗೆಯೇ ಅವನ ಕಾಂತಿ ಕೋಟಿ ಚಂದ್ರರ ಕಾಂತಿಗಿಂತಲೂ ಹಿತಕರವಾಗಿರುವುದು." ಹೀಗೆ ಸಿದ್ಧಾಂತಶಿಖಾಮಣಿಯು ಪರಮಾತ್ಮನ ಪ್ರಕಾಶವನ್ನು ಪ್ರಶಂಸಿಸಿವೆ. ಇಲ್ಲಿಯೂ ಮುಂದೆ "ಪರಮಾತ್ಮನ ಮುಂದೆ ಸೂರ್ಯನಾಗಲೀ ಚಂದ್ರ ನಕ್ಷತ್ರಗಳಾಗಲೀ ಶೋಭಿಸುವಂತಿಲ್ಲ- ಅವನೆದುರಿಗೆ ಯಾವ ಮಿಂಚೂ ನಿಲ್ಲುವಂತಿಲ್ಲ. ಇನ್ನು ಬೆಂಕಿ ಹೇಗೆ ನಿಂತೀತು ! ಹಾಗೆ ಶೋಭಿಸುವ ಪರಮಾತ್ಮನನ್ನು ಅನುಸರಿಸಿಕೊಂಡೇ ಎಲ್ಲವೂ ಶೋಭಿಸುತ್ತಿವೆ. ಅವನ ಪ್ರಕಾಶದಿಂದಲೇ ಇದೆಲ್ಲವೂ ಶೋಭಿಸುತ್ತಿದೆ." ಹೀಗೆ ತಿಳಿಸಲಾಗಿದೆ. ಎಂದು ಮಹಾಪ್ರಕಾಶಸ್ವರೂಪನಾದ ಪರಶಿವನಿಂದಲೇ ಸರ್ವವ್ಯವಹಾರಗಳಿಗಾಶ್ರಯವಾದ ಪ್ರಜ್ಞಾಶಕ್ತಿಯು ಮೊದಲಿಗೆ ಹೊರಹೊಮ್ಮಿತು. ಜಗತ್ತಿನಲ್ಲಿ ಎಲ್ಲವನ್ನೂ ವ್ಯವಸ್ಥೆಗೊಳಿಸುವ ಪ್ರಜ್ಞಾಶಕ್ತಿಯು ಜಗತ್ಸೃಷ್ಟಿಗೆ ಮೊದಲು ಶಿವನಿಂದಲೇ ಪ್ರಕಟವಾಯಿತು. "ವಿಶ್ವದ ವಸ್ತುಗಳೆಲ್ಲವನ್ನೂ ಪ್ರಕಾಶಗೊಳಿಸುವ ಚಂದ್ರಿಕೆಯು ಚಂದ್ರನಲ್ಲಿ ಸ್ಥಿರವಾಗಿ ನೆಲಸಿರವಂತೆ ಎಲ್ಲವನ್ನೂ ವಿವೇಚನೆಯಿಂದ ವಿಮರ್ಶಿಸುವ ಶಕ್ತಿಯು ಪ್ರಕಾಶರೂಪನಾದ ಪರಶಿವನಲ್ಲಿ ಸ್ಥಿರವಾಗಿ ನೆಲಸಿದೆ." ಹೀಗೆ ಪರಮಾತ್ಮನಲ್ಲಿ ಶಕ್ತಿಯು ಸ್ಥಿರವಾಗಿಯೂ ನಿತ್ಯವಾಗಿಯೂ ನೆಲಸಿರುವುದೆಂದು ಸಿದ್ಧಾಂತಶಿಖಾಮಣಿಯು ತಿಳಿಸಿದೆ. ಪ್ರಾಣರೂಪದಿಂದ ಅಡಗಿರುವ ಶಕ್ತಿಯೇ ಜಗತ್ತನ್ನು ನಿರ್ಮಿಸಲು ತೊಡಗಿರುವ ಶಿವನಿಗೆ ಸಹಕರಿಸಲು ಸೃಷ್ಟಿಕಾಲದಲ್ಲಿ ಪ್ರಜ್ಞಾಶಕ್ತಿ ಎನಿಸುತ್ತದೆ. ಆದ್ದರಿಂದಲೇ ಶಿವನು ಸರ್ವರಿಗೂ ಮಾರ್ಗದರ್ಶಕನೂ ಪ್ರಥಮಗುರುವೂ ಆಗಿರುವನೆಂದು ಅನುಭವಿಗಳು ಹೇಳುತ್ತಾರೆ. "ಶಿವನೇ ಜಗತ್ತಿಗೆ ಮೊದಲನೆಯ ಉಪದೇಶಕನೂ ದಿವ್ಯೌಷಧಗಳನ್ನು ಪ್ರಯೋಗಿಸುವ ವೈದ್ಯನೂ ಆಗಿರುವನು" ಎಂದು ಶ್ರೀ ರುದ್ರದಲ್ಲಿ ಪರಮಾತ್ಮನನ್ನು ಮೊದಲನೆಯ ಉಪದೇಶಕನೆಂದು ತಿಳಿಸಿದೆ. "ಯಾವನು ಚತುರ್ಮುಖಬ್ರಹ್ಮನನ್ನು ಮೊದಲಿಗೆ ಸೃಷ್ಟಿಸಿ ಅವನಿಗೆ ವೇದಗಳನ್ನು ಅನುಗ್ರಹಿಸಿದನೋ ಅವನೇ ಆತ್ಮಾರಾಮನಾಗಿದ್ದುಕೊಂಡೇ ಜಗತ್ತಿನ ವ್ಯವಹಾರಗಳೆಲ್ಲವನ್ನೂ ಲೀಲೆಯಿಂದ ನಡೆಸುತ್ತಿರುವನು" ಎಂದು ಇದೇ ಉಪನಿಷತ್ತಿನಲ್ಲಿಯೇ ತಿಳಿಸಲಾಗಿದೆ. ॥

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ನೈನಮೂರ್ಧ್ವಂ ನ ತಿರ್ಯಂಚಂ ನ ಮಧ್ಯಂ ಪರಿಜಗ್ರಭತ್ ।
ನ ತಸ್ಯ ಪ್ರತಿಮಾ ಅಸ್ತಿ ಯಸ್ಯ ನಾಮ ಮಹದ್ಯಶಃ ॥ ೧೯ ॥

ಪರಮಾತ್ಮನ ಬಗ್ಗೆ ಹೆಚ್ಚು ಹೇಳುವುದೇನಿದೆ? ಅಷ್ಟೊಂದು ಮಹಾಪ್ರಕಾಶ ಸ್ವರೂಪನಾದ ಬೇರೊಂದು ವಸ್ತುವೇ ಎಲ್ಲಿಯೂ ಇಲ್ಲವೆಂದು ಇಲ್ಲಿ ತಿಳಿಸುತ್ತಾನೆ. ಇಂತಹ ಪರಮಾತ್ಮನ ಮೇಲ್ಭಾಗವನ್ನು ಯಾರೊಬ್ಬನೂ ತಿಳಿಯಲು ಸಮರ್ಥನಲ್ಲ. ಹಾಗೆಯೇ ಅವನ ಹಿಂಭಾಗವನ್ನಾಗಲೀ, ಮಧ್ಯಭಾಗವನ್ನಾಗಲೀ ಯಾರೊಬ್ಬನೂ ಈವರಿವಿಗೂ ತಿಳಿಯಲು ಶಕ್ತನಾಗಿಲ್ಲ. ಹೀಗೆ ಸರ್ವವ್ಯಾಪಕನೂ, ಅನಂತನೂ ಆದ ಪರಶಿವನಿಗೆ ಮೇಲೆ, ಕೆಳಗೆ, ಹಿಂದೆ, ಮುಂದೆ, ಮಧ್ಯಭಾಗಗಳೇ ಇಲ್ಲದ್ದರಿಂದ ಅವ ನನ್ನು ತಿಳಿಯಲು ಯಾರಿಗೂ ಸಾಧ್ಯವಿಲ್ಲ. ಹೀಗೆ ಆದ್ಯಂತಗಳೇ ಇಲ್ಲದ ಪರಶಿವನು ಯಾರಿಗೂ ಸುಲಭವಾಗಿ ದೊರೆಯಲಾರನು. " ಹಿಂದೆ ಇದ್ದದ್ದು, ಮುಂದೆ ಹುಟ್ಟು ವುದು ಇದೆಲ್ಲವೂ ಪುರುಷನೇ. ಅವನ ಮಹಿಮೆ ಇಷ್ಟು ಅದ್ಭುತವಾಗಿದೆ." " ಅವನ ಒಂದು ಪಾದದಲ್ಲಿಯೇ ವಿಶ್ವವೆಲ್ಲವೂ ಅಡಗಿದ್ದು ಉಳಿದ ಮೂರು ಪಾದಗಳು ದಿವ್ಯವೂ ಅಮೃತವೂ ಎನಿಸಿವೆ." ಹೀಗೆ ಪರಮಪುರುಷನೆನಿಸಿದ ಶಿವನ ಮಹಿಮಾತಿಶಯವನ್ನು ಪುರುಷಸೂಕ್ತದಲ್ಲಿ ಪ್ರಶಂಸಿಸಲಾಗಿದೆ. ಇಷ್ಟೊಂದು ಮಹಾವೈಭವದಿಂದ ಪ್ರಕಾಶಿ ಸುತ್ತ ಹೆಚ್ಚು ಮಹಿಮೆಯುಳ್ಳ ಪರಮಶಿವನ ಸರ್ವವ್ಯಾಪಕವಾದ ಕೀರ್ತಿಯನ್ನು ಯಾರೊಬ್ಬರಿಗೂ ಗ್ರಹಿಸಲು ಶಕ್ಯವಿಲ್ಲ. ಆದರೂ ಅವನ ಹೆಸರನ್ನು ಸಾಧಕರೆಲ್ಲರೂ ಪರಿಗ್ರಹಿಸುತ್ತಾರೆ. ಇಂತಹ ಪರಮಾತ್ಮನಿಗೆ ಎಲ್ಲಿಯೂ ಸಾದೃಶ್ಯವೇ ಇಲ್ಲ. ॥ ೧೯ ॥

ನ ಸಂದೃಶೇ ತಿಷ್ಠತಿ ರೂಪಮಸ್ಯ ನ ಚಕ್ಷುಷಾ ಪಶ್ಯತಿ ಕಶ್ಚನೈನಮ್ ।
ಹೃದಾ ಹೃದಿಸ್ಥಂ ಮನಸಾ ಯ ಏನಮೇವಂ ವಿದುರಮೃತಾಸ್ತೇ ಭವಂತಿ ॥

ಇಷ್ಟೊಂದು ಮಹಾಮಹಿಮಶಾಲಿಯಾದ ಪರಮೇಶ್ವರನ ಜ್ಞಾನವು ಸಾಮಾನ್ಯ ಮಾನವನಿಗೆ ಹೇಗೆ ದೊರಕಬಹುದೆಂಬುದನ್ನು ತಿಳಿಸುತ್ತಾನೆ. ಈ ಪರಮೇಶ್ವರನ ಸ್ವರೂಪವನ್ನು ಕಣ್ಣು ಮೊದಲಾದ ಇಂದ್ರಿಯಗಳು ಗ್ರಹಿಸಲಾರವು. ಯಾರೊಬ್ಬನೂ ಅವನನ್ನು ಕಣ್ಣಿನಿಂದ ನೋಡಲಾಗುವುದಿಲ್ಲ. ಹಾಗಾದರೆ ಸಾಧಕರಿಗೆ ಅವನ ಸಾಕ್ಷಾ ತ್ಕಾರ ಹೇಗೆ ದೊರಕೀತೆಂಬುದಕ್ಕೆ ಉತ್ತರವನ್ನು ತಿಳಿಸುತ್ತಾನೆ. ಹೊರಗಿನ ಸಾಧನ ಗಳಿಂದ ಅವನನ್ನು ತಿಳಿಯಲಿಕ್ಕಂತೂ ಸಾಧ್ಯವಿಲ್ಲ. ಆದರೆ ಅವನು ಹೃದಯದಲ್ಲಿಯೇ ನೆಲಸಿರುವುದರಿಂದ ನಮ್ಮೆಲ್ಲರ ಪಾಪಗಳನ್ನು ಪರಿಹರಿಸಲು ಸಮರ್ಥನೆನಿಸಿದ ಆ ಹೃದಯವನ್ನು ಪರಿಶುದ್ಧಗೊಳಿಸಿ ಅದರಿಂದಲೇ ಅಲ್ಲಿರುವ ಪರಮಾತ್ಮನನ್ನು ನಿರ್ಮಲ ವಾದ ಮನಸ್ಸಿನಿಂದ ಯಾರು ತಿಳಿಯಬಲ್ಲರೋ ಅವರೇ ಪಾಶದಿಂದ ಬಿಡುಗಡೆ ಹೊಂದಿ ನಿತ್ಯಸುಖಿಗಳೂ ಅಮೃತರೂ ಆಗುತ್ತಾರೆ. ॥ ೨೦ ॥

ಅಜಾತ ಇತ್ಯೇವ ಕಶ್ಚಿದ್ಭೀರುಃ ಪ್ರಪದ್ಯತೇ ।
ರುದ್ರ ಯತ್ತೇ ದಕ್ಷಿಣಂ ಮುಖಂ ತೇನ ಮಾಂ ಪಾಹಿಮಾಂ ನಿತ್ಯಮ್ ॥

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಪರಮೇಶ್ವರನ ಪ್ರಸಾದದಿಂದಲೇ ನಮಗೆ ಇಷ್ಟಾರ್ಥವು ಸಿದ್ಧಿಸಿ ಅನಿಷ್ಟವು ತೊಲಗಬೇಕಾಗಿರುವುದರಿಂದ ಅವನನ್ನೇ ಇಲ್ಲಿ ಸ್ತುತಿಸುತ್ತಾನೆ. ಇತಿ ಶಬ್ದವು ಹೇತುವನ್ನು ತಿಳಿಸುತ್ತದೆ. ಪರಮಾತ್ಮನು ಯಾರಿಂದಲೂ ಹುಟ್ಟದೆ ಸಹಜವಾಗಿ ಇರುವವನಾದ್ದರಿಂದಲೇ ಅವನು ಅಮೃತನೂ ಆಗಿರುವನು. ಆದ್ದರಿಂದ ಸಂಸಾರ ದುಃಖಕ್ಕೆ ಹೆದರಿದವನೊಬ್ಬನು ಮಾತ್ರವೇ ಅವನಿಗೆ ಶರಣಾಗುತ್ತಾನೆ; ಆದರೆ ಸಂಸಾರದ ಭೋಗಗಳಿಗೆ ದಾಸನಾದವನು ಹಾಗೆ ಶರಣಾಗಲಾರನು. "ಲೋಕದಲ್ಲಿ ಎಲ್ಲರಂತೆ ಹುಟ್ಟುವವರೆಲ್ಲರೂ ಮರಣಕ್ಕೆ ವಶರೇ ಆಗುವರು" ಎಂದು ಗೀತೆಯೂ ತಿಳಿಸಿದೆ. ಆದ್ದರಿಂದ ಹುಟ್ಟುಸಾವುಗಳಿಗೆ ಸಿಲುಕದೆ ಸರ್ವರಿಗೂ ಪ್ರಕಾಶವನ್ನು ನೀಡುತ್ತಿರುವ ಮಹಾದೇವನೊಬ್ಬನೇ ರಕ್ಷಕನಾಗಲರ್ಹನಿರುವನು. ಆದ್ದರಿಂದ ಅವನನ್ನು ಪ್ರಾರ್ಥಿಸಿ ಮರೆಹೋಗುವುದು ಯುಕ್ತವೆನಿಸಿದೆ. "ಎಲೈ ರುದ್ರನೇ, ದಕ್ಷಿಣದಿಕ್ಕಿಗೆ ವ್ಯಾಪಿಸಿರುವ ನಿನ್ನ ಯಾವ ಸುಮುಖವುಂಟೋ ಅದರಿಂದ ನನ್ನನ್ನು ಯಾವಾಗಲೂ ರಕ್ಷಿಸು. ಅದು ಸರ್ವರಿಗೂ ಹಿತಕರವಾದ್ದರಿಂದ ಪಾವನವೂ ಶಾಂತವೂ ಆಗಿದೆ". ಹೀಗೆ ಭಯಂಕರವಾದ ದೃಷ್ಟಿಯನ್ನು ತೊರೆದು ಸೌಮ್ಯದೃಷ್ಟಿಯಿಂದ ಭಕ್ತರನ್ನು ಅನುಗ್ರಹಿಸುವಂತೆ ಶ್ವೇತಾಶ್ವತರಮಹರ್ಷಿಯು ಪ್ರಾರ್ಥಿಸಿದ್ದಾನೆ. ॥ ೨೧ ॥

ಮಾ ನಸ್ತೋಕೇ ತನಯೇ ಮಾ ನ ಆಯುಷಿ ಮಾ ನೋ ಗೋಷು
ಮಾ ನೋ ಅಶ್ವೇಷು ರೀರಿಷಃ ।
ವೀರಾನ್ಮಾ ನೋ ರುದ್ರ ಭಾಮಿತೋ ವಧೀರ್ಹವಿಷ್ಮಂತಃ ಸದ ಮಿತ್ವಾ
ಹವಾಮಹೇ ॥ ೨೨ ॥

'ಮಾ ರೀರಿಷಃ' ಎಂಬುದನ್ನು ಎಲ್ಲಾ ಕಡೆಗಳಲ್ಲೂ ಅನ್ವಯಿಸಬೇಕು. ರೇಷಣ ಎಂದರೆ ಮರಣ. ಇದನ್ನು ಯಾರಿಗೂ ದೊರಕಿಸಬೇಡ. ರುದ್ರನು ಘೋರ ಮುಖದಿಂದ ನೋಡಿದರೆ ಎಲ್ಲರಿಗೂ ಭಯವುಂಟಾಗಿ ಮರಣ ಸಂಭವಿಸುವುದು ಸಹಜ. ಆದ್ದರಿಂದಲೇ ಹಾಗೆ ನೋಡಬೇಡವೆಂದು ಇಲ್ಲಿ ಪ್ರಾರ್ಥಿಸಿದೆ. "ನಮ್ಮ ಮಕ್ಕಳಿಗೂ ಮೊಮ್ಮಕ್ಕಳಿಗೂ, ಹಾಗೆಯೇ ಗೋವು, ಅಶ್ವ ಮೊದಲಾದ ನಮ್ಮ ಸಂಪತ್ಸಮೃದ್ಧಿಗೂ ಹಾನಿಯನ್ನುಂಟುಮಾಡಬೇಡ. ನಮ್ಮ ಆಯುಸ್ಸಿಗೆ ವಿಘ್ನವನ್ನು ತಂದೊಡ್ಡಬೇಡ. ನೀನು ಕುಪಿತನಾಗಿ ನಮ್ಮ ವೀರರನ್ನು ಕೊನೆಗಾಣಿಸಬೇಡ. ನೀನು ಭವರೋಗ ನಿವಾರಕನೂ ಮೊದಲನೆಯ ವೈದ್ಯನೂ ಆಗಿರುವೆ. ಆದ್ದರಿಂದ ನೀನು ನಮ್ಮನ್ನು ಕೃಪಾದೃಷ್ಟಿಯಿಂದ ನೋಡು. ನಾವೂ ಸಹ ನಿನಗೆ ಹಾಲು ತುಪ್ಪ ಮೊಸರು ಮೊದಲಾದವುಗಳನ್ನು ಅರ್ಪಿಸಿ ಯಾವಾಗಲೂ ಅರ್ಚಿಸುತ್ತಿರುವೆವು. ಆದ್ದರಿಂದ ನೀನು ನಮ್ಮನ್ನೂ, ನಮ್ಮ ಕಡೆಯವರೆಲ್ಲರನ್ನೂ ಯಾವತ್ತೂ ಹಿಂಸಿಸದೆ ರಕ್ಷಿಸಬೇಕು" ಎಂದು ಸಾಧಕನು ಭಕ್ತಿಯಿಂದ ಪ್ರಾರ್ಥಿಸಬೇಕು. ॥ ೨೨ ॥

* * * *

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಪಂಚಮಾಧ್ಯಾಯ

ಚತುರ್ಥಾಧ್ಯಾಯದ ಅರ್ಥವನ್ನೇ ಇಲ್ಲಿಯೂ ವಿಶದಪಸಲಾಗುವುದು.

ದ್ವೇ ಅಕ್ಷರೇ ಬ್ರಹ್ಮಪರೇ ತ್ವನಂತೇ ವಿದ್ಯಾವಿದ್ಯೇ ನಿಹಿತೇ ಯತ್ರ ಗೂಢೇ ।
ಕ್ಷರಂ ತ್ವವಿದ್ಯಾ ಹ್ಯಮೃತಂ ತು ವಿದ್ಯಾ ವಿದ್ಯಾವಿದ್ಯೇ ಈಶತೇ ಯಸ್ತು
ಸೋಽನ್ಯಃ ॥ ೧ ॥

ವಾಸ್ತವವಾಗಿ ದೇಶಕಾಲಗಳ ಇತಿ ಮಿತಿಗಳಿಗೊಳಪಡದೆ ನಿರ್ವಿಕಾರವೂ ಅನಂತವೂ ನಾಶರಹಿತವೂ ಆದ ಯಾವ ಪರಮಾತ್ಮನಲ್ಲಿ ವಿದ್ಯೆ ಮತ್ತು ಅವಿದ್ಯೆ ಇವೆರಡೂ ಬಹಳ ರಹಸ್ಯವಾಗಿ ನೆಲಸಿವೆಯೋ ಅಂತಹ ಪರಶಿವಬ್ರಹ್ಮವೇ ಎಲ್ಲರಿಗೂ ಉಪಾಸನೆಗೆ ಅರ್ಹವೆನಿಸಿದೆ. ಇಲ್ಲಿ ಬಂದಿರುವ ವಿದ್ಯೆ ಅವಿದ್ಯೆ ಎಂಬ ಪದಗಳನ್ನು ಶ್ರುತಿಯೇ ಮುಂದೆ ವಿವರಿಸುತ್ತದೆ. ಆತ್ಮನನ್ನು ಹೀನಸ್ಥಿತಿಗೆ ಒಯ್ಯುವುದೆಲ್ಲವೂ ಅವಿದ್ಯೆ ಎನಿಸಿ ಅವನನ್ನು ಅಮರನನ್ನಾಗಿ ಮಾಡುವಂತಹದೇ ವಿದ್ಯೆ ಎನಿಸುತ್ತದೆ. ಜೀವನನ್ನು ಬಂಧಿಸುವಂತಹದು ಅವಿದ್ಯೆ ಎಂದೂ, ಸಂಸಾರಪಾಶದಿಂದ ಅವನನ್ನು ಬಿಡಿಸುವಂತಹದು ವಿದ್ಯೆ ಎಂದೂ ಹೇಳಿದಂತಾಯಿತು. ಹೀಗೆ ಆತ್ಮಕಲ್ಯಾಣವನ್ನು ಸಾಧಿಸುತ್ತ ಶಿವಯೋಗವನ್ನು ಬೋಧಿಸುವ ಶಾಸ್ತ್ರಗಳು ಜೀವನ ಬಂಧನವನ್ನು ಪರಿಹರಿಸುವುದರಿಂದ ಅವನ್ನು ವಿದ್ಯೆ ಎಂದು ಕರೆಯಲಾಗಿದೆ. ದೇಹದ ಬಗ್ಗೆ ಅಭಿಮಾನವನ್ನು ಹೆಚ್ಚಿಸುತ್ತ ಕೇವಲ ವಿಷಯಭೋಗವನ್ನೇ ಬೋಧಿಸುವ ಶಾಸ್ತ್ರಗಳು ಅವಿದ್ಯೆ ಎಂದು ಪ್ರಸಿದ್ಧವೆನಿಸಿವೆ. ಪರಮೇಶ್ವರನೇ ವಿದ್ಯೆ ಅವಿದ್ಯೆ ಇವೆರಡಕ್ಕೂ ನಿಯಾಮಕನಾಗಿದ್ದಾನೆ. "ಎಲ್ಲಾ ವಿದ್ಯೆಗಳಿಗೂ ನಿಯಾಮಕನೂ, ಜೀವರೆಲ್ಲರಿಗೆ ಅಧಿಪತಿಯೂ ಆಗಿರುವನು" ಎಂದು ಶ್ರುತಿಯೂ ತಿಳಿಸಿದೆ. ಭಗವದಾರಾಧನದಿಂದ ಮನುಷ್ಯನ ಮನಸ್ಸು, ಬುದ್ಧಿ, ಅಹಂಕಾರ, ಇಂದ್ರಿಯಗಳು ಇವೆಲ್ಲವನ್ನೂ ಭಗವದ್ರೂಪದಿಂದ ಪರಿಣಮಿಸಲು ಅನುಕೂಲವಾಗುವ ಸಾಧನಗಳನ್ನು ತಿಳಿಸುವ ಶಾಸ್ತ್ರಗಳೇ ವಿದ್ಯೆಯಲ್ಲಿ ಸೇರಿರುವುದಾಗಿ ಭಾವಿಸಬೇಕು. ಇವುಗಳ ಅನುಭವಪೂರ್ಣವಾದ ಪರಿಚಯದಿಂದಲೇ ಮಾನವನು ಶಿವನಾಗಲಿರುವನು. ಇಂತಹ ಸಾಮರ್ಥ್ಯವು ಶರಣರ ವಚನಗಳಲ್ಲಿ ಚೆನ್ನಾಗಿ ಕಾಣುತ್ತದೆ. ಅವರ ಮಾರು ವರ್ಧಿಷ್ಣುಗಳಾದ ನಮ್ಮೆಲ್ಲರಿಗೂ ಶ್ರೇಯಸ್ಕರವೆನಿಸಿದೆ. "ತನುವ ತೋಂಟವ ಮಾಡಿ, ಮನವ ಗುದ್ದಲಿಯ ಮಾಡಿ, ಅಗೆದು ಕಳೆದೆನಯ್ಯ. ಭ್ರಾಂತಿಯ ಬೇರ ಒಡೆದು, ಸಂಸಾರದ ಹೆಂಟೆಯ ಬಗಿದು ಬಿತ್ತಿದೆನಯ್ಯ ಬ್ರಹ್ಮಬೀಜವ. ಅಖಂಡಮಂಡಲವೆಂಬ ಬಾವಿ, ಪವನವೆ ರಾಟಾಳ, ಸುಷುಮ್ನದಿಂದುದಕವ ತಿದ್ದಿ, ಬಸವಗಳೈವರು ಹಸಗೆಡಿಸಿಹವೆಂದು ಸಮತೆ ಸೈರಣೆ ಎಂಬ ಬೇಲಿಯನಿಕ್ಕಿ ಆವಾಗಳು ಈ ತೋಂಟದಲಿ ಜಾಗರವಿದ್ದು ಸಸಿಯ ಸಲಹಿದೆನು ಕಾಣಾ ಗುಹೇಶ್ವರ." ಹೀಗೆ ಅಲ್ಲಮಪ್ರಭು ತಾನು ಆಚರಿಸಿ ಸಿದ್ಧಿಯನ್ನು ಪಡೆದ ಬ್ರಹ್ಮವಿದ್ಯೆಯನ್ನು ಸಾಮಾನ್ಯಜನರಿಗೂ ಉಪದೇಶಿಸಿದ್ದಾನೆ. ಹಾಗೆಯೇ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಸಿದ್ಧರಾಮನೆಂಬ ಶಿವಯೋಗೀಶ್ವರನು ತನ್ನ ಸ್ವಂತ ಉದಾಹರಣದಿಂದ ಅಧ್ಯಾತ್ಮ ವಿದ್ಯೆಯ ಸ್ವರೂಪವನ್ನು ಹೀಗೆ ತಿಳಿಸಿದ್ದಾನೆ. “ಶಿವಶಿವಾ, ಶಿವಶಿವಾ, ಶಿವಶಿವಾ ಎಂದೊಮ್ಮೆ ಶಿವನ ಪೂಜಿಸಿ ಶಿವನಾಗು ಮನವೇ ; ಹರಹರಾ, ಹರಹರಾ, ಹರಹರಾ ಎಂದೊಮ್ಮೆ ಹರನ ಪೂಜಿಸಿ ಪುರಹರನಾಗು ಮನವೇ ; ಲಿಂಗವೇ, ಲಿಂಗವೇ, ಲಿಂಗವೇ ಎಂದೊಮ್ಮೆ ಕಪಿಲಸಿದ್ಧಮಲ್ಲಿಕಾರ್ಜುನಲಿಂಗವ ಪೂಜಿಸಿ ಲಿಂಗವಾಗು ಮನವೇ.” ಹೀಗೆ ಪೂಜ್ಯ ಸಿದ್ಧರಾಮನು ತನ್ನ ಮನಸ್ಸಿಗೆ ಮಹಾದೇವನಾಗುವ ಬಗೆಯನ್ನು ತಿಳಿಸಿದ್ದಾನೆ. ಹೀಗೆ ಮಾನವನು ಅಮೃತನೂ, ಅಕ್ಷರನೂ ಆಗುವಂತೆ ಆಧ್ಯಾತ್ಮ ತತ್ತ್ವವನ್ನು ಬೋಧಿಸುವ ಶಾಸ್ತ್ರಗಳನ್ನು ವಿದ್ಯೆ ಎಂದು ಭಾವಿಸಲಾಗಿದೆ. ಇದಲ್ಲದೆ ಉಳಿದದ್ದೆಲ್ಲವೂ ಅವಿದ್ಯೆ ಎನಿಸಿವೆ. ವಿದ್ಯೆ ಅವಿದ್ಯೆಗಳ ಬಗ್ಗೆ ಈ ಬಗೆಯ ವಿವೇಚನೆಯು ಆವಶ್ಯಕವೆನಿಸಿದೆ. ॥ ೧ ॥

ಯೋ ಯೋನಿಂ ಯೋನಿಮಧಿತಿಷ್ಠತ್ಯೇಕೋ ವಿಶ್ವಾನಿ ರೂಪಾಣಿ ಯೋನೀಶ್ಚ ಸರ್ವಾಃ ।
ಋಷಿಂ ಪ್ರಸೂತಂ ಕಪಿಲಂ ಯಸ್ತಮಗ್ರೇ ಜ್ಞಾನೈರ್ಬಿಭರ್ತಿ ಜಾಯಮಾನಂ ಚ ಪಶ್ಯೇತ್ ॥ ೨ ॥

ವಿದ್ಯೆ ಮತ್ತು ಅವಿದ್ಯೆಗಳಿಗೆ ನಿಯಾಮಕನು ಯಾರೆಂಬುದಕ್ಕೆ ಇದು ಮಂತ್ರಗಳಿಂದ ಉತ್ತರವನ್ನು ವಿವರಿಸುತ್ತಾನೆ. ಜಗತ್ತಿನಲ್ಲಿರುವ ಪದಾರ್ಥಗಳೆಲ್ಲಕ್ಕೂ ಕಾರಣವೆನಿಸಿದ ವಸ್ತುಗಳೆಲ್ಲದರಲ್ಲೂ ಪರಶಿವನೊಬ್ಬನೇ ಪರಮಕಾರಣನೆನಿಸಿ ನೆಲಸಿದ್ದಾನೆ. ಆದ್ದರಿಂದ ವಿಶ್ವದ ವಸ್ತುಗಳೆಲ್ಲವೂ ಅನೇಕ ಬಗೆ ಎನಿಸಿ ಒಂದೊಂದೂ ವಿಲಕ್ಷಣವಾಗಿ ಕಾಣುತ್ತಿವೆ. ಹೀಗೆ ಕಾಣಲು ಕಾರಣವೆನಿಸಿದ ಪ್ರತಿಯೊಂದರಲ್ಲೂ ಅಂತರ್ಯಾಮಿಯಾಗಿ ಪರಮಾತ್ಮನೇ ನೆಲಸಿದ್ದಾನೆ. ಪದಾರ್ಥಗಳ ವಿಭಜನೆಗೂ ವಿವೇಚನೆಗೂ ಕಪಿಲಮಹರ್ಷಿಯು ಅವತರಿಸುತ್ತಿರುವಾಗಲೇ ಅವನನ್ನು ಪರಶಿವನು ಕೃಪಾದೃಷ್ಟಿಯಿಂದ ಅವಲೋಕಿಸಿದನು. ಹಾಗೆ ಅವತರಿಸಿದ ಮಹರ್ಷಿಗೆ ತತ್ತ್ವ ಜ್ಞಾನವನ್ನೂ ಪರಶಿವನೇ ಕರುಣಿಸಿದನು. ಹೀಗೆ ಪ್ರತಿಯೊಬ್ಬ ಮಾನವನಿಗೂ ಹುಟ್ಟುವ ಕಾಲದಲ್ಲಿ ದೊರೆಯುವ ಪರಮೇಶ್ವರನ ಅನುಗ್ರಹದಿಂದಲೇ ತತ್ತ್ವಜ್ಞಾನವು ದೊರೆಯುವುದೆಂದು ಇದರಿಂದ ಸೂಚಿತವಾಗುತ್ತದೆ. ಯಾರು ಈ ಬಗೆಯ ಅನುಗ್ರಹಕ್ಕೆ ದೂರವಾಗುವರೋ ಅವರು ತತ್ತ್ವಜ್ಞಾನಕ್ಕೆ ಹೊರಗಾಗಿದ್ದು ಐಹಿಕಲಾಭ ಸುಖಗಳಲ್ಲಿಯೇ ಆಸಕ್ತರಾಗಿ ಮತ್ತೆಮತ್ತೆ ಹುಟ್ಟಬೇಕಾಗುವುದೆಂದರ್ಥ. ॥ ೨ ॥

ಏಕೈಕಂ ಜಾಲಂ ಬಹುಧಾ ವಿಕುರ್ವನ್ನಸ್ಮಿನ್ ಕ್ಷೇತ್ರೇ ಸಂಹರತ್ಯೇಷ ದೇವಃ ।
ಭೂಯಃ ಸೃಷ್ಟ್ವಾ ಪತಯಸ್ತಥೇಶಃ ಸರ್ವಾಧಿಪತ್ಯಂ ಕುರುತೇ ಮಹಾತ್ಮಾ ॥

ಈ ಪರಶಿವನು ಜೀವರ ಒಂದೊಂದು ಪಾಶವನ್ನೂ ಅನೇಕ ಬಗೆಯಾಗಿ ವಿಸ್ತರಿಸಿ ಅವರ ಕಾರ್ಯಕ್ಷೇತ್ರವೆನಿಸಿದ ಕರ್ಮಭೂಮಿಯಲ್ಲಿ ಅವರನ್ನು ಬಂಧಿಸುತ್ತಿರುವನು.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ತಮ್ಮ ತಮ್ಮ ಸ್ಥಾನಮಾನಗಳಲ್ಲಿಯೇ ಅವರು ಸಿಕ್ಕಿಕೊಂಡು ಅಲ್ಲಿಂದಾಚೆ ಹೋಗಲ್ಕು ಅವರಿಗೆ ಶಕ್ತಿಯೇ ಇಲ್ಲದಂತೆ ಅವನೇ ಮಾಡಿರುವನು. ಯಾರಿಗೆ ಈ ದೇಹದಿಂದ ಹೊರಗೆ ಬರುವ ಕಾಲದಲ್ಲಿ ಪರಮೇಶ್ವರನ ಅನುಗ್ರಹವು ದೊರೆಯುವುದಿಲ್ಲವೋ ಅವರು ಬುದ್ಧಿಯನ್ನು ಮೋಹಿಸುವಂತಹ ಮಾಯಾಜಾಲಗಳಲ್ಲಿ ಸಿಲುಕಿ ಅಷ್ಟರಲ್ಲಿಯೇ ಒದ್ದಾಡುತ್ತ ಅಲ್ಲಿಂದಾಚೆಗೆ ಹೋಗಲಿಕ್ಕೆ ತಿಳಿಯದೆ ಯಾವಾಗಲೂ ಸಂಸಾರಚಕ್ರ ದಲ್ಲಿಯೇ ಸುತ್ತುವರು. ಈ ಬಗ್ಗೆ ಹೆಚ್ಚು ಹೇಳುವುದೇನಿದೆ? ಲೋಕಾಧಿಪತಿ ಗಳೆನಿಸಿದ ಇಂದ್ರಾದಿಗಳೂ ಸಹ ಪರಶಿವನಿಂದಲೇ ಸೃಷ್ಟಿಹೊಂದಿ ಅವನಿಗೇ ಅಧೀನ ರಾಗಿರುವರೆಂಬುದನ್ನು ಈಗ ತಿಳಿಸುತ್ತಾನೆ. ಮಹಾಮಹಿಮನಾದ ಪರಮೇಶ್ವರನೇ ಇಂದ್ರಾದಿದೇವತೆಗಳ ಮೇಲೂ ಅಧಿಕಾರವನ್ನು ನಡೆಸುತ್ತಿರುವನು. ಅಲ್ಲಿಗೆ ಇಂದ್ರ ಮೊದಲಾದವರ ಸ್ಥಾನಗಳೂ ಸಹ ಬಂಧಕವೇ ಆದ್ದರಿಂದ ತುಚ್ಛವೆನಿಸಿದಂತಾಯಿತು. "ಮೂರು ವೇದಗಳನ್ನು ಓದಿದವರೂ ಸಹ ಯಜ್ಞಗಳಲ್ಲಿ ದೇವತೆಗಳಿಗೆ ಹವಿಸ್ಸನ್ನು ಅರ್ಪಿಸಿ ಸೋಮರಸಪಾನದಿಂದ ಪಾಪವನ್ನು ಕಳೆದುಕೊಂಡು ಸ್ವರ್ಗಕ್ಕೆ ಹೋದರೂ ಅಲ್ಲಿಯ ಭೋಗಗಳನ್ನು ಕೆಲವು ಕಾಲ ಅನುಭವಿಸಿ ಪುಣ್ಯವು ಕಳೆದೊಡನೆ ಭೂಮಿಗೆ ಹಿಂತಿರುಗುತ್ತಾರೆ." ಹೀಗೆ ಭಗವಂತನೇ ಸ್ವರ್ಗಸುಖವನ್ನು ನಶ್ವರವೆಂದು ತಿಳಿಸಿ ದ್ದಾನೆ. ಮಹಾತ್ಮ ಬಸವಣ್ಣನು ಮಾನವರಿಗೆ ಇಷ್ಟವಾದ ಸ್ಥಾನವನ್ನು ಆಕರ್ಷ ಣೀಯವಾದ ರೀತಿಯಲ್ಲಿ ತಿಳಿಸಿದ್ದಾನೆ. "ಬ್ರಹ್ಮಪದವಿಯನೊಲ್ಲೆ, ವಿಷ್ಣುಪದವಿಯ ನೊಲ್ಲೆ, ರುದ್ರಪದವಿಯನೊಲ್ಲೆ, ಮತ್ತಾವ ಪದವಿಯನೊಲ್ಲೆನಯ್ಯ। ಕೂಡಲ ಸಂಗಮದೇವ, ನಿಮ್ಮ ಸದ್ಭಕ್ತರ ಪಾದವನರಿದಪ್ಪ ಮಹಾಪದವಿಯನೆ ಕರುಣಿಸಯ್ಯ" ಹೀಗೆ ಇಲ್ಲಿಯೇ ಅಮೃತದ ಅನುಭವವನ್ನು ಪಡೆಯಲು ಅನುಭವಿಗಳು ಉಪದೇಶಿಸಿ ರುವುದನ್ನು ವರ್ಧಿಷ್ಣುಗಳು ತಿಳಿದು ಆಚರಿಸಬೇಕೆಂದು ತಿಳಿಸಲಾಗಿದೆ. ॥ ೩ ॥

ಸರ್ವಾ ದಿಶೋ ಊರ್ಧ್ವಮಧಶ್ಚ ತಿರ್ಯಕ್ಪ್ರಕಾಶಯನ್ ಭ್ರಾಜತೇ ಯದ್ವನಡ್ವಾನ್ ।
ಏವಂ ಸ ದೇವೋ ಭಗವಾನ್ವರೇಣ್ಯೋ ಯೋನಿಸ್ವಭಾವಾನ್ಯಧಿತಿಷ್ಠತ್ಯೇಕಃ ॥

ಪರಮಶಿವನ ಸರ್ವವ್ಯಾಪ್ತಿಯನ್ನು ಮತ್ತೆ ಇಲ್ಲಿಯೂ ವಿಸ್ತಾರವಾಗಿ ತಿಳಿಸು ತ್ತಾನೆ. ಸೂರ್ಯನು ಪೂರ್ವವೇ ಮೊದಲಾದ ಹತ್ತು ದಿಕ್ಕುಗಳನ್ನು ಮೇಲೆ ಕೆಳಗೆ ಹಿಂದೆ ಮುಂದೆ ಎಲ್ಲಾ ಕಡೆಗಳಲ್ಲೂ ಪ್ರಕಾಶಪಡಿಸುವಂತೆ ಪರಶಿವನು ಎಲ್ಲೆಡೆಗಳಲ್ಲೂ ಶೋಭಿಸುತ್ತ ಸರ್ವಶ್ರೇಷ್ಠನೆನಿಸಿ ಜಗತ್ತಿಗೆ ಕಾರಣವೆನಿಸಿದ ಪೃಥ್ವಿ ಮೊದಲಾದ ಪದಾರ್ಥಗಳ ಮೇಲೆಯೂ ಅಧಿಕಾರವನ್ನು ನಡೆಸುತ್ತಿರುವನು. ಪರಶಿವನ ಈ ಸರ್ವ ವ್ಯಾಪ್ತಿಯನ್ನು ಶರಣಗೀತೆ ಹೀಗೆ ತಿಳಿಸಿದೆ. ಅಲ್ಲಿ ಬಸವಣ್ಣನು ತನ್ನ ಅನುಭವವನ್ನು ಹೀಗೆ ತಿಳಿಸುತ್ತಾನೆ. "ಎತ್ತೆತ್ತ ನೋಡಿದಡತ್ತತ್ತ ನೀನೆ ದೇವ; ಸಕಲವಿಸ್ತಾರದ ರೂಹು ನೀನೆ ದೇವ; ವಿಶ್ವತೋಬಾಹು ನೀನೆ ದೇವ; ವಿಶ್ವತೋಪಾದ ನೀನೆ ದೇವ;

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಕೂಡಲಸಂಗಮದೇವ" ಹೀಗೆ ಇಲ್ಲಿ ಕಾಣುವುದೆಲ್ಲವೂ ಪರಮಾತ್ಮನ ಆಕಾರವೇ ಆಗಿದೆ. ಅವನಾದರೋ ಅಮೂರ್ತನೂ ಮೂರ್ತನೂ ಆಗಿರುವನೆಂದು ಶ್ರುತಿಯು ತಿಳಿಸುತ್ತದೆ. ಅವನು ಮೂರ್ತಸ್ಥಿಯಲ್ಲೂ ದಿವ್ಯ, ಅದಿವ್ಯ ಎಂದು ಎರಡು ಬಗೆಯಾಗಿರುವನು. ಅವನು ದಿವ್ಯಮೂರ್ತಸ್ಥಿತಿಯಲ್ಲಿ ಕೈಲಾಸವಾಸಿ ಶಿವನೂ, ತ್ರಿಮೂರ್ತಿಗಳೂ ಆಗಿರುವನು. ಉಳಿದ ಅಗ್ನಿ ಮೊದಲಾದವರೆಲ್ಲರೂ ಅವನ ದಿವ್ಯಮೂರ್ತ್ಯಂಶರೇ ಆಗಿರುವರು. ಪೃಥಿವಿ ಮೊದಲಾದ ಪಂಚತತ್ತ್ವಗಳೇ ಅವನ ಅದಿವ್ಯಪ್ರಾಕೃತಮೂರ್ತಿಗಳೆನಿಸಿವೆ. ಇವು ಐದೂ ಸಹ ಪಂಚಲಿಂಗಗಳೆನಿಸಿ ಜಗತ್ತಿನ ಜೀವರೆಲ್ಲರಿಂದಲೂ ಅರ್ಚನವನ್ನು ಸ್ವೀಕರಿಸುತ್ತಿರುವುವು. ಕಾಂಚೀಪುರದಲ್ಲಿ ಪಾರ್ಥಿವಲಿಂಗವೂ, ಜಂಬೂಕ್ಷೇತ್ರದಲ್ಲಿ ಅಪ್‌ಲಿಂಗವೂ, ತಿರುವಣ್ಣಾಮಲೆಯಲ್ಲಿ ತೇಜೋಲಿಂಗವೂ, ಕಾಳಹಸ್ತಿಯಲ್ಲಿ ವಾಯುಲಿಂಗವೂ, ಚಿದಂಬರದಲ್ಲಿ ಆಕಾಶಲಿಂಗವೂ ನೆಲಸಿ ಲೋಕಕಲ್ಯಾಣವನ್ನು ಸಾಧಿಸುತ್ತಿರುವುದು ಜಗತ್ಪ್ರಸಿದ್ಧವಾಗಿದೆ. ಪಾರ್ಥಿವಲಿಂಗಗಳೇನೋ ಎಲ್ಲೆಲ್ಲಿಯೂ ನೆಲಸಿವೆ. ಆದರೆ ನೀರೇ ಲಿಂಗಾಕಾರವಾಗಿಯೂ, ತೇಜಸ್ಸು, ವಾಯು ಆಕಾಶ ಇವೇ ಲಿಂಗವಾಗಿಯೂ ಆಯಾ ಕ್ಷೇತ್ರಗಳಲ್ಲಿ ನೆಲಸಿರುವುದೇ ಪರಮಾತ್ಮನ ಸಮುದೃಷ್ಟಿಯ ಒಂದು ವೈಶಿಷ್ಟ್ಯವೆಂದು ಪ್ರಸಿದ್ಧವಾಗಿದೆ. ಹೀಗೆ ಅಲ್ಲಲ್ಲಿ ಪರಮಾತ್ಮನು ಪಂಚಭೂತಗಳ ರೂಪದಿಂದ ಪಂಚಲಿಂಗಗಳಾಗಿರುವುದು ಅವನ ಭಕ್ತಾನುಗ್ರಹಲೀಲೆಯ ಒಂದು ದಿವ್ಯವೈಭವವೆಂಬುದು ಇಲ್ಲಿ ಗಮನಿಸಬೇಕಾದ ಅಂಶ. ಈ ಅಂಶವನ್ನು ಶರಣಗೀತೆ ಹೃದಯಂಗಮವಾಗಿ ತಿಳಿಸಿದೆ. "ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ" ಎಂದು ಹೇಳಿ ಶರಣರು ಭೂಮಿಯನ್ನು ಪರಮಾತ್ಮನ ವಾಸಸ್ಥಾನವೆಂದು ತಿಳಿಸಿದ್ದಾರೆ. ಶ್ರುತಿಯಲ್ಲೂ ಸಹ "ಜಗತ್ತಿನಲ್ಲಿ ಇರುವ ಪ್ರತಿಯೊಂದು ವಸ್ತುವೂ ಪರಶಿವನ ವಾಸಸ್ಥಾನವೆನಿಸಿದೆ" ಎಂದು ಹೇಳಿದೆ. ಆದ್ದರಿಂದ ವಿವೇಕಿಗಳು ಎಲ್ಲೆಲ್ಲಿಯೂ ಶಿವಭಾವನೆಯನ್ನೇ ತಾಳಬೇಕೆಂದು ಮಹರ್ಷಿಯು ಇಲ್ಲಿ ತಿಳಿಸಿರುವುದು ಅಭಿನಂದನೀಯವೆನಿಸಿದೆ.

ಯಚ್ಚ ಸ್ವಭಾವಂ ಪಚತಿ ವಿಶ್ವಯೋನಿಃ
ಪಾಚ್ಯಾಂಶ್ಚ ಸರ್ವಾನ್ ಪರಿಣಾಮಯೇದ್ಯಃ|
ಸರ್ವಮೇತದ್ವಿಶ್ವಮಧಿತಿಷ್ಠತ್ಯೇಕೋ
ಗುಣಾಂಶ್ಚ ಸರ್ವಾನ್ ವಿನಿಯೋಜಯೇದ್ಯಃ ॥ ೫ ॥

ಪರಮಾತ್ಮನ ಸರ್ವವ್ಯಾಪ್ತಿಯನ್ನೇ ವಿವರಿಸುತ್ತಾನೆ. ಜಗತ್ತಿಗೆ ಉಪಾದಾನವೆನಿಸಿದ ಪರಮೇಶ್ವರನು ಜಗತ್ಕಾರಣವೆನಿಸಲು ಆವಶ್ಯಕವಾದ ಶಕ್ತಿವಿಶೇಷವನ್ನು ಪಂಚಭೂತಗಳಲ್ಲಿ ಒಂದೊಂದರಲ್ಲೂ ನೆಲೆಗೊಳಿಸಿರುವನು. ಪೃಥಿವಿಯಲ್ಲಿ ಧಾರಣಶಕ್ತಿಯೂ, ನೀರಿನಲ್ಲಿ ಆಪ್ಯಾಯನಶಕ್ತಿಯೂ, ತೇಜಸ್ಸಿನಲ್ಲಿ ದಾಹಕಶಕ್ತಿಯೂ, ವಾಯುವಿನಲ್ಲಿ ಚಲನಶಕ್ತಿಯೂ, ಆಕಾಶದಲ್ಲಿ ವ್ಯಾಪನಶಕ್ತಿಯೂ ಹೀಗೆ ಜಗದ್ರಕ್ಷಣೆಕ್ಕೆ ಬೇಕಾದ್ದೆಲ್ಲವನ್ನೂ ಪರಮೇಶ್ವರನೂ ಅಲ್ಲಲ್ಲಿ ನೆಲಗೊಳಿಸಿರುವನು. ಎಲ್ಲ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಪದಾರ್ಥಗಳನ್ನೂ ಹಿಡಿದು ನಿಲ್ಲಿಸುವ ಸಾಮರ್ಥ್ಯವು ಪೃಥಿವಿಯಲ್ಲಿ ಸಹಜವಾಗಿ ನೆಲಸಿದೆ ಎಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಹಾಗೆಯೇ ನೀರು ಮೊದಲಾದವುಗಳಲ್ಲಿಯೂ ಅದರದರ ಕಾರ್ಯವನ್ನು ನಡೆಸಲು ಅನುಕೂಲವಾಗುವ ಅಸಾಧಾರಣಶಕ್ತಿಯೊಂದನ್ನು ಜಗದ್ವ್ಯಾಪಾರನಿರ್ವಾಹಕ್ಕಾಗಿ ಪರಮಾತ್ಮನು ಅಲ್ಲಲ್ಲಿ ಅನುಗ್ರಹಿಸಿರುವನು. ಹೀಗೆ ಅವನು ಪಂಚಭೂತಗಳೊಳಗೆ ಪರಸ್ಪರಮೇಳನದಿಂದ ಜಗತ್ಸೃಷ್ಟಿ ಮತ್ತು ರಕ್ಷಣಗಳನ್ನು ನಡೆಸುತ್ತಿರುವನು. ಆಐದು ತತ್ತ್ವಗಳೇ ಅನೇಕ ಬಗೆಯ ಪದಾರ್ಥಗಳಾಗಿ ಪರಿಣಮಿಸುವಂತೆ ಮಾಡುವ ನೈಪುಣ್ಯವು ಪರಮಾತ್ಮನಿಗೇ ಸಂಬಂಧಿಸಿದೆ ; ಯಾಕೆಂದರೆ ಅವು ಐದಕ್ಕೂ ಅವನೇ ಯಾವಾಗಲೂ ಆಶ್ರಯವಾಗಿರುವನು. ಅವು ಅವನಲ್ಲಿಯೇ ಸೂಕ್ಷ್ಮಸ್ಥಿತಿಯಲ್ಲಿದ್ದು ಸೃಷ್ಟಿಕಾಲದಲ್ಲಿ ಹೊರಹೊಮ್ಮುತ್ತವೆ. ಅವುಗಳ ಸಂಯೋಗದಿಂದ ವಿಲಕ್ಷಣವಾದ ವಸ್ತುಗಳೆಲ್ಲವೂ ಹುಟ್ಟುವುದೇ ಪರಶಿವನ ಜಗನ್ನಾಟಕಲೀಲೆ ಎನಿಸಿದೆ. ಹೀಗೆ ಅವನೊಬ್ಬನೇ ವಿಶ್ವದ ಪ್ರತಿಯೊಂದು ವಸ್ತುವಿನಲ್ಲೂ ನೆಲಸಿರುವನು. ಆದ್ದರಿಂದಲೇ ಶಿವನೇ ಜಗತ್ತೆನಿಸಿರುವನು. "ಇಲ್ಲಿ ಅವನಿಗಿಂತ ಬೇರೆಯಾದ್ದು ಯಾವುದೂ ಇಲ್ಲ"ವೆಂದು ರೇಣುಕಾಚಾರ್ಯರು ಅಗಸ್ತ್ಯ ಮಹರ್ಷಿಗೆ ಹಿಂದೆ ತಿಳಿಸಿದ್ದು ಸಮಂಜಸವೆನಿಸಿದೆ. ಹೀಗೆ ಶಿವನು ಎಲ್ಲೆಲ್ಲೂ ಇರುವುದರಿಂದಲೇ ಜ್ಞಾನಿಗಳು ಅವನನ್ನೇ ಎಲ್ಲರಲ್ಲೂ ಕಾಣುತ ಜಗತ್ತನ್ನು ಶಿವಭಾವನೆಯಿಂದ ಪ್ರೀತಿಸುವುದು ಸಹಜವೇ ಆಗಿದೆ. ಶಿವನು ಜಗತ್ತಿನಲ್ಲಿ ನಿಷ್ಪಕ್ಷಪಾತವಾಗಿ ನೆಲಸಿರುವುದನ್ನು ಶರಣರು ಹೀಗೆ ತಿಳಿಸುತ್ತಾರೆ. "ನೆಲನೊಂದೇ ಹೊಲಗೇರಿ ಶಿವಾಲಯಕ್ಕೆ. ಜಲವೊಂದೇ ಶೌಚಾಚಮನಕ್ಕೆ. ಕುಲವೊಂದೆ ತನ್ನ ತಾನರಿದಂಗೆ. ಫಲವೊಂದೇ ಷಡುದರ್ಶನಮುಕ್ತಿಗೆ. ನಿಲವು ಒಂದೇ ಕೂಡಲಸಂಗಮದೇವ, ನಿಮ್ಮನರಿದವಂಗೆ" ಹೀಗೆ ಶಿವನ ಸಮದರ್ಶಿತ್ವವನ್ನು ಬಸವಾದಿಶರಣರು ಹೃದಯಂಗಮವಾಗಿ ತಿಳಿಸಿರುವಾಗ ಅದನ್ನು ತಿಳಿದು ಮಾನವನು ಬದುಕಬೇಕಾಗಿದೆ. ಹೀಗೆ ಶಿವನು ಪಂಚತತ್ತ್ವಗಳಲ್ಲಿ ಒಂದೊಂದರಲ್ಲೂ ನೆಲಸಿ ತನ್ನ ಸತ್ತ್ವರಜಸ್ತಮೋಗುಣಗಳಿಂದ ಎಲ್ಲ ವ್ಯವಹಾರಗಳನ್ನೂ ಅನಾಯಾಸವಾಗಿ ನಡೆಸುತ್ತಿರುವ ಅಂಶವನ್ನು ಈ ಮಂತ್ರದಲ್ಲಿ ತಿಳಿಸಲಾಗಿದೆ. ಅವನು ಪಂಚಭೂತಗಳಾಗಿ ಪರಿಣಮಿಸಿರುವುದಷ್ಟೇ ಅವನ ಲೀಲೆಯಲ್ಲ ; ಆದರೆ ಮೂರು ಗುಣಗಳನ್ನೂ ಸಹ ಅವನು ಆಯಾಯ ಕಾರ್ಯಗಳಲ್ಲಿ ವ್ಯವಸ್ಥಿತವಾಗಿ ನಿಯಮಿಸುತ್ತಿರುವನು. ಹೀಗೆ ಅವನು ಸಮದೃಷ್ಟಿಯಿಂದ ಎಲ್ಲಾ ಕಡೆಗಳಲ್ಲೂ ನೆಲಸಿರುವುದನ್ನು ಮತ್ತಷ್ಟು ವಿಶದವಾಗಿ ಶರಣರು ಉದಾಹರಣಗಳೊಡನೆ ತಿಳಿಸಿರುವರು. "ಉರೊಳಗಣ ಬಯಲು, ಊರ ಹೊರಗಣ ಬಯಲು ಎಂದುಂಟೆ? ಊರೊಳಗಣ ಬ್ರಾಹ್ಮಣ ಬಯಲು ; ಊರಹೊರಗೆ ಹೊಲೆಬಯಲು ಎಂದುಂಟೆ? ಎಲ್ಲಿ ನೋಡಿದೊಡೆ ಬಯಲೊಂದೆ, ಭಿತ್ತಿಯಿಂದ ಒಳ ಹೊರಗೆಂಬ ನಾಮವ್ಯೆಸೆ, ಎಲ್ಲಿ ನೋಡಿದೊಡೆ ಕರೆದಡೆ ಓ ಎಂಬಾತನೇ ದೇವ" ಹೀಗೆ ಶಿವನಿಗ ಒಳ ಹೊರ ಭೇದವಿಲ್ಲದ್ದರಿಂದ ಅವನ ಸಮದರ್ಶಿತ್ವವನ್ನೇ ಜ್ಞಾನಿಗಳು

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಆದರ್ಶವೆಂದು ಭಾವಿಸುತ್ತಾರೆ. ಈ ರೀತಿಯಲ್ಲಿ ಅವನೇ ಎಲ್ಲೆಲ್ಲೂ ನೆಲಸಿ ತನ್ನ ಗುಣಗಳ ಕಡೆಯಿಂದ ಜಗದ್ವ್ಯಾಪಾರವನ್ನು ನಡೆಸುತ್ತಿರುವನು. ಇದನ್ನು ಎಲ್ಲರೂ ತಿಳಿದು ವಿನೀತರಾಗಿ ಬಾಳಲೆಂದು ಮಹರ್ಷಿಯು ಇಲ್ಲಿ ಸೂಚಿಸಿದ್ದಾನೆ.

ತದ್ವೇದ ಗುಹ್ಯೋಪನಿಷತ್ಸು ಗೂಢಂ
ತದ್ಬ್ರಹ್ಮಾ ವೇದತೇ ಬ್ರಹ್ಮಯೋನಿಮ್ ।
ಯೇ ಪೂರ್ವದೇವಾ ಋಷಯಶ್ಚ ತದ್ವಿದು-
ಸ್ತೇ ತನ್ಮಯಾ ಅಮೃತಾ ವೈ ಬಭೂವುಃ ॥ ೬ ॥

ಹೀಗೆ ಪ್ರಪಂಚದ ಪ್ರತಿಯೊಂದು ಪದಾರ್ಥವನ್ನೂ ಪರಸ್ಪರವಾಗಿ ಹೊಂದಿಕೊಳ್ಳುವಂತೆ ಕೂಡಿಸುತ್ತಿರುವ ಪರಮಾತ್ಮನ ಸ್ವರೂಪವನ್ನು ವೇದಗಳಲ್ಲಿ ಪರಮ ರಹಸ್ಯವೆನಿಸಿದ ಉಪನಿಷತ್ತುಗಳು ಗೋಪ್ಯವಾಗಿ ವರ್ಣಿಸಿವೆ. ಇದು ಬಸವಣ್ಣನ ಪವಿತ್ರವಾದ ವಚನದಲ್ಲಿ ಸ್ಪಷ್ಟಪಡುತ್ತದೆ. "ಉದಕದೊಳಗೆ ಬಚ್ಚಿಟ್ಟ ಬಯಕೆಯ ಕಿಚ್ಚಿನಂತಿದ್ದಿತ್ತು, ಸಸಿಯೊಳಗಣ ರಸದ ರುಚಿಯಂತಿದ್ದಿತ್ತು, ನನೆಯೊಳಗಣ ಪರಿಮಳದಂತಿದ್ದಿತ್ತು ಕೂಡಲಸಂಗಮದೇವ ! ನಿಮ್ಮ ನಿಲವು ಕನ್ನೆಯ ಸ್ನೇಹದಂತಿದ್ದಿತ್ತು." ಹೀಗೆ ಬಸವಾರ್ಯನು ಪರಮಾತ್ಮನ ಸರ್ವವ್ಯಾಪ್ತಿಯನ್ನು ಉದಾಹರಣಗಳೊಡನೆ ವಿವರಿಸಿದ್ದಾನೆ. ಹೀಗೆ ಎಲ್ಲೆಡೆಗಳಲ್ಲೂ ವ್ಯಾಪಿಸಿ ಎಲ್ಲಕ್ಕೂ ಕಾರಣವೆನಿಸಿದ ಪರಶಿವಬ್ರಹ್ಮದ ಸ್ವರೂಪವನ್ನು ಚತುರ್ಮುಖಬ್ರಹ್ಮನು ತಿಳಿದಿದ್ದಾನೆ. ಬುದ್ಧಿಶಕ್ತಿಯ ಬೆಂಬಲವಿಲ್ಲದವನು ಯಾವನೂ ಪರಬ್ರಹ್ಮವನ್ನು ತಿಳಿಯಲಾರನು. ಅದಕ್ಕಾಗಿಯೇ "ಬುದ್ಧೌ ಶರಣಮನ್ವಿಚ್ಛ" ಎಂದು ಗೀತೆ ತಿಳಿಸಿದೆ. ಚತುರ್ಮುಖನು ಜ್ಞಾನಶಕ್ತಿಯ ಪರಿಣಾಮವೆನಿಸಿದ್ದರಿಂದ ಅದರ ಪ್ರಭಾವದಿಂದ ಅವನು ಪರಶಿವನಲ್ಲಿ ರಮಿಸುತ್ತಲೇ ಅವನ ಸ್ವರೂಪವನ್ನು ತಿಳಿಯುವನು. ಹೀಗೆ ಅಮೂರ್ತಪರಶಿವನಿಗೆ ಜ್ಞಾನಮೂರ್ತಿ ಎನಿಸಿದ ಈ ಚತುರ್ಮುಖನಿಗೂ, ಕ್ರಿಯಾಶಕ್ತಿಯ ಪರಿಣಾಮವೆನಿಸಿದ ನಾರಾಯಣನಿಗೂ ; ಹಾಗೆಯೇ ಜ್ಞಾನಕ್ರಿಯಾಸಮನ್ವಯಸ್ವರೂಪನೆನಿಸಿದ ಕಾಲರುದ್ರನಿಗೂ ಭೇದವಿಲ್ಲವೆಂದು ಅನುಭವಿಗಳು ಹೇಳುತ್ತಾರೆ. ಅಮೂರ್ತಪರಶಿವನನ್ನು ಅವನ ದಿವ್ಯಮೂರ್ತರೆನಿಸಿದ ಶಿವನೂ ತ್ರಿಮೂರ್ತಿಗಳೂ ತಿಳಿದಿರುವಂತೆಯೇ ಇಂದ್ರಾದಿದೇವತೆಗಳೂ ವಾಮದೇವ ಮೊದಲಾದ ಮಹರ್ಷಿಗಳೂ ತಿಳಿದಿರುವರು. ಹೀಗೆ ಜಗತ್ತನ್ನು ವ್ಯಾಪಿಸಿರುವ ಅಖಂಡಲಿಂಗಸ್ವರೂಪನಾದ ಪರಶಿವಬ್ರಹ್ಮವನ್ನು ತಿಳಿದವರೆಲ್ಲರೂ ಮರಣ ಭಯವಿಲ್ಲದೆಅಮೃತರೆನಿಸಿದರು. "ಬ್ರಹ್ಮವನ್ನು ತಿಳಿದವನು ಬ್ರಹ್ಮವೇ ಆಗುವನು" ಎಂದು ಶ್ರುತಿಯೂ ಸಹ ಉಪದೇಶಿಸಿದೆ.

ಗುಣಾನ್ವಯೋ ಯಃ ಫಲಕರ್ಮಕರ್ತಾ ಕೃತಸ್ಯ ತಸ್ಯೈವ ಸ ಚೋಪಭುಕ್ತಾ
ಸ ವಿಶ್ವರೂಪಸ್ತ್ರಿಗುಣಸ್ತ್ರಿವರ್ತ್ಮಾ ಪ್ರಾಣಾಧಿಪಃ ಸಂಚರತಿ ಸ್ವಕರ್ಮಭಿಃ ॥೭॥

ಹಿಂದೆ ಆರು ಮಂತ್ರಗಳಲ್ಲಿ ಪರಶಿವಬ್ರಹ್ಮದ ಸ್ವರೂಪವನ್ನು ತಿಳಿಸಿ ಈಗ ಆರು

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಮಂತ್ರಗಳಲ್ಲಿ ಜೀವಾತ್ಮನ ಸ್ವರೂಪವನ್ನು ತಿಳಿಸುತ್ತಾನೆ. ಸತ್ತ್ವರಜಸ್ತಮೋಗುಣಗಳ ಸಂಬಂಧದಿಂದ ಜೀವನು ಸಾತ್ತ್ವಿಕ, ರಾಜಸ, ತಾಮಸ ಎನಿಸಿ ತನ್ನ ಸತ್, ಚಿತ್, ಆನಂದಸ್ವರೂಪವನ್ನು ಮರೆತಿರುವನು. ಅವನ ಸದ್ರೂಪವನ್ನು ಸಾತ್ತ್ವಿಕ ಗುಣವೂ, ಚಿದ್ರೂಪವನ್ನು ರಜೋಗುಣವೂ, ಆನಂದರೂಪವನ್ನು ತಮೋಗುಣವೂ ಬಂಧಿಸಿವೆ. ಗುಣವೆಂದರೆ ಪಾಶ (ಹಗ್ಗ). ಈ ಬಗೆಯ ಮೂರು ಪಾಶಗಳಿಂದ ಬದ್ಧನಾಗಿ ಜೀವನು ಪಶುವೆನಿಸಿದ್ದಾನೆ. ಇದರಿಂದ ಅವನಿಗೆ ಮೂರು ಬಗೆಯ ಮಲಗಳ ಆವರಣವು ಸಹಜವಾಗಿ ಸಂಭವಿಸಿದೆ. ಸದ್ರೂಪವನ್ನು ಸತ್ತ್ವಗುಣವು ಮುಚ್ಚಿದ್ದರಿಂದ ಅದು ಆಣವಮಲವಾಗಿ ಪರಿಣಮಿಸಿದೆ. ಚಿದ್ರೂಪವು ರಜೋಗುಣದಿಂದ ಬದ್ಧವಾಗಿ ಮಾಯೀಯಮಲವಾಗಿ ಪರಿಣಮಿಸಿದೆ. ಆನಂದರೂಪವು ತಮೋಗುಣದಿಂದ ಬದ್ಧವಾಗಿ ಕಾರ್ಮಿಕಮಲವಾಗಿ ಪರಿಣಮಿಸಿದೆ. ಹೀಗೆ ತ್ರಿಗುಣಬದ್ಧನಾಗಿರುವುದರಿಂದಲೇ ಜೀವನು ವಿವೇಚನೆಯಿಲ್ಲದೆ ಕರ್ಮಗಳನ್ನು ಆಚರಿಸುತ್ತ ಪಶುವಿನಂತೆ ಭೋಗಿಸುತ್ತಲಿರುವನು. ತಾನೇ ತನ್ನದೆಂದು ಅಭಿಮಾನಿಸಿ ಮಾಡಿದ ಕರ್ಮವನ್ನು ಭೋಗಿಸಲಿಕ್ಕಾಗಿ ಅವನು ತನ್ನ ಗುಣಗಳಿಗಧೀನನಾಗುವುದು ಸಹಜವೇ ಆಗಿದೆ. ಇದರಿಂದಲೇ ಅವನು ಆಯಾ ಕರ್ಮಗಳಿಗೆ ತಕ್ಕಂತೆ ಅನೇಕ ಬಗೆ ಎನಿಸಿರುವನು. ಅವನೇ ಮಕ್ಕಳನ್ನು ರಕ್ಷಿಸುವಾಗ ತಾಯಿಎಂದೂ, ಹಾಗೆಯೆ ಸಂಪಾದನೆಮಾಡಿ ಅದನ್ನು ಮನೆಗೆ ತರುವಾಗ ತಂದೆಎಂದೂ, ಹೀಗೆಯೇ ಅಣ್ಣ, ತಮ್ಮ, ಹೆಂಡತಿ, ಮಗ, ಶತ್ರು, ಮಿತ್ರ, ಅತ್ತೆ, ಮಾವ, ಸೊಸೆ ಹೀಗೆ ಅನೇಕರೂಪಗಳನ್ನು ಹಿಂದಿನ ಕರ್ಮದಂತೆ ವಹಿಸುವನು. ಈ ಬಗೆಯ ಪರಿಣಾಮವೆಲ್ಲವೂ ಅವನ ಗುಣಸಂಬಂಧದಿಂದ ಸಂಭವಿಸುತ್ತದೆ. ಹೀಗೆ ಮೂರುಬಗೆಯ ಗುಣಗಳೊಡಗೂಡಿರುವಂತೆಯೇ ಅವನ ಪ್ರಯಾಣವೂ ಮೂರು ಬಗೆಯಾಗಿದೆ. ಸಾತ್ತ್ವಿಕಜೀವರು ಸ್ವರ್ಗಾದಿ ಊರ್ಧ್ವಲೋಕಕ್ಕೂ, ತಾಮಸರು ಕೆಳಗಿನ ಅಧೋಲೋಕಕ್ಕೂ, ರಾಜಸರು ಮಧ್ಯಮಲೋಕಕ್ಕೂ ಹೋಗುವರೆಂಬುದು ಪ್ರಸಿದ್ಧವೆನಿಸಿದೆ. ಇಂತಹ ಜೀವಾತ್ಮನು ಐದು ಬಗೆಯ ಪ್ರಾಣವಾಯುವಿಗೆ ನಿಯಾಮಕನಾಗಿ ತನ್ನ ಕರ್ಮಗಳಿಂದ ಸಂಸಾರದಲ್ಲಿ ಅಲೆಯುತ್ತಿರುವನು. ಪುಣ್ಯಪಾಪಕರ್ಮಗಳ ಫಲವನ್ನು ಅನುಭವಿಸಲು ಅವನಿಗೆ ಪ್ರಾಣವಾಯುವಿನ ಸಹಕಾರವು ಆವಶ್ಯಕ. ಅವನು ನಿರ್ವಹಿಸುವ ಕರ್ಮವೆಲ್ಲವೂ ಅವನ ಶಕ್ತಿ ಎನಿಸಿದ ಚಿತ್ತದ ಸಂಕಲ್ಪದಿಂದಲೇ ನಡೆಯುವಂತಹದು. ಅದನ್ನು ನಿಗ್ರಹಿಸಲು ಅಶಕ್ತನಾಗಿ ಜೀವನು ಕುರುಡನಂತೆ ಅದನ್ನು ಅನುಸರಿಸುತ್ತಿರುವನು. ಅವನ ವ್ಯವಹಾರವಿಧಾನವನ್ನು ಶರಣರ ವಚನದಲ್ಲಿ ನಾವು ಸ್ಪಷ್ಟವಾಗಿ ಕಾಣಬಹುದು. "ಪುಣ್ಯಪಾಪವೆಂಬಿವು ತಮ್ಮ ಇಷ್ಟ ಕಂಡಿರಯ್ಯ, ಅಯ್ಯಾ ಎಂದಡೆ ಸ್ವರ್ಗ, ಎಲವೋ ಎಂದಡೆ ನರಕ. ದೇವ, ಭಕ್ತಜಯ, ಜೀಯಾ ಎಂಬ ನುಡಿಯೊಳಗೆ ಕೈಲಾಸವಿಹುದು ಕೂಡಲಸಂಗಮದೇವ" ಎಂದು ಬಸವಾರ್ಯನು ತಿಳಿಸಿದಂತೆ ಮಾನವನ ನಡೆನುಡಿಗಳು ಚಿತ್ತಶಕ್ತಿಯ ಸಂಕಲ್ಪದಂತೆ ಜರುಗುತ್ತವೆ. ಹೀಗೆ ಕರ್ಮ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಗಳನ್ನು ನಡೆಸುತ್ತ ಅವುಗಳ ಫಲಗಳನ್ನು ಅನುಭವಿಸುತ್ತಿರುವುದೇ ಜೀವನ ಸ್ವಭಾವ ವೆನಿಸಿದೆ. ಇದರಿಂದಲೇ ಜೀವನನ್ನು ಸಂಸಾರಿಯೆಂದು ಕರೆಯಲಾಗಿದೆ. ‖೭‖

ಅಂಗುಷ್ಠಮಾತ್ರೋ ರವಿತುಲ್ಯರೂಪಃ ಸಂಕಲ್ಪಾಹಂಕಾರಸಮನ್ವಿತೋ ಯಃ।
ಬುದ್ಧೇರ್ಗುಣೇನಾತ್ಮಗುಣೇನ ಚೈವ ಆರಾಗ್ರಮಾತ್ರೋ ಹ್ಯಪರೋಽಪಿ ದೃಷ್ಟಃ

ಜೀವನು ದೇಹದಲ್ಲಿ ಒಂದುಕಡೆ ಕೇವಲ ಒಂದು ಅಂಗುಷ್ಠದ ಪ್ರಮಾಣದಷ್ಟೇ ಇದ್ದರೂ ದೇಹದೊಳಗೆ ಎಲ್ಲೆಡೆಯಲ್ಲೂ ಸೂರ್ಯನಂತೆ ಪ್ರಕಾಶಿಸಬಲ್ಲನು. ಹೀಗೆ ಅವನು ಅಣುವಾಗಿದ್ದರೂ ವಿಭುವೆನಿಸಿ ಎಲ್ಲೆಡೆಯಲ್ಲೂ ಪ್ರಕಾಶಿಸಬಲ್ಲನು. ಇಷ್ಟು ವ್ಯಾಪ್ತಿಯಿದ್ದರೂ ಸಹ ಜೀವನು ಮಾನಸಸಂಕಲ್ಪದಿಂದಲೂ ಪ್ರಕೃತಿಸಂಬಂಧವಾದ ಅಹಂಕಾರದಿಂದಲೂ ಕೂಡಿ ಪರಮಾತ್ಮನಿಗಿಂತ ಬೇರೆಯಾದ ವ್ಯಕ್ತಿತ್ವದಿಂದ ಮೆರೆ ಯುತ್ತಿರುವನು. ಇವನು ಬುದ್ಧಿಯ ಗುಣವೆನಿಸಿದ ನಿಶ್ಚಯದಿಂದಲೂ, ಶರೀರದ ಗುಣವೆನಿಸಿದ ಜರಾಮರಣಗಳಿಂದಲೂ ಕೂಡಿರುವನು. ಆದರೂ ಇವನಿಗೆ ಅತ್ಯಂತ ಅಲ್ಪದ ಪ್ರಮಾಣವೇ ಇರುವುದಾಗಿ ಕಂಡುಬಂದಿದೆ. ಇಷ್ಟೊಂದು ಸೂಕ್ಷ್ಮನಾದ ಜೀವನು ಶರೀರ, ಬುದ್ಧಿ ಇವುಗಳ ಧರ್ಮವನ್ನಾಚರಿಸುತ್ತ ಸ್ವಧರ್ಮವನ್ನೇ ಮರೆತಿರು ವನು. ಹೀಗೆ ಅವನು ಭೀಕರವಾದ ಪರಧರ್ಮದಿಂದ ಹೆದರಿ ಯಾವಾಗಲೂ ಚಿಂತಾ ವ್ಯಸನಗಳನ್ನೇ ಅನುಭವಿಸುತ್ತಿರುವುದು ಅವನ ದೌರ್ಭಾಗ್ಯವೆನಿಸಿದೆ. ಸ್ವಧರ್ಮವನ್ನು ತೊರೆದವರೆಲ್ಲರೂ ಹೀಗೆ ಮೋಹಗೊಂಡು ಗೋಳಾಡುವುದು ಸ್ವಭಾವ. ಜೀವನು ಪರಮಾತ್ಮನ ಚೇತನಾಂಶನಾಗಿದ್ದು ಚೇತನಧರ್ಮವನ್ನು ಮರೆತು ಪರಧರ್ಮವನ್ನು ಆಚರಿಸುತ್ತಿರುವುದರಿಂದ ಅವನಿಗೆ ಹೀಗೆ ದುಃಖವು ಬಂದಿದೆ. ಇದನ್ನು ಜೀವರೆಲ್ಲರೂ ಅರಿಯಲೆಂಬ ಅಂಶವನ್ನು ಇಲ್ಲಿ ವ್ಯಕ್ತಪಡಿಸಲಾಗಿದೆ. ‖೮‖

ವಾಲಾಗ್ರಶತಭಾಗಸ್ಯ ಶತಧಾ ಕಲ್ಪಿತಸ್ಯ ಚ।
ಭಾಗೋ ಜೀವಸ್ಸ ವಿಜ್ಞೇಯಃ ಸ ಚಾನಂತ್ಯಾಯ ಕಲ್ಪತೇ ‖೯‖

ಜೀವನು ಎಷ್ಟು ಸೂಕ್ಷ್ಮನಿರುವನೆಂಬುದನ್ನು ಇಲ್ಲಿ ತಿಳಿಸುತ್ತಾನೆ. ಬಾಲದ ತುದಿಯ ನೂರನೆಯ ಒಂದು ಭಾಗಪೇದರೆ ಶರೀರದ ಒಂದು ಭಾಗದಲ್ಲಿ ನೂರನೆಯ ಒಂದು ಭಾಗ. ಇದನ್ನು ಮತ್ತೆ ನೂರುಭಾಗಗಳಾಗಿ ವಿಭಾಗಿಸಿದರೆ ಎಷ್ಟು ಭಾಗವಾಗುವುದೋ ಅಷ್ಟು ಪರಿಮಾಣವುಳ್ಳವನೆಂದು ಜೀವನನ್ನು ಜ್ಞಾನಿಗಳು ಭಾವಿಸಿದ್ದಾರೆ. ಇಷ್ಟೊಂದು ಸೂಕ್ಷ್ಮನಾಗಿದ್ದರೂ ಜೀವನು ತನ್ನ ಕರ್ಮಪಾಶವು ಮುಗಿದೊಡನೆ ವಿಭುವೆನಿಸಬಲ್ಲನು. ಆದರೆ ಅವನಿಗೆ ಸಂಸಾರದಶೆಯಲ್ಲಿ ಇಚ್ಛಾಜ್ಞಾನ ಕ್ರಿಯಾರೂಪವಾದ ಶಕ್ತಿಯು ಸಂಕುಚಿತವಾಗಿ ಆಣವ, ಮಾಯೇಯ, ಕಾರ್ಮಿಕ ಗಳೆಂಬ ಮಲಗಳಾಗಿ ಪರಿಣಮಿಸುತ್ತದೆ. ಹೀಗೆ ಜೀವನ ವ್ಯಾಪ್ತಿ ಪರಿಮಿತಗೊಂಡಿದೆ. ಪರಮಾತ್ಮನ ಶಕ್ತಿಯ ಪರಿಣಾಮವೆನಿಸಿದ ಮಾಯಾಶಕ್ತಿಯು ಜೀವನ ಆತ್ಮೈಶ್ವ ರ್ಯವನ್ನು ಅಪಹರಿಸಿರುವುದರಿಂದ ಜೀವನು ಸಹಜವಾಗಿ ಅಣುವೆನಿಸಿರುವನು.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಇದರಿಂದ ಜೀವನ ಇಚ್ಛೆ, ಜ್ಞಾನ, ಕ್ರಿಯೆಗಳೆಲ್ಲವೂ ಇತಿ ಮಿತಿಗಳಿಗೊಳಪಟ್ಟು ಸ್ವಾರ್ಥತೆ, ವ್ಯಾಮೋಹ, ಅಹಂಕಾರಗಳಲ್ಲಿ ಕೊನೆಗೊಂಡಿವೆ. ಮಾಯೆಯ ಹಿಡಿತಕ್ಕೆ ಸಿಕ್ಕಿರುವ ಜೀವನು ಹೀಗೆ ಭಯಗೊಂಡಿರುವನೆಂಬುದನ್ನು ಶರಣರು ವಿವರಿಸಿದ್ದಾರೆ. "ಹುಲಿಯ ಬಾಯಲ್ಲಿ ಸಿಕ್ಕಿದ ಹುಲ್ಲೆಯಂತೆ, ಸರ್ಪನ ಬಾಯಲ್ಲಿ ಸಿಕ್ಕಿದ ಕಪ್ಪೆಯಂತೆ ಸಕಲಲೋಕಾದಿಲೋಕಂಗಳು ಮಾಯಾಬಲೆಯಲ್ಲಿ ಸಿಕ್ಕಿ ಸೆರೆಯು ಹೋಗುವುದ ಕಂಡು ನಾನು ಅಂಜಿ ನಿಮ್ಮ ಮೆರೆ ಹೊಕ್ಕನು, ಕಾಯಯ್ಯ ಕಾರುಣ್ಯನಿಧಿಯೇ ಅಖಂಡೇಶ್ವರ" ಹೀಗೆ ಜೀವರೆಲ್ಲರೂ ಮಾಯಾಪಾಶಬದ್ಧರಾಗಿ ತಮ್ಮ ಸ್ವಾತಂತ್ರ್ಯ ವನ್ನು ಕಳೆದುಕೊಂಡು ಮಾಯೆಗೆ ದಾಸರಾಗಿ ಅದರ ಆಕರ್ಷಣಗಳೆನಿಸಿದ ರೂಪ ರಸ ಗಂಧ ಸ್ಪರ್ಶ ಶಬ್ದಗಳಲ್ಲಿಯೇ ಮೋಹಿಸುತ್ತಲಿರುವರು. ಹೀಗೆ ದುಃಖದಲ್ಲಿರುವ ಜೀವರಿಗೆ ಪರಮಾತ್ಮನ ಶರಣಾಗತಿಯೊಂದೇ ವಿಮೋಚನೆ ಎಂಬುದನ್ನು ಬಸವಣ್ಣನು ತನ್ನ ದೃಷ್ಟಾಂತದಿಂದ ತಿಳಿಸುತ್ತಾನೆ. ಅವನ ಅಮರವಾಣಿಯು ಎಲ್ಲರ ಮನೋ ಮಂದಿರದಲ್ಲಿ ಅವರವರ ಹಿತದೃಷ್ಟಿಯಿಂದ ನೆಲಸಲೆಂದು ಅಪೇಕ್ಷಿಸಲಾಗಿದೆ. ಅದು ಹೀಗಿದೆ. "ಧನ ಸವೆದಡೆ ತನುವನರ್ಪಿಸುವೆನು. ತನು ಸವೆದರೆ ಮನವನರ್ಪಿಸುವೆನು. ಮನ ಸವೆದರೆ ಭಾವವನರ್ಪಿಸುವೆನು. ಭಾವ ಸವೆದರೆ ನಿರ್ಭಾವವನರ್ಪಿಸುವೆನು ಕೂಡಲಸಂಗಮದೇವಯ್ಯ. ನಿನ್ನ ಭಕ್ತನ ತೆತ್ತಿಗನಾದ ಬಳಿಕ ನಾನು ನಿಮ್ಮಲ್ಲಿ ಕೂಡಿ ಅರ್ಪಿಸಿ ಶುದ್ಧನಪ್ಪೆನಯ್ಯ" ಹೀಗೆ ಜೀವನು ದೇಹದಲ್ಲಿದ್ದರೂ ದೇಹಧರ್ಮ ಗಳಿಗಂಟದಂತೆ ಕೇವಲಾತ್ಮಸ್ವರೂಪದಲ್ಲಿ ನೆಲಸುವುದೇ ಅವನ ಸ್ವಾತಂತ್ರ್ಯವೆಂದು ಅನುಭವಿಗಳು ಹೇಳುತ್ತಾರೆ. ಆಗಲೇ ಅವನಿಗೆ ಆಣವಮಲದ ಪ್ರಭಾವವು ತೊಲಗಿ ಅವನು ತನ್ನ ವೈಭವವನ್ನು ಹೊಂದುವನು. ಇದೇ ಅವನ ಶಕ್ತಿವಿಕಾಸವೆನಿಸುತ್ತದೆ. ಇದಾದರೋ ಅವನಿಗೆ ಆಣವಮಲವು ತೊಲಗಿದ ಮೇಲೆಯೇ ಮುಕ್ತಿದಶೆಯಲ್ಲಿ ಬರುವಂತಹದು. ಹೀಗೆ ಜೀವನು ಬದ್ಧಾವಸ್ಥೆಯಲ್ಲಿ ಅಣುವೆನಿಸಿದ್ದು ಬುದ್ಧಾವಸ್ಥೆ ಯಲ್ಲಿ ಇಲ್ಲಿಯೇ ಪ್ರಸಾದರೂಪದಿಂದ ಪರಿಣಮಿಸಿದ ದೇಹದಲ್ಲಿಯೇ ವಿಭುವೆನಿಸಿ ಲೋಕಕಲ್ಯಾಣವನ್ನು ಸಾಧಿಸತೊಡಗುವನು. ಇದೇ ಅವನ ಪರಿಪೂರ್ಣತೆ ಎನಿ ಸುತ್ತದೆ. ಇಂತಹ ಸ್ವಾತಂತ್ರ್ಯವನ್ನು ಯುವಯುವತಿಯರು ಪಡೆಯಲೆಂದು ಆಶಿಸಿದೆ.

ನೈವ ಸ್ತ್ರೀ ನ ಪುಮಾನೇಷಃ ನ ಚೈವಾಯಂ ನಪುಂಸಕಃ ।
ಯದ್ಯಚ್ಛರೀರಮಾದತ್ತೇ ತೇನ ತೇನ ಸ ಶಕ್ಷ್ಯತೇ ॥ ೧೦ ॥

ಸ್ತ್ರೀ ಪುರುಷ ದೇಹಗಳಲ್ಲಿರುವುದರಿಂದ ಜೀವನಿಗೆ ಲಿಂಗಭೇದವುಂಟೆ? ಎಂಬು ದನ್ನು ಆಶಂಕಿಸಿ ಪರಿಹರಿಸುತ್ತಾನೆ. ಈ ಜೀವನು ದೇಹದಲ್ಲಿದ್ದರೂ ಸ್ತ್ರೀಪುನ್ನಪುಂ ಸಕ ಭೇದಗಳು ಅವನಿಗೆ ಅಂಟುವುದಿಲ್ಲ. ಆದರೆ ಅವನು ಯಾವ ಶರೀರವನ್ನು ಸ್ವೀಕ ರಿಸುವನೋ ಅದಕ್ಕೆ ಅನುಗುಣವಾದ ಸ್ತ್ರೀಪುಂಭೇದಗಳೊಡನೆ ಹೊಂದಿಕೊಳ್ಳುವನು. ಸ್ತ್ರೀದೇಹದಲ್ಲಿ ಅವನು ತನ್ನನ್ನು ಹೆಂಗಸೆಂದೂ, ಪುರುಷದೇಹದಲ್ಲಿ ತನ್ನನ್ನು

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಗಂಡಸೆಂದೂ ಭಾವಿಸಿಕೊಳ್ಳುವನು. ಆದರೆ ಅವನು ಸಹಜವಾಗಿ ಹೆಣ್ಣೂ ಅಲ್ಲ ಗಂಡೂ ಅಲ್ಲ; ಈ ಸ್ಥಿತಿ ಅವನಿಗೆ ಶರೀರಸಂಬಂಧದಿಂದ ಬಂದಿದೆ. ಸ್ತ್ರೀಪುರುಷರ ದೇಹಗಳಲ್ಲಿರುವ ಜೀವನ ಸ್ವರೂಪವನ್ನು ಶರಣರು ಹೀಗೆ ತಿಳಿಸಿದ್ದಾರೆ. "ಹೊಲೆ ಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ. ಜಲಬಿಂದುವಿನ ವ್ಯವಹಾರವೊಂದೇ; ಆಶೆಯಾಮಿಷರೋಷಹರುಷವಿಷಯಾದಿಗಳೆಲ್ಲ ಒಂದೇ. ಏನನೋದಿ ಏನ ಕೇಳಿ ಏನು ಫಲ? ಕುಲಜನೆಂಬುದಕ್ಕಾವುದು ದೃಷ್ಟ. ಸಪ್ತಧಾತುಸಮಂ ಪಿಂಡಂ ಸಮಯೋನಿಸಮುದ್ಭವಮ್। ಆತ್ಮಜೀವಸಮುತ್ಪನ್ನಂ ವರ್ಣಾನಾಂ ಕಿಂ ಪ್ರಯೋಜನಮ್॥ ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ; ಹಾಸನಿಕ್ಕಿ ಸಾಲಿಗನಾದ; ವೇದವನೋದಿ ಹಾರುವನಾದ। ಕರ್ಣದಲ್ಲಿ ಜನಿಸಿದವರುಂಟೇ ಜಗಳದೊಳಗೆ? ಇದು ಕಾರಣ ಕೂಡಲಸಂಗಮದೇವ, ಲಿಂಗಸ್ಥಲವನರಿದವನೆ ಕುಲಜನು." ಎಂದು ಶರಣರು ಸರ್ವದೇಹಗಳಲ್ಲೂ ನೆಲಸಿರುವ ಶಿವನ ಸ್ವರೂಪವನ್ನು ವಿವೇಚನಮಾಡಿ ತಿಳಿಸಿದ್ದಾರೆ. ಇದರಿಂದ ಜನರಲ್ಲಿ ಸೋದರಪ್ರೇಮವು ನೆಲಸಲನುಕೂಲವಾಗುವುದು.

ಸಂಕಲ್ಪನಸ್ಪರ್ಶನದೃಷ್ಟಿಮೋಹೈರ್ಗ್ರಾಸಾಂಬುವೃಷ್ಟ್ಯಾ ಚಾತ್ಮವಿವೃದ್ಧಿಜನ್ಮ।
ಕರ್ಮಾನುಗಾನ್ಯನುಕ್ರಮೇಣ ದೇಹೀ ಸ್ಥಾನೇಷು ರೂಪಾಣ್ಯಭಿಸಂಪ್ರಪದ್ಯತೇ

ಜೀವನು ಹೀಗೆ ಅನೇಕ ಬಗೆಯ ಶರೀರಗಳನ್ನು ಏಕೆ ಪಡೆಯುವನು? ಅವನಿಗೆ ಶರೀರವು ಬರಲಿಕ್ಕೆ ಕಾರಣವೇನು? ಎಂಬುದಕ್ಕೆ ಉತ್ತರವನ್ನು ಇಲ್ಲಿ ತಿಳಿಸಲಾಗಿದೆ. ಜೀವನಿಗೆ ವಿಷಯಗಳ ಮೇಲೆ ಇಚ್ಛೆಯುಂಟಾಗಿ ಅವುಗಳ ಸಂಪರ್ಕ ಸಂದರ್ಶನಗಳಿಂದ ಅವುಗಳ ಬಗ್ಗೆ ಅವನಿಗೆ ವ್ಯಾಮೋಹವು ಹುಟ್ಟುವುದು. ಇದರಿಂದಲೂ ಅವನು ಮತ್ತೆ ಮತ್ತೆ ಈ ದೇಹಕ್ಕೆ ಬರಬೇಕಾಗುವುದು. ಅನ್ನಪಾನೀಯಗಳ ಮೇಲಿನ ಅಭಿಮಾನದಿಂದಲೂ ಅವನು ಇಲ್ಲಿ ಹುಟ್ಟಬೇಕಾಗುವುದು. ಹೀಗೆ ಅವನು ಆಯಾಯ ಲೋಕಗಳಲ್ಲಿ ಸಂಚರಿಸುತ್ತ ಕ್ರಮವಾಗಿ ಕರ್ಮಾನುಗುಣವಾದ ಶರೀರಗಳನ್ನು ಪಡೆಯುವನು. ಹೀಗೆ ಕರ್ಮವೇ ಅವನಿಗೆ ಶರೀರವನ್ನು ದೊರಕಿಸುವ ಸಾಧನವೆನಿಸಿದೆ. ಇದು ವಿಷಯವ್ಯಾಮೋಹದಿಂದ ಹುಟ್ಟುವಂತಹದು. ಅವನು ಯಾವುದನ್ನು ತನ್ನ ಸಂತೋಷಕ್ಕಾಗಿಯೇ ನಡೆಸುವನೋ ಅದು ಅವನಲ್ಲಿ ಮೋಹದೃಷ್ಟಿಯನ್ನು ಹುಟ್ಟಿಸಿ ಅವನನ್ನು ಕೊಲ್ಲುವುದು. ಆದ್ದರಿಂದಲೇ ಮಾನವನು ತನ್ನ ಕರ್ಮವನ್ನು ಕಾಯಕಭಾವನೆಯಿಂದಲೇ ನಡೆಸಬೇಕೆಂಬ ನಿರ್ಬಂಧವನ್ನು ಶರಣರು ಆಚರಿಸಿ ತೋರಿಸಿಕೊಟ್ಟಿದ್ದಾರೆ. "ಕಂದಿಸಿ, ಕುಂದಿಸಿ, ಬಂಧಿಸಿ, ನೋಯಿಸಿ, ಕಂಡ ಕಂಡವರ ಬೇಡಿ ತಂದು ಜಂಗಮಲಿಂಗಕ್ಕೆ ಮಾಡಿಹೆನೆಂಬ ದಂದುಗದ ಮಾಟಕ್ಕೆ ಲಿಂಗನೈವೇದ್ಯ ಸಲ್ಲದು. ತನು ಕರಗಿ, ಮನ ಬಳಲಿ, ಬಂದ ತೆರದನುವನರಿದು, ಸಂದಿಲ್ಲದೆ, ಸಂಶಯವಿಲ್ಲದೆ ಜಂಗಮಲಿಂಗಕ್ಕೆ ದಾಸೋಹವೇ ಮಾಟ. ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದು ಲಿಂಗಕ್ಕರ್ಪಿತವಲ್ಲದೆ ದುರಾಸೆಯಿಂದ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಬಂದುದು ಅನರ್ಪಿತ: ಇದು ಕಾರಣ, ಸತ್ಯಶುದ್ಧ ಕಾಯಕದ ನಿತ್ಯದ್ರವ್ಯವಾದರೆ ಚಂದೇಶ್ವರಲಿಂಗಕ್ಕೆ ನೈವೇದ್ಯ ಸಂದಿತ್ತು, ಕೇಳಯ್ಯ" ಹೀಗೆ ಯಾವುದನ್ನು ಶಿವಾರ್ಪಣ ದೃಷ್ಟಿಯಿಂದ ತನ್ನ ಕರ್ತವ್ಯವೆಂದು ಭಾವಿಸಿ ಮಾನವನು ಆಚರಿಸುವನೋ ಅದು ಅವನ ಪವಿತ್ರಕಾಯಕವೆನಿಸುವುದು. ಇದರಿಂದ ಅವನಿಗೆ ಯಾವ ಬಾಧವೂ ಸಂಭವಿಸಲಾರದು. ಹೀಗೆ ತಿಳಿದು ಮಾನವನು ಕರ್ಮಬಂಧವನ್ನು ಪರಿಹರಿಸಿಕೊಂಡು ತನ್ನ ಜನ್ಮವನ್ನು ಸಾರ್ಥಕಪಡಿಸಿಕೊಳ್ಳಬೇಕೆಂದು ಮಹರ್ಷಿಯ ಹಿರಿಯ ಅಪೇಕ್ಷೆ. ತನಗೆ ಕರ್ಮದ ಫಲವನ್ನು ಬಯಸದೆ ಭಗವಂತನ ಆರಾಧನವೆಂದು ಮಾಡಿದ ಕರ್ಮವು ಜೀವನನ್ನು ಬಂಧಿಸುವುದಿಲ್ಲ. ಇವೇ ಕರ್ಮಯೋಗವೆನಿಸುತ್ತದೆ. ಇದನ್ನು ಮಾನವರೆಲ್ಲರೂ ಆಚರಿಸಲೆಂಬುದೇ ಮಹರ್ಷಿಯ ಆಶಯವೆನಿಸಿದೆ ||೧೧||

ಸ್ಥೂಲಾನಿ ಸೂಕ್ಷ್ಮಾಣಿ ಬಹೂನಿ ಚೈವ ರೂಪಾಣಿ ದೇಹೀ ಸ್ವಗುಣೈರ್ವೃಣೋತಿ ಕ್ರಿಯಾಗುಣೈರಾತ್ಮಗುಣೈಶ್ಚ ತೇಷಾಂ ಸಂಯೋಗಹೇತುರಪರೋಽಪಿ ದೃಷ್ಟಃ

ಸಂಸಾರದ ಚಕ್ರದಲ್ಲಿ ಸಿಕ್ಕಿ ಅಲೆಯುತ್ತಿರುವ ಜೀವನು ತನ್ನ ಗುಣಗಳಿಗನು ಗುಣವಾಗಿ ಆನೆ ಮೊದಲಾದವುಗಳ ಸ್ಥೂಲದೇಹಗಳನ್ನೂ, ಇರುವೆ ಮೊದಲಾದವುಗಳ ಸೂಕ್ಷ್ಮದೇಹಗಳನ್ನೂ ಹೊಂದುತ್ತಾನೆ. ಹೀಗೆ ಜೀವನ ಗುಣಗಳೇ ಅವನಿಗೆ ಶರೀರವನ್ನು ದೊರಕಿಸುವ ಪ್ರಯುಕ್ತ ಅವನ ಸಾತ್ತ್ವಿಕ ರಾಜಸ ತಾಮಸಕ್ರಿಯೆಗಳ ಗುಣಗಳಿಂದಲೂ, ಶರೀರದ ಗುಣಗಳಿಂದಲೂ, ಅವನು ಪರಮಾತ್ಮನಿಂದ ಬೇರೆಯಾಗಿ ಅನೇಕ ಶರೀರಗಗಲ್ಲಿ ಅಲೆಯುತ್ತಿರುವನೆಂಬುದು ನಿಶ್ಚಿತವಾಗಿವೆ. ಆದರೆ ಕರ್ಮಗಳು ಸ್ವತಂತ್ರವಾಗಿ ಅವನಿಗೆ ದೇಹವನ್ನು ದೊರಕಿಸದೆ ಇದ್ದರೂ ಆ ಕರ್ಮಗಳನ್ನು ಮಾಡುವ ಜೀವನೇ ಆಯಾ ದೇಹಗಳನ್ನು ಪಡೆಯಲು ಕಾರಣವೆನಿಸುವನು. ಹೀಗೆ ಜೀವನು ಕರ್ಮಫಲದ ಸಂಬಂಧದಿಂದ ಕರ್ಮಗಳಲ್ಲಿ ಬೆರೆತು ಅವುಗಳಿಂದ ಬರುವ ಸುಖದುಃಖಗಳನ್ನು ಅನುಭವಿಸುತ್ತಾನೆ. ಮಾನವನು ತನ್ನ ಕರ್ತವ್ಯವನ್ನು ಕಾಯಕವೆಂದು ತಿಳಿದು ಆಚರಿಸಿದರೆ ಅವನಿಗೆ ಬಂಧವಳಿಯುವುದು. ಈ ವಿಷಯವನ್ನು ಶರಣರು ತಮ್ಮ ವಚನದಲ್ಲಿ ವಿಶದಪಡಿಸಿರುವರು. "ಕಾಯಕದಲ್ಲಿ ನಿರತನಾದೊಡೆ ಗುರುದರ್ಶನವಾದರೂ ಮರೆಯಬೇಕು. ಲಿಂಗ ಪೂಜೆಯಾದರೂ ಮರೆಯಬೇಕು. ಜಂಗಮ ಮುಂದಿದ್ದಡೆಯೂ ಹಂಗು ಹರಿಯಬೇಕು, ಕಾಯಕವೇ ಕೈಲಾಸವಾದ ಕಾರಣ. ಅಮಳೇಶ್ವರಲಿಂಗವಾಯಿತ್ತಾದರೂ ಕಾಯಕದೊಳಗು." ಗುರುವಾದಡೂ ಕಾಯಕದಿಂದಲೇ ಜೀವನ್ಮುಕ್ತಿ. ಲಿಂಗವಾದಡೂ ಕಾಯಕದಿಂದಲೇ ಶಿಲೆಯ ಕುಲ ಹರಿವುದು. ಜಂಗಮವಾದಡೂ ಕಾಯಕದಿಂದಲೇ ವೇಷದ ಪಾಶ ಹರಿವುದು. ಇದು ಚಂದೇಶ್ವರಲಿಂಗದ ಅರಿವು." ಹೀಗೆ ಶರಣರು ತಿಳಿಸಿರುವ ಕಾಯಕದ ಮಹತ್ತ್ವವನ್ನು ಅರಿದು ಮಾನವನು ಕರ್ತವ್ಯನಿಷ್ಠನಾದರೆ ಅವನಿಗೆ ಫಲದ ಸಂಪರ್ಕವೇ ಇರಲಾರದು. ದೇಶದ ಹಿತಕ್ಕಾಗಿಯೂ, ಲೋಕಕಲ್ಯಾಣ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಕ್ಕಾಗಿಯೂ ಕರ್ಮದಲ್ಲಿ ತೊಡಗುವ ಜೀವನಿಗೆ ಪುಣ್ಯಪಾಪಗಳು ಅಂಟದಿರುವುದರಿಂದ ಅವನು ಸಂಸಾರಚಕ್ರದಲ್ಲಿ ಅಲೆಯಬೇಕಾಗಿಲ್ಲ. ಆದ್ದರಿಂದ ಫಲಸಂಪರ್ಕವೇ ಜೀವನನ್ನು ದುಃಖಸಾಗರದಲ್ಲಿ ಮುಳುಗಿಸುತ್ತದೆ. ಹೀಗೆ ತಿಳಿದು ಅದರ ಬೆಳಕಿನಲ್ಲಿಯೇ ಕರ್ಮಗಳನ್ನಾಚರಿಸಬೇಕೆಂದು ಅನುಭವಿಗಳು ಹೇಳುತ್ತಾರೆ. ಹೀಗೆ ಜ್ಞಾನಕ್ರಿಯೆಗಳಸಮನ್ವಯಮಾರ್ಗವೇ ಸಂಸಾರಪಾಶದ ಬಿಡುಗಡೆಗೆ ಸಾಧನವೆಂದು ಜ್ಞಾನಿಗಳು ಹೇಳುತ್ತಾರೆ. ಆದ್ದರಿಂದಲೇ ಈ ಬಗ್ಗೆ ಅನುಭವಿಗಳು ಹೇಳುವ ಮಾತು ವರ್ಧಿಷ್ಣುಗಳೆಲ್ಲರಿಗೂ ಶ್ರೇಯಸ್ಕರವಾಗಿದೆ. ಅದನ್ನು ಎಲ್ಲರೂ ತಿಳಿದು ಆಚರಿಸುವುದು ಅವಶ್ಯಕ. ಅವರ ಅಮರವಾಣಿ ಹೀಗಿದೆ. "ಕ್ರಿಯೆಯಿಲ್ಲದ ಜ್ಞಾನ ಪ್ರಯೋಜನವಿಲ್ಲವಯ್ಯ. ಅದು ಹೇಗೆಂದರೆ, ದೇಹವಿಲ್ಲದ ಪ್ರಾಣಕ್ಕಾಶ್ರಯವುಂಟೆ ಅಯ್ಯ? ಆ ಪ್ರಾಣವಿಲ್ಲದೆ ಕಾಯಕ್ಕೆ ಚೈತನ್ಯವುಂಟೆ ಅಯ್ಯಾ? ಕ್ರಿಯೆಇಲ್ಲದೆ ಜ್ಞಾನಕ್ಕಾಶ್ರಯವಿಲ್ಲ. ಜ್ಞಾನವಿಲ್ಲದೆ ಕ್ರಿಯೆಗಾಶ್ರಯವಿಲ್ಲ. ಕ್ರಿಯಾಜ್ಞಾನಪ್ರಕಾಶವಿಲ್ಲದೆ ಲಿಂಗಕ್ಕೆ ಆಶ್ರಯವಿಲ್ಲ. ಇದು ಕಾರಣ ಜ್ಞಾನಕ್ರಿಯೋಪಚಾರಗಳಿರಬೇಕೆಂದೆನಯ್ಯ ಮಹಾಲಿಂಗ ಗುರುಸಿದ್ಧೇಶ್ವರ ಪ್ರಭುವೆ" ಹೀಗೆ ಜ್ಞಾನವನ್ನಾಶ್ರಯಿಸಿಕೊಂಡು ಪರಹಿತಾರ್ಥವಾಗಿಯೇ ದುಡಿಯಬೇಕೆಂದು ಆಲೋಚಿಸಿ ಯಾವನು ಕ್ರಿಯೆಯನ್ನು ನಡೆಸುವನೋ ಅವನಿಗೆ ಮಾತ್ರವೇ ಭವಬಂಧವು ತೊಲಗಬಲ್ಲದು. ಈ ಬಗೆಯ ವಿವೇಕವಿಲ್ಲದೆ ದುಡಿಯುವವನು ತನ್ನ ಕರ್ಮಫಲವನ್ನು ಅನುಭವಿಸಲು ಮತ್ತೆ ಮತ್ತೆ ಹುಟ್ಟುತ್ತಿರುವನು. ||೧೨||

ಅನಾದ್ಯನಂತಂ ಕಲಿಲಸ್ಯ ಮಧ್ಯೇ ವಿಶ್ವಸ್ಯ ಸ್ರಷ್ಟಾರಮನೇಕರೂಪಂ।
ವಿಶ್ವಸ್ಯೈಕಂ ಪರಿವೇಷ್ಟಿತಾರಂ ಜ್ಞಾತ್ವಾ ದೇವಂ ಮುಚ್ಯತೇ ಸರ್ವಪಾಶೈಃ ||

ಹೀಗೆ ಜೀವನು ಸಂಸಾರಚಕ್ರದಲ್ಲಿ ಸುತ್ತುತ್ತಿರುವುದಕ್ಕೆ ಕಾರಣವನ್ನು ತಿಳಿಸಿ ಈಗ ಅವನ ಪಾಶವಿಮೋಚನೆಗೆ ಕಾರಣವನ್ನು ತಿಳಿಸುತ್ತಾನೆ. ಜಗತ್ಕಾರಣವೆನಿಸಿದವುಗಳೆಲ್ಲಕ್ಕೂ ಪರಮಾತ್ಮನು ಅನಾದಿಯೂ ಅನಂತನೂ ಆಗಿರುವನು. ಇಂತಹ ಚಿತ್ರವಿಚಿತ್ರವೂ, ಅನಂತವೂ ಆಗಿರುವ ವಿಶ್ವದಲ್ಲಿ ಪರಶಿವನೊಬ್ಬನೇ ಅದ್ಭುತವಾದ ಮಹಿಮೆಯುಳ್ಳವನು. ಹೀಗೆ ಅವನು ವಿಶ್ವವೆಲ್ಲಕ್ಕೂ ಕರ್ತನೆನಿಸಿರುವುದಲ್ಲದೆ ಅನೇಕ ಬಗೆಯೂ ಆಗಿರುವನು. ಇಂತಹ ಪರಶಿವನನ್ನು ತಿಳಿದವನೇ ಎಲ್ಲಾ ಪಾಶಗಳಿಂದಲೂ ಬಿಡುಗಡೆಯಾಗುವನು. ಹೀಗೆ ಪರಶಿವನು ಸರ್ವವ್ಯಾಪಕನಾಗಿದ್ದರೂ ಅವನ ಜ್ಞಾನವು ನಿರಂತರೋಪಾಸನದಿಂದಲೇ ದೃಢವಾಗುತ್ತದೆ. ಯಾವನು ಗುರುವಿನಿಂದ ದೊರೆತ ಲಿಂಗವನ್ನು ತನ್ನ ಪ್ರಾಣವೆಂದು ಭಾವಿಸಿ ನಿರ್ಮಲವಾದ ಮನಸ್ಸಿನಿಂದ ಅರ್ಚಿಸುವನೋ ಅವನಿಗೇ ಪರಮಾತ್ಮನು ತನ್ನ ಸ್ವರೂಪದ ಅನುಭವವನ್ನು ಅನುಗ್ರಹಿಸುವನು. "ಯಾವನನ್ನು ಪರಶಿವನೇ ಆರಿಸಿಕೊಳ್ಳುವನೋ ಅವನಿಗೆ ಮಾತ್ರವೇ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಅವನು ದೊರತು ತನ್ನ ಸ್ವರೂಪದ ಪರಿಚಯವನ್ನು ಮಾಡಿಸುವನು" ಹೀಗೆ ಕಠೋಪನಿಷತ್ತು ತಿಳಿಸುತ್ತದೆ. ಯಾವನು ಹೃತ್ಪೂರ್ವಕವಾಗಿ ಮಾಡುವ ಅರ್ಚನೆಯನ್ನು ಅವನ ಹೃದಯದೊಳಗೇ ಇರುವ ಪರಶಿವನು ಅನುಮೋದಿಸುವನೋ ಅವನಿಗೇ ಸಚ್ಚಿದಾನಂದದ ಅನುಭವವುಂಟಾಗುವುದು. ಈ ವಿಷಯವನ್ನು ಶರಣರ ಅನುಭವವಾಣಿ ಹೀಗೆ ತಿಳಿಸುತ್ತದೆ. "ಅಗ್ಗವಣಿ, ಪತ್ರ, ಪುಷ್ಪ, ಧೂಪ, ದೀಪ, ನಿವಾಳಿಯಲ್ಲಿ ಪೂಜಿಸಿ ಪೂಜಿಸಿ ಬಳಲುತ್ತಿದ್ದಾರೆ; ಏನೆಂದರಿಯರು ಎಂತೆಂದರಿಯರು। ಜನ ಮರುಳೋ ಜಾತ್ರೆ ಮರುಳೋ ಎಂಬಂತೆ ಎಲ್ಲರೂ ಪೂಜಿಸಿ ಏನನ್ನೂ ಕಾಣದೆ ಲಯ ಕ್ಕೊಳಗಾಗಿ ಹೋದರು ಗುಹೇಶ್ವರ" "ಮಾಡಿ ಮಾಡಿ ಕೆಟ್ಟರು ನಿಜವಿಲ್ಲದೆ, ನೀಡಿ ನೀಡಿಕೊಟ್ಟರು ನಿಜವಿಲ್ಲದೆ. ಮಾಡುವ ನೀಡುವ ನಿಜಗುಣವುಳ್ಳವರ ಕೂಡಿಕೊಂಡಿಪ್ಪ ನಮ್ಮ ಕೂಡಲಸಂಗಮದೇವ" ಹೀಗೆ ಒಳಗೆ ಹೊರಗೆ ಏಕಭಾವನೆಯಿಂದ ಅರ್ಚನನೇ ಮೊದಲಾದ ಕ್ರಿಯೆಯನ್ನೂ, ಶಿವನ ಪೂಜೆ ಎಂಬ ಭಾವನೆಯಿಂದ ವ್ಯವಹಾರವನ್ನೂ ಯಾವನು ನಡೆಸುವನೋ ಅವನೇ ಜೀವಿತಕಾಲದಲ್ಲಿ ಈ ಪವಿತ್ರವಾದ ದೇಹದಲ್ಲಿಯೇ ಅಮೃತನಾಗುವನು. ||೧೩||

ಭಾವಗ್ರಾಹ್ಯಮನೀಡಾಖ್ಯಂ ಭಾವಾಭಾವಕರಂ ಶಿವಮ್ ।
ಕಲಾಸರ್ಗಕರಂ ದೇವಂ ಯೇ ವಿದುಸ್ತೇ ಜಹುಸ್ತನುಮ್ ॥ ೧೪ ॥

ಭಕ್ತಿಭಾವದಿಂದಲೇ ಪರಮಾತ್ಮನನ್ನು ಸಾಧಕರು ತಿಳಿಯಬೇಕಾಗಿದೆ. ಅವನು ಭಾವವಸ್ತುವಾದರೂ ನಿರಾಕಾರನಾದ್ದರಿಂದ ಅವನಿಗೆ ನಿರ್ದಿಷ್ಟವಾದ ವಾಸಗೃಹವಿಲ್ಲ. ಮಹಾಕೈಲಾಸವನ್ನು ಶಿವನ ವಾಸಸ್ಥಾನವೆಂದು ಶಾಸ್ತ್ರದಲ್ಲಿ ಹೇಳಿದೆಯಾದರೂ ಅದು ದಿವ್ಯಮೂರ್ತಸ್ಥಿತಿಯ ಶಿವನಿಗೆ ಸಂಬಂಧಿಸಿದ್ದು; ಆದರೆ ಅಮೂರ್ತಪರಮಶಿವನಿಗೆ ವಾಸಗೃಹವಾಗಲೀ, ಶರೀರವಾಗಲೀ ಸಂಬಂಧಿಸಿಲ್ಲ. ಹಾಗೆಯೇ ಅವನು ಜೀವರ ಮುಕ್ತಿ ಮತ್ತು ಸಂಸಾರ ಇವೆರಡಕ್ಕೂ ಕಾರಣವೆನಿಸಿರುವನು. ಚಂದ್ರನ ಪ್ರಕಾಶಕ್ಕೆ ಅನುಕೂಲವಾಗುವಂತೆ ಹದಿನಾರು ಕಳೆಗಳನ್ನು ಪರಮಶಿವನೇ ಅನುಗ್ರಹಿಸಿರುವನು. ಅಥವಾ ಶಕ್ತಿರೂಪವಾದ ತನ್ನ ನಿವೃತ್ತಿ ಮೊದಲಾದ ಆರು ಕಲೆಗಳು ಜಗತ್ತಿನಲ್ಲಿ ವ್ಯಾಪಿಸುವಂತೆ ಮಾಡಲು ಪರಮಶಿವನೇ ಕಾರಣನೆನಿಸಿರುವನೆಂದಾದರೂ 'ಕಲಾಸರ್ಗಕರಂ' ಎಂಬಲ್ಲಿ ತಿಳಿಯಬಹುದು. ಜಗತ್ತಿನ ಎಲ್ಲಾ ವಸ್ತುಗಳಲ್ಲೂ ಪರಶಿವನೇ ನೆಲಸಿರುವುದರಿಂದ ಅವನ ಕಲೆಗಳು ಆಯಾ ವಸ್ತುವಿನ ಯೋಗ್ಯತೆಗನುಸಾರವಾಗಿ ಅಲ್ಲಿ ಇದ್ದೇ ಇರುತ್ತವೆ. ಲೋಕದಲ್ಲಿ ಈ ಬಗೆಯ ವೈಚಿತ್ರ್ಯವನ್ನು ನಿರ್ಮಿಸಿ ಎಲ್ಲರಿಗೂ ಮಂಗಳಕರನೆನಿಸಿದ ಪರಮೇಶ್ವರನನ್ನು ಯಾರು ತಿಳಿಯುವರೋ ಅವರೇ ದೇಹದ ಮೇಲಿನ ಅಭಿಮಾನವನ್ನು ತೊರೆಯಬಲ್ಲರು. ಅವರು ಈ ದೇಹದಲ್ಲಿರುವಾಗಲೇ ಅದರೊಳಗಿನ ಪರಮೇಶ್ವರನಲ್ಲಿ ಸಮರಸವಾಗಿ ಬೆರೆತು ಅಮೃತರಾಗುವರು. ಹೀಗೆ ಯಾರು ಇಲ್ಲಿಯೇ ದೇಹೇಂದ್ರಿಯಗಳ ಸಹಕಾರದಿಂದ ಪರಶಿವನನ್ನು ತಿಳಿಯು

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ವರೋ ಅವರು ಭೂಮಿಗೆ ಭಾರವೆನಿಸುವರು. ಇಂತಹ ಆಡಂಬರಭಕ್ತರನ್ನು ಅನುಭವಿಗಳು ಮೆಚ್ಚುವುದಿಲ್ಲ. ಅವರ ಬಗ್ಗೆ ಶರಣರ ಮಾತು ಹೀಗಿದೆ. "ಹೊಟ್ಟೆಯ ಮೇಲೆ ಕಟ್ಟೋಗರದ ಮೊಟ್ಟೆಯ ಕಟ್ಟಿದರೇನು? ಹಸಿವು ಹೋಹುದೇ? ಅಂಗದ ಮೇಲೆ ಲಿಂಗ ಸ್ವಾಯತವಾದರೇನು? ಇಟ್ಟ ಕಲ್ಲು ಮೆಳೆಯ ಮೇಲೆ ಸಿಕ್ಕಿದಡೆ ಆ ಕಲ್ಲು ಲಿಂಗವೆ? ಇಂತಪ್ಪವರ ಕಂಡಡೆ ನಾನು ನಾಚುವೆನಯ್ಯ ಗುಹೇಶ್ವರ" ಹೀಗೆ ಹೊರಗೆ ಪರಮಾತ್ಮನ ಲಾಂಛನವನ್ನು ಧರಿಸಿದ ಮಾತ್ರದಿಂದಲೇ ಯಾರಿಗೂ ಒಳಗಿನ ಪ್ರಕಾಶದ ಅರಿವು ದೊರೆಯಲಾರದೆಂದು ಅಲ್ಲಮಪ್ರಭು ಸ್ಪಷ್ಟಪಡಿಸಿದ್ದಾನೆ. ದೇಹದೊಳಗಿನ ಪರಶಿವನ ಪರಿಚಯವು ಯಾರಿಗೂ ಅನಾಯಾಸವಾಗಿ ದೊರಕಲಾರದು. ಅದನ್ನು ವಚನಕಾರರು ಬಹು ಸೊಗಸಾಗಿ ತಿಳಿಸಿರುವರು. "ಬೀಜದೊಳಗಿಹ ವೃಕ್ಷ ಫಲವ ಸವಿಯಬಹುದೆ? ಮಳಿವನಿಯೊಳಗಿಪ್ಪ ಹುರಮಂಜಿ ಮುತ್ತುಗಳಂ ಸರಗೊಳಿಸಿ ಕೊರಳೊಳು ಧರಿಸಬಹುದೆ? ಹಾಲೊಳಗಿಪ್ಪ ತುಪ್ಪವು ಅರಸಿದರೆ ಸಿಕ್ಕುವುದೆ? ಕಬ್ಬಿನೊಳಗಿಪ್ಪ ಬೆಲ್ಲವು ಕಣ್ಣಿಗೆ ಕಾಣಿಸುವುದೆ? ತನ್ನೊಳಗಿಪ್ಪ ಶಿವತತ್ತ್ವವು ನೆನೆದಾಕ್ಷಣವೆ ಅನುಭವಕ್ಕೆ ಬರುವುದೆ? ಭಾವಿಸಿ, ತಿಳಿದು, ಮಥಿಸಿ, ಪ್ರಯೋಗಾಂತರದಿಂ ಪ್ರಸನ್ನತ್ವವಂ ಮಾಡಿಕೊಂಡು ತದನುಭವಸುಖದೊಳೋಲಾಡುವುದು ಅತಿ ಚತುರನಾದ ಶಿವಶರಣಂಗಲ್ಲದೆ ಉಳಿದರ್ಗುಂಟೆ" ಹೀಗೆ ದೇಹದೊಳಗಿರುವ ಶಿವನು ಹೊರಗೆ ಅರ್ಚನವಿಲ್ಲದೆ ಅನುಭವಗೋಚರವಾಗನು. ಹೊರಗೆ ಅರ್ಚನದಿಂದ ಯಾರ ಹೃದಯವು ಕರಗುವುದಿಲ್ಲವೋ ಅವನ ಅರ್ಚನವೇ ವ್ಯರ್ಥವಾದೀತು. "ಮನ ಕರಗದವರಲ್ಲಿ ನೀನರ್ಚನವನೊಲ್ಲೆಯಯ್ಯ" ಹೀಗೆ ಅಕ್ಕಮಹಾದೇವಿ ತನ್ನ ನಿಷ್ಠೆಯನ್ನು ತಿಳಿಸಿರುವಳು. ಹೃದಯಶುದ್ಧವಿಲ್ಲದೆ ಲಿಂಗವನ್ನು ಅರ್ಚಿಸುವವನು ಅದರ ನಿಜತತ್ತ್ವವನ್ನು ತಿಳಿಯಲಾರನು. ಅವನು ಧರಿಸಿದ ಲಿಂಗವು ಬಿದಿರುಮೆಳೆಯಲ್ಲಿ ಸಿಕ್ಕಿಕೊಂಡ ಕಲ್ಲಿಂಟಿಯಾಗುವುದೇ ಹೊರತು ಅದರಿಂದ ಅರ್ಚಕನಿಗೆ ಯಾವ ಫಲವೂ ಸಿದ್ಧಿಸಲಾರದೆಂದು ಅಂತಹ ಅರ್ಚಕರನ್ನು ನೋಡಿ ಶರಣರು ವ್ಯಥೆಯಿಂದ ತಿಳಿಸಿರುವರು. ಹೀಗೆ ಹೃದಯದ ಈಶ್ವರನನ್ನು ತಿಳಿದು ಹೊರಗಿನ ಅರ್ಚನೆಯಿಂದ ಯಾರು ಸಾಕ್ಷಾತ್ಕರಿಸುವರೋ ಅವರು ಮಾತ್ರ ಇಲ್ಲಿಯೇ ಅಮೃತರಾಗುವರು.

—೦—೦—

ಆರನೇ ಅಧ್ಯಾಯ

ಸ್ವಭಾವಮೇಕೇ ಕವಯೋ ವದಂತಿ ಕಾಲಂ ತಥಾನ್ಯೇ ಪರಿಮುಹ್ಯಮಾನಾಃ ।
ದೇವಸ್ಯೈಷ ಮಹಿಮಾ ತು ಲೋಕೇ ಯೇನೇದಂ ಭ್ರಾಮ್ಯತೇ ಬ್ರಹ್ಮಚಕ್ರಂ ॥

ಹಿಂದೆ 'ಕಲಾಸರ್ಗಕರಂ ದೇವಂ' ಎಂದು ಹೇಳಿದ್ದು ಹೊಂದುವುದಿಲ್ಲವೆಂದು ಇಲ್ಲಿ ಆಕ್ಷೇಪಿಸಲಾಗಿದೆ. ಸೃಷ್ಟಿಪ್ರಳಯಗಳು ಆಯಾಯ ವಸ್ತುವಿನ ಸ್ವಭಾವ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ದಂತೆ ನಡೆಯುತ್ತಿರುವುದರಿಂದ ಪರಮಶಿವನಿಗೆ ಅದರಲ್ಲಿ ಯಾವ ಸಂಬಂಧವೂ ಇಲ್ಲ. ಅಥವಾ ಕಾಲವಾದರೂ ಎಲ್ಲಕ್ಕೂ ಕಾರಣವಾಗಬಹುದು. ಆದ್ದರಿಂದ ಪರಶಿವ ಬ್ರಹ್ಮವೇ ಜಗತ್ತನ್ನಾವರಿಸಿರುವ ಕಲೆಗಳ ಕರ್ತನೆಂಬುದು ಹೇಗೆ ಹೊಂದುತ್ತದೆ ಎಂದು ಆಶಂಕಿಸಿ ಪರಶಿವನಲ್ಲದೆ ಬೇರೆ ಯಾವೊಂದು ವಸ್ತುವೂ ಜಗತ್ಕಾರಣವಾಗ ಲಾರದೆಂದು ಸಮಾಧಾನಮಾಡಲಾಗಿದೆ. ಆಕ್ಷೇಪವನ್ನು ಮೊದಲು ತಿಳಿಸುತ್ತಾನೆ. ಕೆಲವು ಮೇಧಾವಿಗಳು ಜಗತ್ತಿನ ಸೃಷ್ಟಿ ಪ್ರಳಯಗಳಿಗೆ ಆಯಾಯ ವಸ್ತುವಿನ ಸ್ವಭಾವವೇ ಕಾರಣವೆಂದು ಹೇಳುತ್ತಾರೆ. ಹಾಗೆಯೇ ಭ್ರಾಂತಿಗೊಂಡ ಕೆಲವು ಅವಿವೇಕಿಗಳು ಕಾಲವನ್ನು ಜಗತ್ಕಾರಣವೆಂದು ಹೇಳುತ್ತಾರೆ. ಆದರೆ ಸೂಕ್ಷ್ಮವಾಗಿ ವಿಚಾರ ಮಾಡಿ ನೋಡಿದರೆ ಜಗತ್ತಿನ ಸೃಷ್ಟಿ ಮೊದಲಾದವೆಲ್ಲವೂ ಪರಶಿವನ ಮಹಿಮೆಯಲ್ಲದೆ ಬೇರೆಯಲ್ಲ. ಜಗದ್ವ್ಯಾಪಾರನಿರ್ವಾಹವೇ ಅವನ ಅಸಾಧಾರಣಧರ್ಮವೆನಿಸಿದೆ. ಅಂತಹ ಪರಶಿವನ ಪ್ರಭಾವದಿಂದಲೇ ಚತುರ್ಮುಖನೇ ಮೊದಲಾದ ಈ ಜೀವ ಪ್ರಪಂಚವು ಬದಲಾವಣೆಯಾಗುತ್ತಲಿದೆ. ಆದ್ದರಿಂದ ಪರಮಶಿವನೇ ಇದೆಲ್ಲಕ್ಕೂ ಕಾರಣನೆಂಬುದರಲ್ಲಿ ಯಾವ ವಿರೋಧವೂ ಇಲ್ಲ. ಪರಮಾತ್ಮನ ಸರ್ವವ್ಯಾಪ್ತಿಯನ್ನು ಶರಣರು ಸ್ಪಷ್ಟಪಡಿಸಿದ್ದಾರೆ. "ಮರ್ತ್ಯಲೋಕನೆಂಬುದು ಕರ್ತಾರನ ಕಮ್ಮಟವಯ್ಯ. ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ. ಇಲ್ಲಿ ಸಲ್ಲದವರು ಎಲ್ಲಿಯೂ ಸಲ್ಲರಯ್ಯ" ಎಂದು ಹೇಳಿರುವುದಲ್ಲದೆ ಅವರು ಜಗತ್ತನ್ನು ಪರಶಿವನ ವಿನೋದಸ್ಥಾನವೆಂದು ಭಾವಿಸಿದ್ದಾರೆ. ಅವನ ಸಂಬಂಧವಿಲ್ಲದಿದ್ದರೆ ಜಡಪ್ರಪಂಚವೇ ಇರಲಾರದು. ಹೀಗೆ ಜಗತ್ತಿಗೆ ಅವನ ಸಂಪರ್ಕವಿರುವುದಷ್ಟೇ ಅಲ್ಲದೆ ಪ್ರತಿಯೊಬ್ಬ ಜೀವನಿಗೂ ಅವನವನ ಕರ್ಮದಂತೆ ಫಲವನ್ನು ಕೊಡುವ ಹೊರೆಯೂ ಅವನಿಗೇ ಸೇರಿದೆ. ಅದನ್ನು ಈ ವಚನವು ಬಹು ಸೊಗಸಾಗಿ ವರ್ಣಿಸಿದೆ. "ಧರಣಿಯ ಮೇಲೊಂದು ಅಂಗಡಿಯನಿಕ್ಕಿ ಹರದ ಕುಳ್ಳಿರ್ದ ನಮ್ಮ ಮಹದೇವಶೆಟ್ಟಿ. ಒಮ್ಮನವಾದರೆ ಒಡನೆ ನುಡಿವನು; ಇಮ್ಮನವಾದೊಡೆ ನುಡಿಯ. ಕಾಣಿಯ ಸೋಲ; ಅರ್ಧಕಾಣಿಯ ಗೆಲ್ಲ. ಜಾಣ ನೋಡಾ ನಮ್ಮ ಕೂಡಲಸಂಗಮದೇವ". ಹೀಗೆ ಜಗತ್ತೆಲ್ಲವೂ ಪರಶಿವನ ಅಂಗಡಿಬೀದಿಯಾಗಿದೆ ಎಂದೂ, ಅದರಲ್ಲಿ ನಾವೆಲ್ಲರೂ ನಮಗೆ ಸಲ್ಲಬೇಕಾದ್ದನ್ನು ಪಡೆಯಬೇಕೆಂದೂ, ವ್ಯಾಪಾರಿಯೊಡನೆ ನಿರ್ಮಲಹೃದಯದಿಂದ ವರ್ತಿಸಿದರೆ ಮಾತ್ರವೇ ಅವನು ನಮಗೆ ಪ್ರಸನ್ನನಾಗುವನೆಂದೂ, ಇಲ್ಲವಾದರೆ ಅವನು ನಮ್ಮ ಕಡೆಗೆ ಗಮನಿಸುವುದೇ ಇಲ್ಲವೆಂದೂ ಅವನ ನಿರ್ದಾಕ್ಷಿಣ್ಯವಾದ ವ್ಯವಹಾರವನ್ನು ಇಲ್ಲಿ ತಿಳಿಸಲಾಗಿದೆ. ಅವನಾದರೋ ಎರೆದರೆ ನೆನೆಯದೆ, ಮರೆತರೆ ಬಾಡದೆ ಪ್ರತಿಯೊಬ್ಬರಿಗೂ ಸಲ್ಲಬೇಕಾದಷ್ಟು ಕೂಲಿಯನ್ನು ಅವನವನಿಂದ ಸ್ವಭಾವಕ್ಕನುಗುಣವಾಗಿ ದುಡಿಸಿಯೇ ಕೊಡುತ್ತಿರುವನು. ಇದೆಲ್ಲವೂ ಅವನ ಶಕ್ತಿವೈಶಿಷ್ಟ್ಯದ ಸತ್ಪರಿಣಾಮವೆಂದು ಅನುಭವಿಗಳು ಭಾವಿಸಿದ್ದಾರೆ. ॥೧॥

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಯೇನಾವೃತಂ ನಿತ್ಯಮಿದಂ ಹಿ ಸರ್ವಂ ಜ್ಞಃ ಕಾಲಕಾರೋ ಗುಣೀ ಸರ್ವವಿದ್ಯಃ
ತೇನೇಶಿತಂ ಕರ್ಮ ವಿವರ್ತತೇ ಹ ಪೃಥ್ವ್ಯಾಪ್ಯತೇಜೋಽನಿಲಖಾನಿ ಚಿಂತ್ಯಮ್

ಈ ಜಗತ್ತೆಲ್ಲವೂ ತ್ರಿಕಾಲಗಳಲ್ಲಿಯೂ ಮಹಾದೇವನಿಂದಲೇ ಆವೃತವಾಗಿದೆ; ಯಾತಕ್ಕೆಂದರೆ ಇದೆಲ್ಲವನ್ನು ತಿಳಿಯುವುದೇ ಅವನ ಸ್ವಭಾವವೆನಿಸಿದೆ. ಹಾಗೆಯೇ ಅವನು ಸರ್ವಾಧಾರವಾದ ಕಾಲಕ್ಕೂ ನಿಯಾಮಕನಾಗಿರುವನು. ಅವನಲ್ಲಿ ಯಾವ ಪಾಪವೂ ಅಂಟದೆ ಇರುವುದರಿಂದ ಅವನು ನಿರ್ಮಲನೆನಿಸಿರುವನು. ಆದ್ದರಿಂದ ಅವನ ಪ್ರೇರಣದಿಂದಲೇ ಪಂಚಭೂತಗಳು ಹೊರಬಿದ್ದು ಸೃಷ್ಟಿ ಮೊದಲಾದ ವ್ಯಾಪಾರಗಳು ನಡೆಯುತ್ತಲಿವೆ ಎಂದು ವಿವೇಕಿಗಳು ತಿಳಿಯಬೇಕು. ಆತ್ಮನಿಂದಲೇ ಪಂಚಭೂತಗಳು ಹೊರಹೊಮ್ಮಿದ್ದನ್ನು ತೈತ್ತಿರೀಯಶ್ರುತಿಯು ತಿಳಿಸಿದೆ. ಅವುಗಳನ್ನು ಪಂಚೀಕರಣಪ್ರಕ್ರಿಯೆಯಿಂದ ಸೇರಿಸಿ ಪ್ರಪಂಚವನ್ನು ರಚಿಸುವ ಚಾತುರ್ಯವು ಅವನಿಗೇ ಸೇರಿದೆ. ಅವನ ಪ್ರೇರಣವಿಲ್ಲದೆ ತೃಣವೂ ಚಲಿಸುವುದಿಲ್ಲವೆಂದು ಶ್ರುತಿಯೇ ತಿಳಿಸಿದೆ. ಹೀಗೆ ಶಿವನ ಆಜ್ಞೆಗೊಳಪಟ್ಟ ಈ ಜಗತ್ತಿನಲ್ಲಿ ಸಾರವೆನಿಸಿ ಅಲ್ಲಿಯೇ ಗೋಪ್ಯವಾಗಿ ಅಡಗಿರುವ ಆ ಶಿವನನ್ನು ಜೀವಂತವಿಶ್ವಾಸದಿಂದ ಸೇವಿಸುವುದು ಮಾನವರೆಲ್ಲರಿಗೂ ಆವಶ್ಯಕವೆನಿಸಿದೆ. ಆ ಶಿವನನ್ನು ಸೇವಿಸುವ ಬಗ್ಗೆ ಶರಣರು ಹೀಗೆ ಹೇಳುತ್ತಾರೆ. "ಸಾವು ತಡವಿಲ್ಲ. ನರಕ ದೂರವಿಲ್ಲ. ದೇಹದಿಚ್ಛೆಗೆ ಹರಿದು ಕೆಮ್ಮನೆ ಕೆಡಬೇಡ. ದುರ್ವಿಷಯವ ಬಿಡು ಬೇಗ. ಗುರುಪದವ ನಂಬು. ನಮ್ಮ ಸಮ್ಮುಲಿಗೆಯ ಚನ್ನರಾಮನಲ್ಲಿ ನೀನು ಸುಖಿಯಪ್ಪೆ ಮರುಳೆ" ಹೀಗೆ ಶರೀರರಕ್ಷಣೆಗಾಗಿ ಪಾಪಗಳನ್ನು ಆಚರಿಸದಂತೆಯೂ, ಹೃದಯದ ಕಡೆ ಅವರ ಗಮನವನ್ನು ಹರಿಸುವಂತೆಯೂ ಶರಣರು ಅವ್ಯಾಜಪ್ರೇಮದಿಂದ ಜಗತ್ತಿಗೆ ತಮ್ಮ ದಿವ್ಯಸಂದೇಶವನ್ನು ಸಾರಿರುವರು. ಒಟ್ಟಿನಲ್ಲಿ ಪರಶಿವನ ಪರಿಚಯವು ಎಲ್ಲರಿಗೂ ಒಂದಿಲ್ಲೊಂದು ದಿನವಾದರೂ ಆಗಲೇಬೇಕು. ಅದು ಸಾಧಕನಿಗೆ ಅವನ ಹೃದಯದಲ್ಲಿ ಆಗಬೇಕೇ ಹೊರತು ಬೇರೆ ಎಲ್ಲಿಯೂ ಸಾಧ್ಯವಾಗುವಂತಿಲ್ಲ. ಅದನ್ನೇ ಅಲ್ಲಮಪ್ರಭು ಸ್ಪಷ್ಟವಾಗಿ ತಿಳಿಸಿದ್ದಾನೆ. "ಸುತ್ತಿ ಸುತ್ತಿ ಬಂದಡಿಲ್ಲ; ಲಕ್ಷ ಗಂಗೆಯ ಮಿಂದಡಿಲ್ಲ, ತುಟ್ಟತುದಿಯ ಮೇರುಗಿರಿಯ ಮೆಟ್ಟಿ ಕೂಗಿದಡಿಲ್ಲ, ನಿತ್ಯನೇಮದಿಂದ ತನುವ ಮುಟ್ಟಿಕೊಂಡಡಿಲ್ಲ. ನಿಚ್ಚಕ್ಕೆ ನಿಚ್ಚ ನೆನೆವ ಮನವ, ಅಂದಂದಿಗೆ ಅತ್ತಲಿತ್ತ ಹರಿವ ಮನವ ಚಿತ್ತದಲ್ಲಿ ನಿಲಿಸಬಲ್ಲಡೆ ಬಚ್ಚಬರಿಯ ಬೆಳಗು ಗುಹೇಶ್ವರಲಿಂಗವು" ಹೀಗೆ ನಿರ್ಮಲವಾದ ಮನಸ್ಸಿನಿಂದ ಹೃದಯದಲ್ಲಿ ಪರಮಾತ್ಮನನ್ನು ಕಾಣಬೇಕೆಂಬುದನ್ನು ಒತ್ತಿ ತಿಳಿಸಲಾಗಿದೆ. ಪರಶಿವನಿಂದ ತುಂಬಿರುವ ಈ ಜಗತ್ತಿನ ಮಾನವರ ದುರ್ವರ್ತನೆಯನ್ನು ನೋಡಿ ಶರಣರು ಮನಕರಗಿ ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ. "ಅಂಗದಿಚ್ಛೆಗೆ ಮದ್ಯಮಾಂಸವ ತಿಂಬರು; ಕಂಗಳಿಚ್ಛೆಗೆ ಪರವಧುವ ನೆನೆವರು; ಲಿಂಗಲಾಂಛನಧಾರಿಯಾದಲ್ಲಿ ಫಲವೇನೋ; ಲಿಂಗಪಥವ ತಪ್ಪಿ ನಡೆವರು

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಜಂಗಮಮುಖದಿಂದೆ ನಿಂದೆ ಬಂದರೆ ಕೊಂಡ ಮಾರಿಂಗೆ ಹೋಹದು ತಪ್ಪದು ಕೂಡಲ ಸಂಗಮದೇವ". ಹೀಗೆ ಭಗವತ್ಪೂರ್ಣವಾದ ಜಗತ್ತಿನಲ್ಲಿ ಭಗವಂತನನ್ನೇ ತೊರೆದು ದೇಹದೃಷ್ಟಿಯಿಂದಲೇ ಮಧುಮಾಂಸಗಳನ್ನು ಭೋಗಿಸುತ್ತ ಆಸುರೀಪ್ರಭಾವದಿಂದ ದುರ್ಮಾರ್ಗದಲ್ಲಿ ಪ್ರವರ್ತಿಸುವವರನ್ನು ಕಂಡು ಶರಣರು ಪವಿತ್ರವಾದ ದೇಹದಲ್ಲಿ ಅವರು ಸಂಗ್ರಹಿಸಿಕೊಳ್ಳುವ ಪಾಪಕ್ಕಾಗಿ ಮರುಗುವರು. ಆದ್ದರಿಂದ ಜನರು ಅನುಭವಿಗಳ ವಚನಾಮೃತವನ್ನು ವಿಶ್ವಾಸದಿಂದ ಪಾನಮಾಡುತ್ತ ತಮ್ಮ ಹೃದಯವನ್ನು ಶುದ್ಧಗೊಳಿಸಿಕೊಳ್ಳಲು ಯತ್ನಿಸುವರೆಂದು ಮಹರ್ಷಿಯು ನಿರೀಕ್ಷಿಸುತ್ತಾನೆ. ಮನೆಯಲ್ಲಿ ಕಶ್ಮಲವು ತುಂಬಿ, ಬಾಗಿಲಿನ ಪಕ್ಕದಲ್ಲಿ ಹುಲ್ಲು ಬೆಳೆದಿದ್ದರೆ ಮನೆಯಲ್ಲಿ ಯಜಮಾನನಿಲ್ಲವೆಂದು ಜನರು ತೀರ್ಮಾನಿಸುತ್ತಾರೆ. ಹಾಗೆ ಹೃದಯದಲ್ಲಿ ವಿಷಯವಾಸನೆ ತುಂಬಿಕೊಂಡಿದ್ದರೆ ಅಲ್ಲಿ ಪರಮೇಶ್ವರನಿಲ್ಲವೆಂದೇ ಭಾವಿಸಬೇಕಾಗುತ್ತದೆ. ಆದ್ದರಿಂದ ಈಶ್ವರನ ವಾಸಗೃಹವೆನಿಸಿದ ಹೃದಯವನ್ನು ಯಾವಾಗಲೂ ಶುದ್ಧವಿಟ್ಟಿರಬೇಕೆಂಬುದನ್ನು ಯುವಯುವತಿಯರು ಮೊದಲು ಗಮನಿಸಬೇಕು. ಮನಸ್ಸು ಶುದ್ಧವಾಗಿದ್ದು ಹೃದಯದಲ್ಲಿ ಅಂಟಿಕೊಂಡವನಿಗೆ ಬಡತನದ ಅರಿವೇ ಆಗುವುದಿಲ್ಲವೆಂಬ ಅಂಶವು ಎಲ್ಲರ ಸ್ಮೃತಿಯಲ್ಲೂ ಇರಬೇಕಾಗಿದೆ. ॥೨॥

ತತ್ಕರ್ಮ ಕೃತ್ವಾ ವಿನಿವರ್ತ್ಯ ಭೂಯಃ
ತತ್ತ್ವಸ್ಯ ತತ್ತ್ವೇನ ಸಮೇತ್ಯ ಯೋಗಮ್ ।
ಏಕೇನ ದ್ವಾಭ್ಯಾಂ ತ್ರಿಭಿರಷ್ಟಭಿರ್ವಾ
ಕಾಲೇನ ಚೈವಾತ್ಮಗುಣೈಶ್ಚ ಸೂಕ್ಷ್ಮೈಃ ॥ ೩ ॥

ಪರಮಾತ್ಮನು ಜಗತ್ತನ್ನು ಸೃಷ್ಟಿಮಾಡುವಾಗಲೂ, ಅದನ್ನು ಮತ್ತೆ ನಿರೀಕ್ಷಿಸುವಾಗಲೂ ಪಂಚಭೂತಗಳಲ್ಲಿ ಒಂದೊಂದನ್ನೂ ಮತ್ತೊಂದರೊಡನೆ ಕೂಡಿಸುವನು. ಇವು ಐದರೊಡನೆ ಮನಸ್ಸು, ಬುದ್ಧಿ, ಅಹಂಕಾರ ಇವು ಸೇರಿ ಅವನಿಗೆ ಎಂಟು ಬಗೆಯ ಶರೀರವುಂಟೆಂದು ಅನುಭವಿಗಳು ಹೇಳುತ್ತಾರೆ. ಪರಮಾತ್ಮನೇ ಈ ಎಂಟು ಪ್ರಕೃತಿಗಳಲ್ಲಿ ಆಯಾಕಾಲಕ್ಕೆ ತಕ್ಕಂತೆ ಬದಲಾವಣೆಗಳನ್ನು ಮಾಡುತ್ತಿರುವನು. ಇವಿಷ್ಟೇ ಅಲ್ಲದೆ ಜೀವಗುಣಗಳೆನಿಸಿ ಅವನಲ್ಲಿ ಸೂಕ್ಷ್ಮವಾಗಿ ನೆಲಸಿರುವ ಕಾಮಕ್ರೋಧಗಳ ಮೂಲಕವೂ ಒಂದು ತತ್ತ್ವವನ್ನು ಬೇರೊಂದು ತತ್ತ್ವದೊಡನೆ ಸೇರಿಸಿ ಸೃಷ್ಟಿಯನ್ನು ಅವನೇ ನಡೆಸುತ್ತಿರುವನು. ಹೀಗೆ ಸೃಷ್ಟಿಸಿ ಅದರೊಳಗೆ ತಾನೂ ಪ್ರವೇಶಿಸಿ ಅವೆಲ್ಲವನ್ನೂ ತಾನೇ ನಿರೀಕ್ಷಿಸುವನು. ಹೀಗೆ ಅವನ ಶರೀರವೆನಿಸಿದ ಅಷ್ಟಪ್ರಕೃತಿಗಳಲ್ಲಿ ಕಾಲಾನುಗುಣವಾಗಿಯೂ ಕಾಮಕ್ರೋಧಗಳ ಮೂಲಕವೂ ಪರಸ್ಪರವಾಗಿ ಸಂಘಟನೆಯುಂಟಾಗುತ್ತದೆ. ಈ ರೀತಿಯಲ್ಲಿ ಪರಮಾತ್ಮನು ಜಗದ್ವ್ಯಾಪಾರವನ್ನು ನಡೆಸುತ್ತಿರುವುದು ಅವನ ಒಂದು ಲೀಲೆ ಎನಿಸಿದೆ. ॥ ೩ ॥

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಆರಭ್ಯ ಕರ್ಮಾಣಿ ಗುಣಾನ್ವಿತಾನಿ
ಭಾವಾಂಶ್ಚ ಸರ್ವಾನ್ ವಿನಿಯೋಜಯೇದ್ಯಃ ।
ತೇಷಾಮಭಾವೇ ಕೃತಕರ್ಮನಾಶಃ
ಕರ್ಮಕ್ಷಯೇ ಯಾತಿ ಸ ತತ್ತ್ವತೋಽನ್ಯಃ ॥ ೪ ॥

ಹೀಗೆ ಸೃಷ್ಟಿಸುವಾಗ ತತ್ತ್ವಗಳನ್ನು ಪರಸ್ಪರವಾಗಿ ಸೇರಿಸುವ ಕ್ರಿಯೆಯೇ ಮುಖ್ಯವೆಂಬುದನ್ನು ಇಲ್ಲಿ ತಿಳಿಸುತ್ತಾನೆ. ಸತ್ತ್ವರಜಸ್ತಮೋಗುಣಗಳಿಂದ ಕೂಡಿದ ಪುಣ್ಯ ಪಾಪ ಮೊದಲಾದ ಕರ್ಮಗಳನ್ನು ಪರಮಾತ್ಮನು ತಾನೇ ಆರಂಭಿಸಿ ಅವೆಲ್ಲ ವಸ್ತುಗಳನ್ನೂ ಆಯಾ ಗುಣಗಳಿಗನುಗುಣವಾಗಿ ಸೇರಿಸುತ್ತಾನೆ. ಆದ್ದರಿಂದ ಜಗತ್ತಿನ ವಿಚಿತ್ರಗಳಿಗೆ ಕರ್ಮವೇ ಕಾರಣವೆಂದೂ, ಇದರ ವೈಚಿತ್ರ್ಯದಲ್ಲಿ ಪರಮಾತ್ಮನಿಗೆ ಯಾವ ವೈಷಮ್ಯದೋಷವೂ ಅಂಟುವುದಿಲ್ಲವೆಂದೂ "ವೈಷಮ್ಯ ನೈರ್ಘೃಣ್ಯೇ ನ ಸಾಪೇಕ್ಷತ್ವಾತ್" ಎಂಬ ಸೂತ್ರವು ತಿಳಿಸುತ್ತದೆ. ಮಾನವರ ಸೃಷ್ಟಿಯಾದಮೇಲೆ ಅವರು ಅಹಂಕಾರಾಭಿಮಾನಗಳಿಂದ ಯಾವುದನ್ನು ಮಾಡುವರೋ ಅದೇ ಕರ್ಮವೆನಿಸಿ ಅವರನ್ನು ಬಂಧಿಸುತ್ತದೆ. ದೇಹದಲ್ಲಿರುವ ಈಶ್ವರನು ಅವನ ಸೇವಕನ ಕಡೆಯಿಂದ ಅವನ ಇಂದ್ರಿಯಗಳ ಮೂಲಕ ನಡೆಸುವ ವ್ಯವಹಾರವೇ ಅವನ ಷಟ್ಸ್ಥಲಲೀಲೆ ಎಂದು ಅನುಭವಿಗಳು ಹೇಳುತ್ತಾರೆ. ಈ ಲೀಲೆಯೇ ಪ್ರತಿಯೊಬ್ಬ ಮಾನವನ ದೇಹದಲ್ಲಿಯೂ ಅರಿವಿಲ್ಲದೆ ನಡೆಯುತ್ತಲಿದೆ. ಈ ಲೀಲೆಯಿಂದ ಪ್ರಸಾದ ರೂಪವಾದ ಉಪಕಾರವನ್ನು ಹೊಂದಿ ನಿತ್ಯಸುಖಿಯಾಗಿ ಬಾಳುವುದೇ ಜೀವನ ಪಾಲಿಗೆ ಬಂದದ್ದು. ಆದರೆ ಎಲ್ಲ ಜೀವರೂ ಹೀಗೆ ಶಿವನ ಪ್ರಸಾದವನ್ನು ಹೊಂದುತ್ತಿಲ್ಲ. ಅವರು ದೇಹ, ಮನ, ಬುದ್ಧಿ, ಇಂದ್ರಿಯಗಳು ಇವೆಲ್ಲವನ್ನೂ ತಮ್ಮವೆಂದೇ ಭಾವಿಸುತ್ತಾರೆ. ಆದ್ದರಿಂದಲೇ ಅವರು ತಮ್ಮನ್ನು ಕರ್ತೃವೆಂದು ಭಾವಿಸಿ ಕರ್ಮಗಳಲ್ಲಿ ಆಸಕ್ತಿಯಿಂದ ಪ್ರವರ್ತಿಸುವರು. ಅವರು ಮಾಡುವ ಕರ್ಮವೆಲ್ಲವೂ ಅವರನ್ನು ಜನ್ಮಾಂತರಗಳಲ್ಲಿಯೂ ಅನುಸರಿಸುತ್ತದೆ. ಈ ಕರ್ಮವೇ ಪ್ರವಾಹರೂಪದಿಂದ ವ್ಯಾಪಿಸಿ ಕರ್ತೃವನ್ನು ದುಃಖಸಾಗರದಲ್ಲಿ ಮುಳುಗಿಸುತ್ತದೆ. ಹೀಗೆ ಕರ್ಮಾನುಗುಣವಾಗಿ ಸೃಷ್ಟಿಯಾರಂಭವಾಗಿದ್ದರೂ ಈಶ್ವರಾರ್ಪಣಬುದ್ಧಿಯಿಂದ ಕರ್ಮವನ್ನಾಚರಿಸಿದರೆ ಪುಣ್ಯಪಾಪಗಳು ಅವನಿಗಂಟದೆ ಇರುವುದರಿಂದ ಜೀವನಿಗೆ ಕರ್ಮಚಕ್ರದಿಂದ ಬಿಡುಗಡೆಯುಂಟೆಂದು ಈಗ ತಿಳಿಸುತ್ತಾನೆ. ಈಶ್ವರನ ಇಚ್ಛೆಯಂತೆ ಅವನ ಸಂತೋಷಕ್ಕಾಗಿ ಕರ್ಮವನ್ನಾಚರಿಸುವುದರಿಂದ ಹಿಂದೆ ಮಾಡಿದ್ದ ಕರ್ಮಗಳೆಲ್ಲವೂ ನಷ್ಟವಾಗುತ್ತವೆ. ಹೀಗೆ ಕರ್ಮಕ್ಷಯವಾದರೆ ಜೀವನು ವಾಸ್ತವವಾಗಿ ಬೇರೆಯೇ ಆಗುವನು ; ಅಂದರೆ ಪರಶಿವನಾಗುವನೆಂದರ್ಥ. ಪರಹಿತಕ್ಕಾಗಿ ಚಿತ್ತಶುದ್ಧಿಯಿಂದ ಕರ್ಮವನ್ನಾಚರಿಸುವವನು. ಹೀಗೆ ಇಲ್ಲಿಯೇ ತನ್ನ ವಾಸ್ತವವಾದ ಕೇವಲಾತ್ಮಸ್ಥಿತಿಯನ್ನು ಪಡೆದು ಈ ದೇಹವನ್ನು ತೊರೆದಮೇಲೆಯೂ ಅದನ್ನೇ ಅನುಭವಿಸುವನು. ಈ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ವಿಷಯವನ್ನು ಶರಣರು ತಮ್ಮ ಅನುಭವದ ಮೂಲಕ ತಿಳಿಸಿರುವರು. "ಸತ್ಯಶುದ್ಧ ಕಾಯಕದಲ್ಲಿ ಚಿತ್ತವಿಚ್ಛಂದವಾಗದಿರಬೇಕು. ನೇಮದ ಕೂಲಿ ಅಂದಿನ ನಿತ್ಯಕಾಯಕದಲ್ಲಿ ಸಂದಿರಬೇಕು. ನೇಮದ ಕೂಲಿಯ ಬಿಟ್ಟು ಹೇಮದಾಸೆಗೆ ಕಾಮಿಸಿ ದ್ರವ್ಯವ ಹಿಡಿದರೆ ತಾ ಮಾಡುವ ಸೇವೆ ನಷ್ಟವಯ್ಯ" ಹೀಗೆ ಈಶ್ವರನ ಸೇವೆ ಎಂಬ ಭಾವದಿಂದ ಆಚರಿಸುವುದೆಲ್ಲವೂ ಚಿತ್ತಶುದ್ಧಿಯ ಮೂಲಕ ಹೃದಯದಲ್ಲಿ ಶೋಭಿಸುವ ಪರಶಿವನಿಗೆ ಸಂತೋಷವನ್ನುಂಟುಮಾಡುವುದೆಂದು ಶರಣರು ಹೇಳಿದ್ದಾರೆ. "ಮನಶುದ್ಧವಿಲ್ಲದವರಿಗೆ ದ್ರವ್ಯದ ಬಡತನವಲ್ಲದೆ ಚಿತ್ತಶುದ್ಧನಾಗಿ ಕಾಯಕವ ಮಾಡುವಲ್ಲಿ ಸದ್ಭಕ್ತಂಗೆ ಎತ್ತ ನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು, ಮಾರಯ್ಯಪ್ರಿಯ ಅಮಳೇಶ್ವರಲಿಂಗದ ಸೇವೆಯುಳ್ಳನ್ನಕ್ಕರ." ಹೀಗೆ ಪ್ರಾಪಂಚಿಕರು ತಮ್ಮ ವ್ಯವಹಾರಗಳನ್ನು ನಡೆಸುವಾಗ ಪವಿತ್ರಭಾವನೆಯನ್ನು ಅನುಸರಿಸಬೇಕೆಂದು ಶರಣರು ಉಪದೇಶಿಸಿದ್ದಾರೆ. ಈ ಭಾವನೆಯಿಂದ ಕರ್ಮವನ್ನಾಚರಿಸಿದವನಿಗೆ ಅದರ ಲೇಪನವಾಗದ ಪ್ರಯುಕ್ತ ಅವನಿಗೆ ಇಲ್ಲಿಯೇ ಪ್ರಕೃತಿಸಂಬಂಧವಾದ ಜನ್ಮವು ತೊಲಗಿ ದಿವ್ಯಜನ್ಮವು ಲಭಿಸುವುದು. ಇದನ್ನು ಬ್ರಹ್ಮಭಾವವೆಂದೂ, ಶಿವೈಕ್ಯವೆಂದೂ, ಲಿಂಗಾಂಗಸಾಮರಸ್ಯವೆಂದೂ ಅನುಭವಿಗಳು ಹೇಳುತ್ತಾರೆ. ಈ ಬಗೆಯ ಅನುಭವವನ್ನು ಶುದ್ಧ ಜೀವನು ಇಲ್ಲಿಯೇ ಪ್ರಸಾದಕಾಯದಲ್ಲಿಯೇ ಅನುಭವಿಸಬೇಕೆಂದು ಮಹರ್ಷಿಯು ಒತ್ತಾಯಪಡಿಸಿದ್ದಾನೆ ॥ ೪ ॥

ಆದಿಃ ಸ ಸಂಯೋಗನಿಮಿತ್ತಹೇತುಃ
ಪರಸ್ತ್ರಿಕಾಲಾದಕಲೋಽಪಿ ದೃಷ್ಟಃ ।
ತಂ ವಿಶ್ವರೂಪಂ ಭವಭೂತಮೀಡ್ಯಂ
ದೇವಂ ಸ್ವಚಿತ್ತಸ್ಥಮುಪಾಸ್ಯ ಪೂರ್ವಮ್ ॥ ೫ ॥

ಆದಿಕಾರಣವೆನಿಸಿದ ಪರಮಾತ್ಮನೇ ಜೀವನಿಗೆ ಶರೀರದ ಸಂಯೋಗಕ್ಕೂ ಅದಕ್ಕೆ ಕಾರಣವೆನಿಸಿದ ಪುಣ್ಯಪಾಪಗಳಿಗೂ ಕಾರಣವೆನಿಸಿದ್ದಾನೆ. "ಇವನೇ ಜೀವರಿಂದ ಒಳ್ಳೆಯದನ್ನೂ ಕೆಟ್ಟದ್ದನ್ನೂ ಮಾಡಿಸುವನು" ಎಂದು ಶ್ರುತಿಯಲ್ಲಿ ಶಿವನೇ ಜೀವರ ಇಚ್ಛೆಯಂತೆ ಆಯಾ ಕರ್ಮಗಳನ್ನು ಮಾಡಿಸುವನೆಂದು ತಿಳಿಸಲಾಗಿದೆ. ಹೀಗೆ ಪರಮಾತ್ಮನು ಆಯಾಕಾಲಗಳಲ್ಲಿ ಎಲ್ಲವನ್ನೂ ಮಾಡಿಸುತ್ತಿದ್ದರೂ ಕಾಲಕ್ಕೆ ಅಧೀನನಾಗಿಲ್ಲ. ಅವನ ಕಳೆಗಳೇ ಜಗತ್ತನ್ನು ವ್ಯಾಪಿಸಿದ್ದರೂ ಅವನು ಆ ಕಲೆಗಳಿಗಂಟಿಕೊಂಡಿಲ್ಲ. ಇಂತಹ ಪರಮಾತ್ಮನು ಎಲ್ಲಕ್ಕೂ ಕಾರಣನೆನಿಸಿ ಎಲ್ಲರಿಗೂ ವಂದ್ಯನೆನಿಸಿ ಅವರವರ ಹೃದಯದಲ್ಲಿ ನೆಲಸಿರುವನು. ಇಂತಹ ಪ್ರಭುವನ್ನು ತಿಳಿದವನಿಗೆ ಕರ್ಮಪಾಶವು ತೊಲಗುವುದು. ಹೀಗೆ ಪರಶಿವನ ಉಪಾಸನದಿಂದಲೇ ಪಾಶವು ತೊಲಗುವುದೆಂದೇ ಬಸವಾರ್ಯನು ತನ್ನ ಉದಾಹರಣದಿಂದ ತಿಳಿಸುತ್ತಾನೆ. "ಬಡಪಶು ಪಂಕದಲ್ಲಿ ಬಿದ್ದೊಡೆ ಕಾಲ ಬಡಿವುದಲ್ಲದೆ ಬೇರೆ ಗತಿಯುಂಟೆ? ಶಿವಶಿವಾ! ಹೋದಹೆ ಹೋದಹೆನಯ್ಯ! ನಿಮ್ಮ ಮನದತ್ತಲೆನ್ನ ತೆಗೆಯಯ್ಯ, ಪಶುವಾನು! ಪಶುಪತಿ ನೀನು.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ತುಡುಗಣಿಯೆಂದು ಎನ್ನ ಹಿಡಿದು ಬಡಿಯದ್ದಮುನ್ನ ಒಡೆಯ, ನಿಮ್ಮ ಬಯ್ಯದಂತೆ ಮಾಡು ಕೂಡಲಸಂಗಮದೇವ" ಹೀಗೆ ಶರಣರು ಸಂಸಾರವೆಂಬ ಕೆಸರಿನಲ್ಲಿ ಮುಳುಗಿದ ಪಶುಜೀವನಿಗೆ ಶಿವೋಪಾಸನವೆಂಬ ಕ್ರಿಯೆಯನ್ನು ಉದ್ಧಾರಮಾರ್ಗವೆಂದು ತಿಳಿಸಿದ್ದಾರೆ. ಹೀಗೆ ಯಜ್ಞರೂಪವಾದಕ್ರಿಯೆಯೇ ಪಾಶವಿಮೋಚನದ ಮಾರ್ಗವೆನಿಸುತ್ತದೆ.

ಸ ವೃಕ್ಷಕಾಲಾಕೃತಿಭಿಃ ಪರೋಽನ್ಯೋ
ಯಸ್ಮಾತ್ಪ್ರಪಂಚಃ ಪರಿವರ್ತತೇಽಯಮ್ ।
ಧರ್ಮಾವಹಂ ಪಾಪನುದಂ ಭಗೇಶಂ
ಜ್ಞಾತ್ವಾತ್ಮಸ್ಥಮಮೃತಂ ವಿಶ್ವಧಾಮ ॥ ೬ ॥

ಆ ಪರಮಾತ್ಮನು ದೇಹವೆಂಬ ವೃಕ್ಷದಲ್ಲಿ ಜೀವನೊಡನೆ ಇದ್ದರೂ ಅದಕ್ಕೆ ಅಂಟದಂತಿರುವನು. ಅವನೇ ಕಾಲವೆನಿಸಿದ್ದರೂ ಆಯಾಕಾಲದ ಘಟನೆಗಳಿಗಿಂತ ಅವನು ಬೇರೆಯೇ ಆಗಿರುವನು. ಲೋಕದಲ್ಲಿರುವ ಆಕೃತಿಗಳೆಲ್ಲದರಲ್ಲೂ ಅವನು ಇದ್ದರೂ ಅವಕ್ಕಿಂತ ಬೇರೆಯೇ ಆಗಿರುವನು. ಯಾವನಿಂದ ಪ್ರಪಂಚವು ಬದಲಾವಣೆ ಹೊಂದುವುದೋ ಅಂತಹ ಪರಮಾತ್ಮನು ಎಲ್ಲರಿಗೂ ಧರ್ಮವನ್ನು ದೊರಕಿಸಲಿಕ್ಕಾಗಿಯೂ, ಪಾಪವನ್ನು ಪರಿಹರಿಸಲಿಕ್ಕಾಗಿಯೂ, ಐಶ್ವರ್ಯವನ್ನು ನಿಯಮಿಸಲಿಕ್ಕಾಗಿಯೂ ಜೀವರೊಳಗೆ ನೆಲಸಿರುವನು. ಹೀಗೆ ಅವನು ಉತ್ಪತ್ತಿವಿನಾಶಗಳಿಲ್ಲದೆ ಅಮೃತಸ್ವರೂಪನೂ ಜಗತ್ತಿಗೆ ಆಧಾರನೂ ಆಗಿರುವನೆಂದು ತಿಳಿದವನು ಕರ್ಮಪಾಶದಿಂದ ಮುಕ್ತನಾಗುವನು. "ಬೀಜದಲ್ಲಿ ಅಂಕುರವು ನೆಲಸಿರುವಂತೆ ಜೀವನಲ್ಲಿ ಶಿವನು ಅಡಗಿರುವನು" ಹೀಗೆ ಸಿದ್ಧಾಂತಶಿಖಾಮಣಿಯು ಜೀವನಲ್ಲಿ ಪರಶಿವನಿರುವುದನ್ನು ತಿಳಿಸುತ್ತಾನೆ. ಆದ್ದರಿಂದ ದೇಹವನ್ನೇ ದೇವಾಲಯವೆಂದು ಭಾವಿಸಿ ಜೀವನು ತನ್ನೊಳಗಿನ ಶಿವನನ್ನು ಒಳಗೂ ಹೊರಗೂ ಅರ್ಚಿಸಬೇಕು, ಈ ದೇಹದಲ್ಲಿ ಶಿವನೇ ಸಾರವಾದ ವಸ್ತುವೆಂದು ಅನುಭಾವಿಗಳು ಹೇಳುತ್ತಾರೆ. ದೇಹದ ಸ್ವಾಮಿ ಎನಿಸಿದ ಜೀವನಿಗೂ ಶಿವನೇ ಕಾರಣವೆನಿಸಿರುವನು. ಶಿವನು ದೇಹದಿಂದ ಹೊರಟರೆ ಶವವೆನಿಸಿದ ದೇಹವನ್ನು ಯಾರೂ ಪುರಸ್ಕರಿಸುವುದಿಲ್ಲ. "ವ್ಯಾಧನೊಂದು ಮೊಲನ ತಂದರೆ ಸಲುವ ಹಾಗಕ್ಕೆ ಬಿಲಿವರಯ್ಯ ನೆಲನಾಳ್ದನ ಹೆಣನೆಂದರೆ ಒಂದಡಕೆಗೆ ಕೊಂಬವರಿಲ್ಲ ನೋಡಯ್ಯ, ಮೊಲನಿಂದ ಕಡುಕಷ್ಟ ನರನ ಬಾಳುವೆ, ಸಲೆ ನಂಬೋ ಕೂಡಲಸಂಗಮದೇವನ" ಹೀಗೆ ಮಹಾತ್ಮ ಬಸವಣ್ಣನು ಶಿವನಿಲ್ಲದ ಮಾನವದೇಹವನ್ನು ಸತ್ತಮೊಲಕ್ಕಿಂತಲೂ ನಿಕೃಷ್ಟವೆಂದು ತಿಳಿಸಿರುವನು. ಆದ್ದರಿಂದ ರೋಗರುಜಿನಗಳಿಲ್ಲದೆ ದೇಹವು ಭದ್ರವಾಗಿರುವಾಗಲೇ ತನ್ನೊಳಗಿನ ಶಿವನನ್ನು ತಿಳಿಯಲು ಸಾಧಕನು ಪ್ರಯತ್ನಿಸಬೇಕು. ಹೀಗೆ ದೇಹದಲ್ಲಿಯೇ ಶಿವನನ್ನು ಉಪಾಸನಮಾಡುವುದು ಆವಶ್ಯಕವೆಂಬುದನ್ನು ಶರಣರು ಅನುಭವಿಸಿ ಹೇಳುತ್ತಾರೆ. "ಉಳ್ಳವರು ಶಿವಾಲಯವ ಮಾಡುವರು, ನಾನೇನ ಮಾಡುವೆ? ಬಡವನಯ್ಯಾ, ಎನ್ನ ಕಾಲೇ ಕಂಭ; ದೇಹವೇ ದೇಗುಲ; ಶಿರವೇ ಹೊನ್ನ ಕಳಸವಯ್ಯಾ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಕೂಡಲಸಂಗಮದೇವ, ಕೇಳಯ್ಯ. ಸ್ಥಾವರಕ್ಕಳಿವುಂಟು ; ಜಂಗಮಕ್ಕಳಿವಿಲ್ಲ" ಹೀಗೆ ಮಹಾತ್ಮ ಬಸವಣ್ಣನು ಮಾನವರೆಲ್ಲರ ಗಮನವನ್ನು ಅವರವರ ಹೃದಯದ ಪ್ರಾಣ ಲಿಂಗದ ಅರ್ಚನೆಯ ಕಡೆಗೆ ತಿರುಗಿಸಿರುವನು. ಆದ್ದರಿಂದ ಸಾಧಕರು ಹೊರಗೆ ಹುಡುಕುವುದಕ್ಕಿಂತ ತನ್ನೊಳಗೆ ಹುಡುಕುವುದು ಅವಶ್ಯಕವೆಂದು ಮಹರ್ಷಿಯು ಇಲ್ಲಿ ತಿಳಿಸಿರುವುದು ಯುಕ್ತವೆನಿಸುತ್ತದೆ.

ತಮೀಶ್ವರಾಣಾಂ ಪರಮಂ ಮಹೇಶ್ವರಂ
ತಂ ದೇವತಾನಾಂ ಪರಮಂ ಚ ದೈವತಮ್ ।
ಪತಿಂ ಪತೀನಾಂ ಪರಮಂ ಪರಸ್ತಾತ್
ವಿದಾಮ ದೇವಂ ಭುವನೇಶಮೀಡ್ಯಮ್ ॥ ೭ ॥

ಪರಮೇಶ್ವರನು ಜಗತ್ತಿನ ಕಲ್ಯಾಣವನ್ನು ಸಾಧಿಸುವವರೆಂದು ಪ್ರಸಿದ್ಧರಾದವರೆಲ್ಲರಿಗೂ ಉತ್ಕೃಷ್ಟನೆನಿಸಿರುವನು ; ಜಗತ್ತನ್ನು ರಕ್ಷಣಮಾಡುವವರೆಲ್ಲರಿಗೂ ಶ್ರೇಷ್ಠನೆನಿಸಿರುವನು. ಅವನಿಗಿಂತ ಬೇರೆ ಈಶ್ವರನಾಗಲೀ ದೇವನಾಗಲೀ ಪತಿಯಾಗಲೀ ಇಲ್ಲವೆಂದು ಇಲ್ಲಿ ತಿಳಿಸುವುದೇ ಮಹರ್ಷಿಯ ಆಶಯ. ಹೀಗೆ ಎಲ್ಲರಿಗಿಂತಲೂ ಹೆಚ್ಚಿನವನೆನಿಸಿ ವಿಶ್ವಕ್ಕೇ ನಿಯಾಮಕನಾಗಿ ಎಲ್ಲರಿಗೂ ಸ್ತೋತ್ರಾರ್ಹನೆನಿಸಿದ ಆ ಪರಶಿವನನ್ನು ನಾವು ಇಂದು ತಿಳಿದು ಬದುಕಬೇಕಾಗಿದೆ.

ನ ತಸ್ಯ ಕಾರ್ಯಂ ಕರಣಂ ಚ ವಿದ್ಯತೇ
ನ ತತ್ಸಮಶ್ಚಾಭ್ಯಧಿಕಶ್ಚ ದೃಶ್ಯತೇ ।
ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ
ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ ॥ ೮ ॥

ಆ ಪರಶಿವನಿಗೆ ಜಗದ್ವ್ಯಾಪಾರನಿರ್ವಾಹಕ್ಕೆ ಬೇಕಾದ ಶರೀರವಾಗಲೀ ಇಂದ್ರಿಯ ಮೊದಲಾದ ಸಾಧನಗಳಾಗಲೀ ಯಾವುದೂ ಇಲ್ಲ. ಅಲ್ಲಿಗೆ ಅವನು ಇವು ಯಾವನ್ನೂ ಅಪೇಕ್ಷಿಸುವುದಿಲ್ಲವೆಂದು ಹೇಳಿದಂತಾಯಿತು. ಅವನಿಗೆ ಸಮಾನವೋ ಅಥವಾ ಅವನಿಗಿಂತ ಉತ್ಕೃಷ್ಟವೋ ಆದ ವಸ್ತುವೇ ಜಗತ್ತಿನಲ್ಲಿ ಎಲ್ಲೂ ಇಲ್ಲ. ಈ ದೇವನ ಸರ್ವೋತ್ಕೃಷ್ಟವಾದ ಶಕ್ತಿಯು ಅನೇಕ ಬಗೆಯಾಗಿ ವ್ಯಾಪಿಸಿರುವುದಾಗಿ ಇಲ್ಲಿ ತಿಳಿಸಿದೆ. ಅದಾದರೋ ಅವನಲ್ಲಿ ಸಹಜವಾಗಿ ನೆಲಸಿರುವುದು. ಅದನ್ನು ಅವನಿಂದ ಪ್ರತ್ಯೇಕಿಸಲು ಸಾಧ್ಯವಿಲ್ಲ. ಚಂದ್ರನಲ್ಲಿ ಚಂದ್ರಿಕೆಯಂತೆ, ಪುಷ್ಪದಲ್ಲಿ ಗಂಧದಂತೆ, ಹಾಲಿನಲ್ಲಿ ಮಾಧುರ್ಯದಂತೆ, ಸಕ್ಕರೆಯಲ್ಲಿ ರುಚಿಯಂತೆ ಶಕ್ತಿಯು ಪರಮಾತ್ಮನಲ್ಲಿ ಅವಿನಾಭಾವಸಂಬಂಧದಿಂದ ನೆಲಸಿರುವುದು. ಅದು ಅವನನ್ನು ಬಿಟ್ಟು ಬೇರೆರೀತಿಯಲ್ಲಿ ಸ್ವತಂತ್ರವಾಗಿ ಇರುವಂತೆಯೇ ಇಲ್ಲ ; ಅಂದರೆ ಅವನನ್ನು ಆಶ್ರಯಿಸಿಕೊಂಡೇ ಅದು ಇರಬೇಕೆಂದು ಹೇಳಿದಂತಾಯಿತು. ಇಂಗಡಲೊಳಿಂಪು,

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಬೆಳದಿಂಗಳೊಳು ತಂಪು, ಕುಸುಮಂಗಳೊಳು ಕಂಪು ಬೆರೆದಂತೆ ಪರಶಿವನಲ್ಲಿ ಶಕ್ತಿಯು ಪ್ರಾಣರೂಪದಿಂದ ಅಡಗಿರುವುದು. ಇದನ್ನು ಕಾಳಿದಾಸಮಹಾಕವಿಯು ಶಬ್ದ ಅರ್ಥಗಳ ದೃಷ್ಟಾಂತದಿಂದ ವಿವರಿಸಿದ್ದಾನೆ. ಅರ್ಥವನ್ನು ಬಿಟ್ಟು ಶಬ್ದವಾಗಲೀ ಶಬ್ದವನ್ನು ಬಿಟ್ಟ ಅರ್ಥವಾಗಲೀ ಸ್ವತಂತ್ರವಾಗಿರುವಂತೆಯೇ ಇಲ್ಲ. ಶಬ್ದವಿದ್ದೆಡೆ ಅರ್ಥವಿರಲೇಬೇಕು. ಹಾಗೆ ಶಿವನಿರುವೆಡೆ ಶಕ್ತಿ ಇದ್ದೇ ಇರಬೇಕು. ಶಕ್ತಿ ಇಲ್ಲದೆಡೆ ಶಿವನೂ ಇರುವಂತಿಲ್ಲ. ಶಕ್ತಿ ಇಲ್ಲದ ಶಿವನಿಗೆ ಪ್ರಾಶಸ್ತ್ಯಪುರಸ್ಕಾರಗಳು ದೊರೆಯುವಂತಿಲ್ಲ. ಶಿವನನ್ನು ಬಿಟ್ಟು ಸ್ವತಂತ್ರಿಸಿ ಅದು ಪ್ರವರ್ತಿಸುವಂತೆಯೂ ಇಲ್ಲ. ಹೀಗೆ ಶಿವಶಕ್ತಿಯರು ಯಾವಾಗಲೂ ಕೂಡಿಯೇ ಇರುವರು. ಇಂತಹ ಶಕ್ತಿ ಪ್ರಳಯಕಾಲದಲ್ಲಿ ಶಿವನಲ್ಲಿ ಪ್ರಾಣರೂಪದಿಂದ ಅಡಗಿದ್ದು ಅವನಿಗೆ ಸೃಷ್ಟಿಯ ಇಚ್ಛೆಯುಂಟಾದಾಗ ಜ್ಞಾನಕ್ರಿಯಾರೂಪಗಳಿಂದ ಹೊರಹೊಮ್ಮುವುದು. ಇಚ್ಛಾಶಕ್ತಿಗೆ ಜ್ಞಾನಶಕ್ತಿಯು ಅಂತರ್ಮುಖವು, ಕ್ರಿಯಾಶಕ್ತಿಯು ಬಹಿರ್ಮುಖವೂ ಆಗಿ ಪ್ರಕಟವಾಗುವುದು. ಹೀಗೆ ಪ್ರಾಣರೂಪದಿಂದ ಶಿವನಲ್ಲಿರುವ ಚಿಚ್ಛಕ್ತಿಗೂ ಶಿವನಿಗೂ ಇಚ್ಛಾಜ್ಞಾನಕ್ರಿಯಾರೂಪದಿಂದ ಜಗತ್ಸೃಷ್ಟಿಯಕಾಲದಲ್ಲಿ ಭೇದವು ಕಂಡುಬಂದರೂ ಅದ್ವೈತವೇ ಸಹಜವಾಗಿರುತ್ತದೆ ಎಂದು ಅನುಭವಿಗಳು ಹೇಳುತ್ತಾರೆ. ಹೀಗೆ ಶಿವಶಕ್ತಿಯರ ಸಾಮರಸ್ಯವನ್ನು ಬೋಧಿಸುವುದರಿಂದ ಶಕ್ತಿವಿಶಿಷ್ಟಾದ್ವೈತವೇ ಶ್ರುತಿಗೆ ಸಮ್ಮತವಾದ ಸಮನ್ವಯಮಾರ್ಗವೆನಿಸುತ್ತದೆ. ॥೮॥

ನ ತಸ್ಯ ಕಶ್ಚಿತ್ಪತಿರಸ್ತಿ ಲೋಕೇ ನ ಚೇಶಿತಾ ನೈವ ಚ ತಸ್ಯ ಲಿಂಗಮ್ ।
ಸ ಕಾರಣಂ ಕಾರಣಾಧಿಪಾಧಿಪೋ ನ ಚಾಸ್ಯ ಕಶ್ಚಿಜ್ಜನಿತಾ ನ ಚಾಧಿಪಃ ॥

ಹೀಗೆ ಅವನಿಗೆ ಸಮಾನವೋ ಅಥವಾ ಅಧಿಕವೋ ಆದ ವಸ್ತುವೇ ಎಲ್ಲಿಯೂ ಇಲ್ಲದ್ದರಿಂದ ಅವನಿಗೆ ಬೇರೆ ಯಾವ ರಕ್ಷಕನೂ ಇಲ್ಲ. ಹಾಗೆಯೇ ನಿಯಾಮಕನೂ ಇಲ್ಲ. ಅವನು ಹೀಗೆಯೇ ಇದ್ದಾನೆಂದು ತಿಳಿಸುವ ಚಿಹ್ನಗಳೇ ಎಲ್ಲಿಯೂ ಕಾಣುವಂತಿಲ್ಲ. ಒಂದು ಕಡೆ ಬೆಂಕಿ ಇದೆ ಎಂಬುದನ್ನು ತಿಳಿಸಲು ಹೊಗೆ ಸಾಧನವಾಗುವಂತೆ ಪರಮಾತ್ಮನ ಇರುವಿಕೆಯನ್ನು ತಿಳಿಸಲು ಬೇರೆ ಯಾವ ಗಮಕವೂ ಇಲ್ಲ. ಹೀಗೆ ಅವನ ಬಗ್ಗೆ ಪ್ರತ್ಯಕ್ಷಪ್ರಮಾಣವು ಹೊಂದದಿರುವಂತೆ ಅನುಮಾನದಿಂದಲೂ ಅವನನ್ನು ತಿಳಿಯಲು ಸಾಧ್ಯವಾಗುವುದಿಲ್ಲ. ಆದ್ದರಿಂದಲೇ ಇಂದ್ರಿಯಗಳಿಗೆ ಅಧಿಪತಿ ಯಾವ ಜೀವನಿಗೂ ನಿಯಾಮಕನೆನಿಸಿದ ಈಶ್ವರನು ಸರ್ವಕ್ಕೂ ಕಾರಣನೆನಿಸಿದ್ದು ಅನ್ವರ್ಥವೇ ಆಗಿದೆ. ಹಿಗಿದ್ದರೂ ಅವನಿಗೆ ಬೇರೊಬ್ಬ ಅಧಿಪತಿಯೋ ಉತ್ಪಾದಕನೋ ಇರುವಂತಿಲ್ಲ. ಹೀಗೆ ಅವನು ಯಾವಾಗಲೂ ಸ್ವತಂತ್ರನೂ ಪರಿಪೂರ್ಣನೂ ಆಗಿ ಶೋಭಿಸುತ್ತಿರುವನು. ॥ ೯ ॥

ಯಸ್ತಂತುನಾಭ ಇವ ತಂತುಭಿಃ ಪ್ರಧಾನಜೈಃ ಸ್ವಭಾವತೋ ದೇವ ಏಕಃ
ಸ್ವಮಾವೃಣೋತ್ । ಸ ನೋ ದಧಾದ್ಬ್ರಹ್ಮಾಪ್ಯಯಮ್ ॥೧೦॥

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಹೀಗೆ ಪರಶಿವನನ್ನು ಸ್ತುತಿಸಿ ಅವನಲ್ಲಿ ತನ್ನ ಇಷ್ಟಾರ್ಥವನ್ನು ಕೇಳಿಕೊಳ್ಳುತ್ತಾನೆ. ಇಷ್ಟೊಂದು ಮಹಿಮೆಯುಳ್ಳ ಆ ಪರಶಿವನು ತನ್ನ ಬಾಯಿನಿಂದ ಹೊರ ಹೊಮ್ಮುವ ರೇಷ್ಮೆಯದಾರದಿಂದಲೇ ತನ್ನನ್ನು ಸುತ್ತಿಕೊಳ್ಳುವ ರೇಷ್ಮೆಹುಳುವಿನಂತೆ ತನ್ನಿಂದ ಹೊರಟ ಪ್ರಕೃತಿಯ ಗುಣಗಳಿಂದ ಹೊರಬೀಳುವ ಬುದ್ಧಿ ಮೊದಲಾದ ತತ್ತ್ವಗಳಿಂದ ಸಹಜವಾಗಿಯೇ ತನ್ನನ್ನು ಮುಚ್ಚಿಕೊಂಡಿರುವನು. ಈ ದೇಹದಲ್ಲಿ ಪರಶಿವನು ಹೀಗೆ ತ್ರಿಗುಣಮಯವಾದ ಮಾಯಾಶಕ್ತಿಯಿಂದ ಆವೃತನಾಗಿರುವುದರಿಂದಲೇ ಅವನು ಯಾರಿಗೂ ಗೋಚರನಾಗುವುದಿಲ್ಲ. ಅಂತಹ ಪರಶಿವನು ನಮಗೆ ತನ್ನೊಡನೆ ಸಾಮರಸ್ಯವನ್ನು ಅನುಗ್ರಹಿಸಲೆಂದು ಪ್ರಾರ್ಥಿಸಲಾಗಿದೆ. ॥೧೦॥

ಏಕೋ ದೇವಃ ಸರ್ವಭೂತೇಷು ಗೂಢಃ
ಸರ್ವವ್ಯಾಪೀ ಸರ್ವಭೂತಾಂತರಾತ್ಮಾ ।
ಕರ್ಮಾಧ್ಯಕ್ಷಃ ಸರ್ವಭೂತಾಧಿವಾಸಃ
ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ ॥೧೧॥

ಅಂತಹ ಪರಶಿವನ ಜ್ಞಾನವೇ ಮೋಕ್ಷಕ್ಕೆ ಕಾರಣವೆನಿಸಿದೆ. ಅದನ್ನು ಬಿಟ್ಟರೆ ಬೇರೆ ದಾರಿಯೇ ಇಲ್ಲವೆಂದು ಹೇಳುತ್ತ ಮತ್ತೆ ಅವನನ್ನು ಸ್ತುತಿಸುತ್ತಾನೆ. ಆ ಸ್ವಾಮಿಯು ತಾನೊಬ್ಬನೇ ಇದ್ದರೂ ಎಲ್ಲ ಪ್ರಾಣಿಗಳಲ್ಲೂ ಗೋಪ್ಯವಾಗಿ ನೆಲಸಿರುವನು. ಹೀಗೆ ಅವನು ಸರ್ವವ್ಯಾಪಿಯಾಗಿದ್ದರೂ ಪ್ರಾಣಿಗಳೆಲ್ಲರಲ್ಲೂ ಅಂತರ್ಯಾಮಿಯಾಗಿದ್ದುಕೊಂಡು ಅವರು ಮಾಡುವ ಪುಣ್ಯಪಾಪಕರ್ಮಗಳಿಗೆ ಸಾಕ್ಷಿಯಾಗಿದ್ದು ಅವುಗಳಿಗೆ ಫಲವನ್ನು ಕೊಡುತ್ತಿರುವನು. ಎಲ್ಲರೊಳಗೂ ಸಾಕ್ಷಿಯಾಗಿ ನೆಲಸಿದ್ದು ಎಲ್ಲರಿಗೂ ಆಶ್ರಯದಾತನಾಗಿರುವನು. ಸತ್ತ್ವರಜಸ್ತಮೋಗುಣಗಳೊಳಗೆ ಅವನು ನೆಲಸಿದ್ದರೂ ಅವುಗಳಿಗೆ ಅಂಟದಷ್ಟು ಶುದ್ಧನಾಗಿರುವನು. ಅವನೇ ಜೀವನಾಗಿ ತ್ರಿಗುಣಗಳಿಗೆ ಅಂಟಿಕೊಂಡಿದ್ದರೂ ಆ ಜೀವನಲ್ಲಿ ಅಂತರ್ಯಾಮಿಯಾಗಿರುವ ತಾನು ಅವಕ್ಕೆ ಅಂಟಿಕೊಂಡಿಲ್ಲದಿರುವುದು ಅವನ ಸ್ವಾತಂತ್ರ್ಯದ ಸತ್ಪರಿಣಾಮವೆನಿಸಿದೆ. ಇದೇ ಅವನಲ್ಲಿ ಒಂದು ಅದ್ಭುತವಾದ ಮಹಿಮಾವಿಶೇಷ. ಅವನು ಪರಿಪೂರ್ಣನಾದ್ದರಿಂದ ಲೋಕಾನುಗ್ರಹಲೀಲೆಯಲ್ಲಿ ಅವನಿಗೆ ಇದೆಲ್ಲವೂ ಸಹಜವಾಗಿ ಸಂಭವಿಸುತ್ತದೆ.

ಏಕೋ ವಶೀ ನಿಷ್ಕ್ರಿಯಾಣಾಂ ಬಹೂನಾಮೇಕಂ
ಬೀಜಂ ಬಹುಧಾ ಯಃ ಕರೋತಿ ।
ತಮಾತ್ಮಸ್ಥಂ ಯೇಽನು ಪಶ್ಯಂತಿ ಧೀರಾಸ್ತೇಷಾಂ
ಸುಖಂ ಶಾಶ್ವತಂ ನೇತರೇಷಾಮ್ ॥೧೨॥

ಇಂತಹ ಪರಮಾತ್ಮನು ಸ್ವತಂತ್ರನಾಗಿದ್ದುಕೊಂಡು ಕರ್ಮಾಧೀನರಾದ ಜೀವರಿಗೆ ಅವರವರ ಕರ್ಮಕ್ಕೆ ಅನುಗುಣವಾಗಿ ಬೀಜದಂತೆ ಪ್ರೇರಕನಾಗಿರುವನು. ಈ ಬಗೆಯ ಅವನ ಸೂಕ್ಷ್ಮಪ್ರೇರಣದಿಂದಲೇ ಜೀವರಲ್ಲಿ ಪರಸ್ಪರ ಭೇದವು ಕಂಡುಬರುತ್ತದೆ. ಜೀವರೆಲ್ಲರೂ ದೇವಾಂಶರಾದ್ದರಿಂದ ಅವರಲ್ಲಿ ವಾಸ್ತವವಾಗಿ ಭೇದವಿಲ್ಲ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ದಿದ್ದರೂ ಅವರವರ ಕರ್ಮದಿಂದ ಪರಸ್ಪರವಾಗಿ ಭಿನ್ನರಾಗಿರುವರು. ಆದರೂ ಆ ಕರ್ಮಗಳಿಗೆ ಸಾಕ್ಷಿಯಾಗಿ ಅವರಲ್ಲಿಯೇ ಪ್ರಭು ನೆಲಸಿರುವನು. ಇಂತವನನ್ನು ಯಾವ ಧೀರರು ಅನುಭವದಿಂದ ತಿಳಿಯುವರೋ ಅವರಿಗೇ ಶಾಶ್ವತಸುಖವು ದೊರೆಯುತ್ತದೆ. ಬೇರೆಯವರಿಗೆ ಅದು ದೊರಕಲಾರದು. ಅಲ್ಲಿಗೆ ಅವನ ಅನುಭವವೇ ಜೀವರಿಗೆ ಪಾಶವಿಮೋಚನೆಯ ಮಾರ್ಗವೆಂಬುದು ಸ್ವತಸ್ಸಿದ್ಧವಾಯಿತು. ॥೧೨॥

ನಿತ್ಯೋ ನಿತ್ಯಾನಾಂ ಚೇತನಶ್ಚೇತನಾನಾಮೇಕೋ
ಬಹೂನಾಂ ಯೋ ವಿದಧಾತಿ ಕಾಮಾನ್ ।
ತತ್ಕಾರಣಂ ಸಾಂಖ್ಯಯೋಗಾಧಿಗಮ್ಯಂ
ಜ್ಞಾತ್ವಾ ದೇವಂ ಮುಚ್ಯತೇ ಸರ್ವಪಾಶೈಃ ॥೧೩॥

ನಿತ್ಯವೆಂದು ಲೋಕದಲ್ಲಿ ಪ್ರಸಿದ್ಧರಾದವರೊಳಗೆ ಪರಮಾತ್ಮನು ನಿತ್ಯನೆನಿಸಿರುವನು; ಚೇತನರೊಳಗೆ ಚೇತನನಾಗಿರುವನು. ನಿತ್ಯರೆನಿಸಿದವರನ್ನು ನಿತ್ಯರನ್ನಾಗಿ ಮಾಡಿದವನೇ ಪರಮಾತ್ಮನೆಂದರ್ಥ. ಹಾಗೆಯೇ ಚೇತನರಿಗೆ ಚೈತನ್ಯವನ್ನು ಕೊಟ್ಟವನೂ ಅವನೇ. ಅನೇಕ ಜೀವರೊಳಗೆಲ್ಲಾ ತಾನೊಬ್ಬನೇ ಸೂತ್ರದಂತೆ ವ್ಯಾಪಿಸಿದ್ದು ಎಲ್ಲರ ಇಷ್ಟಾರ್ಥಗಳನ್ನು ನಡೆಸುತ್ತಿರುವನು. ಹೀಗೆ ಎಲ್ಲರಿಗೂ ಕಾರಣವೆನಿಸಿದ ಆ ಪರಮಾತ್ಮನನ್ನು ಜ್ಞಾನಯೋಗದಿಂದಲೇ ನಾವು ತಿಳಿಯಬೇಕು. ಅವನನ್ನು ಕಂಡವನಿಗೇ ಪಾಶಗಳೆಲ್ಲವೂ ತೊಲಗುತ್ತವೆ. ತನ್ನೊಳಗೇ ದೇವನನ್ನು ಕಾಣದವನು ಬೇರೆ ಎಲ್ಲಿಯೂ ಅವನನ್ನು ಕಾಣಲಾರನು. "ತನ್ನ ಬಿಟ್ಟು ದೇವರಿಲ್ಲ, ಮಣ್ಣ ಬಿಟ್ಟು ಮಡಕೆಯಿಲ್ಲ, ಹೊನ್ನ ಬಿಟ್ಟು ಒಡವೆಯಿಲ್ಲ" ಎಂಬ ನಾಣ್ಣುಡಿಯೂ ಇದೇ ಅರ್ಥವನ್ನು ತಿಳಿಸುತ್ತದೆ. ॥೧೩॥

ನ ತತ್ರ ಸೂರ್ಯೋ ಭಾತಿ ನ ಚಂದ್ರತಾರಕಂ
ನೇಮಾ ವಿದ್ಯುತೋ ಭಾಂತಿ ಕುತೋಽಯಮಗ್ನಿಃ ।
ತಮೇವ ಭಾಂತಮನುಭಾತಿ ಸರ್ವಂ
ತಸ್ಯ ಭಾಸಾ ಸರ್ವಮಿದಂ ವಿಭಾತಿ ॥೧೪॥

ಸ್ವಯಂಪ್ರಕಾಶನಾದ ಆ ಪರಮಾತ್ಮನು ಪ್ರಕಾಶಿಸುತ್ತಿರುವಾಗಲೇ ಅವನೆದುರಿಗೆ ಸೂರ್ಯನ ಪ್ರಕಾಶವು ನಿಲ್ಲುವಂತಿಲ್ಲ. ಸೂರ್ಯಪ್ರಭೆಯ ಮುಂದೆ ದೀಪದಂತೆ ಕೇವಲಪ್ರಕಾಶವೇ ತಾನಾಗಿರುವ ಆ ಪರಮಾತ್ಮನ ಮುಂದೆ ಸೂರ್ಯನು ಇದ್ದರೂ ಇಲ್ಲದಂತೆ ನಿಷ್ಪ್ರಭನಾಗಿ ಕಾಣುವನು. ಹಾಗೆಯೇ ಚಂದ್ರನಕ್ಷತ್ರಗಳೂ ಕಾಂತಿಹೀನವಾಗುವುವು. ಅದರಂತೆಯೇ ಮಿಂಚುಗಳೂ ಸಹ ಅವನೆದುರಿಗೆ ಪ್ರಕಾಶಿಸುವಂತಿಲ್ಲ. ಇನ್ನು ಅಗ್ನಿ ಅವನೆದುರಿಗೆ ಹೇಗೆ ಪ್ರಕಾಶಿಸೀತು? ಅವನ ಬಗ್ಗೆ ಹೇಳುವುದೇನಿದೆ? ಹೀಗೆ ತಾನಾಗಿಯೇ ಪ್ರಕಾಶಿಸುತ್ತಿರುವ ಪರಮಾತ್ಮನನ್ನು ಅನುಸರಿಸಿಕೊಂಡೇ ವಿಶ್ವದ ಎಲ್ಲಾ ಪ್ರಕಾಶಗಳೂ ಶೋಭಿಸುತ್ತಿರುವುವು. ಅವನ ಪ್ರಕಾಶ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ದಿಂದಲೇ ಇವರೆಲ್ಲರೂ ಪ್ರಕಾಶಿಸುತ್ತಿರುವರು. ಹೀಗೆ ಸೂರ್ಯ ಚಂದ್ರ ಮೊದಲಾದವರೆಲ್ಲರೂ ಇವನಿಗೆ ಅಧೀನರಾಗಿರುವರು. ॥ ೧೪ ॥

ಏಕೋ ಹಂಸೋ ಭುವನಸ್ಯಾಸ್ಯ ಮಧ್ಯೇ ಸ ಏವಾಗ್ನಿಸ್ಸಲಿಲೇ ಸನ್ನಿವಿಷ್ಟಃ।
ತಮೇವ ವಿದಿತ್ವಾಽತಿಮೃತ್ಯುಮೇತಿ ನಾನ್ಯಃ ಪಂಥಾ ವಿದ್ಯತೇಽಯನಾಯ॥೧೫॥

ಈ ಜಗತ್ತಿನ ಮಧ್ಯದಲ್ಲಿ ನಿರ್ಲಿಪ್ತನಾಗಿ ವ್ಯಾಪಿಸಿ ವ್ಯವಹರಿಸುತ್ತಿರುವ ಪರಮಾತ್ಮನು ಸೂರ್ಯನಿಗೂ ಸೂರ್ಯನಾಗಿ, ತಾನೊಬ್ಬನೇ ಯಾರ ಸಹಾಯವೂ ಇಲ್ಲದೆ ಶೋಭಿಸುತ್ತಿರುವನು. ಅವನು ಅಗ್ನಿಯಂತೆ ನಮ್ಮ ಪಾಪಗಳೆಲ್ಲವನ್ನೂ ಸುಡುತ್ತಿರುವನು. ಅರಿಯದೆ ಮಾಡಿದ ಪಾಪಗಳಿಗಾಗಿ ನಾವು ನೊಂದು ಮುಂದೆ ಅಂತಹವನ್ನು ಮಾಡುವುದಿಲ್ಲವೆಂದು ಅವನಲ್ಲಿ ಮೊರೆ ಇಟ್ಟರೆ ಅವನು ಆ ಪಾಪಗಳನ್ನು ಬೆಂಕಿಯಂತೆ ಸುಡುವನು. ನೀರಿನ ಪರಿಣಾಮವೆನಿಸಿದ ಈ ಶರೀರದಲ್ಲಿ ಅಂತರ್ಯಾಮಿಯಾಗಿ ನೆಲಸಿರುವ ಆ ಪರಮಾತ್ಮನನ್ನು ತಿಳಿದಲ್ಲದೆ ಯಾವನೂ ಈ ಮೃತ್ಯುವಿನಿಂದ ಪಾರಾಗಲಾರನು. ಆದ್ದರಿಂದ ಅವನೊಡನೆ ಸಮರಸವಾಗಿ ಬೆರೆಯಲು ಅವನ ಜ್ಞಾನಕ್ಕಿಂತ ಬೇರೆ ಮಾರ್ಗವೇ ಇಲ್ಲ. ಅವನು ಜ್ಞಾನಸ್ವರೂಪನಾದ್ದರಿಂದ ಮಾನವರು ಅವನನ್ನು ತಿಳಿದಲ್ಲದೆ ಅವನ ಆನಂದವನ್ನು ಅನುಭವಿಸಲಾರರು. ॥ ೧೫ ॥

ಸ ವಿಶ್ವಕೃದ್ವಿಶ್ವವಿದಾತ್ಮಯೋನಿರ್ಜ್ಞಃ ಕಾಲಕಾರೋ ಗುಣೀ ಸರ್ವವಿದ್ಯಃ।
ಪ್ರಧಾನಕ್ಷೇತ್ರಜ್ಞಪತಿರ್ಗುಣೇಶಃ ಸಂಸಾರಮೋಕ್ಷಸ್ಥಿತಿಬಂಧಹೇತುಃ॥೧೬॥

ಅವನ ಜ್ಞಾನದಿಂದಲೇ ಮೋಕ್ಷವೆಂದು ಹೇಗೆ ಹೇಳಬಹುದೆಂಬುದನ್ನು ಇಲ್ಲಿ ತಿಳಿಸುತ್ತಾನೆ. ಆ ಪರಮಾತ್ಮನು ವಿಶ್ವವನ್ನೇ ಸೃಷ್ಟಿಸಿ ಅಲ್ಲಿನ ಆಗುಹೋಗುಗಳನ್ನು ತಿಳಿಯುತ್ತಿರುವನು. ತಾನು ಚೇತನನಾಗಿ ಎಲ್ಲೆಲ್ಲೂ ವ್ಯಾಪಿಸಿದ್ದು ಎಲ್ಲಕ್ಕೂ ಮೂಲಕಾರಣನೆನಿಸಿರುವನು ; ಜ್ಞಾನಸ್ವರೂಪನೂ, ಕಾಲಕ್ಕೆ ಪ್ರೇರಕನೂ ಆಗಿರುವನು ; ಅಪಹತಪಾಪ್ಮಾ = ಪಾಪಗಳನ್ನೆಲ್ಲಾ ಕಳೆದುಕೊಂಡು ಶುದ್ಧನಾಗಿರುವನು. ಜೀವರೆಲ್ಲರಲ್ಲೂ ಅವನಿದ್ದು ಅವರ ಕರ್ಮಗಳನ್ನು ನೋಡುತ್ತಿದ್ದರೂ ಅವನಿಗೆ ಕರ್ಮದ ಫಲವೆನಿಸಿದ ಪಾಪವು ಅಂಟುವುದಿಲ್ಲ. ಹಾಗೆಯೇ ಅವನು ಸರ್ವಜ್ಞನೂ ಆಗಿರುವನು-ಇಲ್ಲಿ ಪರಮಾತ್ಮನು ಜ್ಞಾನಸ್ವರೂಪನಾಗಿದ್ದು ಎಲ್ಲವನ್ನೂ ತಿಳಿಯುತ್ತಿರುವುದೇ ಅವನಲ್ಲಿ ಒಂದು ವಿಶೇಷವೆನಿಸಿದೆ. ಆದ್ದರಿಂದಲೇ ಸರ್ವಶಬ್ದವು ಬೇರೆ ಯಾರಲ್ಲೂ ಅನ್ವಯಿಸದೆ ಅವನೊಬ್ಬನಲ್ಲೇ ನೇರವಾಗಿ ಅನ್ವಯಿಸುತ್ತಿದೆ. ಇಂತಹ ಪರಮಾತ್ಮನು ಪ್ರಕೃತಿಗೂ ಜೀವನಿಗೂ ಪತಿ ಎನಿಸಿ ಸತ್ತ್ವರಜಸ್ತಮೋಗುಣಗಳಿಗೆ ನಿಯಾಮಕನೂ ಆಗಿರುವನು. ಆದ್ದರಿಂದಲೇ ಅವನು ಜೀವರ ಸಂಸಾರಕ್ಕೂ, ಅದರ ಬಿಡುಗಡೆಗೂ, ಇಲ್ಲಿಯ ರಕ್ಷಣೆಗೂ, ಭವಪಾಶಕ್ಕೂ ಕಾರಣನೆನಿಸಿರುವನು. ಆದ್ದರಿಂದ ಅವನನ್ನು ತಿಳಿದಲ್ಲದೆ ಜೀವರಿಗೆ ಮುಕ್ತಿಯಿಲ್ಲ. ॥ ೧೬ ॥

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಸ ತನ್ಮಯೋ ಹ್ಯಮೃತ ಈಶಸಂಸ್ಥೋ
ಜ್ಞಸ್ಸರ್ವಗೋ ಭುವನಸ್ಯಾಸ್ಯ ಗೋಪ್ತಾ ।
ಯ ಈಶೇ ಅಸ್ಯ ಜಗತೋ ನಿತ್ಯಮೇವ
ನಾನ್ಯೋ ಹೇತುರ್ವಿದ್ಯತ ಈಶನಾಯ ॥೧೭॥

ಇಂತಹ ಜ್ಯೋತಿರ್ಮಯನಾದ ಪರಮಾತ್ಮನು ಜರಾಮರಣಗಳಿಲ್ಲದೆ ನಿತ್ಯ ಸುಂದರನೆನಿಸಿ ಎಲ್ಲರಿಗೂ ನಿಯಾಮಕನೆನಿಸಿರುವನು; ಹೀಗೆ ಸರ್ವಜ್ಞನೂ ಸರ್ವ ವ್ಯಾಪಕನೂ, ಸರ್ವರಕ್ಷಕನೂ ಆಗಿ ಶೋಭಿಸುತ್ತಿರುವನು. ಅವನೊಬ್ಬನೇ ಈ ಜಗತ್ತೆಲ್ಲಕ್ಕೂ ಯಾವಾಗಲೂ ಪ್ರಭುವೆನಿಸಿ ನಿಯಮನ ಮಾಡುತ್ತಿರುವನು. ಆದ್ದರಿಂದಲೇ ಅವನಿಗೆ ನಿಯಮನವಮಾಡುವವನು ಬೇರೆ ಯಾರೂ ಎಲ್ಲಿಯೂ ಇಲ್ಲ. ಅವನ ನಿಯಮನವಾದರೋ ವ್ಯವಸ್ಥಿತವೂ, ಕ್ರಮಬದ್ಧವೂ ಆಗಿದೆ. ಆ ನಿಯಮನಶಕ್ತಿಯೇ ಮಾಯೆ ಎನಿಸಿ ಜಗತ್ತನ್ನು ವ್ಯಾಪಿಸಿದೆ. ॥೧೭॥

ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ
ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ ।
ತಂ ಹ ದೇವಮಾತ್ಮಬುದ್ಧಿಪ್ರಕಾಶಂ
ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ ॥೧೮॥

ಏನನ್ನು ತಿಳಿದರೂ ಮೋಕ್ಷವು ದೊರೆಯದೆಂದು ಭಾವಿಸಿ ಅವನನ್ನೇ ಮೋಕ್ಷಕ್ಕಾಗಿ ಆಶ್ರಯಿಸಬೇಕೆಂದು ತಿಳಿಸುತ್ತಾನೆ. ಯಾವ ಪರಮಾತ್ಮನು ಹಿಂದೆಯೇ ಬ್ರಹ್ಮನನ್ನು ಸೃಷ್ಟಿಸಿ ಅವನಿಗೆ ವೇದಗಳನ್ನು ಉಪದೇಶಿಸಿದನೋ ಅಂತಹ ಪ್ರಭುವೇ ನಮ್ಮ ಬುದ್ಧಿಗೆ ಪ್ರೇರಕನಾಗಿದ್ದು ಸಂಸಾರಪಾಶದಿಂದ ನಮ್ಮನ್ನು ಬಿಡುಗಡೆಮಾಡಲಿ. ಅವನಿಗೆ ನಾವು ಶರಣಾಗತರಾಗೋಣ. ನಾವು ಅವನಿಗೆ ಸಂಬಂಧಪಟ್ಟವರಾದ್ದರಿಂದ ಅವನನ್ನು ತಿಳಿದಲ್ಲದೆ ನಮಗೆ ಬೇರೆ ದಾರಿಯೇ ಏರ್ಪಟ್ಟಿಲ್ಲ. ॥೧೮॥

ನಿಷ್ಕಲಂ ನಿಷ್ಕ್ರಿಯಂ ಶಾಂತಂ ನಿರವದ್ಯಂ ನಿರಂಜನಮ್ ।
ಅಮೃತಸ್ಯ ಪರಂ ಸೇತುಂ ದಗ್ಧೇಂಧನಮಿವಾನಲಮ್ ॥೧೯॥

ಅವನಿಗೆ ಅವಯವಗಳಾಗಲೀ, ವಿಭಾಗಗಳಾಗಲೀ ಸಂಬಂಧಪಟ್ಟಿಲ್ಲ. ಆದ್ದರಿಂದಲೇ ಅವನು ನಿಶ್ಚಲನಾಗಿ ಆತ್ಮಾನಂದದಲ್ಲಿ ನೆಲಸಿರುವನು. ಆದರಿಂದಲೇ ಅವನು ಶಾಂತನಾಗಿರುವನು. ಹಾಗೆಯೇ ಎಲ್ಲಾ ಬಗೆಯ ದೋಷಗಳೂ ಅವನಲ್ಲಿ ತೊಲಗಿರುವುವು. ನಮಗೆ ಮೋಕ್ಷಕ್ಕೆ ಅವನೇ ಸಾಧನೋಪಾಯವೆನಿಸಿರುವನು. ಹೀಗೆ ಸರ್ವರಕ್ಷಕನಾದರೂ ಉದಾಸೀನನಂತೆ ಇರುವುದು ಅವನ ಒಂದು ವೈಶಿಷ್ಟ್ಯವೆನಿಸಿದೆ. ಕಟ್ಟಿಗೆಯೆಲ್ಲವೂ ಉರಿದು ಕೆಂಡವಾಗಿ ಪರಿಣಮಿಸಿದಾಗ ಹೊಗೆ ಹೇಗೆ ಇರುವುದಿಲ್ಲವೋ ಹಾಗೆ ಪರಮಾತ್ಮನು ಯಾವ ದೋಷವೂ ಇಲ್ಲದೆ ಪ್ರಕಾಶಮಯನಾಗಿ ಕಂಗೊಳಿಸು

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ತ್ತಿರುವನು. ಹೀಗೆ ಶಕ್ತನಾದ ಪ್ರಭುವಿನಲ್ಲಿ ಪಾಪವಿಮೋಚನೆಗಾಗಿ ತಾನು ಶರಣಾಗುವೆನೆಂದು ಶ್ವೇತಾಶ್ವತರಮಹರ್ಷಿಯು ತಿಳಿಸುತ್ತಾನೆ. ॥ ೧೯ ॥

ಯದಾ ಚರ್ಮವದಾಕಾಶಂ ವೇಷ್ಟಯಿಷ್ಯಂತಿ ಮಾನವಾಃ ।
ತದಾ ಶಿವಮವಿಜ್ಞಾಯ ದುಃಖಸ್ಯಾಂತಂ ಗಮಿಷ್ಯತಿ ॥ ೨೦ ॥

ಹೀಗೆ ಪ್ರತಿಯೊಬ್ಬನೂ ಪರಮಾತ್ಮನನ್ನು ಆಶ್ರಯಿಸಿಯೇ ಪಾಶದಿಂದ ಪಾರುಗಾಣಬೇಕೆಂಬುದನ್ನು ಮತ್ತಷ್ಟು ದೃಢಪಡಿಸುತ್ತಾನೆ. ಮನುಷ್ಯರು ತಮ್ಮ ದೇಹವನ್ನು ಚರ್ಮದಿಂದ ಮುಚ್ಚಿಕೊಂಡಿರುವಂತೆ ಬಯಲನ್ನು ತಮ್ಮ ದೇಹಕ್ಕೆ ಹೊದಿಕೆಯೆಂದು ಭಾವಿಸಿದರೆ ಆಗಲೇ ಪರಮಾತ್ಮನನ್ನು ತಿಳಿಯದೆ ಇದ್ದರೂ ಅವರಿಗೆ ಸಂಸಾರದ ದುಃಖವು ತೊಲಗಲಿರುವುದು. ಆಕಾಶವನ್ನು ಚರ್ಮದಂತೆ ಮೈಗೆ ಹೊದಿಕೆ ಮಾಡಿಕೊಳ್ಳುವುದು ಹೇಗೆ ಅವಶ್ಯಕವೋ ಹಾಗೆ ಪರಮಾತ್ಮನನ್ನು ತಿಳಿಯದೆಯೇ ಪಾಶದಿಂದ ಬಿಡುಗಡೆ ಹೊಂದುವುದೂ ಅಷ್ಟೇ ಅಸಾಧ್ಯವೆಂದರ್ಥ. ಅಲ್ಲಿಗೆ ಪರಮಾತ್ಮಜ್ಞಾನವೇ ಮೋಕ್ಷಸಾಧನವೆಂಬುದು ದೃಢವಾಯಿತು.

ಹೀಗೆ ಶ್ರುತಿಯಲ್ಲಿ ಜೀವನಿಗೆ ತನ್ನ ಹೃದಯದೊಳಗಿನ ಶಿವನೊಡನೆ ಸಾಮರಸ್ಯವನ್ನು ಬೋಧಿಸಿದ್ದರೂ ಅದು ಹೇಗೆ ಸಾಧ್ಯವಾದೀತೆಂಬುದು ಗಮನಾರ್ಹವಾದ ವಿಚಾರ. ಜೀವನಿಗೂ ಶಿವನಿಗೂ ಚೇತನಸಾಮ್ಯವಿದ್ದರೂ ಸ್ವಭಾವದಲ್ಲಿ ವೈಷಮ್ಯವಿರುವುದರಿಂದ ಜೀವನಿಗೆ ಶಿವನ ಜ್ಞಾನದಿಂದಲೇ ಸಾಮರಸ್ಯವು ಹೇಗೆ ಸಂಭವಿಸೀತು? ಇದನ್ನು ಶ್ರುತಿಯೇ ವಿಚಾರಮಾಡಿ ಶಿವಜ್ಞಾನದ ಜೊತೆಗೆ ತ್ರಿವಿಧೋಪಾಸನವನ್ನೂ ವಿಧಿಸಿದೆ. ಹೀಗೆ ಜ್ಞಾನವನ್ನವಲಂಭಿಸಿದ ಉಪಾಸನಕ್ರಿಯೆಯಿಂದ ಜೀವನು ದೇಹಾಭಿಮಾನವನ್ನು ಕ್ರಮವಾಗಿ ತೊಲಗಿಸಿಕೊಂಡು ಶಿವನಿಗೆ ಪ್ರಿಯನಾಗುತ್ತ ಬಂದು ತನ್ನ ಸುತ್ತಲೂ ಶಿವನನ್ನೇ ನೋಡುತ್ತ ಕೇಳುತ್ತ ಮುಟ್ಟುತ್ತ ತನ್ನ ಹೃದಯದೊಳಗೂ ಶಿವನನ್ನೇ ಕಾಣಲಾರಂಭಿಸುವನು. ಈ ವಿಷಯವನ್ನು ಅಲ್ಲಮಾರ್ಯನು ಕೂಲಂಕಷವಾಗಿ ವಿಚಾರಮಾಡಿರುವನು. "ಎತ್ತಣ ಮಾಮರ ಎತ್ತಣ ಕೋಗಿಲೆ? ಎತ್ತಣಿಂದೆತ್ತ ಸಂಬಂಧವಯ್ಯ! ಬೆಟ್ಟದನೆಲ್ಲಿಕಾಯಿ ಸಮುದ್ರದೊಳಗಣ ಉಪ್ಪು ಇವಕ್ಕೆ ಎತ್ತಣ ಸಂಬಂಧವಯ್ಯ! ಗುಹೇಶ್ವರಲಿಂಗಕ್ಕೆಯೂ ಎನಗೂ ಎತ್ತಣಿಂದೆತ್ತ ಸಂಬಂಧವಯ್ಯ!" ಹೀಗೆ ಅವರು ಹೇಳಿದ್ದಾರೆ. ಬೇರೆ ಬೇರೆ ಸ್ಥಳಗಳಲ್ಲಿರುವ ಭಿನ್ನಜಾತಿಯ ಎರಡು ವಸ್ತುಗಳಿಗೆ ಹೇಗಾದರೂ ಸಂಬಂಧವುಂಟಾಗುವುದನ್ನು ಅವರು ಪ್ರಕೃತಿಯಲ್ಲಿ ಮನಗಂಡಿದ್ದಾರೆ. ಅದೇ ರೀತಿಯಲ್ಲಿ ತಮಗೂ ಗುಹೇಶ್ವರನಿಗೂ ಸಂಬಂಧವು ಏಕೆ ಘಟಿಸಬಾರದೆಂದು ಅವರು ತಮ್ಮನ್ನು ಸಂತೈಸಿಕೊಂಡಿದ್ದಾರೆ. ಹೀಗೆ ಶಿವನಲ್ಲಿ ವಿಶ್ವಾಸವಿಟ್ಟು ಅವನನ್ನು ಸೇವೆಯಿಂದ ಮೆಚ್ಚಿಸಿ ಅವನ ಪರಿಚಯದಿಂದ ತಾನೂ ಅವನಿಗೆ ಸಂಬಂಧಿಸಿದವನೆಂದು ತಿಳಿದರೆ ಮಾನವನು ಅವನೊಳಗೆ ಸೇರಲಿಕ್ಕೆ ಸಾಧ್ಯವಿದೆ. ಎಂದು ಇಲ್ಲಿ ಶ್ರುತಿ ತಿಳಿಸಿರುವುದು ಸಮಂಜಸವಾಗಿದೆ.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ತಪಃಪ್ರಭಾವಾದ್ದೇವಪ್ರಸಾದಾಚ್ಚ ಬ್ರಹ್ಮ ಹ ಶ್ವೇತಾಶ್ವತರೋಽಥ ವಿದ್ವಾನ್
ಅತ್ಯಾಶ್ರಮಿಭ್ಯಃ ಪರಮಂ ಪವಿತ್ರಂ ಪ್ರೋವಾಚ ಸಮ್ಯಗೃಷಿಸಂಘಜುಷ್ಟಮ್॥

ಹೀಗೆ ಪರಶಿವಬ್ರಹ್ಮದ ಸ್ವರೂಪವನ್ನು ಹೇಳಿ ಈ ಉಪನಿಷತ್ತಿನ ಪ್ರಾಶಸ್ತ್ಯವನ್ನು ತಿಳಿಸುತ್ತಾನೆ. ತಪಸ್ಸಿನ ಮಹಿಮೆಯಿಂದಲೂ, ಅದರ ಮೂಲಕ ದೊರೆಯುವ ಈಶ್ವರಾನುಗ್ರಹದಿಂದಲೂ ಬ್ರಹ್ಮಜ್ಞಾನಿಯಾದ ಶ್ವೇತಾಶ್ವತರಮಹರ್ಷಿಯು ಅತ್ಯಾಶ್ರಮಿಗಳೆನಿಸಿದ ಸಂನ್ಯಾಸಿಗಳಿಗಾಗಿ ಬ್ರಹ್ಮರ್ಷಿಗಳೆಲ್ಲರಿಗೂ ಪ್ರಿಯವಾದ ಈ ಪವಿತ್ರ ತತ್ತ್ವವನ್ನು ಇಲ್ಲಿ ಉಪದೇಶಿಸಿರುವನು. ಇದನ್ನು ಅತ್ಯಾಶ್ರಮಿಗಳಿಗಾಗಿ ಹೇಳಿರುವುದಾಗಿ ಅವನು ತಿಳಿಸಿದ್ದಾನೆ. ಆಶ್ರಮಗಳಲ್ಲೆಲ್ಲಾ ಸಂನ್ಯಾಸಾಶ್ರಮವೇ ಪೂಜ್ಯವೆನಿಸಿದೆ. ಆ ಆಶ್ರಮದಲ್ಲಿರುವವರೆಲ್ಲರಿಗೂ ಈ ಶ್ರುತಿ ಅತ್ಯಂತ ಆದರಣೀಯವೆನಿಸಿದೆ. ಇದೂ ಅಲ್ಲದೆ ಇದರಲ್ಲಿ ಅಡಕವಾಗಿರುವ ತತ್ತ್ವವನ್ನು ಆಚರಿಸಿ ತಿಳಿದು ಅನೇಕರು ಧನ್ಯರಾಗಿದ್ದಾರೆ. ಇಂತಹ ತತ್ತ್ವವನ್ನು ಎಲ್ಲರೂ ತಿಳಿಯಲೇಬೇಕು. ಇಲ್ಲಿ ಸಂನ್ಯಾಸಿಗಳೆಂದರೆ ಕೇವಲ ಆ ಆಶ್ರಮದವರು ಮಾತ್ರವಲ್ಲದೆ ಫಲಸಂಬಂಧವಿಲ್ಲದೆ ಕರ್ಮವನ್ನಾಚರಿಸುವವರೆಲ್ಲರನ್ನೂ ಸಂನ್ಯಾಸಿಗಳೆಂದು ಭಾವಿಸಬೇಕು. ಫಲವನ್ನು ನಾವು ಬಯಸಿ ಸಣ್ಣವರಾಗುತ್ತೇವೆ. ನಮಗೆ ಲಭ್ಯವಲ್ಲದ ಫಲವನ್ನು ನಾವು ಎಷ್ಟು ಬಯಸಿದರೂ ಅದು ಸಿಕ್ಕುವುದೂ ಇಲ್ಲ. ಆದ್ದರಿಂದ ಫಲವನ್ನು ಬಯಸದೆ ಕರ್ಮವನ್ನು ನಡೆಸಬೇಕಾದ್ದು ನಮ್ಮ ಧರ್ಮ. ಹೀಗಿರುವವರೆಲ್ಲರನ್ನೂ ಸಂನ್ಯಾಸಿಗಳೆಂದೇ ಭಾವಿಸಬೇಕು. ಇಂತವರೆಲ್ಲರಿಗೂ ಈ ಉಪನಿಷತ್ತು ಗ್ರಾಹ್ಯವೆನಿಸಿದೆ ॥ ೨೧ ॥

ವೇದಾಂತೇ ಪರಮಂ ಗುಹ್ಯಂ ಪುರಾ ಕಲ್ಪೇ ಪ್ರಚೋದಿತಮ್ ।
ನಾಪ್ರಶಾಂತಾಯ ದಾತವ್ಯಂ ನಾಪುತ್ರಾಯಾಶಿಷ್ಯಾಯ ವಾ ಪುನಃ ॥೨೨॥

ಇದೂ ಅಲ್ಲದೆ ಇದು ಉಪನಿಷತ್ತುಗಳೆಲ್ಲದರಲ್ಲೂ ಅತ್ಯಂತಗೋಪ್ಯವಾದುದು ಮತ್ತು ಪ್ರಾಚೀನವಾದುದು. ಇದನ್ನು ಹಿಂದಿನ ಕಾಲದಲ್ಲಿಯೇ ಬ್ರಹ್ಮರ್ಷಿಗಳು ಉಪದೇಶಿಸಿದ್ದರು. ಹೀಗೆ ಇದು ಅನಾದಿಸಿದ್ಧವೆನಿಸಿತು. ಇದನ್ನು ಶಾಂತಸ್ವಭಾವದ ಮಗನಿಗೂ ಶಿಷ್ಯನಿಗೂ ಉಪದೇಶಿಸಬೇಕೇ ಹೊರತು ಶಾಂತಿಯಿಲ್ಲದೆ ವಿಷಯಭೋಗಗಳಲ್ಲಿಯೇ ಹರಿದಾಡುವ ಮನಸ್ಸಿನವರ್‍ಯಾರಿಗೂ ಉಪದೇಶಿಸಬಾರದು. ಶೀಲಶುದ್ಧಿಯಿಲ್ಲದವರಿಗೂ ಹೃದಯನೈರ್ಮಲ್ಯವಿಲ್ಲದವರಿಗೂ ಇದು ಹಿಡಿಸುವುದಿಲ್ಲ. ಭೋಗಜೀವಿಗಳಿಗೆ ಈ ಸಿದ್ಧಾಂತವು ರುಚಿಸುವುದೇ ಇಲ್ಲ. ಯಾರಿಗೆ ಭೋಗದಲ್ಲಿ ಜುಗುಪ್ಸೆ ಹುಟ್ಟಿ ಇದ್ದಷ್ಟರಲ್ಲಿ ತೃಪ್ತರಾಗಿ ಶಾಂತಿಯಿಂದ ಬಾಳಬೇಕೆಂಬ ಆಶೆ ಇದೆಯೋ ಅಂತವರಿಗೆ ಮಾತ್ರವೇ ಇದನ್ನು ಬೋಧಿಸಬೇಕು ॥೨೨॥

ಯಸ್ಯ ದೇವೇ ಪರಾ ಭಕ್ತಿರ್ಯಥಾ ದೇವೇ ತಥಾ ಗುರೌ ।
ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ॥೨೩॥

ಯಾವ ವ್ಯಕ್ತಿಗಳಿಗೆ ಸರ್ವವ್ಯಾಪಕನಾದ ಪರಮಾತ್ಮನಲ್ಲಿ ಉತ್ಕೃಷ್ಟವಾದ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಭಕ್ತಿ ನೆಲಸಿದೆಯೋ ಅದೇ ಬಗೆಯ ಭಕ್ತಿ ಆ ತತ್ತ್ವವನ್ನು ಉಪದೇಶಿಸುವ ಗುರುವಿನಲ್ಲೂ ನೆಲಗೊಂಡಿರುವುದೋ ಅಂತಹ ಉತ್ತಮಪ್ರಕೃತಿಯವರಿಗೆ ಮಾತ್ರವೇ ಈ ಪವಿತ್ರವಾದ ಉಪನಿಷತ್ತಿನಲ್ಲಿ ತಿಳಿಸಿರುವ ಅಂಶಗಳೆಲ್ಲವೂ ಪ್ರಕಾಶಗೊಳ್ಳುತ್ತವೆ. ಅಂತವರಿಗೇ ಇವೆಲ್ಲವೂ ಅರ್ಥವಾಗುತ್ತವೆ. ತನ್ನ ಸ್ವರೂಪವನ್ನೂ, ಗಮ್ಯಸ್ಥಾನವನ್ನೂ ತಿಳಿದು ಅದರಲ್ಲಿ ಸಮರಸವಾಗಿ ಬೆರೆತಲ್ಲದೆ ತನಗೆ ಸುಖವು ದೊರಕದೆಂದು ಬಯಸುವವರಿಗೆ ಮಾತ್ರವೇ ಈ ಉಪನಿಷತ್ತು ಮಾನ್ಯವಾಗುವುದು. ಬೇರೆಯವರಿಗೆ ಇದು ಅರ್ಥವೇ ಆಗುವುದಿಲ್ಲ. ಯಾರಿಗೆ ಕೊನೆಯ ಜನ್ಮವೋ ಅವರಷ್ಟೇ ಇದನ್ನು ತಿಳಿದು ಅನುಭವಿಸಬಲ್ಲರು. ಹೀಗೆ ಜೀವರಿಗೆ ತಮ್ಮ ಪರಿಚಯವುಂಟಾಗಿ ತಮ್ಮೊಳಗಿನ ಪರಶಿವನ ಅನುಭವ ದೊರಕಲೆಂದು ಶ್ವೇತಾಶ್ವತರಮಹರ್ಷಿಯು ಹೃತ್ಪೂರ್ವಕವಾಗಿ ಬಯಸಿ ಅಧ್ಯಾಯವನ್ನು ಕೊನೆ ಮಾಡಿದ್ದಾನೆ. ಅಧ್ಯಾಯದ ಕೊನೆಯಾದ್ದರಿಂದ " ಪ್ರಕಾಶಂತೇ ಮಹಾತ್ಮನಃ " ಎಂದು ಎರಡು ವೇಳೆ ತಿಳಿಸಲಾಗಿದೆ.

ಈ ರೀತಿಯಲ್ಲಿ ಶ್ರುತಿಯು ನಮ್ಮ ಕಲ್ಯಾಣಕ್ಕಾಗಿ ಯಥೋಚಿತವಾಗಿ ಉಪದೇಶವನ್ನು ಮಾಡುತ್ತ ನಮ್ಮನ್ನು ಅಮರರನ್ನಾಗಿ ಮಾಡಲು ಕಂಕಣವನ್ನು ಕಟ್ಟಿ ನಿಂತಿದೆ. ಮಾನವರೆಲ್ಲರನ್ನೂ ಸತ್ತ್ವ, ರಜಸ್ಸು, ತಮಸ್ಸು ಎಂಬ ಮೂರು ಹಗ್ಗಗಳಿಂದ ಮಾಯೆ ಬಿಗಿದು ಕಟ್ಟಿರುವಳು. ಇದರಿಂದ ನಮಗೆ ಜೀವನವೇ ಒಂದು ಸೆರೆಮನೆಯ ವಾಸವೆನಿಸುವುದು ಸಹಜ. ಆದರೆ ನಾವು ಕರ್ಮಫಲಗಳನ್ನು ಆಗಾಗಲೇ ನಮ್ಮೊಡನೆ ಇರುವ ಈಶ್ವರನಿಗೆ ಅರ್ಪಿಸಲಿಕ್ಕಾಗಿ ನಮ್ಮ ಹೃದಯದಲ್ಲಿ ವಿಶ್ವಾಸವಿಟ್ಟು ಅಲ್ಲಿರುವ ಈಶ್ವರನನ್ನು ಮೊದಲು ತಿಳಿಯಬೇಕು. ಹಾಗೆ ತಿಳಿದವರೇ ಅಂದಂದಿನ ಸುಖದುಃಖಗಳನ್ನು ಈಶ್ವರನಿಗೆ ಸಮರ್ಪಿಸಬಲ್ಲರು. ಇದೆಲ್ಲಕ್ಕೂ ಆತ್ಮವಿಶ್ವಾಸವೇ ಮೂಲವೆನಿಸಿದೆ. ವಿಶ್ವಾಸವಿಲ್ಲದವರು ಎಷ್ಟು ಪ್ರಾರ್ಥಿಸಿದರೂ ಈಶ್ವರನ ಅನುಗ್ರಹವನ್ನು ಪಡೆಯಲಾರರು. ಈ ಸಂದರ್ಭದಲ್ಲಿ " ಕರಿಯು ಕನ್ನಡಿಯೊಳಗೆ ಅಡಗಿದಂತೆ ನೀನು ನನ್ನೊಳಗೆ ಅಡಗಿರುವೆ " ಎಂದು ಶರಣರು ಹೇಳಿರುವ ಮಾತು ವರ್ಧಿಷ್ಣುಗಳೆಲ್ಲರಿಗೂ ವಿಶ್ವಾಸವನ್ನು ಕೆರಳಿಸುತ್ತಲಿವೆ. ಈ ಬಗೆಯ ವಿಶ್ವಾಸವನ್ನು ಹುಟ್ಟಿಸುವಂತಹ ಸನ್ನಿವೇಶವನ್ನೇ ಶ್ರುತಿಯಲ್ಲಿ ಮೊದಲಿಂದ ಕೊನೆಯವರೆಗೂ ನಾವು ಕಾಣಬಹುದಾಗಿದೆ. " ನಾವು ಏಕೆ ಇಲ್ಲಿ ಹುಟ್ಟಿರುವೆವು ? ಎಲ್ಲಿಂದ ಬಂದೆವು ? ಏತರಿಂದ ಬದುಕಿರುವೆವು ? ಯಾರ ಆಶ್ರಯದಿಂದ ಇಲ್ಲಿ ಸುಖದುಃಖಗಳಿಗೆ ಅಂಟಿಕೊಂಡಿರುವೆವು ? ನಮ್ಮ ಮೂಲ ಯಾವುದು ? ನಮಗೆ ಸಾರವಾದ ವಸ್ತು ಯಾವುದು ?" ಈ ಬಗೆಯ ಪ್ರಶ್ನೆಗಳನ್ನು ಬ್ರಹ್ಮಜಿಜ್ಞಾಸುಗಳು ತಮ್ಮಲ್ಲಿಯೇ ವಿಚಾರಮಾಡಿ ಉತ್ತರಗಳನ್ನು ಪಡೆದುಕೊಳ್ಳುತ್ತಿದ್ದರೆಂದು ಶ್ರುತಿ ತಿಳಿಸಿದೆ. ಹೀಗೆ ವಿಚಾರಮಾಡುತ್ತಿದ್ದವರು ಅನೇಕರು ಆ ಕಾಲದಲ್ಲಿ ಇದ್ದರೆಂದು ಶ್ರುತಿಯಿಂದ ತಿಳಿದುಬರುತ್ತದೆ. ಈ ಶ್ರುತಿಯು ಕೃಷ್ಣಯಜುರ್ವೇದಕ್ಕೆ ಸಂಬಂಧಿಸಿದ್ದು. ಅಷ್ಟು ಹಿಂದಿನ ಕಾಲದಲ್ಲಿಯೇ ಜನರು ತಮ್ಮಷ್ಟಕ್ಕೆ ತಾವು ಭೋಗದಲ್ಲಿ ಮೈಮರೆಯದೆ ತಮ್ಮ ಆಶ್ರಯದ ಬಗ್ಗೆ ವಿಚಾರ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಮಾಡಿ ಜಗತ್ಕಾರಣ ವಸ್ತುವಿನ ಸ್ವರೂಪವನ್ನು ತಿಳಿದು ತಮ್ಮ ಬಾಳಿನ ಗಾಂಭೀರ್ಯವನ್ನು ಮನಗಂಡಿದ್ದರೆಂಬುದಕ್ಕೆ ಈ ಶ್ರುತಿಯೇ ನಿದರ್ಶನವೆನಿಸಿದೆ. ಇಂತಹ ಶಿವಾನುಭವಿಗಳು ಶ್ವೇತಾಶ್ವತರಮಹರ್ಷಿಯ ಕಾಲಕ್ಕೆ ಬಹುಮುಂದಿ ಇದ್ದರೆಂದು ಶ್ರುತಿಯಿಂದಲೇ ಸ್ಪಷ್ಟವಾಗಿ ತಿಳಿದುಬರುತ್ತದೆ.

ಇಂತಹ ಪ್ರಶ್ನೆಗಳನ್ನು ನಾವು ನಮ್ಮಲ್ಲಿಯೇ ವಿಚಾರಮಾಡಿ ಉತ್ತರಗಳನ್ನು ಪಡೆದರೆ ನಮ್ಮ ಬಾಳಿನ ಸಮಸ್ಯೆಗಳು ಬಗೆಹರಿಯುತ್ತವೆ. ಹಿಂದಿನ ಮಹರ್ಷಿಗಳಾದರೋ ತಮ್ಮ ಸಮಸ್ಯೆಗಳಿಗೆ ಧ್ಯಾನಯೋಗದಿಂದ ಉತ್ತರಗಳನ್ನು ಪಡೆದರು. ದೇವಾತ್ಮಶಕ್ತಿಯೇ ತಮಗೂ ಜಗತ್ತಿಗೂ ಮೂಲಕಾರಣವೆಂಬುದನ್ನು ಅವರು ಮನಗಂಡರು. "ಈ ಶಕ್ತಿಯು ಜಗತ್ತಿನ ಪ್ರತಿಯೊಂದು ವಸ್ತುವಿನಲ್ಲೂ ನೆಲಸಿ ಸತ್ತ್ವ, ರಜಸ್ಸು, ತಮಸ್ಸು ಎಂಬ ಮೂರು ಗುಣಗಳಿಂದ ತನ್ನನ್ನೇ ಮರೆಮಾಡಿಕೊಂಡಿದೆ. ಅದರಿಂದಲೇ ಚಿತ್ರವಿಚಿತ್ರವಾದ ಜಗತ್ತಿನ ಕಾರ್ಯಗಳೆಲ್ಲವೂ ನಡೆಯುತ್ತಲಿವೆ" ಎಂಬುದನ್ನು ಅವರು ತಿಳಿಸಿದರು. ಈ ಶಕ್ತಿಯನ್ನೇ ಮಾಯೆ ಎಂದು ಈ ಶ್ರುತಿಯು ಕರೆದಿದೆ. ಇದು ಜಡವಾದರೂ ಈಶ್ವರನ ಸಾನ್ನಿಧ್ಯದಿಂದ ಹೆಚ್ಚಿನ ಚಮತ್ಕಾರಗಳನ್ನು ನಿರ್ವಹಿಸುವ ಶಕ್ತಿ ಇದರಲ್ಲಿ ಅಡಗಿದೆ. ಆದ್ದರಿಂದಲೇ ಇದನ್ನು ಪ್ರಕೃತಿ (ಅದ್ಭುತ ರಚನೆ) ಎಂದು ಭಾವಿಸಲಾಗಿದೆ. ಇದರ ಮೂಲಕವೇ ಶಿವನು ಜಗದ್ವ್ಯಾಪಾರವನ್ನು ಅನಾಯಾಸವಾಗಿ ನಡೆಸುತ್ತಿರುವನು. ಹೀಗೆ ಮಾಯಾಕೋಲಾಹಲನೆನಿಸಿದ ಪ್ರಭುವು ಪ್ರಪಂಚದ ಪಂಚಭೂತಗಳೆಲ್ಲದರಲ್ಲೂ ನೆಲಸಿದ್ದರೂ ಅದ್ವಿತೀಯನೆನಿಸಿ ಶೋಭಿಸುತ್ತಿರುವುದು ಅವನ ಸ್ವಾತಂತ್ರ್ಯದ ಮಹಿಮೆ ಎನಿಸಿವೆ. ಹೀಗೆ ಸರ್ವವ್ಯಾಪಕನೂ ಅಪಾರಮಹಿಮಾಶಾಲಿಯೂ ಆದ ಶಿವನು ಮಾನವರ ಮೇಲಿನ ಅವ್ಯಾಜಪ್ರೇಮದಿಂದ ಅವರ ಹೃದಯದಲ್ಲಿ ಅಂಗುಷ್ಠಪ್ರಮಾಣದಲ್ಲಿ ನೆಲಸಿರುವನೆಂದು ಶ್ರುತಿಯು ತಿಳಿಸುತ್ತದೆ. ಅವನನ್ನು ಶಿರಸ್ಸಿನಲ್ಲಿ ಭಾವಲಿಂಗವೆಂದೂ, ಭ್ರೂಮಧ್ಯದಲ್ಲಿ ಇಷ್ಟಲಿಂಗವೆಂದೂ ಅನುಭವಿಗಳು ಭಾವಿಸಿದ್ದಾರೆ. ಹಾಗೆಯೇ ಅವನು ಮೂಗು, ನಾಲಿಗೆ, ಚರ್ಮ, ಕಿವಿ, ಮನಸ್ಸು ಈ ಆರು ಇಂದ್ರಿಯಗಳಲ್ಲಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಚರಲಿಂಗ, ಪ್ರಸಾದಲಿಂಗ, ಮಹಾಲಿಂಗ ಎಂದು ಆರುಬಗೆಯಾಗಿ ನೆಲಸಿರುವನು. ತನ್ನ ಜೊತೆಯಲ್ಲಿಯೇ ಇದ್ದು ತನಗೆ ಗಂಧ, ರಸ, ರೂಪ, ಸ್ಪರ್ಶ, ಶಬ್ದ, ತೃಪ್ತಿ ಈ ಆರು ಪದಾರ್ಥಗಳನ್ನು ಅರ್ಪಿಸುತ್ತ ಅವಷ್ಟನ್ನೂ ಪ್ರಸಾದರೂಪದಿಂದ ಮಿತವಾಗಿಯೂ, ಹಿತವಾಗಿಯೂ ಭೋಗಿಸುತ್ತಿರುವ ಜೀವನು ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂದು ಭಕ್ತಿಯ ಬೆಳವಣಿಗೆಯಿಂದ ಆರು ಅವಸ್ಥೆಗಳನ್ನು ಹೊಂದುವನು. ಹೀಗೆ ಎಲ್ಲರ ದೇಹದಲ್ಲೂ ಅಂಗಲಿಂಗರ ವ್ಯವಹಾರವು ಸಹಜವಾಗಿ ನಡೆಯುತ್ತಲಿದೆ. ಇದನ್ನು ಹಿಂದೆ ಮಹರ್ಷಿಗಳು ಅನುಭವಿಸುತ್ತಿದ್ದರು. ಆದ್ದರಿಂದಲೇ ಅವರು ಪ್ರಸಾದಜೀವಿಗಳೆನಿಸಿದ್ದು ಇಂದಿಗೂ ಬದುಕಿರುವರು. ಹೀಗೆ ಜಗತ್ತಿನಲ್ಲೂ, ದೇಹದಲ್ಲೂ ಸಹಜವಾಗಿ ನಡೆಯುತ್ತಿರುವ ಶಿವನ ಲೀಲೆಯನ್ನು ತಿಳಿಯದೇ ಇರುವು

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ದರಿಂದ ನಾವು ಇಷ್ಟು ದುರ್ಬಲರಾಗಿದ್ದೇವೆ ಎಂಬುದನ್ನು ಶ್ರುತಿಯು ಒತ್ತಿ ಹೇಳಿದೆ. ಇದನ್ನು ತಿಳಿದು ನಾವು ಅಂದಂದಿನ ಸುಖದುಃಖಗಳನ್ನು ಆಗಾಗಲೇ ನಮ್ಮೊಡನೆ ಇರುವ ಶಿವನಿಗೆ ಅರ್ಪಿಸುತ್ತ ಅವನ್ನು ಪ್ರಸಾದವೆಂದು ಭಾವಿಸಿ ಭೋಗಿಸುತ್ತ ಅಮೃತ ರಾಗಲಿಕ್ಕೆ ಪ್ರಯತ್ನಿಸಬೇಕು. ಇದೇ ಈ ಉಪನಿಷತ್ತಿನ ಸಾರಸಂದೇಶವೆನಿಸಿದೆ. ಅಮೃತಪುತ್ರರೆನಿಸಿದ ನಾವು ಆ ಹೆಸರನ್ನು ಸಾರ್ಥಕವಡಿಸಿಕೊಳ್ಳಬೇಕೆಂದು ಶ್ವೇತಾಶ್ವತರಮಹರ್ಷಿಯು ಹೃತ್ಪೂರ್ವಕವಾಗಿ ಬಯಸಿದ್ದಾನೆ.

ಈ ಶ್ರುತಿಯು ವೇದಾಂತಗಳೆನಿಸಿದ ಉಪನಿಷತ್ತುಗಳಲ್ಲೆಲ್ಲ ಅತ್ಯಂತ ರಹಸ್ಯ ವಾದುದೆಂದೂ, ಬಹಳ ಪ್ರಾಚೀನವಾದುದೆಂದೂ ಮಹರ್ಷಿಯು ತಿಳಿಸಿದ್ದಾನೆ. ಅನೇಕ ಮಹರ್ಷಿಗಳು ಅನುಭವಿಸಿ ಆಚರಿಸುತ್ತಿದ್ದ ಗಹನವಾದ ವಿಚಾರವನ್ನೇ ಈ ಶ್ರುತಿಯು ತಿಳಿಸುತ್ತಲಿದೆ ಎಂಬುದು "ಪುರಾ ಕಲ್ಪೇ ಪ್ರಚೋದಿತಂ" "ಋಷಿಸಂಘಜುಷ್ಟಂ" ಎಂಬ ಮಾತುಗಳಿಂದ ತಿಳಿದುಬರುತ್ತದೆ. ಹೀಗೆ ಜೀವ ಮತ್ತು ಜಗತ್ತು ಇವುಗಳ ಬಗ್ಗೆ ಅನುಭವಿಗಳು ಕಂಡ ಯಥಾರ್ಥಸತ್ಯವನ್ನು ಇಲ್ಲಿ ತಿಳಿಸಿರುವುದರಿಂದ ಇದು ಸಾಧಕರೆಲ್ಲರಿಗೂ ಆದರಣೀಯವೆನಿಸಿದೆ. ಮಹರ್ಷಿಯೂ ಸಹ ಇದನ್ನು ತಪಸ್ಸಿನ ಪ್ರಭಾವದಿಂದಲೂ, ದೇವಪ್ರಸಾದದಿಂದಲೂ ತಿಳಿಸಿರುವುದಾಗಿ ಹೇಳಿದ್ದಾನೆ. ಬಹಳ ಹಿಂದೆಯೇ ಅನೇಕ ಋಷಿಗಳು ಜಗದ್ವೈಚಿತ್ರ್ಯದ ಬಗ್ಗೆ ವಿಚಾರಮಾಡಿ ನಿರ್ಣಯಿಸಿದ್ದ ತತ್ತ್ವವನ್ನು ಮಹರ್ಷಿಯು ಯೋಗನಿಷ್ಠೆಯಿಂದಲೂ, ಈಶ್ವರಾನುಗ್ರಹದಿಂದಲೂ ಸಾಕ್ಷಾತ್ಕರಿಸಿಕೊಂಡು ತನ್ನ ಅನುಭವವನ್ನು ಇಲ್ಲಿ ಹೊರಪಡಿಸಿರುವುದರಿಂದ ಈ ಶ್ರುತಿಯ ಪ್ರಾಮುಖ್ಯತೆಯನ್ನು ಎಷ್ಟು ಹೇಳಿದರೂ ಕಡಮೆಯೇ. ಹಿಂದೆ ದಂಡಕಾರಣ್ಯದಲ್ಲಿ ರಾಮನಿಗೆ ತತ್ತ್ವವನ್ನು ಉಪದೇಶಿಸಲು ಶಿವನು ದಿವ್ಯಮಂಗಳ ವಿಗ್ರಹಧಾರಿಯಾಗಿ ಕಾಣಿಸಿಕೊಂಡಾಗ ಅವನ ಹಿಂದೆ ಮುಂದೆ ತ್ರಿಮೂರ್ತಿಗಳು ಕಾಲಾಗ್ನಿರುದ್ರೋಪನಿಷತ್ತು, ಅಥರ್ವಶಿಖೋಪನಿಷತ್ತು, ಶ್ವೇತಾಶ್ವತರೋಪನಿಷತ್ತು ಇವನ್ನು ಪಾರಾಯಣಮಾಡುತ್ತಿದ್ದರೆಂದು ವ್ಯಾಸರು ಶಿವಗೀತೆಯಲ್ಲಿ ಹೇಳಿದ್ದಾರೆ. ತ್ರಿಮೂರ್ತಿಗಳಿಗೂ ಮೂಲಕಾರಣನೆನಿಸಿದ ನಿರಾಕಾರಶಿವನೇ ಸಾಕಾರಶಿವನಾಗಿ ಕಾಣಿಸಿಕೊಂಡು ನಿರಾಕಾರಶಿವತತ್ತ್ವವನ್ನು ಆ ಶಿವಗೀತೆಯಲ್ಲಿ ವರ್ಣಿಸಿರುವನು. ಅಲ್ಲಿಯೂ ಸಾಕಾರಶಿವನೆದುರಿಗೆ ತ್ರಿಮೂರ್ತಿಗಳು ಶ್ವೇತಾಶ್ವತರಶ್ರುತಿಯನ್ನು ಪಾರಾಯಣ ಮಾಡುತ್ತಿದ್ದುದಾಗಿ ತಿಳಿಸಿರುವುದರಿಂದ ಈ ಶ್ರುತಿಯಲ್ಲಿ ಬಂದಿರುವ ಶಿವ ಪದವು ನಿರಾಕಾರ ಮತ್ತು ಸಾಕಾರಶಿವರಿಬ್ಬರಿಗೂ ಅನ್ವಯಿಸುವುದಾಗಿ ಭಾವಿಸಬೇಕು. ಹೀಗೆ ನಿರಾಕಾರಶಿವನನ್ನೂ ತ್ರಿಮೂರ್ತಿಗಳನ್ನೂ ಇತರ ದೇವತೆಗಳನ್ನೂ ಹಾಗೆಯೇ ವಿಶ್ವವನ್ನೂ ದೇವಭಾವನೆಯಿಂದ ಗೌರವಿಸುವ ವಿಶಾಲಭಾವನೆಯನ್ನು ಮಾನವನು ಅರಿಯಲೆಂಬುದೇ ಶ್ರುತಿಯ ಆಶಯವೆನಿಸಿದೆ.

ಇಲ್ಲಿಗೆ ಶ್ವೇತಾಶ್ವತರೋಪನಿಷದ್ವೀರಶೈವಭಾಷ್ಯವು ಮುಗಿಯಿತು.

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

चित्रदुर्गबृहन्मठीयश्रीजगद्गुरुमुरुघराजेन्द्रविद्यापीठ-
ग्रन्थमालायां शीघ्रमेव प्रकटनीया ग्रन्थाः

1. भगवद्गीतावीरशैवभाष्यम् (डा. सिद्धप्पाराध्यविरचितम्)
2. ಭಗವದ್ಗೀತಾವೀರಶೈವಭಾಷ್ಯಾನುವಾದ ,,
3. शरणगीता (ಶರಣಗೀತಾ) (ಡಾ॥ ಸಿದ್ಧಪ್ಪಾರಾಧ್ಯವಿರಚಿತಾ) (ಸಂಸ್ಕೃತಪದ್ಯರೂಪದಲ್ಲಿ ಶರಣರ ವಚನಗಳ ಪರಿಷ್ಕರಣ ಮತ್ತು ಆಂಗ್ಲಭಾಷಾನುವಾದ)
4. ಶಿವತತ್ತ್ವರತ್ನಾಕರ (ಶ್ರೀಮಠದ ಪಂಡಿತರ ಅನುವಾದಸಹಿತ)

पूर्वोक्तग्रन्थमालायां उपलभ्यमाना इतरग्रन्थाः

1. ಕನ್ನಡ ರಸಗಂಗಾಧರ (ಡಾ॥ ಸಿದ್ಧಪ್ಪಾರಾಧ್ಯವಿರಚಿತ) (ಕವಿರಾಜಜಗನ್ನಾಥಪಂಡಿತರ ಸಂಸ್ಕೃತಗ್ರಂಥದ ಅನುವಾದ.)
2. ಕನ್ನಡ ಕ್ರಿಯಾಸಾರ (ಡಾ॥ ಸಿದ್ಧಪ್ಪಾರಾಧ್ಯವಿರಚಿತ) (ವಿಚಾರಭಾಗ) (ನೀಲಕಂಠಶಿವಾಚಾರ್ಯರ ಸಂಸ್ಕೃತಗ್ರಂಥದ ಅನುವಾದ.)
3. ಶಿವಗೀತಾಮಹತ್ತ್ವ (ಡಾ॥ ಸಿದ್ಧಪ್ಪಾರಾಧ್ಯವಿರಚಿತ)

CC-0. Public Domain. Jangamwadi Math Collection, Varanasi